ಶುಕ್ರವಾರ, ಜುಲೈ 21, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದೇಗುಲ ಭೇಟಿ

ಬಾಲಿವುಡ್ ನಟಿ ಸಾರಾ ಅಲಿ ಖಾನ್ ಅವರು ಗುರುವಾರ ಅಮರನಾಥ ದೇವಾಲಯಕ್ಕೆ ಭೇಟಿ ನೀಡಿದರು

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ
ಅಭಿವೃದ್ಧಿಯ ಹರಿಕಾರರು, ಅಜಾತ ಶತ್ರು,
ಸನ್ಮಾನ್ಯಶ್ರೀ ಡಾ|| ಮಲ್ಲಿಕಾರ್ಜುನ ಖರ್ಗೆಜೀ ರವರ
ಜನುಮದಿನದ
ಶುಭಾಶಯಗಳು
ದಿನಾಂಕ : 21-07-2023
ಶ್ರೀ ಕೆಂಪರಾಜು
ಕಾಂಗ್ರೆಸ್ ಮುಖಂಡರು ಮಾಗಡಿ
ಶುಭಕೋರುವವರು :
ಸೂರನ್ ಕುಟುಂಬದವರು, ಗುಲಬರ್ಗಾ.
ಶುಭಕೋರುವವರು :
ಶ್ರೀ ಬಿ.ವಿ.ಜಯರಾಮು
ಕಾಂಗ್ರೆಸ್ ಮುಖಂಡರು

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರವಾಹ
ಮಹಾರಾಷ್ಟ್ರದ ನಾಲಸೋಪಾರದಲ್ಲಿ ಜಲಾವೃತವಾಗಿದ್ದ ರಸ್ತೆಯಲ್ಲಿ ಗುರುವಾರ ವ್ಯಕ್ತಿಯೊಬ್ಬರು ಮಗುವಿನೊಂದಿಗೆ ಸಾಗಿದರು

ANUGRAHA
Bridal Fest

ವಧುವಿನ ಸಂಗ್ರಹವು ಮಹಾಕಾವ್ಯ ರಾಮಾಯಣದಲ್ಲಿನ ಪ್ರೀತಿಯ ಬಂಧದಿಂದ ಪ್ರೇರೇಪಿತ

"ಸೀತಾ ಕಲ್ಯಾಣ" ವೈವಾಹಿಕ ಸಂಗ್ರಹ. ಅಪ್ಪಟ ಪ್ರೀತಿ ಮತ್ತು ಸಹಬಾಳ್ವೆಯ ಸಾಕಾರ. ಉನ್ನತ ಕುಶಲಿಗಳಿಂದ ಕೌಶಲ್ಯಪೂರ್ಣವಾಗಿ ವಿನ್ಯಾಸಗೊಂಡಿದ್ದು, ಸಾಂಪ್ರದಾಯಿಕ ಪರಿಶುದ್ಧ ಪ್ರೀತಿಯ ಮತ್ತು ವಿವಾಹದ ವೈಭವವನ್ನು ಸೆರೆಹಿಡಿದಿದೆ.

ಪರಿಚಯಿಸುತ್ತಿದೆ

SITA KALYANAM
INSPIRED BY DIVINE LOVE

25% ಕಡಿತ
ವಜ್ರಗಳ ಮೇಲೆ

Offer valid till 27th August 2023

*Conditions Apply

Joyalukkas
World's favourite jeweller

SHOP ONLINE @ joyalukkas.com

BENGALURU: M G ROAD • DICKENSON ROAD • JAYANAGAR • MALLESWARAM • MARATHAHALLI • PHOENIX MARKETCITY • KAMMANAHALLI
FORUM MALL, PRESTIGE FALCON CITY | MANGALURU • MYSURU • HUBBALLI • SHIVAMOGGA • BELAGAVI • UDUPI • HASSAN • DAVANGERE • KALABURAGI
INDIA • USA • UK • UAE • KSA • QATAR • BAHRAIN • KUWAIT • OMAN • SINGAPORE • MALAYSIA

ಭಾರಿ ಮಳೆಗೆ ಮನೆಗಳ ಕುಸಿತ • ಕಾಡಂಚಿನ 40ಕ್ಕೂ ಹೆಚ್ಚು ಗ್ರಾಮಗಳ ಸಂಪರ್ಕ ಕಡಿತ

ಸೇತುವೆಗಳು ಜಲಾವೃತ ಹಲವೆಡೆ ಸಂಚಾರ ಬಂದ್

ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಗರಕಪಳ್ಳಿ–ಭಕ್ತಂಪಳ್ಳಿ ಬಾಂದಾರ ಸೇತುವೆ ಮುಳುಗಿತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗುರುವಾರವೂ ಬಿರುಸಿನ ಮಳೆಯಾಗಿದೆ. ಸೇತುವೆಗಳು ಜಲಾವೃತಗೊಂಡಿದ್ದು, ವಾಹನಗಳ ಸಂಚಾರ ಬಂದ್ ಆಗಿದೆ.

ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಬುಧವಾರ ರಾತ್ರಿ ಹಾಗೂ ಗುರುವಾರ ಭಾರಿ ಮಳೆಯಾಗಿದೆ. ಕೆಲ ಜಲಾಶಯಗಳು ಭರ್ತಿಯಾಗಿದ್ದು, ನೀರು ಬಿಡುಗಡೆ ಮಾಡಿದ್ದರಿಂದ ಪ್ರವಾಹ ಪರಿಸ್ಥಿತಿ ಎದುರಾಗಿದೆ. ಸತತ ಮಳೆಯಿಂದಾಗಿ ಮನೆಗಳು ಕುಸಿದಿವೆ.

ಚಿಂಚೋಳಿ ತಾಲ್ಲೂಕಿನ ಕೆಳದಂಡೆ ಮುಲ್ಲಾಮಾರಿ ಯೋಜನೆಯ ನಾಗರಾಳ ಜಲಾಶಯದಿಂದ 700 ಕ್ಯುಸೆಕ್ ನೀರನ್ನು ಬಿಡುಗಡೆ ಮಾಡಿದ್ದರಿಂದ ನದಿಯಲ್ಲಿ ಪ್ರವಾಹ ಉಂಟಾಗಿದೆ. ಗರಕಪಳ್ಳಿ–ಭಕ್ತಂಪಳ್ಳಿ ಬಾಂದಾರ ಸೇತುವೆ ಮುಳುಗಿದೆ.

ಕಾಳಗಿ ತಾಲ್ಲೂಕಿನ ಮಂಗಲಗಿ ಬಳಿಯ ರಾಜ್ಯ ಹೆದ್ದಾರಿಗೆ ನಿರ್ಮಿಸಿದ ಸೇತುವೆ ಜಲಾವೃತವಾಗಿದ್ದರಿಂದ ಕಾಳಗಿ–ಸೇಡಂ ಮಧ್ಯದ ಸಂಪರ್ಕ ಕಡಿತಗೊಂಡಿತ್ತು. ಚಿತ್ತಾಪುರ ತಾಲ್ಲೂಕಿನಲ್ಲಿ ಆರು ಮನೆಗಳು ಕುಸಿದಿವೆ.

ಕಮಲಾಪುರ ಪಟ್ಟಣದ ತಹಶೀಲ್ದಾರ್ ಕಚೇರಿ ಎದುರು ರಾಷ್ಟ್ರೀಯ ಹೆದ್ದಾರಿ ಮೇಲೆ ಮುಳ್ಳು ಜಾಲಿ ಮರ ಉರುಳಿತ್ತು. ರಾಷ್ಟ್ರೀಯ ಹೆದ್ದಾರಿ ಗಸ್ತು ಪಡೆಯ ಪೊಲೀಸರು ಮೂರು ಗಂಟೆ ಕಾರ್ಯಾಚರಣೆ ನಡೆಸಿ ಮರ ತೆರವುಗೊಳಿಸಿದರು.

ಕಲಬುರಗಿ ನಗರದಲ್ಲಿ ಮಳೆಯಲ್ಲೇ ಸ್ಕೂಟರ್ ಸವಾರರೊಬ್ಬರು ಶಾಲೆಗೆ ಮಕ್ಕಳನ್ನು ಕರೆದೊಯ್ದ ದೃಶ್ಯ.
–ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಬೆಳಗಾವಿಯ ಯಳ್ಳೂರ ರಸ್ತೆಯ ಭತ್ತದ ಗದ್ದೆಗಳಲ್ಲಿ ಮಳೆನೀರು ಸಂಗ್ರಹವಾಗಿರುವುದು
–ಪ್ರಜಾವಾಣಿ ಚಿತ್ರ: ಇಮಾಮ್‌ಹುಸೇನ್ ಗೂಡುನವರ

ಭಾರಿ ಮಳೆ ಬಗ್ಗೆ ಮಾಹಿತಿ ಪಡೆದ ಸೇಡಂ ಹಾಗೂ ಚಿತ್ತಾಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಗುರುವಾರ ಶಾಲೆಗಳಿಗೆ ರಜೆ ಘೋಷಿಸಿದರು. ಆದರೆ, ಅಷ್ಟರಲ್ಲೇ ಮಕ್ಕಳು ಶಾಲೆಗೆ ಹೋಗಿದ್ದರು.

ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಸಿಂದಬಂದಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣ ಜಲಾವೃತಗೊಂಡಿದೆ.

ಬೆಳಗಾವಿ ಜಿಲ್ಲೆಯ 5 ಪ್ರಮುಖ ಸೇತುವೆಗಳು ಜಲಾವೃತವಾಗಿದ್ದು, ವಾಹನಗಳ ಸಂಚಾರ ಬಂದ್ ಆಗಿದೆ. ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಬಿರುಸಿನ ಮಳೆಯಾಗುತ್ತಿದ್ದು, ಕೃಷ್ಣೆ ಮತ್ತು ಅದರ ಉಪನದಿಗಳಾದ ವೇದಗಂಗಾ, ದೂಧಗಂಗಾ ನದಿಗಳಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದೆ.

ಗೋಕಾಕ-ಶಿಂಗಳಾಪುರ, ನಿಪ್ಪಾಣಿ ತಾಲ್ಲೂಕಿನ ಜತ್ರಾಟ-ಭಿವಶಿ, ಖಾನಾಪುರ–ಅನಮೋಡ, ಕಾಗವಾಡ ತಾಲ್ಲೂಕಿನ ರಾಜಾಪುರ–ಮಂಗವಾಟಿ, ಚಿಕ್ಕೋಡಿ ತಾಲ್ಲೂಕಿನ ಮಲಿಕವಾಡ– ಮಹಾರಾಷ್ಟ್ರದ ದತ್ತವಾಡ ಸೇತುವೆಗಳು ಜಲಾವೃತವಾಗಿವೆ. 'ಜಿಲ್ಲೆಯ ಎಲ್ಲಾ 83 ಸೇತುವೆಗಳಲ್ಲೂ ಕಟ್ಟೆಚ್ಚರ ವಹಿಸಲಾಗಿದೆ. ಜಲಾವೃತಗೊಂಡ 5 ಸೇತುವೆಗಳಲ್ಲಿ ಸಂಚಾರ ಬಂದ್ ಮಾಡಿ, ಕಾವಲು ನಿಯೋಜಿಸಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಡಾ. ಸಂಜೀವ ಪಾಟೀಲ ತಿಳಿಸಿದರು. ಮಲಪ್ರಭಾ ಉಕ್ಕಿ ಹರಿಯುತ್ತಿದೆ. ಹಳ್ಳಗಳ ನೀರು ಕಿರುಸೇತುವೆಗಳ ಮೇಲೆ ಬಂದಿದ್ದು, ಕಾಡಂಚಿನ 40ಕ್ಕೂ ಹೆಚ್ಚು ಗ್ರಾಮಗಳ ಸಂಪರ್ಕ ಕಡಿತವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಸೂಪಾ ಸೇರಿ ಪ್ರಮುಖ ಜಲಾಶಯಗಳಿಗೆ ನೀರಿನ ಒಳಹರಿವಿನ ಪ್ರಮಾಣ ಏರಿಕೆ ಕಂಡಿದೆ. ಶಿರಸಿ ತಾಲ್ಲೂಕಿನ ಸದಾಶಿವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಿಂಗಳ ಹಿಂದಷ್ಟೇ ಪೂರ್ಣಗೊಂಡ ಸೇತುವೆಯ ಸಂಪರ್ಕ ರಸ್ತೆ ಕುಸಿದಿದೆ. ಕಾಳಿ ನದಿಯಲ್ಲಿ ನೀರಿನ ಹರಿವಿನ ಮಟ್ಟ ಏರಿಕೆಯಾಗಿದೆ. ಸಿದ್ದಾಪುರ, ಯಲ್ಲಾಪುರ ಹಾಗೂ ಕರಾವಳಿ ಭಾಗದಲ್ಲಿ ಬಿರುಸಿನ ಮಳೆಯಾಗಿದೆ.

ಹುಬ್ಬಳ್ಳಿ-ಧಾರವಾಡ ಮಾರ್ಗದ ನವಲೂರು, ಲಕುಮನಹಳ್ಳಿ, ಕೆಎಂಎಫ್, ಎನ್‌ಟಿಟಿಎಫ್ ಭಾಗದ ರಸ್ತೆಯಲ್ಲಿ ಒಂದೂವರೆ ಅಡಿಗಳಷ್ಟು ನೀರು ತುಂಬಿಕೊಂಡು ವಾಹನ ಸವಾರರು ಪರದಾಡಿದರು. ಹುಬ್ಬಳ್ಳಿ ನ್ಯಾಯಾಲಯ ಸಂಕೀರ್ಣದ ಹಿಂಭಾಗದ ರಾಜಕಾಲುವೆ ಕೊಳಚೆ ನೀರು ವಸತಿ ಸಮುಚ್ಚಯಕ್ಕೆ ನುಗ್ಗಿದೆ. ಬೆಳಗಾವಿ ಗಲ್ಲಿಯಲ್ಲಿ ಅಂಗಡಿ ಗೋಡೆ ಕುಸಿದಿದೆ.

ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಯ ಕೆಲವೆಡೆ ಜೋರು ಮಳೆಯಾದರೆ, ವಿಜಯಪುರ, ಬಾಗಲಕೋಟೆ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಜಿಟಿಜಿಟಿ ಮಳೆಯಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ 24 ಗಂಟೆಗಳ ಅವಧಿಯಲ್ಲಿ ಒಟ್ಟು 26.83 ಸೆಂ.ಮೀ ಮಳೆಯಾಗಿದೆ. ದಾವಣಗೆರೆ ನಗರ, ಹೊನ್ನಾಳಿ ಹಾಗೂ ಹರಿಹರದಲ್ಲೂ ಮಳೆಯಾಗಿದೆ. ನದಿ ನೀರು ಹೆಚ್ಚಳದಿಂದಾಗಿ ಉಕ್ಕಡಗಾತ್ರಿಯಲ್ಲಿ ಸ್ನಾನಘಟ್ಟ ಸಂಪೂರ್ಣ ಜಲಾವೃತಗೊಂಡಿದೆ. ನದಿ ತಟದಲ್ಲಿನ ಗೂಡಂಗಡಿಗಳನ್ನು ತೆರವುಗೊಳಿಸಲಾಗಿದೆ.

ಕೊಡಗು ಜಿಲ್ಲೆಯ ನಾಪೋಕ್ಲು ಸಮೀಪದ ಮರಂದೋಡವಿನ ಕೆರೆತಟ್ಟು ಭಾಗದಲ್ಲಿ ಬೃಹತ್ ಮರ ಉರುಳಿ, ಮೂರ್ನಾಲ್ಕು ವಿದ್ಯುತ್ ಕಂಬಗಳು ತುಂಡಾಗಿ ಬಿದ್ದು, ರಸ್ತೆ ಸಂಚಾರಕ್ಕೆ ಅಡ್ಡಿಯಾಗಿತ್ತು. ಗ್ರಾಮಸ್ಥರು ಒಗ್ಗೂಡಿ ಮರ ತೆರವುಗೊಳಿಸಿದರು. ಪೊನ್ನಂಪೇಟೆಯಲ್ಲಿ ಧಾರಾಕಾರ ಮಳೆ ಸುರಿಯಿತು.

ರಸ್ತೆ ಬದಿ ಕುಸಿತ

ಸೋಮವಾರಪೇಟೆ (ಕೊಡಗು ಜಿಲ್ಲೆ): ಮುಂಗಾರು ಮಳೆಗೆ ಸಮೀಪದ ಹಾನಗಲ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾನಗಲ್ಲು –ಬಾಣೆ ಸಂಪರ್ಕ ರಸ್ತೆಯ ಒಂದು ಬದಿಯಲ್ಲಿ ಮಣ್ಣು ಕುಸಿಯುತ್ತಿದ್ದು, ರಸ್ತೆ ಸಂಚಾರ ಸ್ಥಗಿತಗೊಳ್ಳುವ ಭೀತಿ ಸೃಷ್ಟಿಸಿದೆ. ಮಳೆ ಹೆಚ್ಚಾಗಿದ್ದು, ರಸ್ತೆಯ ಮೇಲೆಯೇ ನೀರು ಹರಿಯುತ್ತಿರುವುದರಿಂದ ಮಣ್ಣು ಕುಸಿಯಲಾರಂಭಿಸಿದೆ. ಮಡಿಕೇರಿಯಲ್ಲಿ ಮಳೆಗಿಂತಲೂ ಗಾಳಿಯ ಆರ್ಭಟ ಹೆಚ್ಚಾಗಿದೆ.

ಏಳು ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್'

ಬೆಂಗಳೂರು: ರಾಜ್ಯದ ಹಲವೆಡೆ ಶುಕ್ರವಾರವೂ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆ ಏಳು ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಘೋಷಿಸಿದೆ.

ಬೆಳಗಾವಿ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ 'ಯೆಲ್ಲೋ ಅಲರ್ಟ್' ನೀಡಲಾಗಿದೆ. ಶನಿವಾರವೂ ಈ ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ. ಭಾನುವಾರದಿಂದ ರಾಜ್ಯದ ಹಲವೆಡೆ ಮಳೆ ಹೆಚ್ಚಾಗುವ ಸಾಧ್ಯತೆಯಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರುತ್ತದೆ. ಕೆಲ ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ಹೇಳಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	90.25	2,235	402
ಹಾರಂಗಿ	2,859	2,850.44	5,612	50
ಕಬಿನಿ	2284.00	2,272.11	6,925	800
ಹೇಮಾವತಿ	2,922	2,895.30	6,752	200
ಲಿಂಗನಮಕ್ಕಿ	1,819	1,761.50	32,077	1,105
ಸೂಪಾ (ಮೀ)	564	531.30	39,018.17	-
ಮಾಣಿ	595	575.42	4,868	-
ತುಂಗಭದ್ರಾ	1,633	1,591.77	9,150	245
ಮಲಪ್ರಭಾ	2079.5	2,046.20	10,437	194
ಘಟಪ್ರಭಾ	2175	2,104.11	20,814	98
ಭದ್ರಾ	186	142.10	4,227	164
ಆಲಮಟ್ಟಿ (ಮೀ)	519.6	510.320	32.146	561
ನಾರಾಯಣಪುರ (ಮೀ)	492.25	486.78	62	50

* ನೆಲಮಟ್ಟದಿಂದ

ಕಾಮಕುಮಾರ ನಂದಿ ಮುನಿ ಡೈರಿ ಪತ್ತೆ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಹಿರೇಕೋಡಿ ನಂದಿಪರ್ವತ ಆಶ್ರಮದ ಜೈನ ಮುನಿ ಕಾಮಕುಮಾರ ನಂದಿ ಮಹಾರಾಜ ಅವರು ಬರೆದಿದ್ದು ಎನ್ನಲಾದ ಡೈರಿಯೊಂದು ಪೊಲೀಸರಿಗೆ ಸಿಕ್ಕಿದೆ ಎಂದು ಮೂಲಗಳು ತಿಳಿಸಿವೆ.

ಮುನಿಶ್ರೀ ಅವರು ಬಳಸುತ್ತಿದ್ದ ಎಲ್ಲ ವಸ್ತುಗಳನ್ನೂ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಡೈರಿಯಲ್ಲಿ ಅವರ ದಿನಚರಿ ಇರುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ. ಮುನಿಶ್ರೀ ಅವರ ಸ್ವಂತ ಡೈರಿಯನ್ನು ಸುಟ್ಟುಹಾಕಿದ್ದೇವೆ ಎಂದು ಕೊಲೆ ಆರೋಪಿಗಳಾದ ನಾರಾಯಣ ಮಾಳಿ ಹಾಗೂ ಹಸನ್ ದಲಾಯತ್ ವಿಚಾರಣೆ ವೇಳೆ ಪೊಲೀಸರಿಗೆ ಹೇಳಿದ್ದರು. ಆದರೆ, ಈಗ ಮತ್ತೊಂದು ಡೈರಿ ಸಿಕ್ಕಿದ್ದು ತನಿಖೆಗೆ ಮತ್ತಷ್ಟು ಇಂಬು ನೀಡಿದೆ.

ವೆಂಟಿಲೇಟರ್ ಆಂಬುಲೆನ್ಸ್ ಸಿಗದೆ ಸಾವನ್ನಪ್ಪಿದ ಮಗು

ಪ್ರಜಾವಾಣಿ ವಾರ್ತೆ

ಕಾರವಾರ: ನ್ಯೂಮೋನಿಯಾ ಕಾಯಿಲೆಯಿಂದ ಬಳಲುತ್ತಿದ್ದ ಮಗುವೊಂದು ತುರ್ತು ಚಿಕಿತ್ಸೆಗಾಗಿ ಕರೆದೊಯ್ಯಲು ವೆಂಟಿಲೇಟರ್ ವ್ಯವಸ್ಥೆಯುಳ್ಳ ಆಂಬುಲೆನ್ಸ್ ಸಿಗದೆ ಗುರುವಾರ ಮೃತಪಟ್ಟಿದೆ.

ತಾಲ್ಲೂಕಿನ ಕಿನ್ನರ ಗ್ರಾಮದ ಕೂಲಿಕಾರ್ಮಿಕರಾದ ರಾಜೇಶ್ ನಾಗೇಕರ್ ಮತ್ತು ರಿಯಾ ದಂಪತಿಗೆ 5 ವರ್ಷದ ಬಳಿಕ ಗಂಡು ಮಗು ಜನಿಸಿತ್ತು. ಆದರೆ, ಆ ಖುಷಿಯನ್ನು ಮೂರು ತಿಂಗಳಲ್ಲೇ 'ಆರೋಗ್ಯ ಅವ್ಯವಸ್ಥೆ' ಕಸಿದುಕೊಂಡಿತು.

ನ್ಯೂಮೋನಿಯಾಕ್ಕೆ ಚಿಕಿತ್ಸೆ ಕೊಡಿಸಲು ದಂಪತಿಯು ತಮ್ಮ ಪುತ್ರ ರಾಜನ್‌ನನ್ನು ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಕ್ರಿಮ್ಸ್) ದಾಖಲಿಸಿದ್ದರು. ಆದರೆ, ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಹೋಗಲು ಮಕ್ಕಳ ವೆಂಟಿಲೇಟರ್ ವ್ಯವಸ್ಥೆಯುಳ್ಳ ಆಂಬುಲೆನ್ಸ್ ಸಕಾಲಕ್ಕೆ ಸಿಗಲಿಲ್ಲ.

ಮಗುವಿನ ಶವವಿಟ್ಟು ಆಸ್ಪತ್ರೆ ಆವರಣದಲ್ಲಿ ಪ್ರತಿಭಟಿಸಿದ ಪಾಲಕರು, 'ಮಕ್ಕಳ ವೆಂಟಿಲೇಟರ್‌ವುಳ್ಳ ಎರಡು ಆಂಬುಲೆನ್ಸ್ ವ್ಯವಸ್ಥೆ ಆಗಬೇಕು. ನಮ್ಮ ಮಗುವಿಗೆ ಆದ ಸ್ಥಿತಿ ಬೇರೆ ಮಕ್ಕಳಿಗೆ ಆಗಬಾರದು' ಎಂದು ಒತ್ತಾಯಿಸಿದರು.

ಬಿಎಸ್‌ವೈಗೆ ತೋಟಗಾರಿಕೆ ವಿ.ವಿ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಬಿ.ಎಸ್. ಯಡಿಯೂರಪ್ಪ

ಶಿವಮೊಗ್ಗ: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರಿಗೆ ಇಲ್ಲಿನ ಇರುವಕ್ಕಿಯ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಘೋಷಿಸಿದೆ.

'ವಿಶ್ವವಿದ್ಯಾಲಯದ ಆವರಣದಲ್ಲಿ ಶುಕ್ರವಾರ ನಡೆಯಲಿರುವ 8ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಯಡಿಯೂರಪ್ಪ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ' ಎಂದು ಕುಲಪತಿ ಡಾ.ಆರ್.ಸಿ. ಜಗದೀಶ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅತ್ಯಾಚಾರ ಆರೋಪ: ಪಾದ್ರಿ ಸೆರೆ

ಪ್ರಜಾವಾಣಿ ವಾರ್ತೆ

ಫ್ರಾನ್ಸಿಸ್ ಫೆರ್ನಾಂಡಿಸ್

ಶಿವಮೊಗ್ಗ: ನಗರದ ಚರ್ಚ್‌ವೊಂದರ ಪಾದ್ರಿ ಹಾಗೂ ಚರ್ಚ್‌ನ ಪಿ.ಯು ಕಾಲೇಜಿನ ಪ್ರಾಂಶುಪಾಲ ಫ್ರಾನ್ಸಿಸ್ ಫೆರ್ನಾಂಡಿಸ್ (48) ಅವರನ್ನು ಮಕ್ಕಳ ಮೇಲಿನ ಲೈಂಗಿಕ ಕಿರುಕುಳ ತಡೆ ಕಾಯ್ದೆ (ಪೊಕ್ಸೊ) ಅಡಿ ಕೋಟೆ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಕಾಲೇಜಿನ ವಿದ್ಯಾರ್ಥಿನಿಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದಲ್ಲಿ ಇವರನ್ನು ಬಂಧಿಸಲಾಗಿದೆ.

'ನಮ್ಮ ಮಗಳ ಜೊತೆ ಪ್ರೀತಿ, ಪ್ರೇಮದ ನಾಟಕವಾಡಿರುವ ಪಾದ್ರಿ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾರೆ' ಎಂದು 17 ವರ್ಷ ವಯಸ್ಸಿನ ವಿದ್ಯಾರ್ಥಿನಿ ಪಾಲಕರು ದೂರು ನೀಡಿದ್ದಾರೆ. ಆರೋಪಿಯ ವಿರುದ್ಧ ಕೋಟೆ ಠಾಣೆ ಪೊಲೀಸರು ಪೋಕ್ಸೊ ಕಾಯ್ದೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿ ಮತ್ತು ಸಂತ್ರಸ್ತೆಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದ್ದಾರೆ.

ಮೂವರಿಗೆ ಕುವೆಂಪು ವಿ.ವಿ ಗೌರವ



ಎಂ.ಚಂದ್ರಪ್ಪ



ಗುರುಸ್ವಾಮಿ

ಸದಾನಂದ ಶೆಟ್ಟಿ

ಶಿವಮೊಗ್ಗ: ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ, ಮಂಗಳೂರಿನ ಶ್ರೀದೇವಿ ಶಿಕ್ಷಣ ಟ್ರಸ್ಟ್ ಸಂಸ್ಥಾಪಕ ಸದಾನಂದ ಶೆಟ್ಟಿ ಹಾಗೂ ವಿಜಯಪುರ ಜಿಲ್ಲೆ ಕಲಕೇರಿಯ ಪಂಡಿತ್ ರಾಜಗುರು ಗುರುಸ್ವಾಮಿ ಅವರಿಗೆ ಕುವೆಂಪು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಘೋಷಿಸಿದೆ.

ಕುಲಪತಿ ಪ್ರೊ.ಬಿ.ಪಿ. ವೀರಭದ್ರಪ್ಪ ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದರು. ಕ್ರೀಡಾ ಆಡಳಿತಗಾರ ಸದಾನಂದ ಶೆಟ್ಟಿ ಅವರನ್ನು ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ, ಪಂಡಿತ್ ರಾಜಗುರು ಗುರುಸ್ವಾಮಿ ಅವರನ್ನು ಸಾಹಿತ್ಯ, ಮತ್ತು ಸಂಗೀತ ಕ್ಷೇತ್ರದ ಕೊಡುಗೆಗಾಗಿ ಗೌರವಿಸಲಾಗುತ್ತಿದೆ. ಶಾಸಕ ಎಂ.ಚಂದ್ರಪ್ಪ ಚಿತ್ರದುರ್ಗ ಜಿಲ್ಲೆಯ ದೇವರಾಜ ಅರಸ್ ಶಿಕ್ಷಣ ಸಮೂಹದ ಸ್ಥಾಪಕರು. ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಕ್ಷೇತ್ರಗಳಲ್ಲಿನ ಕಾರ್ಯ ಪರಿಗಣಿಸಿ ಈ ಗೌರವ ನೀಡಲಾಗುತ್ತಿದೆ ಎಂದು ಕುಲಪತಿ ಹೇಳಿದರು.

ಸಾಗರಮಾಲಾ ಯೋಜನೆಯಡಿ ಪ್ರವಾಸೋದ್ಯಮ ಉದ್ದೇಶಕ್ಕೆ ಅಳವಡಿಕೆ

ಕಾಳಿಯಲ್ಲಿ ತೇಲುವ ಕಾಂಕ್ರೀಟ್ ಜಟ್ಟಿ

• ಗಣಪತಿ ಹೆಗಡೆ

ಕಾರವಾರ: ರಾಜ್ಯದ ಮೊದಲ ತೇಲುವ ಕಾಂಕ್ರೀಟ್ ಜಟ್ಟಿಯನ್ನು ಸಾಗರಮಾಲಾ ಯೋಜನೆಯಡಿ ಕಾಳಿನದಿ ಅರಬ್ಬಿ ಸಮುದ್ರ ಸೇರುವ ಸಂಗಮ ಪ್ರದೇಶ, ಸದಾಶಿವಗಡ ಗುಡ್ಡದ ತಪ್ಪಲಿನ ಸಮೀಪ ಅಳವಡಿಸಲಾಗಿದೆ.

ಪ್ರವಾಸೋದ್ಯಮ ಉದ್ದೇಶಕ್ಕೆ 12 ಮೀಟರ್ ಉದ್ದ ಮತ್ತು 3 ಮೀಟರ್ ಅಗಲದ ಜಟ್ಟಿಯನ್ನು ಬಂದರು ಇಲಾಖೆ ಮೂಲಕ ಮುಂಬೈ ಮೂಲದ ಮರ್ರೈನ್‌ಟೆಕ್ ಇಂಡಿಯಾ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಅಳವಡಿಸಿದೆ.

₹2.70 ಕೋಟಿ ವೆಚ್ಚದಲ್ಲಿ ಕಾಂಕ್ರೀಟ್ ಜಟ್ಟಿ ಅಳವಡಿಕೆ ಕಾರ್ಯ ನೆರವೇರಿದ್ದು, ಭಾರತೀಯ ಒಳನಾಡು ಜಲಸಾರಿಗೆ ಪ್ರಾಧಿಕಾರ (ಐಡಬ್ಲ್ಯುಎಐ) ಆಡಳಿತಾತ್ಮಕ ಅನುಮೋದನೆ ನೀಡಿದೆ.

ತೇಲುವ ಕಾಂಕ್ರೀಟ್ ಜಟ್ಟಿಯನ್ನು ದಡದಿಂದ ಸಂಪರ್ಕಿಸಲು ಅನುಕೂಲವಾಗುವಂತೆ 20 ಮೀಟರ್ ಉದ್ದದ ಉಕ್ಕಿನ ಕಿರು ಸೇತುವೆ (ಗ್ಯಾಂಗ್‌ವೇ) ನಿರ್ಮಿಸಲಾಗಿದೆ. ಜಟ್ಟಿಯಲ್ಲಿ ಆಧುನಿಕ ತಂತ್ರಜ್ಞಾನದ ನ್ಯಾವಿಗೇಶನಲ್ ಉಪಕರಣ ಅಳವಡಿಸಲಾಗಿದೆ. ದೋಣಿಗಳ ಬ್ಯಾಟರಿ ಚಾರ್ಜ್ ಮಾಡಲು ವಿದ್ಯುತ್ ಚಾಲಿತ ಉಪಕರಣ ಸಹ ಇದೆ.

'ಜಲಸಾಹಸ ಚಟುವಟಿಕೆಯ ಬೋಟ್, ಪ್ರವಾಸಿಗರನ್ನು ಕರೆದೊಯ್ಯುವ ಬೋಟುಗಳ ನಿಲುಗಡೆಗೆ ಅನುಕೂಲವಾಗುವಂತೆ ಜಟ್ಟಿ ನಿರ್ಮಿಸಲಾಗಿದೆ. ಜಟ್ಟಿಯನ್ನು ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಚರ್ಚೆ ನಡೆದಿದೆ' ಎಂದು ಬಂದರು ಇಲಾಖೆಯ ಎಂಜಿನಿಯರ್ ಪಾಂಡುರಂಗ ಕುಲಕರ್ಣಿ ತಿಳಿಸಿದರು.

ಕಾರವಾರದ ಸದಾಶಿವಗಡ ಗುಡ್ಡದ ಬಳಿ ಕಾಳಿನದಿಯಲ್ಲಿ ತೇಲುವ ಕಾಂಕ್ರೀಟ್ ಜಟ್ಟಿ ಅಳವಡಿಸಿ, ಅದಕ್ಕೆ ದಡದಿಂದ ಸಂಪರ್ಕಿಸಲು ಕಿರು ಸೇತುವೆ ನಿರ್ಮಿಸಲಾಗಿದೆ.

ಸಾಗರಮಾಲಾ ಯೋಜನೆಯಡಿ ಕಾಂಕ್ರೀಟ್ ಜಟ್ಟಿ ಅಳವಡಿಕೆಗೆ ಉತ್ತರ ಕನ್ನಡದ ನಾಲ್ಕು, ದಕ್ಷಿಣ ಕನ್ನಡ ಜಿಲ್ಲೆಯ 10ಕ್ಕೂ ಹೆಚ್ಚು ಸ್ಥಳಗಳಲ್ಲಿ ಅನುಮೋದನೆ ಸಿಕ್ಕಿದೆ. ಹಂತಹಂತವಾಗಿ ಕೆಲಸ ನಡೆಯಲಿದೆ

ಕ್ಯಾಪ್ಟನ್ ಸಿ.ಸ್ವಾಮಿ, ನಿರ್ದೇಶಕ, ಬಂದರು ಮತ್ತು ಜಲಸಾರಿಗೆ ಮಂಡಳಿ

ಗೋವಾ, ಗುಜರಾತ್‌ನ ಹಲವೆಡೆ ಪ್ರವಾಸಿ ತಾಣಗಳಲ್ಲಿ ಈಗಾಗಲೇ ತೇಲುವ ಕಾಂಕ್ರೀಟ್ ಜಟ್ಟಿ ಅಳವಡಿಸಲಾಗಿದೆ. ಮೊದಲ ಬಾರಿಗೆ ಕರ್ನಾಟಕದಲ್ಲಿ ಇಂತಹ ಸೌಲಭ್ಯ ಪರಿಚಯಿಸಲಾಗಿದೆ

ಕಾಸ್ಮೆ ಡಿಸಿಲ್ವಾ, ಅಧಿಕಾರಿ, ಮರ್ರೈನ್‌ಟೆಕ್ ಇಂಡಿಯಾ ಸರ್ವಿಸಸ್ ಕಂಪನಿ

ಏನಿದು ತೇಲುವ ಕಾಂಕ್ರೀಟ್ ಜಟ್ಟಿ?

'ನದಿ ಅಥವಾ ಸಮುದ್ರದಲ್ಲಿ ದೋಣಿಗಳ ನಿಲುಗಡೆಗೆ ಅನುಕೂಲವಾಗುವಂತೆ ತಾತ್ಕಾಲಿಕ ಜಟ್ಟಿ ಸ್ಥಾಪಿಸಲು ಈ ಮೊದಲು ಅಧಿಕ ಸಾಂಧ್ರತೆಯ ಪಾಲಿಥಿನ್ (ಎಚ್‌ಡಿಪಿಇ) ಬಳಸಲಾಗುತ್ತಿತ್ತು. ಕಾಂಕ್ರೀಟ್ ಜಟ್ಟಿ ವಿಭಿನ್ನವಾದದ್ದು. ರಬ್ಬರ್ ತಳಹದಿಗೆ ಕಾಂಕ್ರೀಟ್ ಅಳವಡಿಸಿ ಸಮತಟ್ಟಾದ ಆಯತಾಕಾರದ ನೆಲಹಾಸು ರಚಿಸಲಾಗುತ್ತದೆ. ಅವುಗಳಿಗೆ ನಾಲ್ಕೂ ಕಡೆ ಆ್ಯಂಕರ್ ಜೋಡಿಸಿ ನೀರಿನಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಅಳವಡಿಸಲಾಗುತ್ತದೆ. ನೀರಿನ ಉಬ್ಬರ, ಇಳಿತಕ್ಕೆ ತಕ್ಕಂತೆ ಅವೂ ಕೂಡ ಚಲನೆಯಾಗುತ್ತವೆ. ಇವು ದೋಣಿ ನಿಲುಗಡೆಗೆ ಅನುಕೂಲವಾಗುತ್ತವೆ' ಎಂದು ಬಂದರು ಎಂಜಿನಿಯರ್ ಪಾಂಡುರಂಗ ಕುಲಕರ್ಣಿ ವಿವರಿಸಿದರು.

● www.prajavani.net
prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ಕೌಸಲ್ಯಾ ಸುಪ್ರಜಾ ರಾಮ’ ಸಿನಿಮಾ ಮೂಲಕ ಮತ್ತೆ ತೆರೆ ಮೇಲೆ ಬರುತ್ತಿದ್ದಾರೆ ಬೃಂದಾ ಆಚಾರ್ಯ

ಆಳ-ಅಗಲ ಎನ್‌ಡಿಎ ಹ್ಯಾಟ್ರಿಕ್ ಕನಸು ಸುಲಭವೇ?

ಉದ್ಯಮಿ ಪಾಟ್ಕರ್ ಇ.ಡಿ ವಶಕ್ಕೆ 5

ಇನ್ಫೊಸಿಸ್ ಲಾಭ ₹5,945 ಕೋಟಿ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
67,571 ▲	19,979 ▲	₹61,930 (ಬೆಂಗಳೂರು) ▲	₹78,000 (ಬೆಂಗಳೂರು) ▲	81,93 ▲

‘ಪ್ರತಿಷ್ಠೆ ಬೇಡ; ಚೀತಾ ಸ್ಥಳಾಂತರ ಸಾಧ್ಯತೆ ಪರಿಶೀಲಿಸಿ’ 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬೆತ್ತಲೆ ಮೆರವಣಿಗೆ ಪ್ರಕರಣ: ‘ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ’ ಎಂದ ಕೋರ್ಟ್

ಕೇಂದ್ರ ಸರ್ಕಾರಕ್ಕೆ ‘ಸುಪ್ರೀಂ’ ಎಚ್ಚರಿಕೆ

ಮುಖ್ಯಾಂಶಗಳು

- ನಾಲ್ವರು ಆರೋಪಿಗಳ ಸೆರೆ
- ವಿಡಿಯೊ ಸತ್ಯಾಸತ್ಯತೆ ಪರಿಶೀಲನೆಗೆ ಆದೇಶ
- ಮಣಿಪುರ ಸರ್ಕಾರಕ್ಕೆ ಎನ್‌ಎಚ್‌ಆರ್‌ಸಿ ನೋಟಿಸ್

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಮಹಿಳೆಯರನ್ನು ಬೆತ್ತಲು ಮಾಡಿ ಮೆರವಣಿಗೆ ನಡೆಸಿದ ಕೃತ್ಯದ ಸಂಬಂಧ ಸರ್ಕಾರವು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದಲ್ಲಿ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರ ಮತ್ತು ಮಣಿಪುರ ಸರ್ಕಾರಕ್ಕೆ ಗುರುವಾರ ಎಚ್ಚರಿಕೆ ನೀಡಿದೆ.

ಮಣಿಪುರದ ಮೈತೇಯಿ ಹಿಂದೂ ಸಮುದಾಯಕ್ಕೆ ಪರಿಶಿಷ್ಟ ಪಂಗಡದ ಸ್ಥಾನ ನೀಡಬೇಕು ಎಂದು ಮಣಿಪುರ ಹೈಕೋರ್ಟ್ ನೀಡಿರುವ ಆದೇಶದ ವಿರುದ್ಧದ ಅರ್ಜಿಯ ವಿಚಾರಣೆ ವೇಳೆ, ವಿಡಿಯೊಗೆ ಸಂಬಂಧಿಸಿದಂತೆ ಪೀಠವು ಸ್ವಯಂಪ್ರೇರಿತವಾಗಿ ವಿಚಾರಣೆ ಕೈಗೆತ್ತಿಕೊಂಡಿತು.

ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಮತ್ತು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಪೀಠದ ಎದುರು ಕರೆಯಿಸಿ ಎಂದು ಮುಖ್ಯ-ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಸೂಚಿಸಿದರು. ಇಬ್ಬರೂ ಅಧಿಕಾರಿಗಳು ಪೀಠದ ಎದುರು ಹಾಜರಾದರು. ಆಗ ಮುಖ್ಯನ್ಯಾಯಮೂರ್ತಿಯು, ‘ಈ ಕೃತ್ಯದ ದುಷ್ಕರ್ಮಿಗಳನ್ನು ಬಂಧಿಸಲು ಮೇನಿಂದ ಈವರೆಗೆ ಏನೆಲ್ಲಾ ಕ್ರಮ ತೆಗೆದುಕೊಂಡಿದ್ದೀರಿ? ಇಂತಹ ಕೃತ್ಯಗಳನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? ಇಂಥದ್ದು ಇದೊಂದೇ ಕೃತ್ಯವೇ ಅಥವಾ ಇಂತಹ ಹಲವು ಕೃತ್ಯಗಳು ನಡೆದಿವೆಯೇ ಬಲ್ಲವರು ಯಾರು’ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೆಹ್ತಾ, ‘ಸರ್ಕಾರ ಏನೆಲ್ಲಾ ಕ್ರಮ ತೆಗೆದುಕೊಂಡಿದೆ ಎಂಬುದರ ಮಾಹಿತಿಯನ್ನು ಪೀಠಕ್ಕೆ ನೀಡುತ್ತೇವೆ’ ಎಂದರು.

ಈ ಕೃತ್ಯದ ಸಂಬಂಧ ಪರಿಹಾರಾತ್ಮಕ ಕ್ರಮಗಳನ್ನು, ಮತ್ತು ಮುಂದೆ ಇಂಥ ಕೃತ್ಯಗಳು ನಡೆಯುವುದನ್ನು ತಡೆಯುವಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಂತಹ ಕ್ರಮ ತೆಗೆದುಕೊಳ್ಳಲು ಸರ್ಕಾರಗಳಿಗೆ ಸ್ವಲ್ಪ ಕಾಲಾವಕಾಶ ನೀಡಲಾಗುವುದು. ಒಂದು ವಾರದ ಒಳಗೆ ಈ ಬಗ್ಗೆ ವರದಿ ನೀಡಿ ಎಂದು ಚಂದ್ರಚೂಡ್ ನೇತೃತ್ವದ ಪೀಠವು ಆದೇಶಿಸಿದೆ. ಕೇಂದ್ರ ಗೃಹ ಕಾರ್ಯದರ್ಶಿ ಮತ್ತು ಮಣಿಪುರ ಮುಖ್ಯ ಕಾರ್ಯದರ್ಶಿಯೇ ವರದಿ ಸಲ್ಲಿಸಬೇಕು ಎಂದು ಪೀಠವು ಸೂಚನೆ ನೀಡಿದೆ. ವಿಚಾರಣೆಯನ್ನು ಜುಲೈ 28ರ ಶುಕ್ರವಾರಕ್ಕೆ ನಿಗದಿಪಡಿಸಿದೆ.

‘ಆಘಾತವಾಗಿದೆ’

- ಮಣಿಪುರದಲ್ಲಿ ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯ ಮತ್ತು ಹಿಂಸಾಚಾರದ ದೃಶ್ಯಾವಳಿಗಳನ್ನು ಬುಧವಾರ ಮಾಧ್ಯಮಗಳಲ್ಲಿ ನೋಡಿ ನಾವು ಭಾರಿ ಆಘಾತಕ್ಕೆ ಒಳಗಾಗಿದ್ದೇವೆ
- ಮಾಧ್ಯಮಗಳಲ್ಲಿ ತೋರಿಸಿರುವುದನ್ನು ನೋಡಿದರೆ, ಅದು ಮಾನವ ಹಕ್ಕುಗಳ ಘೋರ ಉಲ್ಲಂಘನೆ ಎಂಬುದು ಗೊತ್ತಾಗುತ್ತದೆ
- ಮಹಿಳೆಯರ ಮೇಲೆ ಈ ರೀತಿ ಹಿಂಸಾಚಾರ ನಡೆಸುವುದು, ಹಿಂಸಾಕೃತ್ಯಗಳಿಗೆ ಮಹಿಳೆಯರನ್ನು ಸಾಧನವಾಗಿ ಬಳಸಿಕೊಳ್ಳುವುದನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ

–ಸುಪ್ರೀಂ ಕೋರ್ಟ್ ಪೀಠ

ಇನ್ನಷ್ಟು ಸುದ್ದಿಗಳು 6

ನೋವು ತುಂಬಿದೆ: ಮೋದಿ

‘ಪ್ರಜಾಪ್ರಭುತ್ವದ ಈ ದೇವಾಲಯದ ಎದುರು ಇಂದು ನಿಂತಿರುವ ನನ್ನ ಹೃದಯವು ನೋವು ಮತ್ತು ಆಕ್ರೋಶಭರಿತವಾಗಿದೆ. ತಪ್ಪಿತಸ್ಥರನ್ನು ಬಿಡುವುದಿಲ್ಲ ಎಂದು ದೇಶವಾಸಿಗಳಿಗೆ ನಾನು ಭರವಸೆ ನೀಡುತ್ತೇನೆ. ಮಣಿಪುರದ ಪುತ್ರಿಯರು ಅನುಭವಿಸಿದ್ದನ್ನು ಮರೆಯಲು ಸಾಧ್ಯವಿಲ್ಲ. ಈ ಕೃತ್ಯದಿಂದ ಯಾವುದೇ ಸಮಾಜ ತಲೆತಗ್ಗಿಸಬೇಕಾಗುತ್ತದೆ. ಈ ಕೃತ್ಯದಿಂದ ದೇಶದ 140 ಕೋಟಿ ಜನರೂ ತಲೆತಗ್ಗಿಸುವಂತಾಗಿದೆ. ರಾಜಸ್ಥಾನ, ಛತ್ತೀಸಗಡ ಅಥವಾ ಮಣಿಪುರವೇ ಇರಲಿ. ಮಹಿಳೆಯರ ವಿರುದ್ಧದ ಅಪರಾಧಗಳನ್ನು ತಡೆಯಲು ಎಲ್ಲಾ ರಾಜ್ಯಗಳ ಮುಖ್ಯ-ಮಂತ್ರಿಗಳು ಸಂಪೂರ್ಣ ಬಲವನ್ನು ಪ್ರಯೋಗಿಸಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನ ಹೊರಗೆ ನಿಂತು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಮೌನ ಮುರಿಯುವುದು ತೀರಾ ವಿಳಂಬವಾಯಿತು, ಅವರು ಹೇಳಿದ್ದು ಕೂಡಾ ತೀರಾ ಕಡಿಮೆಯಾಯಿತು

ಕಾಂಗ್ರೆಸ್ ಟ್ವೀಟ್

ಬಿಜೆಪಿಯ ಡಬಲ್ ಎಂಜಿನ್ ಸರ್ಕಾರವಿರುವ ಮಣಿಪುರದಲ್ಲಿ ನಡೆದ ಕೃತ್ಯದ ಬಗ್ಗೆ ಮಾತನಾಡುವಾಗ ಛತ್ತೀಸಗಡದ ಬಗ್ಗೆ ಮೋದಿ ಉಲ್ಲೇಖಿಸಬೇಕಿರಲಿಲ್ಲ

ಭೂಪೇಶ್ ಬಘೇಲ್, ಛತ್ತೀಸಗಢ ಸಿ.ಎಂ

ಶಂಕಿತ ಉಗ್ರಗಾಮಿ ಮನೆಯಲ್ಲಿ 4 ಗ್ರೆನೇಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಬ್ ಸ್ಫೋಟಿಸಿ ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸಿದ್ದ ಪ್ರಕರಣದಲ್ಲಿ ಬಂಧಿಸಲಾಗಿರುವ ಐವರು ಶಂಕಿತರನ್ನು ಕಸ್ಟಡಿಗೆ ಪಡೆದಿರುವ ಸಿಸಿಬಿ ಪೊಲೀಸರು, ಅವರ ಹೇಳಿಕೆ ಆಧರಿಸಿ ನಗರದ ಹಲವು ಮನೆಗಳಲ್ಲಿ ಗುರುವಾರ ಶೋಧ ನಡೆಸಿದರು.

ಸುಲ್ತಾನ್‌ಪಾಳ್ಯದ ಮನೆಯೊಂದರಲ್ಲಿ ಶಸ್ತ್ರಾಸ್ತ್ರ ಹಾಗೂ ಸ್ಫೋಟಕಗಳನ್ನು ಸಂಗ್ರಹಿಸಿ ವಿಧ್ವಂಸಕ ಕೃತ್ಯ ಎಸಗಲು ಕಾಯುತ್ತಿದ್ದ ಶಂಕಿತರ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಸಿಸಿಬಿ ಪೊಲೀಸರು, ಸೈಯದ್ ಸುಹೇಲ್ ಖಾನ್ (24), ಜಾಹೀದ್ ತಬ್ರೇಜ್ (25), ಸೈಯದ್ ಮುದಾಸೀರ್ ಪಾಷಾ (28), ಮಹಮ್ಮದ್ ಫೈಜಲ್ ರಬ್ಬಾನಿ (30) ಹಾಗೂ ಮೊಹಮ್ಮದ್ ಉಮರ್‌ನನ್ನು (29) ಈಗಾಗಲೇ ಬಂಧಿಸಿದ್ದಾರೆ.

‘ಹೊರ ರಾಜ್ಯ ಹಾಗೂ ವಿದೇಶ-ಗಳಲ್ಲಿರುವ ಉಗ್ರ ಸಂಘಟನೆ ಸದಸ್ಯರ ಜೊತೆ ಶಂಕಿತರು ಸಂಪರ್ಕ ಹೊಂದಿದ್ದಾರೆ’ ಎಂಬ ಸಂಗತಿಯನ್ನು ನ್ಯಾಯಾಲಯದ ಗಮನಕ್ಕೆ ತಂದಿರುವ ಪೊಲೀಸರು, ಐವರನ್ನೂ ಕಸ್ಟಡಿಗೆ ಪಡೆದು ಅಜ್ಞಾತ ಸ್ಥಳದಲ್ಲಿ ತನಿಖೆ ಮುಂದುವರಿಸಿದ್ದಾರೆ.

ಅಲ್ಮೇರಾದಲ್ಲಿದ್ದ ಗ್ರೆನೇಡ್: ‘ಕೊಡಿಗೇಹಳ್ಳಿಯ ಭದ್ರಪ್ಪ ಬಡಾವಣೆಯ ನಿವಾಸಿ ಜಾಹೀದ್ ತಬ್ರೇಜ್ ಮನೆಯಲ್ಲಿ ಸ್ಫೋಟಕಗಳು ಇರುವ ಮಾಹಿತಿ ತನಿಖೆಯಿಂದ ಗೊತ್ತಾಗಿತ್ತು. ಜಾಹೀದ್ ಸಮೇತ ಮನೆಗೆ ತೆರಳಿ ಶೋಧ ನಡೆಸಿ, 4 ಗ್ರೆನೇಡ್ ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಜಂಟಿ ಕಮಿಷನರ್ ಎಸ್.ಡಿ. ಶರಣಪ್ಪ ಹೇಳಿದರು.

‘ಶಂಕಿತ ಜಾಹೀದ್, ತನ್ನ ಕೊಠಡಿ-ಯಲ್ಲಿದ್ದ ಅಲ್ಮೇರಾದಲ್ಲಿ ಮರಳು ಹಾಗೂ ರಾಸಾಯನಿಕ ಚೀಲದೊಳಗೆ ಹ್ಯಾಂಡ್ ಗ್ರೆನೇಡ್ ಬಚ್ಚಿಟ್ಟಿದ್ದ. ಯಾವ ಸಂದರ್ಭ-ದಲ್ಲಾದರೂ ಇವುಗಳನ್ನು ಬಳಸಬಹು-ದಾಗಿತ್ತು. ಅಪಾಯಕಾರಿಯಾದ ಗ್ರೆನೇಡ್‌ಗಳನ್ನು ಬಾಂಬ್ ನಿಷ್ಕ್ರಿಯ ದಳ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರ ಸಮ್ಮುಖದಲ್ಲಿ ಪರಿಶೀಲನೆ ನಡೆಸಿ ಸುಪರ್ದಿಗೆ ಪಡೆಯಲಾಗಿದೆ’ ಎಂದರು.

ನೆಲಮಂಗಲ ಟೋಲ್ ಬಳಿ ಗ್ರೆನೇಡ್ ಸಂಗ್ರಹ: ‘ಹೊರ ರಾಜ್ಯದ ಅಪರಿಚಿತನೊಬ್ಬ, ಗ್ರೆನೇಡ್ ತೆಗೆದುಕೊಂಡು ನೆಲಮಂಗಲ ಟೋಲ್ ಗೇಟ್ ಬಳಿ ಬಂದಿದ್ದ. ಅದೇ ಸ್ಥಳಕ್ಕೆ ಕಾರಿನಲ್ಲಿ ಹೋಗಿದ್ದ ಜಾಹೀದ್, ಗ್ರೆನೇಡ್ ಸಂಗ್ರಹಿಸಿ ಮನೆಯಲ್ಲಿ ತಂದಿಟ್ಟುಕೊಂಡಿದ್ದ’ ಎಂದು ಸಿಸಿಬಿ ಮೂಲಗಳು ಹೇಳಿವೆ.

4ನೇ ಪುಟ ನೋಡಿ

ಉಪನಗರ ರೈಲು ಯೋಜನೆ: 2025ರ ಅಕ್ಟೋಬರ್ ಒಳಗೆ ಪೂರ್ಣಗೊಳಿಸಲು ಗಡುವು • ಎರಡೂವರೆ ವರ್ಷ ಕುಂಟುತ್ತಿದ್ದ ಯೋಜನೆ

ವೇಗ ಪಡೆದುಕೊಂಡ ಕಾರಿಡಾರ್–2 ಕಾಮಗಾರಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಗರದ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸಲು ಮೆಟ್ರೊಗೆ ಪೂರಕವಾಗಿ ಹಮ್ಮಿಕೊಂಡಿರುವ ಬೆಂಗಳೂರು ಉಪನಗರ ರೈಲು ಯೋಜನೆಯ ಕಾಮಗಾರಿ ವೇಗ ಪಡೆದುಕೊಂಡಿದೆ. ಈ ಯೋಜನೆಯ 2ನೇ ಕಾರಿಡಾರ್‌ನ ಶೇ 8ರಷ್ಟು ಕಾಮಗಾರಿ ಮುಗಿದಿದೆ.

2020ರಲ್ಲಿ ಮಂಜೂರುಗೊಂಡಿದ್ದರೂ ಕುಂಟುತ್ತಿದ್ದ ಈ ಯೋಜನೆಯು ಆರು ತಿಂಗಳ ಹಿಂದೆ ಚುರುಕು ಪಡೆದುಕೊಂಡಿತ್ತು. ಈಗ ತ್ವರಿತವಾಗಿ ಕಾಮಗಾರಿ ನಡೆಯುತ್ತಿದೆ.

ಎಲ್ಲ ಯೋಜನೆಗಳನ್ನು ಮುಗಿಸಲು 2025ರ ಅಕ್ಟೋಬರ್‌ವರೆಗೆ ಅವಧಿ ನೀಡಲಾಗಿದೆ. ಅದರ ಒಳಗೆ ಕಾಮಗಾರಿಗಳನ್ನು ಮುಗಿಸಲಾಗುವುದು ಎಂದು ಕೆ-ರೈಡ್ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರೈಲ್ವೆ ಇಲಾಖೆಯ ಈ ಮಹತ್ವದ ಯೋಜನೆಗೆ ಸಂಬಂಧಿಸಿದಂತೆ ನೈರುತ್ಯ ರೈಲ್ವೆಯು ವಿಸ್ತೃತ ಯೋಜನಾ ವರದಿಯನ್ನು ತಯಾರು ಮಾಡಿತ್ತು. ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತಕ್ಕೆ (ಕೆ-ರೈಡ್) ಈ ಯೋಜನೆ ವಹಿಸಲಾಗಿದೆ.

ಒಟ್ಟು 149 ಕಿಲೋಮೀಟರ್ ಉದ್ದದ ಈ ಯೋಜನೆಗೆ ಕೇಂದ್ರ ಜಿಎಸ್‌ಟಿ, ರಾಜ್ಯ ಜಿಎಸ್‌ಟಿ, ರಾಜಸ್ವ ಎಲ್ಲ ಸೇರಿ ₹ 15,767 ಕೋಟಿ ಬೇಕಾಗುತ್ತದೆ ಎಂದು ಅಂದಾಜು ಪಟ್ಟಿ ತಯಾರಿಸಲಾಗಿದೆ. ಶೇ 20ರಷ್ಟು ಕೇಂದ್ರ ಸರ್ಕಾರ, ಶೇ 20ರಷ್ಟು ರಾಜ್ಯ ಸರ್ಕಾರ ಹಾಗೂ ಉಳಿದ ಶೇ 60ರಷ್ಟು ಮೊತ್ತವನ್ನು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ನಿರ್ವಹಿಸಬೇಕು. ಮೊದಲ ಹಂತದಲ್ಲಿ ರಾಜ್ಯ ಸರ್ಕಾರವು ₹ 1,000 ಕೋಟಿ ಮಂಜೂರು ಮಾಡಿದ್ದು, ₹ 660 ಕೋಟಿ ಬಿಡುಗಡೆ ಮಾಡಿದೆ. ರೈಲ್ವೆ ಇಲಾಖೆಯು (ಕೇಂದ್ರ ಸರ್ಕಾರ) ₹ 1.350 ಕೋಟಿ ಮಂಜೂರು ಮಾಡಿದ್ದು, ₹ 450 ಕೋಟಿ ಬಿಡುಗಡೆ ಮಾಡಿದೆ.

ನಾಲ್ಕು ಕಾರಿಡಾರ್‌ಗಳಲ್ಲಿ ಆರು ಇಂಟರ್‌ಚೇಂಜ್ ನಿಲ್ದಾಣಗಳು ಸೇರಿ ಒಟ್ಟು 57 ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ.

ಬೈಯಪ್ಪನಹಳ್ಳಿ-ಚಿಕ್ಕಬಾಣಾವರ ಕಾಮಗಾರಿ ನಿರ್ವಹಿಸಲು (ಕಾರಿಡಾರ್–2) ನೈರುತ್ಯ ರೈಲ್ವೆಯು 157 ಎಕರೆ ಭೂಮಿಯನ್ನು ಕೆ-ರೈಡ್‌ಗೆ ಹಸ್ತಾಂತರಿಸಿದೆ. ಎಲ್ ಆ್ಯಂಡ್ ಟಿ ಸಂಸ್ಥೆಯು ಕಾಮಗಾರಿ ನಡೆಸುತ್ತಿದೆ.

ಬೆನ್ನಿಗಾನಹಳ್ಳಿ, ಕಸ್ತೂರಿ ನಗರ, ಸೇವಾ ನಗರ, ಬಾಣಸವಾಡಿ, ನಾಗವಾರ, ಕನಕನಗರ, ಹೆಬ್ಬಾಳ, ಮತ್ತಿಕೆರೆ, ಯಶವಂತಪುರ, ಶೆಟ್ಟಿಹಳ್ಳಿ, ಮೈದರಹಳ್ಳಿ, ಚಿಕ್ಕಬಾಣಾವರ ಒಟ್ಟು 12 ನಿಲ್ದಾಣಗಳ ವಿನ್ಯಾಸ ಅಂತಿಮಗೊಳಿಸಿದೆ. ಎರಡು ಎತ್ತರಿಸಿದ ನಿಲ್ದಾಣಗಳು, ಎರಡು ಎತ್ತರಿಸಿದ ಇಂಟರ್ ಚೇಂಜ್ ನಿಲ್ದಾಣಗಳು, ಎಂಟು ನೆಲಸ್ತರದ ನಿಲ್ದಾಣ ನಿರ್ಮಾಣಗೊಳ್ಳಲಿವೆ.

ಪೂರ್ವ-ನಿರ್ಮಾಣ ಕಾರ್ಯಗಳ ಸಮೀಕ್ಷೆ, ಸ್ಥಳಾಂತರ, ಜಿಯೋಟೆಕ್ನಿಕಲ್ ಪರೀಕ್ಷೆ ಪೂರ್ಣಗೊಂಡಿದೆ. ಸರ್ವೆ, ಜಿಪಿಆರ್, ಮಣ್ಣು ಮುಂತಾದ ಪ್ರಾಥಮಿಕ ಕಾಮಗಾರಿಗಳ ಪರಿಶೀಲನೆ, ಜೋಡಣೆ ವಿನ್ಯಾಸ ಮುಗಿದಿದೆ. ನೆಲ ಸಮತಟ್ಟು ಮಾಡುವುದು, ಕಾಸ್ಟಿಂಗ್ ಯಾರ್ಡ್ ಸ್ಥಾಪನೆ, ಬ್ಯಾಚಿಂಗ್ ಪ್ಲಾಂಟ್, ಸೇತುವೆಗಳ ವಿನ್ಯಾಸ, ಯು ಗಿರ್ಡರ್ ಮತ್ತು ಐ ಗಿರ್ಡರ್ ಪ್ರಗತಿಯಲ್ಲಿವೆ.

ಟೆಂಡರ್ ಹಂತ: ಹೀಲಲಿಗೆ-ರಾಜಕುಂಟೆ ಮಾರ್ಗಕ್ಕೆ(ಕಾರಿಡಾರ್-4) ಸಂಬಂಧಿಸಿದಂತೆ ಟೆಂಡರ್ ಕರೆಯಲಾಗಿದೆ. ನಾಲ್ಕು ಕಂಪನಿಗಳು ಬಿಡ್ ಮಾಡಿದ್ದು, ಬಿಡ್ ಮೌಲ್ಯಮಾಪನದ ಹಂತದಲ್ಲಿದೆ. ಕಾರಿಡಾರ್-4ಕ್ಕೆ ಸಂಬಂಧಿಸಿದಂತೆ 193 ಎಕರೆ ಜಮೀನನ್ನು ಹಸ್ತಾಂತರಿಸುವಂತೆ ನೈರುತ್ಯ ರೈಲ್ವೆಯನ್ನು ಕೆ-ರೈಡ್ ಕೋರಿದೆ.

ಕಾರಿಡಾರ್ 2-3: 1ನೇ ಮತ್ತು 4ನೇ ಕಾರಿಡಾರ್‌ಗಳ ನಿರ್ಮಾಣ ಚುರುಕಾಗಿದ್ದರೂ 2 ಮತ್ತು 3ನೇ ಕಾರಿಡಾರ್ ಇನ್ನೂ ವೇಗ ಪಡೆದುಕೊಂಡಿಲ್ಲ. ಕೆಎಸ್‌ಆರ್ ಬೆಂಗಳೂರು-ದೇವನಹಳ್ಳಿ ಮಾರ್ಗ (ಕಾರಿಡಾರ್–1) ನೈರುತ್ಯ ರೈಲ್ವೆಯ ಅನುಮೋದನೆಯ ಅಂತಿಮ ಹಂತದಲ್ಲಿದೆ. ಕೆಂಗೇರಿ-ವೈಟ್ ಫೀಲ್ಡ್ ಮಾರ್ಗ (ಕಾರಿಡಾರ್–3) ಜೋಡಣೆಗೆ ಸಂಬಂಧಿಸಿದ ಒಪ್ಪಂದ ಪ್ರಕ್ರಿಯೆಗಳಾಗುತ್ತಿವೆ.

ಈ ಎರಡು ಮಾರ್ಗಗಳಿಗೆ ಸಂಬಂಧಿಸಿದಂತೆ ಡಿಸೆಂಬರ್ ಒಳಗೆ ಟೆಂಡರ್ ಮುಗಿಸಬೇಕು ಎಂಬ ಗುರಿಯನ್ನು ಕೆ-ರೈಡ್ ಇಟ್ಟುಕೊಂಡಿದೆ.

ಯೋಜನೆಯ ಅಂಕಿ ಅಂಶಗಳು

₹2,479 ಕೋಟಿ	ಕೇಂದ್ರ ಸರ್ಕಾರದ ಪಾಲು
₹2,479 ಕೋಟಿ	ರಾಜ್ಯ ಸರ್ಕಾರದ ಪಾಲು
₹7,438 ಕೋಟಿ	ಬಾಹ್ಯನಿಧಿ
₹763 ಕೋಟಿ	ಕೇಂದ್ರ ಜಿಎಸ್‌ಟಿ, ಕಸ್ಟಮ್ಸ್ ಡ್ಯೂಟಿ
₹2,608	ರಾಜ್ಯ ಜಿಎಸ್‌ಟಿ, ಭೂಮಿ, ವಿವಿಧ ಸುಂಕ
₹15,767	ಯೋಜನೆಯ ಒಟ್ಟು ವೆಚ್ಚ

ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾರ್ಯಸಾಧ್ಯತಾ ವರದಿ ಮತ್ತು ವಿಸ್ತೃತ ಯೋಜನಾ ವರದಿಯನ್ನು ಯೋಜನಾ ಅಧಿಕಾರಿಗಳು ಮಲ್ಲೇಶ್ವರ ರೈಲು ನಿಲ್ದಾಣದಲ್ಲಿ ಸ್ಥಳ ಪರಿಶೀಲಿಸಿದರು ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

- ರಾಷ್ಟ್ರೀಯ ಉಪನಗರ ರೈಲು ನೀತಿಯಡಿಯಲ್ಲಿ ಇದು ದೇಶದ ಮೊದಲ ಯೋಜನೆಯಾಗಿದೆ. 2018ರಲ್ಲಿ ಘೋಷಣೆಯಾಗಿದ್ದರೂ 2020ರಲ್ಲಿ ಕೇಂದ್ರ ಸಚಿವ ಸಂಪುಟದಲ್ಲಿ ಮಂಜೂರಾಯಿತು.
- 2022ರ ಜೂನ್ 20ರಂದು ಪ್ರಧಾನಿ ನರೇಂದ್ರ ಮೋದಿ ಅವರು ಈ ಕಾಮಗಾರಿಗೆ ಚಾಲನೆ ನೀಡಿದ್ದರು. 40 ತಿಂಗಳುಗಳ ಒಳಗೆ ಅಂದರೆ 2025ರ ಅಕ್ಟೋಬರ್ 20ರ ಒಳಗೆ ಮುಗಿಸುವ ಗುರಿ ನೀಡಲಾಗಿದೆ.
- ಕಾರಿಡಾರ್–1ಕ್ಕೆ ಸಂಪಿಗೆ, ಕಾರಿಡಾರ್–2ಕ್ಕೆ ಮಲ್ಲಿಗೆ, ಕಾರಿಡಾರ್–3ಕ್ಕೆ ಪಾರಿಜಾತ ಹಾಗೂ ಕಾರಿಡಾರ್–4ಕ್ಕೆ ಕನಕ ಎಂದು ಎಲ್ಲ ನಾಲ್ಕು ಕಾರಿಡಾರ್‌ಗಳಿಗೆ ಹೂವುಗಳ ಹೆಸರು ಇಡಲಾಗಿದೆ.
- 1ನೇ ಕಾರಿಡಾರ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಬದಲು 2ನೇ ಕಾರಿಡಾರ್ ಕಾಮಗಾರಿಯನ್ನು ಮೊದಲು ಆರಂಭಿಸಿದ ಕೆ-ರೈಡ್

ಕಾರಿಡಾರ್‌ಗಳು

1	41.4 ಕಿ.ಮೀ.	ಸಂಪಿಗೆ ಮಾರ್ಗ
2	25.57 ಕಿ.ಮೀ.	ಮಲ್ಲಿಗೆ ಮಾರ್ಗ
3	35.52 ಕಿ.ಮೀ.	ಪಾರಿಜಾತ ಮಾರ್ಗ
4	46.88 ಕಿ.ಮೀ.	ಕನಕ ಮಾರ್ಗ

‘ಇನ್ನು ವಿಳಂಬ ಮಾಡಬೇಡಿ’

ಯೋಜನೆ ಮಂಜೂರಾದ ಬಳಿಕ ಎರಡು ವರ್ಷಗಳ ಕಾಲ ಯಾವುದೇ ಕೆಲಸಗಳಾಗಿರಲಿಲ್ಲ. 2022ರ ಜೂನ್ 20ಕ್ಕೆ ಪ್ರಧಾನಿಯವರೇ ಬಂದು 40 ತಿಂಗಳಲ್ಲಿ ಕೆಲಸ ಮುಗಿಸಿ ಎಂದು ಹೇಳಿ ಹೋದರೂ ಮತ್ತೆ 6 ತಿಂಗಳು ಕೆಲಸಗಳಾಗಲಿಲ್ಲ. ಸಮಸ್ಯೆ ಏನು ಎಂಬುದನ್ನು ಎಲ್ಲ ಇಲಾಖೆಯ ಅಧಿಕಾರಿಗಳನ್ನು ಕರೆದು ವಿಚಾರಿಸಿ ಸರಿಪಡಿಸಬೇಕಿದ್ದ ಜನಪ್ರತಿನಿಧಿಗಳು ನಿರ್ಲಕ್ಷ್ಯ ವಹಿಸಿದ್ದರಿಂದ ಹೀಗಾಯಿತು. ಕಳೆದ 6 ತಿಂಗಳಿನಿಂದಷ್ಟೇ ವೇಗವನ್ನು ಪಡೆದುಕೊಂಡಿದೆ. ಸದ್ಯದ ವೇಗ ಪರವಾಗಿಲ್ಲ. ಇನ್ನು ಮುಂದೆ ಇದೇ ವೇಗದಲ್ಲಿ ಸಾಗಬೇಕು ಮತ್ತೆ ಕುಂಠಿತಗೊಳ್ಳಬಾರದು.

ರಾಜಕುಮಾರ್ ದುಗರ್, ಸಿಟಿಜನ್ಸ್ ಫಾರ್ ಸಿಟಿಜನ್ ಸಂಸ್ಥಾಪಕ

‘ಜನಪ್ರತಿನಿಧಿಗಳು ಕಾರಣ’

ಮೊದಲ ಎರಡೂವರೆ ವರ್ಷಗಳ ಕಾಲ ಯೋಜನೆ ವಿಳಂಬವಾಗಲು ಜನಪ್ರತಿನಿಧಿಗಳು ನೇರ ಕಾರಣ. ಅಧಿಕಾರಿಗಳ ನಿರ್ಲಕ್ಷ್ಯ ಕೂಡ ಇದೆ. ಈ ಯೋಜನೆ ಕೇಂದ್ರ ಸರ್ಕಾರ ರೂಪಿಸಿದ್ದರೂ ಇದರಲ್ಲಿ ರಾಜ್ಯ ಸರ್ಕಾರದ ಪಾಲಿದೆ. ಜತೆಗೆ ಪೂರ್ಣ ಲಾಭವಾಗುವುದು ರಾಜ್ಯ ಸರ್ಕಾರಕ್ಕೆ ಮತ್ತು ಬೆಂಗಳೂರಿನ ಸಾರ್ವಜನಿಕರಿಗೆ. ಆದರೆ, ಇಲ್ಲಿನ ಶಾಸಕರು, ಸಂಸದರು ಯಾವುದೇ ಸ್ಪಂದನೆ ನೀಡಿಲ್ಲ. ಇಲಾಖೆಗಳ ನಡುವಿನ ಸಮನ್ವಯತೆಯ ಕೊರತೆಯೂ ಕಾರಣ. ಇದೀಗ ಎಲ್ಲ ಸರಿಯಾಗಿ 2ನೇ ಕಾರಿಡಾರ್‌ನಲ್ಲಿ ಕಾಮಗಾರಿ ಆರಂಭಗೊಂಡಿದೆ. ಎಲ್ಲ ಕಾರಿಡಾರ್ ಕಾಮಗಾರಿಗಳು ಶೀಘ್ರ ಆರಂಭವಾಗಬೇಕು.

ಸಂಜೀವ್ ದ್ಯಾಮಣ್ಣನವರ್, ರೈಲ್ವೆ ಹೋರಾಟಗಾರ

ಮತದಾರ ಪಟ್ಟಿ ಪರಿಷ್ಕರಣೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಜುಲೈ 21ರಿಂದ ಆ.21ರ ವರೆಗೆ ನಡೆಯಲಿದೆ.

ಈ ವಿಶೇಷ ಸಂಕ್ಷಿಪ್ತ ಪರಿಷ್ಕರಣೆಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ಜೊತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಗುರುವಾರ ಸಭೆ ನಡೆಸಿದರು. ಒಂದು ತಿಂಗಳು ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆಮನೆಗೆ ಭೇಟಿ ನೀಡಿ ಮತದಾರರ ಸೇರ್ಪಡೆ, ತಿದ್ದುಪಡಿ ಹಾಗೂ ಹೆಸರು ತೆಗೆದುಹಾಕುವ ಕೆಲಸ ಮಾಡಲಿದ್ದಾರೆ. ಈ ವೇಳೆ ಬೂತ್ ಮಟ್ಟದ ಏಜೆಂಟ್‌ಗಳು ಸ್ಥಳದಲ್ಲಿರಬೇಕಿದ್ದು, ಎಲ್ಲಾ ಕಡೆ ಬೂತ್ ಮಟ್ಟದ ಏಜೆಂಟ್‌ಗಳನ್ನು ನಿಯೋಜನೆ ಮಾಡಲು ರಾಜಕೀಯ ಪಕ್ಷದ ಮುಖಂಡರಿಗೆ ಸೂಚನೆ ನೀಡಿದರು.

28 ವಿಧಾನಸಭಾ ಕ್ಷೇತ್ರಗಳಲ್ಲಿಯೂ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ- ಎಂದರು.

ಮತದಾರರ ಪಟ್ಟಿಯಲ್ಲಿ ಸೇರ್ಪಡೆ, ತಿದ್ದುಪಡಿ ಹಾಗೂ ಹೆಸರು ತೆಗೆದುಹಾಕುವ ಕೆಲಸವನ್ನು ಬಿಎಲ್‌ಒಗಳು ಸರಿಯಾಗಿ ನಿರ್ವಹಿಸಬೇಕು. ಮರಣ ಹೊಂದಿರುವ ಹಾಗೂ ಬೇರೆಡೆ ಸ್ಥಳಾಂತರಗೊಂಡಿರುವ ಮತದಾರರ ಮಾಹಿತಿಯನ್ನು ಸರಿಯಾಗಿ ನಮೂದಿಸಬೇಕು.

ಮತದಾರರ ಪಟ್ಟಿ ಪರಿಷ್ಕರಣೆ -2024ರಲ್ಲಿ ಹೊಸದಾಗಿ ಹೆಸರು ನೋಂದಾಯಿಸಲು (ನಮೂನೆ 6), ತಿದ್ದುಪಡಿಗಾಗಿ (ನಮೂನೆ 8) ಅರ್ಜಿ ಸಲ್ಲಿಸಬೇಕಿದೆ. ಎಲ್ಲಾ ಪ್ರಕ್ರಿಯೆ ಮುಗಿದ ನಂತರ ಆ.28ರಿಂದ ಸೆ.29ರವರೆಗೆ ಮತಗಟ್ಟೆಗಳ ಪುನರ್ ವಿಂಗಡಣಾ ಕಾರ್ಯ ನಡೆಯಲಿದೆ. ಮತಗಟ್ಟೆಗಳ ಸ್ಥಳಾಂತರ ಅಥವಾ ದುರಸ್ತಿಯಲ್ಲಿರುವ ಮತಗಟ್ಟೆಗಳ ಪ್ರಸ್ತಾವ ಸಲ್ಲಿಸಲು ಅಧಿಕಾರಿಗಳಿಗೆ ತುಷಾರ್ ಸೂಚಿಸಿದರು. ಚುನಾವಣಾ ವಿಭಾಗದ ವಿಶೇಷ ಆಯುಕ್ತ ಉಜ್ವಲ್ ಕುಮಾರ್ ಘೋಷ್, ಅಧಿಕಾರಿಗಳು ಇದ್ದರು.

27ಕ್ಕೆ ಬೆಂಗಳೂರು ಬಂದ್‌ಗೆ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ವಾಹನಗಳಿಗೂ ಶಕ್ತಿ ಯೋಜನೆ ಅನುಷ್ಠಾನಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜುಲೈ 27ರಂದು ಬೆಂಗಳೂರು ಬಂದ್ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ತಿಳಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆದರ್ಶ ಆಟೊ ಮತ್ತು ಟ್ಯಾಕ್ಸಿ ಡ್ರೈವರ್ಸ್ ಯೂನಿಯನ್ ಅಧ್ಯಕ್ಷ ಎಂ. ಮಂಜುನಾಥ್, ‘ಸರ್ಕಾರ ನಮ್ಮ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಅಂದು ಬೆಳಿಗ್ಗೆ 10.30ಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಪ್ರತಿಭಟನಾ ರ‍್ಯಾಲಿ ಹಮ್ಮಿಕೊಳ್ಳಲಾಗುವುದು. ಸ್ವಾತಂತ್ರ್ಯ ಉದ್ಯಾನದಲ್ಲಿ ಸಂಜೆ 7ಗಂಟೆವರೆಗೂ ಪ್ರತಿಭಟನೆ ನಡೆಸಲಾಗುವುದು’ ಎಂದು ಹೇಳಿದರು.

ಒಕ್ಕೂಟದ ರಾಧಾಕೃಷ್ಣ ಹೊಳ್ಳ ಮಾತನಾಡಿ, ‘ರಾಜ್ಯದಲ್ಲಿ ಸುಮಾರು 5 ಲಕ್ಷಕ್ಕೂ ಹೆಚ್ಚು ಆಟೊ, 3 ಲಕ್ಷಕ್ಕೂ ಹೆಚ್ಚು ಟ್ಯಾಕ್ಸಿ, 55 ಸಾವಿರಕ್ಕೂ ಹೆಚ್ಚು ಖಾಸಗಿ ಬಸ್‌ಗಳಿವೆ. ಈ ಎಲ್ಲ ವಾಹನಗಳಿಂದ ಸರ್ಕಾರಕ್ಕೆ ಸುಮಾರು ₹2 ಸಾವಿರ ಕೋಟಿ ನೇರ ತೆರಿಗೆ, ₹20 ಸಾವಿರ ಕೋಟಿ ಪರೋಕ್ಷ ತೆರಿಗೆ ಭರಿಸಲಾಗುತ್ತಿದೆ. ಖಾಸಗಿ ವಾಹನ ಮಾಲೀಕರ ಮತ್ತು ಚಾಲಕರ ಕಷ್ಟಗಳಿಗೆ ಸರ್ಕಾರ ಸ್ಪಂದಿಸಬೇಕು. ಶಕ್ತಿ ಯೋಜನೆಯಿಂದ ಖಾಸಗಿ ವಾಹನಗಳ ಮಾಲೀಕರ ಮತ್ತು ಚಾಲಕರ ಆದಾಯ ಕುಂಠಿತಗೊಂಡಿದೆ. ಆದ್ದರಿಂದ ಪ್ರತಿತಿಂಗಳು ₹ 10 ಸಾವಿರ ಪರಿಹಾರ ನೀಡಬೇಕು’ ಎಂದು ಒತ್ತಾಯಿಸಿದರು.

‘ಆಟೊ, ಟ್ಯಾಕ್ಸಿ ಚಾಲಕರಿಗೆ ವಸತಿ ಯೋಜನೆ, ವಾಹನ ಖರೀದಿಸಲು ಸಬ್ಸಿಡಿ, ಚಾಲಕರ ಮಕ್ಕಳಿಗೆ ವಿದ್ಯಾರ್ಥಿವೇತನ, ಶೇ 5ಕ್ಕಿಂತ ಹೆಚ್ಚು ಕಮಿಷನ್ ಪಡೆಯುವ ಓಲಾ, ಉಬರ್‌ನಂತಹ ಕಂಪನಿಗಳಿಗೆ ನಿರ್ಬಂಧ ವಿಧಿಸಬೇಕು. ಶಕ್ತಿ ಯೋಜನೆಯಡಿ ರಾಜ್ಯ ಸರ್ಕಾರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಹಣ ಮರುಪಾವತಿಸುವಂತೆ ಖಾಸಗಿ ಬಸ್‌ಗಳಿಗೂ ನೀಡಬೇಕು ಅಥವಾ ರಸ್ತೆ ತೆರಿಗೆ ರದ್ದುಪಡಿಸಬೇಕು’ ಎಂದರು.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: ‘ಯುಬಿ ಟವರ್’, # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 2221 0705; ಫ್ಯಾಕ್ಸ್: +91 80 3985 6862
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ಜೂನ್ 30, 2023ಕ್ಕೆ ಅಂತ್ಯವಾದ ತ್ರೈಮಾಸಿಕ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶಗಳ ವಿವರಣೆ

(ಐಎನ್‌ಆರ್ ದಶಲಕ್ಷಗಳಲ್ಲಿ ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

ಕ್ರ. ಸಂಖ್ಯೆ	ವಿವರಗಳು	ಪ್ರತ್ಯೇಕಿತ			ಕ್ರೋಢೀಕೃತ		
		ಜೂನ್ 30, 2023 ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ)	ಜೂನ್ 30, 2022 ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ)	ಮಾರ್ಚ್ 31, 2023 ವರ್ಷಕ್ಕೆ ಕೊನೆಗೊಂಡ (ಪರಿಶೋಧಿಸಿದ)	ಜೂನ್ 30, 2023 ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ)	ಜೂನ್ 30, 2022 ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ)	ಮಾರ್ಚ್ 31, 2023 ವರ್ಷಕ್ಕೆ ಕೊನೆಗೊಂಡ (ಪರಿಶೋಧಿತ)
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	53,125	69,068	275,775	58,084	71,313	278,154
2.	ಅವಧಿಯ (ತೆರಿಗೆಯ ಮೊದಲು ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ) ನಿವ್ವಳ ಲಾಭ/(ನಷ್ಟ)	3,367	1,994	11,184	6,561	2,926	11,022
3.	ಅವಧಿಯ ತೆರಿಗೆಯ ಮೊದಲು (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ)	3,196	1,610	12,893	6,390	2,542	12,786
4.	ಅವಧಿಯ ತೆರಿಗೆಯ ನಂತರ (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ)	2,382	1,949	10,517	4,767	2,611	11,258
5.	ಅವಧಿಯ ಒಟ್ಟಾರೆ ವ್ಯಾಪಕ ಆದಾಯ [ಅವಧಿಯ ಲಾಭ/(ನಷ್ಟ) (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	2,382	1,949	10,512	4,764	2,608	11,236
6.	ಈಕ್ವಿಟಿ ಷೇರು ಬಂಡವಾಳ	1,455	1,455	1,455	1,455	1,453	1,455
7.	ಮೀಸಲುಗಳು (ಮೌಲ್ಯಮಾಪಿತ ಮೀಸಲುಗಳನ್ನು ಹೊರತುಪಡಿಸಿ) ವರ್ಷದ ಪರಿಶೋಧಿತ ಆಯವ್ಯಯ ಪಟ್ಟಿಯಲ್ಲಿ ತೋರಿಸಲಾಗಿದೆ			57,990			58,540
8.	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ. 2/–) [ಸೂಚನೆ (2) ಅನ್ನು ನೋಡಿ]						
	ಮೂಲ :	3.27	2.68	14.46	6.71	3.75	16.01
	ದುರ್ಬಲೀಕೃತ :	3.27	2.68	14.46	6.71	3.75	16.01

ಸೂಚನೆಗಳು:

1) ಮೇಲಿನದು 2015ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಾಂಶವಾಗಿದೆ. ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಲಭ್ಯವಿರುತ್ತದೆ.

2) ಫಲಿತಾಂಶಗಳ ಕ್ರೋಢೀಕೃತ ಸ್ಟೇಟ್‌ಮೆಂಟ್ ಅಡಿಯಲ್ಲಿ ಪ್ರಸ್ತುತಪಡಿಸಲಾದ ಎಲ್ಲಾ ಅವಧಿಗಳಲ್ಲಿ ಸರಾಸರಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳನ್ನು ಲೆಕ್ಕಾಚಾರ ಮಾಡುವಾಗ, ಕಂಪನಿಯ ಯುಎಸ್ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪನಿಯು ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಸಹಿ/–
ಹಿನಾ ನಾಗರಾಜನ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಸ್ಥಳ : ದೆಹಲಿ
ದಿನಾಂಕ : ಜುಲೈ 20, 2023

ಸಿಯುಇಟಿ–ಪಿಜಿ ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ದೇಶದ 197 ವಿಶ್ವವಿದ್ಯಾಲಯಗಳ ವಿವಿಧ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಯುಇಟಿ-ಪಿಜಿ) ಫಲಿತಾಂಶವನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಗುರುವಾರ ಪ್ರಕಟಿಸಿದೆ.

'ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ವಿಶ್ವವಿದ್ಯಾಲಯಗಳಿಗೆ ಫಲಿತಾಂಶಗಳನ್ನು ರವಾನಿಸಲಾಗಿದೆ. ವಿವರಗಳಿಗಾಗಿ ಅಭ್ಯರ್ಥಿಗಳು ಆಯಾ ವಿಶ್ವವಿದ್ಯಾಲಯಗಳನ್ನು ಸಂಪರ್ಕಿಸಬಹುದು’ ಎಂದು ಎನ್‌ಟಿಎಯ ಹಿರಿಯ ನಿರ್ದೇಶಕಿ ಸಾಧನಾ ಪರಾಶರ್ ತಿಳಿಸಿದ್ದಾರೆ.

ಕ್ರೆಡಾಯ್ ಅಧ್ಯಕ್ಷರಾಗಿ ಅಮರ್ ಆಯ್ಕೆ

ಬೆಂಗಳೂರು: ಬ್ರಿಗೇಡ್ ಎಂಟರ್‌ಪ್ರೈಸಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಅಮರ್ ಮೈಸೂರು ಅವರು ಕ್ರೆಡಾಯ್ (ಸಿಆರ್‌ಇಡಿಎಐ) ಬೆಂಗಳೂರಿನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಬ್ರಿಗೇಡ್ ಗ್ರೂಪ್‌ನ ಅಧ್ಯಕ್ಷ ಎಂ.ಆರ್. ಜೈಶಂಕರ್ ಮತ್ತು ಪ್ರೆಸ್ಟೀಜ್ ಗ್ರೂಪ್ ಚೇರ್ಮನ್ ಇರ್ಫಾನ್ ರಜಾಕ್, ಚಾರ್ಟರ್ಡ್ ಹೌಸಿಂಗ್ ವ್ಯವಸ್ಥಾಪಕ ನಿರ್ದೇಶಕ ಬಾಲಕೃಷ್ಣ ಹೆಗ್ಡೆ, ಜೋನಾಶಾ ಎಸ್ಟೇಟ್ಸ್ ಮತ್ತು ಪ್ರಾಜೆಕ್ಟ್‌ನ ನಾಗರಾಜ್ ರೆಡ್ಡಿ ಉಪಸ್ಥಿತಿಯಲ್ಲಿ ಅಧ್ಯಕ್ಷರ ಆಯ್ಕೆ ನಡೆಯಿತು.

ಹೊಸ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಕ್ರೆಡಾಯ್ ಮಹಿಳಾ ವಿಭಾಗದ (ಸಿಡಬ್ಲ್ಯುಡಬ್ಲ್ಯು) ದಕ್ಷಿಣ ವಲಯದ ಮೊದಲ ಸಭೆ ನಡೆಯಿತು. ಕಾನ್ಕಾರ್ಡ್ ನಿರ್ದೇಶಕಿ ಗ್ರೀಷ್ಮಾ ರೆಡ್ಡಿ, ಸಿಡಬ್ಲ್ಯುಡಬ್ಲ್ಯು ದಕ್ಷಿಣ ವಲಯ ಕಾರ್ಯದರ್ಶಿ ಮತ್ತು ಸ್ಟರ್ಲಿಂಗ್ ಡೆವಲಪರ್ಸ್ ಮಾರುಕಟ್ಟೆ ನಿರ್ದೇಶಕಿ ಅಂಜನಾ ಶಾಸ್ತ್ರಿ ಭಾಗವಹಿಸಿದ್ದರು.

ಎಂ.ಎಸ್. ರಾಮಯ್ಯ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಆರ್. ಜಯರಾಂ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಗುರುವಾರ ಭೇಟಿ ಮಾಡಿದರು

ಉತ್ತರ ಪ್ರದೇಶದ ಸಿ.ಎಂ ಭೇಟಿಯಾದ ನಿಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಎಸ್. ರಾಮಯ್ಯ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಆರ್. ಜಯರಾಂ ನೇತೃತ್ವದಲ್ಲಿ ಎಜುಕೇಶನ್ ಪ್ರಮೋಷನ್ ಸೊಸೈಟಿ ಫಾರ್ ಇಂಡಿಯಾ (ಇಪಿಎಸ್‌ಐ) ಉನ್ನತ ಮಟ್ಟದ ನಿಯೋಗವು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಗುರುವಾರ ಭೇಟಿ ಮಾಡಿ ಚರ್ಚಿಸಿತು.

ಉತ್ತರ ಪ್ರದೇಶದಲ್ಲಿ ಉನ್ನತ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ವಿದ್ಯಾರ್ಥಿಗಳಲ್ಲಿ ಸಂಶೋಧನೆ, ನಾವೀನ್ಯ, ಉದ್ಯಮಶೀಲತೆ ಹೆಚ್ಚಿಸುವ ಕುರಿತು ನಿಯೋಗದ ಸದಸ್ಯರು ಚರ್ಚೆ ನಡೆಸಿದರು. ಉತ್ತರ ಪ್ರದೇಶದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರೆ ರಾಜ್ಯ ಸರ್ಕಾರವು ಸಂಪೂರ್ಣವಾಗಿ ಬೆಂಬಲ ನೀಡಲಿದೆ ಎಂದು ಯೋಗಿ ಆದಿತ್ಯನಾಥ ಭರವಸೆ ನೀಡಿದರು.

ನಿಟ್ಟೆ ಡೀಮ್ಡ್ ಯೂನಿವರ್ಸಿಟಿಯ ಎನ್. ವಿಶಾಲ್ ಹೆಗ್ಡೆ, ಅಲಯನ್ಸ್ ವಿಶ್ವವಿದ್ಯಾಲ ಯದ ಅಭಯ್ ಜಿ. ಚೆಬ್ಬಿ, ರಾಮಯ್ಯ ಸಮೂಹ ಸಂಸ್ಥೆಯ ಪಿ.ಎನ್. ರಜ್ವನ್, ಗುರುಚರಣ್ ಗೊಲ್ಲರ ಕೇರಿ ಅಲ್ಲದೇ ಹರಿಯಾಣ, ತಮಿಳು ನಾಡು, ಒಡಿಶಾ, ಪಶ್ಚಿಮ ಬಂಗಾಳ, ತೆಲಂಗಾಣ, ಕೇರಳ, ದೆಹಲಿ, ರಾಜಸ್ಥಾನದ ಶಿಕ್ಷಣ ಸಂಸ್ಥೆ ಗಳ ಪ್ರತಿನಿಧಿಗಳು ನಿಯೋಗದಲ್ಲಿದ್ದರು.

ಸಾವಿರ ಹಾಸಿಗೆ ಸಾಮರ್ಥ್ಯದ ಕಟ್ಟಡ • ನಾಲ್ಕು ವರ್ಷಗಳಿಂದ ನಡೆಯುತ್ತಿರುವ ನಿರ್ಮಾಣ ಕಾಮಗಾರಿ

ವಿಕ್ಟೋರಿಯಾ: ಗಡುವು ಮುಗಿದರೂ ಸೇವೆಯಿಲ್ಲ

ಅಂಕಿ-ಅಂಶಗಳು

530	27	500-600	1,000-1,200	500	134	36
ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸಾಮಾನ್ಯ ಹಾಸಿಗೆಗಳು	ಐಸಿಯು ಹಾಸಿಗೆಗಳು	ಚಿಕಿತ್ಸೆ ಪಡೆಯುವ ಸರಾಸರಿ ಒಳರೋಗಿಗಳು	ದಿನವೊಂದರಲ್ಲಿ ಭೇಟಿ ನೀಡುವ ಹೊರರೋಗಿಗಳ ಸರಾಸರಿ ಸಂಖ್ಯೆ	ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು	ಟ್ರಾಮಾ ಕೇರ್ ಕೇಂದ್ರದಲ್ಲಿನ ಸಾಮಾನ್ಯ ಹಾಸಿಗೆಗಳು	ಟ್ರಾಮಾ ಕೇರ್ ಕೇಂದ್ರದಲ್ಲಿನ ಐಸಿಯು ಹಾಸಿಗೆಗಳು

• ವರುಣ ಹೆಗಡೆ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ತಲೆಯೆತ್ತುತ್ತಿರುವ ಸಾವಿರ ಹಾಸಿಗೆಗಳ 11 ಮಹಡಿಗಳ ಕಟ್ಟಡ ನಿರ್ಮಾಣ ಕಾಮಗಾರಿ ಕುಂಟುತ್ತಾ ಸಾಗುತ್ತಿದ್ದು, ನಾಲ್ಕು ವರ್ಷಗಳಾದರೂ ಕಟ್ಟಡ ಸೇವೆಗೆ ಅಣಿಗೊಂಡಿಲ್ಲ.

ನಗರದ ಅತೀ ದೊಡ್ಡ ಆಸ್ಪತ್ರೆಗಳಲ್ಲಿ ಒಂದಾದ ವಿಕ್ಟೋರಿಯಾಕ್ಕೆ ಹೊರರಾಜ್ಯಗಳಿಂದಲೂ ರೋಗಿಗಳು ಬರುತ್ತಾರೆ. ಪ್ರತಿನಿತ್ಯ ಸಾವಿರಕ್ಕೂ ಅಧಿಕ ಮಂದಿ ಹೊರರೋಗಿಗಳಾಗಿ ಭೇಟಿ ನೀಡುತ್ತಾರೆ. 500ಕ್ಕೂ ಅಧಿಕ ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಾರೆ. ಗುಣಮಟ್ಟದ ವೈದ್ಯಕೀಯ ಸೇವೆಗೆ ಹೆಸರಾಗಿರುವುದರಿಂದ ಚಿಕಿತ್ಸೆಗೆ ಬರುವ ರೋಗಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಹೀಗಾಗಿ, ಆಸ್ಪತ್ರೆಯ ಆವರಣದಲ್ಲಿ 2 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಸಾವಿರ ಹಾಸಿಗೆಗಳ ಕಟ್ಟಡ ನಿರ್ಮಿಸಲಾಗುತ್ತಿದೆ. ಇದನ್ನು 2021ರೊಳಗೆ ಪೂರ್ಣಗೊಳಿಸಿ, ಸೇವೆ ಪ್ರಾರಂಭಿಸಲು ಈ ಹಿಂದಿನ ಸರ್ಕಾರ ಗಡುವು ನೀಡಿತ್ತು. ಆದರೆ, ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ಈವರೆಗೂ ಪೂರ್ಣಗೊಳಿಸಿಲ್ಲ. ಇದರಿಂದ ರೋಗಿಗಳ ಚಿಕಿತ್ಸೆಗೆ ಸಮಸ್ಯೆಯಾಗಿದೆ.

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಅಡಿ ಕಾರ್ಯನಿರ್ವಹಿಸುವ ಈ ಆಸ್ಪತ್ರೆಯು, ದೇಶದ ಅತ್ಯಂತ ಹಳೆಯ ಆಸ್ಪತ್ರೆಗಳಲ್ಲಿ ಒಂದಾಗಿದೆ. ₹ 68.53 ಕೋಟಿ ವೆಚ್ಚದಲ್ಲಿ ಕೈಗೊಂಡ 11 ಮಹಡಿಗಳ ಕಟ್ಟಡ ನಿರ್ಮಾಣ ಕಾಮಗಾರಿಗೆ 2019ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶಂಕುಸ್ಥಾಪನೆ ನೆರವೇರಿಸಿದ್ದರು. 2020ರಲ್ಲಿ ಕೋವಿಡ್ ಕಾಣಿಸಿಕೊಂಡಿದ್ದರಿಂದ ಕೆಲ ಅವಧಿ ಕಟ್ಟಡ ನಿರ್ಮಾಣ ಕಾಮಗಾರಿ ಸ್ಥಗಿತಗೊಳಿಸಲಾಗಿತ್ತು. ಬಳಿಕ ಕಾರ್ಮಿಕರು ತಮ್ಮ ಊರುಗಳಿಗೆ ತೆರಳಿದ್ದರಿಂದ ಕಾಮಗಾರಿ ಕುಂಟುತ್ತಾ ಸಾಗಿತ್ತು. ಇದರಿಂದಾಗಿ ಗಡುವು ಮುಗಿದರೂ ಕಟ್ಟಡ ಕಾಮಗಾರಿಯೇ ಪೂರ್ಣಗೊಂಡಿಲ್ಲ. ಕಟ್ಟಡ ಕಾಮಗಾರಿ ಪೂರ್ಣಗೊಳ್ಳಲು ಇನ್ನೂ ಒಂದು ವರ್ಷ ಬೇಕೆಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ಸಾವಿರ ಹಾಸಿಗೆಗಳ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ
–ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ವಿಳಂಬದಿಂದ ರೋಗಿಗಳಿಗೆ ಸಮಸ್ಯೆ

ನಗರದಲ್ಲಿ 2020ರ ಮಾರ್ಚ್ ತಿಂಗಳಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ವಿಕ್ಟೋರಿಯಾ ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗಿತ್ತು. ಇದರಿಂದಾಗಿ ಕೋವಿಡೇತರ ರೋಗಿಗಳು ಸಮಸ್ಯೆ ಎದುರಿಸಿದ್ದರು. ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಅನ್ಯ ಕಾಯಿಲೆಗಳ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಗೆ ಆದ್ಯತೆ ನೀಡಲಾಗಿದೆ. ಹೀಗಾಗಿ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಂದಲೂ ಇಲ್ಲಿಗೆ ರೋಗಿಗಳು ಚಿಕಿತ್ಸೆಗೆ ಬರಲಾರಂಭಿಸಿದ್ದಾರೆ. ಆದರೆ, ರೋಗಿಗಳಿಗೆ ಅನುಸಾರವಾಗಿ ಇಲ್ಲಿ ಹಾಸಿಗೆಗಳು ಇಲ್ಲದಿರುವುದರಿಂದ ದಾಖಲಾತಿಗೆ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಚಿಕಿತ್ಸೆಗೆ ಕಾಯಬೇಕಾದ ಸ್ಥಿತಿ: ‘ಖಾಸಗಿ ಆಸ್ಪತ್ರೆಯಲ್ಲಿ ಸಾವಿರಾರು ರೂಪಾಯಿ ಪಾವತಿಸಬೇಕಾದ ಚಿಕಿತ್ಸೆ ಇಲ್ಲಿ ಉಚಿತವಾಗಿ ಸಿಗುತ್ತಿದೆ. ಆದರೆ, ದಾಖಲಾತಿ ಹಾಗೂ ವೈದ್ಯರ ಭೇಟಿಗೆ ದಿನವಿಡೀ ಕಾಯಬೇಕಾದ ಸ್ಥಿತಿಯಿದೆ. ದೂರದ ಊರುಗಳಿಂದ ಬಂದವರಿಗೆ ಸಮಸ್ಯೆ ಆಗುತ್ತಿದೆ. ಆದ್ದರಿಂದ ಆದಷ್ಟು ಬೇಗ ನೂತನ ಕಟ್ಟಡ ಕಾಮಗಾರಿ ಪೂರ್ಣಗೊಳಿಸಿ, ಚಿಕಿತ್ಸೆ ಪ್ರಾರಂಭಿಸಬೇಕು’ ಎನ್ನುವುದು ರೋಗಿಗಳ ಆಗ್ರಹ.

‘ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ದೊರೆಯುತ್ತಿದೆ. ಆದರೆ, ದಾಖಲಾತಿ ಪ್ರಕ್ರಿಯೆ ವಿಳಂಬವಾಗುತ್ತಿದೆ. ಮುಂಜಾನೆಯೇ ಬಂದು ಚೀಟಿ ಪಡೆದರೂ ವೈದ್ಯರ ಭೇಟಿಗೆ ಸಂಜೆಯವರೆಗೆ ಕಾಯಬೇಕಾದ ಸ್ಥಿತಿಯಿದೆ. ವಿವಿಧ ಪರೀಕ್ಷೆಗಳು ವಿಳಂಬವಾಗುತ್ತಿವೆ. ಅನಾರೋಗ್ಯಕ್ಕೆ ಒಳಗಾಗಿದ್ದ ತಾಯಿಯನ್ನು ಆಸ್ಪತ್ರೆಗೆ ದಾಖಲಿಸಲು ಎರಡು ದಿನ ಅಲೆದಾಟ ನಡೆಸಬೇಕಾಯಿತು. ಆಸ್ಪತ್ರೆಯಲ್ಲಿ ಹಾಸಿಗೆಗಳ ಸಂಖ್ಯೆಯನ್ನು ಆದಷ್ಟು ಬೇಗ ಹೆಚ್ಚಳ ಮಾಡಬೇಕು’ ಎಂದು ಅರಸೀಕೆರೆಯ ರಾಮಚಂದ್ರ ತಿಳಿಸಿದರು.

> **ನೂತನ ಕಟ್ಟಡದ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಲೋಕೋಪಯೋಗಿ ಇಲಾಖೆ ಇದರ ಹೊಣೆ ಹೊತ್ತಿದ್ದು, ವರ್ಷಾಂತ್ಯಕ್ಕೆ ಪೂರ್ಣಗೊಳ್ಳುವ ಸಾಧ್ಯತೆಯಿದೆ.**
> **ಡಾ. ದೀಪಕ್ ಎಸ್.,**
> ವಿಕ್ಟೋರಿಯಾ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ

ಪಾದಚಾರಿ ಮಾರ್ಗ ಒತ್ತುವರಿ ತೆರವು

ವಿಜಯನಗರ ಪೈಪ್‌ಲೈನ್ ರಸ್ತೆಯ ಅಂಗಡಿಯೊಂದರ ಶೆಲ್ಟರ್ ಅನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕ್ಷೆ ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡಗಳ ತೆರವು ಕಾರ್ಯಾಚರಣೆಯನ್ನು ಮುಂದುವರಿಸಿರುವ ದಕ್ಷಿಣ ವಲಯದ ಅಧಿಕಾರಿಗಳು, ವಿಜಯನಗರದಲ್ಲಿ ಗುರುವಾರ ಪಾದಚಾರಿ ಮಾರ್ಗದ ಒತ್ತುವರಿ ತೆರವುಗೊಳಿಸಿದ್ದಾರೆ.

ದಕ್ಷಿಣ ವಲಯದ ಆಯುಕ್ತ ಜಯರಾಂ ರಾಯಪುರ ಅವರ ಸೂಚನೆ ಮೇರೆಗೆ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆಯನ್ನು ವಿಜಯನಗರದಲ್ಲಿ ಗುರುವಾರ ನಡೆಸಲಾಯಿತು. ಹೊಸಹಳ್ಳಿ, ಕೃಷ್ಣದೇವರಾಯ ರಸ್ತೆ, ಟೆಲಿಕಾಂ ಲೇಔಟ್, ಚೋಳೂರು ಪಾಳ್ಯ, ಪೈಪ್‌ಲೈನ್ ರಸ್ತೆಯಲ್ಲಿ ಅಂಗಡಿಯವರು ನಿರ್ಮಿಸಿಕೊಂಡಿದ್ದ ಮೆಟ್ಟಿಲು, ಶೆಲ್ಟರ್ ಹಾಗೂ ತಾತ್ಕಾಲಿಕ ವ್ಯವಸ್ಥೆಗಳನ್ನು ತೆರವು ಮಾಡಲಾಯಿತು.

ಸುಂಕೇನಹಳ್ಳಿ ವಾರ್ಡ್‌ನಲ್ಲಿ ನಕ್ಷೆ ಉಲ್ಲಂಘಿಸಿರುವ ಕಟ್ಟಡವನ್ನು ತೆರವುಗೊಳಿಸಲಾಯಿತು. ಸ್ಥಳಕ್ಕೆ ಬಂದಿದ್ದ ಜಯರಾಂ ರಾಯಪುರ ಅವರ ಜೊತೆ ಸ್ಥಳೀಯರು ಮಾತುಕತೆ ನಡೆಸಿದರು. ‘ನಕ್ಷೆ ಉಲ್ಲಂಘಿಸಿ ನಿರ್ಮಾಣವಾದ ಎಲ್ಲ ಕಟ್ಟಡಗಳನ್ನೂ ಹಂತಹಂತವಾಗಿ ತೆರವು ಮಾಡಲಾಗುತ್ತದೆ. ನಾಗರಿಕರು ತಮಗೆ ಅನುಮೋದನೆಯಾದ ನಕ್ಷೆಯಂತೆಯೇ ಕಟ್ಟಡ ನಿರ್ಮಿಸಿಕೊಳ್ಳಬೇಕು. ಬೇಜವಾಬ್ದಾರಿಯಿಂದ ನಡೆದುಕೊಂಡರೆ, ಒಂದು ದಿನ ಇಡೀ ಕಟ್ಟಡವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಅವಕಾಶ ನೀಡಬಾರದು’ ಎಂದು ಸೂಚಿಸಿದರು.

ಬಿಬಿಎಂಪಿ ದಕ್ಷಿಣ ವಲಯದಲ್ಲಿ ಒಟ್ಟು 80 ಕಟ್ಟಡಗಳ ತೆರವು ಕಾರ್ಯಾಚರಣೆ ನಡೆಯಲಿದೆ.

ಕನ್ನಡದಲ್ಲೂ ಮಾಹಿತಿ ಲಭ್ಯ

ದಕ್ಷಿಣ ವಲಯದ ನಾಗರಿಕರು ತಮ್ಮ ಕುಂದುಕೊರತೆ ದಾಖಲಿಸಲು, ಸಂಬಂಧಿಸಿದ ಕಾಮಗಾರಿಯ ಅಧಿಕಾರಿಗಳ ಸಂಪರ್ಕ ಮಾಹಿತಿ ಪಡೆಯಲು ಆರಂಭಿಸಲಾಗಿರುವ ‘ಕ್ಯೂಆರ್ ಕೋಡ್ ರೋಡ್ ರೀಡರ್’ ಯೋಜನೆಯಲ್ಲಿ ಕನ್ನಡ ದಲ್ಲೂ ಮಾಹಿತಿ ಲಭ್ಯವಾಗುತ್ತಿದೆ.

ಬಿಬಿಎಂಪಿ ದಕ್ಷಿಣ ವಲಯದ ವ್ಯಾಪ್ತಿಯಲ್ಲಿ ನಾಮಫಲಕಗಳಲ್ಲಿ ‘ಕ್ಯೂಆರ್ ಕೋಡ್ ರೋಡ್ ರೀಡರ್’ ಯೋಜನೆ ಜಾರಿಗೊಳಿಸಲಾಗಿದೆ. ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಲಭ್ಯವಾಗುವ ಲಿಂಕ್ ಮೂಲಕ ರಸ್ತೆ, ಚರಂಡಿ, ಬೀದಿ ದೀಪದ ಸಮಸ್ಯೆಗಳಿಗೆ ಯಾರನ್ನು ಸಂಪರ್ಕಿಸಬೇಕೆಂಬ ಮಾಹಿತಿಯನ್ನು ಹೆಸರು, ಸಂಪರ್ಕ ಸಂಖ್ಯೆಗಳ ಸಹಿತ ಲಭ್ಯವಾಗುತ್ತಿದೆ. ಈ ಮೊದಲು ಇಂಗ್ಲಿಷ್‌ನಲ್ಲಿ ಮಾತ್ರ ಮಾಹಿತಿ ಲಭ್ಯವಿತ್ತು. ಈಗ ಕನ್ನಡದಲ್ಲೂ ಲಭ್ಯವಿದೆ. ಇಂಗ್ಲಿಷ್ ಹಾಗೂ ಕನ್ನಡದ ಆಯ್ಕೆಗಳಿವೆ ಎಂದು ವಿಶೇಷ ಆಯುಕ್ತ ಜಯರಾಂ ರಾಯಪುರ ತಿಳಿಸಿದರು.

ಪಾದಚಾರಿ ಮಾರ್ಗ ಒತ್ತುವರಿ ತೆರವು ಹಾಗೂ ಅದರ ಸ್ವಚ್ಛತೆ ಬಗ್ಗೆಯೂ ಅಭಿಯಾನ ನಡೆಸಲಾಗುತ್ತದೆ ಎಂದರು.

ಯೋಗೇಶ್ ಮೋಹನ್ ಅಧಿಕಾರ ಸ್ವೀಕಾರ

ಬೆಂಗಳೂರು: ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ವ್ಯವಸ್ಥಾಪಕರಾಗಿ ಯೋಗೇಶ್ ಮೋಹನ್ ಅಧಿಕಾರ ಸ್ವೀಕರಿಸಿದರು.

ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಚಿನ್ನದ ಪದಕ ಪಡೆದಿರುವ ಯೋಗೇಶ್ ಮೋಹನ್ 1991ರ ಬ್ಯಾಚ್‌ನ ಭಾರತೀಯ ರೈಲ್ವೆ ಮೆಕ್ಯಾನಿಕಲ್ ಎಂಜಿನಿಯರ್ ಅಧಿಕಾರಿಯಾಗಿದ್ದಾರೆ.

ಪಶ್ಚಿಮ ರೈಲ್ವೆ, ಸಂಶೋಧನಾ ವಿನ್ಯಾಸಗಳು ಮತ್ತು ಗುಣಮಟ್ಟ ಸಂಸ್ಥೆ (ಆರ್‌ಡಿಎಸ್‌ಒ) ಉತ್ತರ ಮಧ್ಯ ರೈಲ್ವೆ ಮತ್ತು ಈಶಾನ್ಯ ರೈಲ್ವೆಯಲ್ಲಿ ಕೆಲಸ ಮಾಡಿದ್ದರು. ಮೂರು ವಿಭಿನ್ನ ಲೊಕೊಮೋಟಿವ್ ಶೆಡ್‌ಗಳು ಮತ್ತು ಡೀಸೆಲ್ ಲೊಕೊಮೋಟಿವ್ ವರ್ಕ್ಸ್‌ನಲ್ಲಿ (ಡಿಎಲ್‌ಡಬ್ಲ್ಯು) ಉತ್ಪಾದನಾ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡಿದ್ದರು.

ಈಶಾನ್ಯ ರೈಲ್ವೆಯ ಗೋರಖ್‌ಪುರದಲ್ಲಿ ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದ ಅವರನ್ನು ಬೆಂಗಳೂರು ವಿಭಾಗದ ವ್ಯವಸ್ಥಾಪಕರನ್ನಾಗಿ ಮಾಡಿ ರೈಲ್ವೆ ಇಲಾಖೆ ವರ್ಗಾವಣೆ ಮಾಡಿದೆ. ಇಲ್ಲಿಯವರೆಗೆ ವ್ಯವಸ್ಥಾಪಕರಾಗಿದ್ದ ಶ್ಯಾಮ್‌ಸಿಂಗ್ ಅಧಿಕಾರ ಹಸ್ತಾಂತರಿಸಿದರು.

IN THE COURT OF THE CITY CIVIL JUDGE AT BANGALORE (CCH-18)
O.S. NO.6177/ 2021

Plaintiff V/s Defendant
1. Smt. M.P. Kalavathi, H.K.Sudheendra Rao and another W/o M.Prabhakara Gupta, Aged about 64 years, Represented by its GPA Holder Sri. M.Prabhakara Gupta, R/at No.49-2,"Neeladri", Shankar Mutt Road, Shankarpuram, Bangalore-560004.
2. Sri. R.Ravindranath S/o Late Sri. M. Ramachandra, Aged about 53 years, Represented by its GPA Holder Sri. M.P.Sreenath Gupta, S/o Sri. M.Prabhakara Gupta, R/at No.49-2,"Neeladri", Shankar Mutt Road, Shankarpuram, Bangalore-560004.

NOTICE/SUMMONS TO THE DEFENDANT No.1
1. **H.K. Sudheendra Rao**, S/o Late H.Krishna Char, Aged about 70 years, No.4071, IV Phase Layout, Girinagar Bengaluru-85. Whereas the above named plaintiff instituted a suit against you for a suit of Specific performance and other consequential reliefs. You are hereby summoned to appear before this court on 31.08.2023 at 11 a.m. in person or through advocate/pleader to answer the questions to the same. Failing which the suit will be heard and determined as ex-parte.

SCHEDULE A PROPERTY
All the piece and parcel of residential property bearing No.4071, having vide BDA Katha No.BDA/KA/4071/VBHBCS/12-13 carved in the Sy.No.16, 17, 18, 19 of Gerahalli Village and 101, 103/1,103/2,104/1,104/2,105 and 106 of Hosakerehalli Village, Uttarahalli Hobli, Bangalore South Taluk, formed by Vishwabharathi House Building Co-Operative Society Ltd., in IV Phase, Girinagar, Bengaluru-85, measuring East-West:50 Feet and North to South:50 Feet, total measuring 2500 Sq.Ft and bounded on **East By Site No.4083/1, West By Road, North By : Site No.4072 And South By :Site No.4070**

SCHEDULE B PROPERTY
All the piece and parcel of residential Flat bearing No.T-2, Third Floor, in the constructed on schedule A property measuring 1000 Sq.ft super butt up area together with 262 Sq.ft undivided share, right, title and interest for each flat in the Schedule A property and one covered car parking space in the stilt floor T 2, consist of two bedrooms, one kitchen, one dining hall and one living room, toilet to each flat and bounded on:- **East by : Site No.4083/1, West by : Road, North by : Site No.4072 and South by : Site No.4070.**
Given under my hand and seal of the court on this 15 day of July-2023.
By Order of the Court, Asst. Registrar, City Civil Court, Bangalore
B.G.Rajshekhar, Advocate
KAR-187/1985 “Sri Datta Arcade", 3rd Floor, No.2/1, 2nd Main, 5th Cross, Gandhinagar, Bangalore-560 009.

IN THE COURT OF THE CITY CIVIL JUDGE AT BANGALORE
O.S. No.6176/ 2021

M.Prabhakara Gupta- HUF, ... Plaintiff
H.K.Sudheendra Rao & another .. Defendant
1.M.Prabhakara Gupta-HUF, Represented by its kartha:- Sri. M.Prabhakara Gupta S/o Late.Sri.M.Nanjundeshwara Gupta Aged about 74 years
2. M.P. Sreenath Gupta-HUF Represented by its kartha:- M.P. Sreenath Gupta S/o Sri. M.Prabhakara Gupta Aged about 45 Years,
3. Smt.M.S.LAKSHMI, W / o Sri.M.P.Sreenath Gupta, Aged about 44 years, Represented by her GPA holder M.P. Sreenath Gupta,
All are residing at No.49-2,"Neeladri", Shankar Mutt Road, Shankarpuram, Bangalore-560004, Represented by her GPA holder M.P. Sreenath Gupta

NOTICE/SUMMONS TO THE DEFENDANT No.1
1. **H.K.Sudheendra Rao,** S/o Late H.Krishna Char, Aged about 70 years, No.4071, IV Phase Layout, Girinagar, Bengaluru - 85.
Whereas the above named plaintiff instituted a suit against you for a suit of Specific performance and other consequential reliefs. You are hereby summoned to appear before this court on 31.08.2023 at 11 a.m. in person or through advocate/pleader to answer the questions to the same. Failing which the suit will be heard and determined as ex-parte.

SCHEDULE A PROPERTY
All the piece and parcel of residential property bearing No.4071, having vide BDA Katha No.BDA/KA/4071/VBHBCS/12-13, carved in the Sy.No.16, 17, 18, 19 of Gerahalli Village and 101, 103/1, 103/2, 104/1, 104/2, 105 and 106 of Hosakerehalli Village, Uttarahalli Hobli, Bangalore South Taluk, formed by Vishwabharathi House Building Co-Operative Society Ltd., in IV Phase, Girinagar, Bengaluru - 85,measuring East-West:50 Feet and North to South:50 Feet, total measuring 2500 Sq.Ft and bounded on:- **EAST by Site No.4083/1, WEST by : Road, NORTH by : Site No.4072 and SOUTH by : Site No.4070**

SCHEDULE B PROPERTY
All the piece and parcel of residential Flat bearing No.G-2, (Front Side) in the ground Floor, with a super built up area of 1380 Sq.ft undivided share of 362 sq.ft in Schedule A property and one covered car parking space in the stilt floor bearing No.G-2, consist of three bedrooms, one kitchen, one dining hall and one living room, toilet no terrace right to put up any construction but the purchasers are free to access the terrace and bounded on:
East by : Site No.4083/1, West by : Road North by : Site No.4072 and South by : Site No.4070
Given under my hand and seal of the court on this 15 day of July-2023.
By Order of the Court, Asst. Registrar, City Civil Court, Bangalore
B.G.Rajshekhar, Advocate KAR-187/1985 “Sri Datta Arcade", 3rd Floor, No.2/1, 2nd Main, 5th Cross, Gandhinagar, Bangalore-560 009.

G20 भारत 2023 INDIA | Azadi Ka Amrit Mahotsav

ವ್ಯಕ್ತಿಗಳೇ ಮತ್ತು ಸಂಸ್ಥೆಗಳೇ : ಗಮನಿಸಿ
(ಯಾರ ಖಾತಾ ಪುಸ್ತಕಗಳು ಪರಿಶೋಧನೆಗೆ ಒಳಪಡುವ ಅಗತ್ಯವಿಲ್ಲವೊ, ಅಂಥವರು)
ಹ.ವ. 2023–24ನೇ ಸಾಲಿನ ಆದಾಯ ರಿಟರ್ನ್ (ಐಟಿಆರ್)
ಇ-ಫೈಲಿಂಗ್‌ನ ಕೊನೆಯ

ದಿನಾಂಕವನ್ನು ಮರೆಯದಿರಿ
ವಿಳಂಬ ಮಾಡದಿರಿ...

ಈ ವೆಬ್‌ಸೈಟ್‌ನಲ್ಲಿ ರಿಟರ್ನ್ಸ್ ಸಲ್ಲಿಸಬಹುದು
www.incometax.gov.in

ಸಕಾಲದಲ್ಲಿ ಐಟಿಆರ್ ಸಲ್ಲಿಕೆಯಿಂದ ತೆರಿಗೆದಾರರಿಗೆ ಸಿಗುವ ಲಾಭ
- ಸಾಲಗಳು ಮತ್ತು ಸಾಲ ಸೌಲಭ್ಯಗಳನ್ನು ಪಡೆಯಲು ನೆರವಾಗುತ್ತದೆ
- ವಿಸಾ ಅರ್ಜಿಗಳನ್ನು ಸಂಸ್ಕರಿಸುವಲ್ಲಿ ಐಟಿಆರ್ ಸಲ್ಲಿಕೆಯಿಂದ ಸಹಾಯವಾಗುತ್ತದೆ

ಸಕಾಲದಲ್ಲಿ ಐಟಿಆರ್ ಸಲ್ಲಿಸದಿದ್ದರೆ ಉಂಟಾಗುವ ಆಗುಹೋಗುಗಳು
- ಕೆಲವು ನಿರ್ದಿಷ್ಟ ಲಾಸ್‌ಗಳನ್ನು ಕ್ಯಾರಿ ಫಾರ್ವರ್ಡ್ ಮಾಡಲಾಗುವುದಿಲ್ಲ
- ಸೆಕ್ಷನ್ 234ಎಫ್ ಅಡಿಯಲ್ಲಿ ಶುಲ್ಕ ಭರಿಸಬೇಕಾಗುತ್ತದೆ
- ಸೆಕ್ಷನ್ 234ಎ ಅಡಿಯಲ್ಲಿ ಬಡ್ಡಿ ವಿಧಿಸಲಾಗುತ್ತದೆ

cbc 15401/13/0009/2324

ಇ-ಬ್ರೋಷರ್‌ಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ
आयकर विभाग
ಆದಾಯ ತೆರಿಗೆ ಇಲಾಖೆ
ಕೇಂದ್ರೀಯ ನೇರ ತೆರಿಗೆಗಳ ಮಂಡಳಿ
ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಸಂದರ್ಶಿಸಿ www.incometax.gov.in
ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

@IncomeTaxIndia | @IncomeTaxIndia.Official | @IncomeTaxIndiaOfficial | @Income Tax India | @Income Tax India Official

ಈ ದೇಶ ಕಂಡ ಕಾಂಗ್ರೆಸ್ ಪಕ್ಷದ ಧೀಮಂತ ನಾಯಕ,
ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೇರು ಪರ್ವತ,
ಪಕ್ಷದ ತತ್ವ, ಸಿದ್ಧಾಂತಗಳು ಮತ್ತು ಆದರ್ಶಗಳಿಗೆ ಮಾದರಿಯಾದ ಮುತ್ಸದ್ದಿ,
ಸಾಮಾಜಿಕ ನ್ಯಾಯದ ಹರಿಕಾರ,
ತಮ್ಮ ಜೀವನದುದ್ದಕ್ಕೂ ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿ ಹಿಡಿದ ದಿಗ್ಗಜ,
ಸಂವಿಧಾನದ ಮೂಲ ಧ್ಯೇಯಗಳಾದ ಸಮಾನತೆ, ಸ್ವಾತಂತ್ರ್ಯ ಮತ್ತು
ಭ್ರಾತೃತ್ವವನ್ನು ಗೌರವಿಸಿದ ಸಂಸದೀಯ ಪಟು,
ಬುದ್ಧನ ಶಾಂತಿಯ ಮಂತ್ರವನ್ನು ಪಠಿಸಿ,
ಬಸವಣ್ಣನವರ ಕಾಯಕವೇ ಕೈಲಾಸ ತತ್ವದಡಿಯಲ್ಲಿ ಕಾರ್ಯನಿರ್ವಹಿಸಿ,
ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರ ಶಿಕ್ಷಣ, ಸಂಘಟನೆ ಹೋರಾಟವೆಂಬ
ಮೂಲ ಮಂತ್ರವನ್ನು ಅನುಸರಿಸಿ ಧಣಿವರಿಯದೆ ಕಾಂಗ್ರೆಸ್ ಪಕ್ಷದ ಅತ್ಯುನ್ನತ
ಸ್ಥಾನವನ್ನು ಅಲಂಕರಿಸಿದ ಸರ್ವೋಚ್ಚ ನಾಯಕರು
ಮತ್ತು ಎಐಸಿಸಿ ಅಧ್ಯಕ್ಷರಾದ
ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ
ಅಪ್ಪಾಜಿಯವರಿಗೆ ಹೃದಯಪೂರ್ವಕ
81ನೇ ವರ್ಷದ
ಜನ್ಮದಿನದ
ಶುಭಾಶಯಗಳು
ಶುಭ ಕೋರುವವರು
ಡಾ|| ಆರ್. ಪ್ರಭಾಕರ್‌ರೆಡ್ಡಿ M.Sc.,
ಕಾಂಗ್ರೆಸ್ ಮುಖಂಡರು
ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ

ಕಾರ್ಮಿಕರ ಕಲ್ಯಾಣ ಮಂಡಳಿಯ ಸುತ್ತೋಲೆಗೆ ಸಂಘಟನೆಗಳ ವಿರೋಧ

ನೋಂದಣಿಗೆ ವೇತನ ಚೀಟಿ ಕಡ್ಡಾಯ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನೋಂದಣಿ ಮಾಡಿಸಲು ವೇತನ ಚೀಟಿ ಅಥವಾ ಹಾಜರಾತಿ ಪಟ್ಟಿ ಸಲ್ಲಿಸುವುದು ಕಡ್ಡಾಯ!

ಹೌದು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೀಗೆ ಸುತ್ತೋಲೆ ಹೊರಡಿಸಿದ್ದಾರೆ.

ನೋಂದಣಿ ಸಮಯ ಹಾಗೂ ವಿವಿಧ ಸವಲತ್ತು ನೀಡುವ ಸಂದರ್ಭದಲ್ಲಿ ಕಾರ್ಮಿಕರು ನೀಡಿರುವ ದಾಖಲೆ ಪರಿಶೀಲಿಸಿದಾಗ ಮತ್ತು ವಾಸ್ತವಾಂಶ ತಿಳಿದುಕೊಳ್ಳಲು ಸ್ಥಳ ಪರಿಶೀಲನೆ ನಡೆಸಿದಾಗ ನಿಯಮಗಳಲ್ಲಿನ ಅರ್ಹತಾ ಮಾನದಂಡಗಳನ್ನು ಪೂರೈಸದ ಕಾರ್ಮಿಕರು ಫಲಾನುಭವಿಗಳಾಗಿ ನೋಂದಾಯಿಸಿರುವುದು ಕಂಡು ಬಂದಿದೆ ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ನಿರ್ಮಾಣ ಕಾರ್ಮಿಕರ ಕಾಯ್ದೆಗಳ ಪ್ರಕಾರ ಅರ್ಹರಿಗೆ ಮಾತ್ರ ಮಂಡಳಿಯ ಸೌಲಭ್ಯ ತಲುಪಬೇಕಿದೆ. ಬೇರೆಯವರೇ ಹೆಚ್ಚಿನ ಸಂಖ್ಯೆಯಲ್ಲಿ ಲಾಭ ಪಡೆದುಕೊಳ್ಳುತ್ತಿದ್ದು, ನಿಜವಾದ ಕಾರ್ಮಿಕರಿಗೆ 'ಇದರಿಂದ ಅನ್ಯಾಯವಾಗುತ್ತಿದೆ. ಆದ್ದರಿಂದ ಕಾರ್ಮಿಕರ ಸದಸ್ಯತ್ವ ನವೀಕರಣ ಸಂದರ್ಭದಲ್ಲಿ ಈ ಮಾಹಿತಿ ಪಡೆಯಬೇಕು ಎಂದು ಸೂಚನೆ ನೀಡಿದ್ದಾರೆ.

ಕಾರ್ಮಿಕರಿಗೆ ಅನ್ಯಾಯ

'ರಾಜ್ಯದ ಕಟ್ಟಡ ಕಾರ್ಮಿಕರು ಸಣ್ಣ ಸಣ್ಣ ಮೇಸ್ತ್ರಿಗಳ ಅಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಮೇಸ್ತ್ರಿಗಳು ಕೂಡ ಮೂಲತಃ ಕಾರ್ಮಿಕರೇ ಆಗಿದ್ದಾರೆ. ಅವರಿಂದ ವೇತನ ಚೀಟಿ ಮತ್ತು ಹಾಜರಾತಿ ಪಟ್ಟಿ ಪಡೆಯುವುದು ಸಾಧ್ಯವಿಲ್ಲ. ಈ ಸುತ್ತೋಲೆಯಿಂದ ಕಾರ್ಮಿಕರಿಗೆ ಅನ್ಯಾಯ ವಾಗಲಿದೆ. ಕೂಡಲೇ ವಾಪಸ್ ಪಡೆಯಬೇಕು' ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್ ಆಗ್ರಹಿಸಿದರು.

ಮುಖ್ಯಾಂಶಗಳು

- ನೋಂದಣಿಯಾಗಿರುವ ಕಾರ್ಮಿಕರ ಸಂಖ್ಯೆ 44.28 ಲಕ್ಷ
- ಕಲ್ಯಾಣ ಮಂಡಳಿಯಲ್ಲಿ ಇರುವ ನಿಧಿ ₹6,500 ಕೋಟಿ

ನವೀಕರಣಕ್ಕೆ ಅರ್ಜಿ ಸಲ್ಲಿಸುವ ಸಂದರ್ಭದ ಪೂರ್ವದ 12 ತಿಂಗಳ ಅವಧಿಯಲ್ಲಿ 90 ದಿನ ಕೆಲಸ ನಿರ್ವಹಿಸಿದ ಬಗ್ಗೆ ಕಟ್ಟಡ ಮಾಲೀಕರು ಅಥವಾ ಗುತ್ತಿಗೆದಾರರಿಂದ ವೇತನ ಚೀಟಿ ಅಥವಾ ಹಾಜರಾತಿ ವಹಿ ದಾಖಲೆಗಳನ್ನು ಉದ್ಯೋಗ ಪ್ರಮಾಣ ಪತ್ರದೊಂದಿಗೆ ಕಡ್ಡಾಯವಾಗಿ ಪಡೆಯಬೇಕು. ಸೇವಾ ಸಿಂಧು ತಂತ್ರಾಂಶದ ಮೂಲಕ ನವೀಕರಣಕ್ಕೆ ಅರ್ಜಿ ಸ್ವೀಕರಿಸುತ್ತಿದ್ದು, ಈ ಪ್ರಮಾಣ ಪತ್ರಗಳನ್ನು ಸಲ್ಲಿಸಲಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು' ಎಂದು ತಿಳಿಸಿದ್ದಾರೆ.

'ಈ ಸುತ್ತೋಲೆಯಿಂದ ಕಾರ್ಮಿಕರಿಗೆ ಅನ್ಯಾಯ ವಾಗಲಿದ್ದು, ಮಂಡಳಿ ಸವಲತ್ತು ಪಡೆಯಲು ಯಾವುದೇ ಕಾರ್ಮಿಕನಿಗೂ ಸಾಧ್ಯವಾಗುವುದಿಲ್ಲ. ಕಟ್ಟಡ ಕಾರ್ಮಿಕರು ವೇತನ ಚೀಟಿ ಕೇಳಿದರೆ ಕೆಲಸಕ್ಕೆ ಬರದಂತೆ ಗುತ್ತಿಗೆದಾರರು ತಿಳಿಸುತ್ತಾರೆ. ದುಡಿದು ತಿನ್ನುವ ಜನರಿಗೆ ಸವಲತ್ತು ನೀಡಲು ಈ ರೀತಿಯ ಷರತ್ತುಗಳನ್ನು ವಿಧಿಸುವುದು ಸರಿಯಲ್ಲ' ಎಂದು ಕಾರ್ಮಿಕ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿವೆ.

'ಕಾರ್ಮಿಕರಲ್ಲದವರೂ ಫಲಾನುಭವಿಯಾಗಿ ನೋಂದಣಿ ಮಾಡಿಕೊಂಡಿದ್ದಾರೆ. ನೈಜ ಫಲಾನುಭವಿಗೆ ಈ ಮಂಡಳಿಯ ಸವಲತ್ತು ದೊರಕಿಸಬೇಕಿದ್ದು, ಅದಕ್ಕಾಗಿ ಕೆಲ ಷರತ್ತುಗಳನ್ನು ವಿಧಿಸಲಾಗಿದೆ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಸ್ಪಷ್ಟಪಡಿಸಿದರು.

'₹13 ಸಾವಿರ ಕೋಟಿ ಇದ್ದ ಮಂಡಳಿ ನಿಧಿ ಈಗ ₹6500 ಕೋಟಿಯಾಗಿದೆ. ಹಾಜರಾತಿ ಪಟ್ಟಿ ನೀಡುವುದು ಕಾರ್ಮಿಕರಿಗೆ ಕಷ್ಟ ಆಗಬಹುದು, ಆದರೆ ಅಸಾಧ್ಯ ಅಲ್ಲ. ಅಧಿಕಾರಿಗಳನ್ನೇ ಕಾರ್ಮಿಕರ ಮನೆಗೆ ಕಳುಹಿಸಿ ಪರಿಶೀಲಿಸಲಾಗುವುದು. ಕಾರ್ಮಿಕ ಸಂಘಟನೆಗಳ ಸಹಕಾರವೂ ಬೇಕು' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಭಾರತಕ್ಕೆ ಬಂದಿಳಿದ ಶ್ರೀಲಂಕಾ ಅಧ್ಯಕ್ಷ

ನವದೆಹಲಿ (ಪಿಟಿಐ): ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರು ಎರಡು ದಿನಗಳ ಭೇಟಿಗಾಗಿ ಗುರುವಾರ ಭಾರತಕ್ಕೆ ಆಗಮಿಸಿದ್ದಾರೆ.

ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧ, ವಿಶೇಷವಾಗಿ ಆರ್ಥಿಕ ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ ವಿಷಯಗಳಿಗೆ ಈ ಭೇಟಿಯಲ್ಲಿ ಆದ್ಯತೆ ಸಿಗುವ ನಿರೀಕ್ಷೆ ಇದೆ.

ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ವಿಕ್ರಮಸಿಂಘೆ ಅವರ ನಡುವೆ ಶುಕ್ರವಾರ ಸಭೆ ನಿಗದಿಯಾಗಿದೆ. ಎರಡೂ ರಾಷ್ಟ್ರಗಳ ಸ್ನೇಹ ಸಂಬಂಧಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳ ಬಗ್ಗೆ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಲಿದೆ.

ಶ್ರೀಲಂಕಾ ಕಳೆದ ವರ್ಷ ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿತ್ತು. ಇದಾದ ನಂತರ ಲಂಕಾ ಅಧ್ಯಕ್ಷರು ಭಾರತಕ್ಕೆ ಕೈಗೊಂಡ ಮೊದಲ ಭೇಟಿ ಇದಾಗಿದೆ. ಸಂಕಷ್ಟಕ್ಕೆ ಸಿಲುಕಿದ್ದ ಶ್ರೀಲಂಕಾಕ್ಕೆ ಭಾರತವು ಸುಮಾರು ₹32.83 ಸಾವಿರ ಕೋಟಿ ಮೌಲ್ಯದ ಆರ್ಥಿಕ ಸಹಾಯ ಮಾಡಿ ನೆರವಿನ ಹಸ್ತ ಚಾಚಿತ್ತು.

ಮೇಕೆದಾಟು: ಸಮೀಕ್ಷೆ ಶೀಘ್ರ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಮೇಕೆದಾಟುವಿನಲ್ಲಿ ಕಾವೇರಿ ನದಿಗೆ ಕುಡಿಯುವ ನೀರಿನ ಉದ್ದೇಶದ ಸಮತೋಲನ ಜಲಾಶಯ ನಿರ್ಮಾಣಕ್ಕೆ ಹೊರಟಿರುವ ರಾಜ್ಯ ಸರ್ಕಾರ ಜಂಟಿ ಸರ್ವೆಗೆ ಮುಂದಾಗಿದ್ದು, ಯೋಜನೆಯ ಸ್ಥಳದಲ್ಲಿ ಗಡಿ ಗುರುತಿಸಲು ಮತ್ತು ಮರಗಳ ಎಣಿಕೆ ಕಾರ್ಯ ನಡೆಸಲು ಅರಣ್ಯ ಇಲಾಖೆಯು ಅಧಿಕಾರಿಗಳನ್ನು ನಿಯೋಜಿಸಿದೆ.

ಬೆಂಗಳೂರು, ಮೈಸೂರು, ಚಾಮರಾಜನಗರ ವೃತದ ವಿವಿಧ ವನ್ಯಜೀವಿ ವಿಭಾಗಗಳ 29 ಮಂದಿ ಉಪ ವಲಯ ಅರಣ್ಯಾಧಿಕಾರಿಗಳನ್ನು ಸಮೀಕ್ಷಾ ಕಾರ್ಯಕ್ಕೆ ನಿಯೋಜಿಸಿ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಬ್ಬಂದಿ ಮತ್ತು ನೇಮಕಾತಿ) ಅನಿಲ್ ಕುಮಾರ್ ರತನ್ ಜುಲೈ 15ರಂದು ಆದೇಶ ಹೊರಡಿಸಿದ್ದಾರೆ.

ಬೆಂಗಳೂರು ವೃತ್ತ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ತಲಾ ಐವರು, ಬೆಂಗಳೂರು ಅರಣ್ಯ ಸಂಚಾರಿ ದಳ, ಚಾಮರಾಜನಗರ ವೃತ್ತ ಕಚೇರಿ, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ತಲಾ ನಾಲ್ವರು, ಮೈಸೂರು ವೃತ್ತ, ಮಲೆ ಮಹದೇಶ್ವರ ವನ್ಯಧಾಮದ ತಲಾ ಮೂವರು ಹಾಗೂ ಕಾವೇರಿ ವನ್ಯಧಾಮದ ಒಬ್ಬರು ಡಿಆರ್‌ಎಫ್‌ಒಗಳನ್ನು ಸಮೀಕ್ಷೆಗೆ ನಿಯೋಜಿಸಲಾಗಿದೆ.

ಪ್ರಜಾವಾಣಿ @75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

'ಯಥಾರ್ಥರಹಿತ ಪ್ರಾಸಿಕ್ಯೂಷನ್ ವಾದ'

ಪಿಎಸ್‌ಐ ನೇಮಕಾತಿ ಹಗರಣ: ಅಮೃತ್ ಪೌಲ್ ಜಾಮೀನು ಅರ್ಜಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದಲ್ಲಿ ಪ್ರಾಸಿಕ್ಯೂಷನ್; ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಯಾವುದೇ ಯಥಾರ್ಥಪೂರ್ಣ ಸಾಕ್ಷ್ಯಗಳಿಲ್ಲ. ಆರೋಪಿಯನ್ನು ವೃಥಾ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದೆ' ಎಂದು ಪ್ರಕರಣದ ಆರೋಪಿಯಾದ ಐಪಿಎಸ್ ಅಧಿಕಾರಿ ಅಮೃತ್ ಪೌಲ್ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಅಮೃತ್ ಪೌಲ್ ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಎಂ.ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಮೃತ್ ಪೌಲ್ ಪರ ವಾದ ಮಂಡಿಸಿದ ಹಿರಿಯ ವಕೀಲ ಎಂ.ಎಸ್.ಶ್ಯಾಮಸುಂದರ್ ಪ್ರಾಸಿಕ್ಯೂಷನ್ ಆರೋಪಿಸಿದ್ದ ಅಂಶಗಳಿಗೆ ಪ್ರತಿಯಾಗಿ ಉತ್ತರ ಪತ್ರಿಕೆಯ ಮಾದರಿಯನ್ನು ಮುಕ್ತ ನ್ಯಾಯಾಲಯದಲ್ಲಿ ಪ್ರದರ್ಶಿಸಿದರಲ್ಲದೆ, 'ವಿಧಿ ವಿಜ್ಞಾನ ಪ್ರಯೋಗಾಲಯ ನೀಡಿರುವ ವರದಿಯ ಆಧಾರದಲ್ಲಿ ಸಾಕ್ಷ್ಯವನ್ನು ಪರಿಗಣಿಸುವುದು ಸರ್ವಥಾ ಸಮರ್ಥನೀಯವಲ್ಲ' ಎಂದು ಪ್ರತಿಪಾದಿಸಿದರು.

'ಒಂದು ವೇಳೆ ಎಫ್‌ಎಸ್‌ಎಲ್ ವರದಿಯನ್ನೇ ಒಪ್ಪುವುದಾದರೆ, ಉತ್ತರ ಪತ್ರಿಕೆಯ ನಾಲ್ಕು ವಿಭಾಗಗಳಾದ ಅರ್ಜಿಸಂಖ್ಯೆ, ಅನುಕ್ರಮಾಂಕ (ರೋಲ್ ನಂಬರ್), ಪ್ರಶ್ನೆಪತ್ರಿಕೆ ಶ್ರೇಣಿ ಹಾಗೂ ಪ್ರಯತ್ನಿಸಿದ ಪ್ರಶ್ನೆಗಳ ಸಂಖ್ಯೆ ಗಮನಾರ್ಹ. ಈ ನಾಲ್ಕೂ ಅಂಶಗಳನ್ನು ಒಬ್ಬ ಅಭ್ಯರ್ಥಿ ಉತ್ತರ ಬರೆಯುವ ಪರೀಕ್ಷಾ ಕೊಠಡಿಯ ಒಳಗೇ ಭರ್ತಿ ಮಾಡಿರಬೇಕಾಗುತ್ತದೆ. ಈ ಕಾಲಂಗಳನ್ನು ಖಾಲಿ ಬಿಡಲು ಆಗುವುದಿಲ್ಲ. ಆದರೆ, ಪ್ರಾಸಿಕ್ಯೂಷನ್ ಈ ಕಾಲಂಗಳಲ್ಲಿ ತಿದ್ದಲಾಗಿದೆ ಎಂದು ಆರೋಪಿಸುತ್ತಿರುವುದು ಆಧಾರರಹಿತ' ಎಂದರು.

'ಪರೀಕ್ಷಾ ಕೊಠಡಿಯಲ್ಲಿ ಅಂದು ಹಾಜರಿದ್ದ ಪರೀಕ್ಷಾ ವೀಕ್ಷಕರನ್ನು (ಇನ್ವಿಜಿಲೇಟರ್) ತನಿಖಾಧಿಕಾರಿಗಳು ವಿಚಾರಣೆಗೆ ಒಳಪಡಿಸಿಲ್ಲ. ಅಂತೆಯೇ ಎಲ್ಲಾ ಕೊಠಡಿಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಾಡಿಸಲಾಗಿತ್ತು. ಉತ್ತರ ಪತ್ರಿಕೆಗಳನ್ನು ಇರಿಸಿದ್ದ ಪೆಟ್ಟಿಗೆಗಳನ್ನು ಸುಲಭವಾಗಿ ಯಾರೂ ಅನುಮತಿಯಿಲ್ಲದೆ, ಅನಧಿಕೃತವಾಗಿ ತೆರೆಯಲು ಅವಕಾಶವಿರಲಿಲ್ಲ. ಪ್ರಾಸಿಕ್ಯೂಷನ್ ಪ್ರಕರಣವನ್ನು ವ್ಯಾಪಂ ಹಗರಣಕ್ಕೆ ಹೋಲಿಸಿ ವಾದ ಮಂಡಿಸುತ್ತಿರುವುದು ಸರಿಯಲ್ಲ. ವ್ಯಾಪಂ ಪ್ರಕರಣದಲ್ಲಿ ಬಹುತೇಕ ಆರೋಪಿಗಳು ಜಾಮೀನು ಪಡೆದಿದ್ದಾರೆ ಮತ್ತು ಈ ಪ್ರಕರಣದಲ್ಲಿ ಯಾವುದೇ ನೇರ ಸಾಕ್ಷ್ಯ ಇಲ್ಲ. ಪ್ರಾಸಿಕ್ಯೂಷನ್ ಶೂನ್ಯಾತಿಶೂನ್ಯ ಸಾಕ್ಷ್ಯಗಳನ್ನು ಪ್ರಸ್ತುತಪಡಿಸಿದೆ' ಎಂದು ಹೇಗಳೆದರು.

ಇದಕ್ಕೆ ಪ್ರತಿಯಾಗಿ ಪ್ರಾಸಿಕ್ಯೂಷನ್ ಪರ ವಕೀಲ ಪಿ.ಪ್ರಸನ್ನಕುಮಾರ್, 'ಅರ್ಜಿದಾರರ ಪರ ವಕೀಲರು ಪ್ರಕರಣದ ಮುಖ್ಯ ಅಂಶವನ್ನೇ ಬದಿಗಿರಿಸಿ ಸುತ್ತಿಬಳಸಿ ಮಹತ್ವರಹಿತ ವಾದ ಮಂಡನೆ ಮಾಡುತ್ತಿದ್ದಾರೆ' ಎಂದು ಆಕ್ಷೇಪಿಸಿದರು. ದಿನದ ಕಲಾಪದ ಸಮಯ ಮುಕ್ತಾಯವಾದ ಕಾರಣ ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಲಾಗಿದೆ. ಪಿಎಸ್‌ಐ ನೇಮಕಾತಿ ವಿಭಾಗದ ಎಡಿಜಿಪಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಮೃತ್ ಪೌಲ್, ಹಗರಣದ 35ನೇ ಆರೋಪಿಯಾಗಿದ್ದಾರೆ.

'ಆಕ್ಷೇಪಾರ್ಹ ಕಿರುನಾಟಕ': ವಿಚಾರಣೆಗೆ ತಡೆ

ಬೆಂಗಳೂರು: ಬಿ.ಆರ್. ಅಂಬೇಡ್ಕರ್ ಮತ್ತು ದಲಿತರ ವಿರುದ್ಧ ಆಕ್ಷೇಪಾರ್ಹ ಕಿರು ನಾಟಕ (ಸ್ಕಿಟ್) ಪ್ರದರ್ಶಿಸಿದ ಆರೋಪದಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್ಸಿ-ಎಸ್ಟಿ) ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅನುಸಾರ ಬೆಂಗಳೂರು ಜೈನ್ ಯೂನಿವರ್ಸಿಟಿ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಏಳು ವಿದ್ಯಾರ್ಥಿಗಳ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧದ ಎಫ್‌ಐಆರ್ ಹಾಗೂ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ನೈಮಾ ಅಖ್ತರ್ ನಝೂರಿಯಾ ಸೇರಿದಂತೆ ಏಳು ವಿದ್ಯಾರ್ಥಿಗಳು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಕಾಲೇಜು ವತಿಯಿಂದ ನಗರದ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ 2023ರ ಫೆಬ್ರುವರಿ 8ರಂದು ಯುವಜನೋತ್ಸವ ನಡೆಸಲಾಗಿತ್ತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮೀಸಲು ವ್ಯವಸ್ಥೆ ಕುರಿತು ವಿಡಂಬನಾತ್ಮಕ ಕಿರು ನಾಟಕ (ಮ್ಯಾಡ್- ಆ್ಯಡ್ ಸ್ಕಿಟ್) ಪ್ರದರ್ಶಿಸಿದ್ದರು. 'ನಾಟಕದಲ್ಲಿ ಬಿ.ಆರ್. ಅಂಬೇಡ್ಕರ್ ಮತ್ತು ದಲಿತರ ಬಗ್ಗೆ ಆಕ್ಷೇಪಾರ್ಹ ಸಂಭಾಷಣೆ ಬಳಸಲಾಗಿದೆ' ಎಂಬ ಆರೋಪ ಹೊತ್ತ ನಾಟಕದ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು.

ಘಟನೆಗೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು 2023ರ ಫೆಬ್ರುವರಿ 10ರಂದು ಜಯನಗರದ ಸಿದ್ದಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಎಸ್‌ಸಿ-ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿ, ವಿದ್ಯಾರ್ಥಿಗಳನ್ನು ಬಂಧಿಸಿದ್ದರು. ನಂತರ ಅವರನ್ನು ಜಾಮೀನು ಮೇಲೆ ಬಿಡುಗಡೆ ಮಾಡಲಾಗಿತ್ತು. ಪ್ರಕರಣವು ಸದ್ಯ ನಗರದ ಸೆಷನ್ಸ್ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ.

ಇದೇ ಪ್ರಕರಣದ ಆರೋಪಿಗಳಾಗಿರುವ ಜೈನ್ ಯೂನಿವರ್ಸಿಟಿ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ನಿರ್ದೇಶಕ ದಿನೇಶ್ ನೀಲಕಂಠ್ ಬೋರ್ಕರ್ ಮತ್ತು ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಪಿ.ಪ್ರತೀಕ್ ತೋಡ್ಕರ್ ವಿರುದ್ಧದ ವಿಚಾರಣೆಗೆ ಹೈಕೋರ್ಟ್ 2023ರ ಜುಲೈ 5ರಂದು ಮಧ್ಯಂತರ ತಡೆ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು.

ಕೆಎಸ್‌ಆರ್ ಬೆಂಗಳೂರು ನಿಲ್ದಾಣದ ಪ್ಲಾಟ್ ಫಾರ್ಮ್ 5ರಲ್ಲಿ ಸಾಮಾನ್ಯ ರೈಲ್ವೆ ಪ್ರಯಾಣಿಕರಿಗೆ ಕೈಗೆಟುಕುವ ದರದಲ್ಲಿ 'ಎಕಾನಮಿ ಮೀಲ್ಸ್' ಸೇವೆ ಗುರುವಾರ ಆರಂಭಗೊಂಡಿತು –ಪ್ರಜಾವಾಣಿ ಚಿತ್ರ

'ಎಕಾನಮಿ ಮೀಲ್ಸ್'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಸಾಮಾನ್ಯ ಬೋಗಿಗಳಲ್ಲಿ ಪ್ರಯಾಣಿಸುವವರಿಗೆ ಅಗ್ಗದ ದರದಲ್ಲಿ ಆಹಾರ, ನೀರು ಒದಗಿಸುವ 'ಎಕಾನಮಿ ಮೀಲ್ಸ್' ಯೋಜನೆಗೆ ಇಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಗುರುವಾರ ಚಾಲನೆ ನೀಡಲಾಯಿತು.

ಐಆರ್‌ಸಿಟಿಸಿಯ ಅಡುಗೆ ಘಟಕಗಳಿಂದ ತಯಾರಿಸಿದ ಕೌಂಟರ್‌ಗಳಲ್ಲಿ ಪ್ರಯಾಣಿಕರಿಗೆ ಊಟದ ಪೊಟ್ಟಣ ವಿತರಿಸುವ ವ್ಯವಸ್ಥೆ ಮಾಡಲಾಗುತ್ತದೆ. ಈ ಕೌಂಟರ್‌ಗಳು ಪ್ಲಾಟ್ ಫಾರ್ಮ್‌ಗಳಲ್ಲಿನ ಸಾಮಾನ್ಯ ಬೋಗಿಗಳು ನಿಲ್ಲುವ ಸ್ಥಳದಲ್ಲಿಯೇ ಜೋಡಿಸಲು ನಿರ್ಧರಿಸಲಾಗಿದೆ. ಈ ಸೇವಾ ಕೌಂಟರ್‌ಗಳನ್ನು 6 ತಿಂಗಳ ಅವಧಿಯ ಪ್ರಾಯೋಗಿಕ ಆಧಾರದ ಮೇಲೆ ಒದಗಿಸಲಾಗುತ್ತಿದೆ.

ಈ ಯೋಜನೆಯು ನೈರುತ್ಯ ರೈಲ್ವೆ ವಲಯದಲ್ಲಿ ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಾಗೂ ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮೀಜಿ ನಿಲ್ದಾಣಗಳಲ್ಲಿ ಆರಂಭಿಸಲಾಗುತ್ತಿದೆ ಎಂದು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದರು.

ನಿಲ್ದಾಣದ ಸೇವಾ ಕೌಂಟರ್‌ಗಳಲ್ಲಿ ಎರಡು ವಿಧದ ಆಹಾರ ಒದಗಿಸಲಾಗುತ್ತದೆ. 7 ಪೂರಿ (175 ಗ್ರಾಂ), ಒಣ ಆಲೂ ವೆಜ್ (150 ಗ್ರಾಂ) ಮತ್ತು ಉಪ್ಪಿನಕಾಯಿ (12 ಗ್ರಾಂ) ಒಳಗೊಂಡಿರುವ ಮೊದಲ ಪ್ಯಾಕೇಜ್‌ಗೆ ಜಿಎಸ್‌ಟಿ ಸೇರಿ ₹ 20 ದರ ನಿಗದಿ ಮಾಡಲಾಗಿದೆ. ಅನ್ನ, ರಾಜ್ಮಾ/ಚೋಲೆ ಅನ್ನ/ ಖಿಚಡಿ/ಕುಲ್ಚಾ/ ಭತುರಾ/ ಪಾವ್-ಬಾಜಿ/ ಮಸಾಲಾ ದೋಸೆ ಸೇರಿದಂತೆ ದಕ್ಷಿಣ ಭಾರತದ ಆಹಾರದ ಪೊಟ್ಟಣ ಎರಡನೇ ಪ್ಯಾಕೇಜ್‌ನಲ್ಲಿರುತ್ತದೆ. ಅದಕ್ಕೆ ಜಿಎಸ್‌ಟಿ ಸೇರಿ ₹ 50 ನಿಗದಿ ಮಾಡಲಾಗಿದೆ. 200 ಎಂಎಲ್ ಗ್ಲಾಸ್ ಮತ್ತು 1 ಲೀಟರ್ ಕುಡಿಯುವ ನೀರಿನ ಬಾಟಲಿಗಳು ಲಭ್ಯವಿರುತ್ತವೆ. ಮುಂಬರುವ ದಿನಗಳಲ್ಲಿ ಈ ಸೇವೆಯನ್ನು ಹೆಚ್ಚಿನ ನಿಲ್ದಾಣಗಳನ್ನು ಗುರುತಿಸಿ ವಿಸ್ತರಿಸಲಾಗುವುದು ಎಂದು ತಿಳಿಸಿದರು.

ನೈಋತ್ಯ ರೈಲ್ವೆ G20
ಟೆಂಡರ್ ಸೂಚನೆ ಸಂ. CH231996, CH231006 & CH235500 ಕೊನೆಯ ದಿನಾಂಕ: 16.08.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	RIBOCICLIB 200 MG TAB/CAP	ರೂ. 18,93,258.36
2	NILOTIN IB 2OOMG CAP/TAB	ರೂ. 21,13,564.32
3	Tab Osimertinib 80mg	ರೂ. 9,33,679.80

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16–08–2023, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಸಾಮಗ್ರಿಗಳ ಪ್ರಬಂಧಕರು ನಿರ್ಮಾಣ / ಹುಬ್ಬಳ್ಳಿ
PUB/250/AAV/PRB/SWR/2023-24
S.W.Railways SWRRLY SWRRLY

5 ವರ್ಷಗಳ ಶಿಕ್ಷೆ ನಾಲ್ಕು ತಿಂಗಳಿಗೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗಕ್ಕೆ ತೆರಳದ ಕಾರಣಕ್ಕೆ ಮಗನನ್ನು ಬೈಯುತ್ತಿದ್ದ ವ್ಯಕ್ತಿಯೊಂದಿಗೆ ಜಗಳ ತೆಗೆದು ಹಲ್ಲೆ ನಡೆಸಿ ಆತನ ಸಾವಿಗೆ ಕಾರಣವಾದ ಆರೋಪ ಹೊತ್ತ ನಾಲ್ವರು ದೋಷಿಗಳಿಗೆ ಸೆಷನ್ಸ್ ನ್ಯಾಯಾಲಯ ವಿಧಿಸಿದ್ದ ಐದು ವರ್ಷಗಳ ಜೈಲು ಶಿಕ್ಷೆಯನ್ನು ಹೈಕೋರ್ಟ್ ನಾಲ್ಕು ತಿಂಗಳಿಗೆ ಇಳಿಸಿದೆ.

ಶಿಕ್ಷೆ ರದ್ದುಪಡಿಸುವಂತೆ ಕೋರಿ ಮೈಸೂರು ಜಿಲ್ಲೆ ಎಚ್.ಡಿ. ಕೋಟೆ ತಾಲ್ಲೂಕಿನ ಹುಲ್ಲೂರು ಗ್ರಾಮದ ಗೋವಿಂದ ನಾಯ್ಕ, ಸಣ್ಣ ಸ್ವಾಮಿ, ಪರಿ ನಾಯ್ಕ ಮತ್ತು ಚನ್ನಾನಾಯ್ಕ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, 'ನಾಲ್ವರು ಮೇಲ್ಮನವಿದಾರರನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದು ಆದೇಶಿಸಿದೆ.

ಪ್ರಕರಣವೇನು?: 2009ರ ಫೆಬ್ರುವರಿ 10ರಂದು ರಾತ್ರಿ 10.30ರ ವೇಳೆಯಲ್ಲಿ ಉದ್ಯೋಗಕ್ಕೆ ಹೋಗದ ಕಾರಣಕ್ಕೆ ಗೋಪಾಲ ನಾಯ್ಕ ಎಂಬಾತನಿಗೆ ಆತನ ತಂದೆ ಗೋವಿಂದ ನಾಯ್ಕ ಬೈಯುತ್ತಿದ್ದರು. ಈ ವೇಳೆ ಗೋವಿಂದ ನಾಯ್ಕ ನಮ್ಮನ್ನೇ ಉದ್ದೇಶಿಸಿ ಬೈಯುತ್ತಿದ್ದಾರೆ ಎಂದು ತಪ್ಪಾಗಿ ಭಾವಿಸಿದ ನೆರೆಹೊರೆಯ ನಿವಾಸಿಗಳಾದ ಅರ್ಜಿದಾರರು ಗೋವಿಂದ ನಾಯ್ಕ ಅವರ ಮನೆಗೆ ನುಗ್ಗಿ ಜಗಳ ತೆಗೆದು ಹಲ್ಲೆ ಮಾಡಿದ್ದರು. ಇದರಿಂದ ಗೋವಿಂದ ನಾಯ್ಕ ಗಂಭೀರವಾಗಿ ಗಾಯಗೊಂಡಿದ್ದರು. ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿದ್ದರು. ವೈದ್ಯರು ಪರಿಶೀಲಿಸಿ, ಸಾವನ್ನಪ್ಪಿರುವುದಾಗಿ ಘೋಷಿಸಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತರ ಪುತ್ರ ಗೋಪಾಲ ನಾಯ್ಕ, ಎಚ್.ಡಿ. ಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ನಾಲ್ವರು ಆರೋಪಿಗಳನ್ನು ಬಂಧಿಸಿ ತನಿಖೆ ಪೂರ್ಣಗೊಳಿಸಿ, ಕೊಲೆ ಮತ್ತು ಮನೆಯ ಅತಿಕ್ರಮ ಪ್ರವೇಶದ ಆರೋಪ ಹೊರಿಸಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ್ದ ಮೈಸೂರು ಪ್ರಧಾನ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ನಾಲ್ವರು ಆರೋಪಿಗಳನ್ನು ಉದ್ದೇಶಪೂರ್ವಕವಲ್ಲದ ಕೊಲೆ (ಐಪಿಸಿ ಕಲಂ 304 (2ರ) ಅಪರಾಧದ ಅಡಿಯಲ್ಲಿ ದೋಷಿಗಳೆಂದು ತೀರ್ಮಾನಿಸಿ ತಲಾ ಐದು ವರ್ಷ ಜೈಲು ಶಿಕ್ಷೆ ಮತ್ತು ₹ 3 ಸಾವಿರ ದಂಡ ವಿಧಿಸಿ 2011ರ ಅಕ್ಟೋಬರ್ 1ರಂದು ಆದೇಶಿಸಿತ್ತು.

'ಐಎಎಸ್ ಅಧಿಕಾರಿಗಳು ಗಣ್ಯರ ಸ್ವಾಗತಿಸಿದರೆ ತಪ್ಪೇನು?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿಗಳು, ಕೇಂದ್ರದ ಮಾಜಿ ಸಚಿವರು, ರಾಷ್ಟ್ರೀಯ ಪಕ್ಷದ ನಾಯಕರು ಬಂದಾಗ ಐಎಎಸ್ ಅಧಿಕಾರಿಗಳು ಸ್ವಾಗತಿಸಿದ್ದನ್ನು ಬಿಜೆಪಿ, ಜೆಡಿಎಸ್ ವಿರೋಧಿಸಿ ಸದನದಲ್ಲಿ ಅನುಚಿತ ವರ್ತನೆ ತೋರುತ್ತಿರುವುದು ಸರಿಯಲ್ಲ. ಗಣ್ಯರನ್ನು ಸ್ವಾಗತಿಸಿದರೆ ತಪ್ಪೇನು' ಎಂದು ಆಮ್ ಆದ್ಮಿ ಪಕ್ಷದ ಸಂವಹನ ವಿಭಾಗದ ಮುಖ್ಯಸ್ಥ ಬ್ರಿಜೇಶ್ ಕಾಳಪ್ಪ ಪ್ರಶ್ನಿಸಿದರು.

ನಗರದಲ್ಲಿ ಎರಡು ದಿವಸಗಳ ಹಿಂದೆ ನಡೆದ ವಿರೋಧ ಪಕ್ಷಗಳ ಸಭೆಯಲ್ಲಿ ಭಾಗವಹಿಸಿದವರಲ್ಲಿ ಮುಖ್ಯಮಂತ್ರಿಗಳಾದ ಅರವಿಂದ ಕೇಜ್ರಿವಾಲ್, ಭಗವಂತ್ ಸಿಂಗ್ ಮಾನ್, ನಿತೀಶ್ ಕುಮಾರ್, ಸ್ಟಾಲಿನ್, ಹೇಮಂತ್ ಸೊರೇನ್, ಮಮತಾ ಬ್ಯಾನರ್ಜಿ ಸೇರಿದಂತೆ ಹಲವು ಮಾಜಿ ಮುಖ್ಯಮಂತ್ರಿಗಳು, ಕೇಂದ್ರದ ಮಾಜಿ ಸಚಿವರು ಭಾಗವಹಿಸಿದ್ದರು. ಜತೆಗೆ, ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು. ಇಂಥ ನಾಯಕರನ್ನು ಸ್ವಾಗತಿಸಲು ಐಎಎಸ್ ಅಧಿಕಾರಿಗಳನ್ನು ನೇಮಿಸಿರುವುದು ತಪ್ಪಲ್ಲ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಸಮರ್ಥಿಸಿಕೊಂಡರು.

ವಿರೋಧ ಪಕ್ಷಗಳ ಸಭೆ ನಡೆಯುವಾಗಲೇ ದೆಹಲಿಯಲ್ಲಿ ಎನ್‌ಡಿಎ ಮಿತ್ರ ಪಕ್ಷಗಳ ಸಭೆಯಲ್ಲಿ 38 ಪಕ್ಷಗಳು ಭಾಗವಹಿಸಿದ್ದವು. ಅದರಲ್ಲಿ 26 ಪಕ್ಷಗಳಲ್ಲಿ ಯಾರೂ ಲೋಕಸಭಾ ಸದಸ್ಯರು ಇಲ್ಲ. 10 ಪಕ್ಷಗಳು 2019ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿಯೇ ಇಲ್ಲ. 11 ಪಕ್ಷಗಳಿಗೆ ಮಾನ್ಯತೆ ಇಲ್ಲ. ಇಂತಹವರೊಂದಿಗೆ ಪ್ರಧಾನಮಂತ್ರಿ ಭಾಗವಹಿಸುವುದು ಅಗೌರವ ಎಂದು ಹೇಳಲು ಸಾಧ್ಯವೇ ಎಂದು ಪ್ರಶ್ನಿಸಿದರು.

ನೈಋತ್ಯ ರೈಲ್ವೆ G20
ಇ–ಟೆಂಡರು ಸೂಚನೆ ಸಂ.: ECN-TRD-12-2023
ದಿನಾಂಕ: 14.07.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಯಲಹಂಕ ಟ್ರ್ಯಾಕ್ಷನ್ ಸಬ್ ಸ್ಟೇಷನ್‌ನ ಮರು–ಕಾರ್ಯಾರಂಭಕ್ಕಾಗಿ ಉಳಿದಿರುವ ಕಾಮಗಾರಿ.	ರೂ. 92,95,930.70

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.08.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ ಟ್ರ್ಯಾಕ್ಷನ್ ವಿನಿಯೋಗ (ನಿರ್ಮಾಣ), ಬೆಂಗಳೂರು
PUB/248/AAD/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20
ಟೆಂಡರ್ ಸೂಚನೆ ಸಂ. ECN-TRD-11-2023
ದಿನಾಂಕ: 17-07-2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ನೈಋತ್ಯ ರೈಲ್ವೇಯ ವ್ಯಾಸ ಕಾಲೋನಿ–ಅಮರಾವತಿ ಕಾಲೋನಿ (120 RKM / 150 TKM) ವಿಭಾಗದ ವಿದ್ಯುದ್ದೀಕರಣಕ್ಕಾಗಿ ಸಮೀಕ್ಷೆ.	ರೂ. 21,19,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10–08–2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಟಿಆರ್‌ಡಿ/ಸಿಎನ್ ಬೆಂಗಳೂರು ಕಂಟೋನ್ಮೆಂಟ್
PUB/251/AAV/PRB/SWR/2023-24
S.W.Railways SWRRLY SWRRLY

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.
ಸಂ: ಬೆಂಅಪ್ರಾ/ವಿಅಭೂಸ್ವಾಅ/283/2023–24 ದಿನಾಂಕ : 20.07.2023
ಪತ್ರಿಕಾ ಪ್ರಕಟಣೆ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜಯಪ್ರಕಾಶ್‌ನಗರ 8ನೇ ಹಂತ ಬಡಾವಣೆಗೆ (ಜೆ.ಪಿ.ನಗರ 8ನೇ ಹಂತ ಬಡಾವಣೆ) ಭೂಸ್ವಾಧೀನಪಡಿಸಿಕೊಂಡಿರುವ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕೊತ್ತನೂರು ಗ್ರಾಮದ ಸರ್ವೆ ನಂ.30ರ ಜಮೀನಿಗೆ ಸಂಬಂಧಿಸಿದಂತೆ ಪ್ರಾಧಿಕಾರದಿಂದ ದಾಖಲಿಸಲಾಗಿರುವ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ: Special Leave to Appeal(C) No(S): 10058/2023, ದಿನಾಂಕ:19.05.2023 ರ ಆದೇಶದಲ್ಲಿ ಪ್ರತಿವಾದಿಗಳಿಗೆ Issue notice to the respondents, Dasti service, in addition is permitted. If service is completed, list the matter during last week of July 2023 ಎಂದು ಆದೇಶವಾಗಿರುತ್ತದೆ. ಅದರಂತೆ, ಪ್ರಕರಣದ ಪ್ರತಿವಾದಿಗಳಾದ (1) Sri R.Adhikesavulu Naidu s/o R Krishnama Naidu, (2) Sri C R Ram Mohan Raju s/o Chengama Raju, (3) Sri Srinivas Bhat s/o Late Subraya Bhat K, (4) Smt Kusuma Moorthy w/o B Krishna Moorthy, (5) Sri B Rajesh s/o Late Madhava Rao, (6) Sri Arun Ramakumar s/o R Ramakumar-Rep By His General Power of Attorney Holder Smith C Prasad, (7) Smt Vasanthi Ramakumar w/o R Ramakumar, (8) Smt Smith C Prasad w/o Deepak Ramakumar, (9) Sri Lakshmappa @ Lakshmaiah s/o Motappa, (10) Sri Ananda s/o Lakshmappa @ Lakshmaiah ರವರುಗಳಿಗೆ ರಿಟ್ ಅರ್ಜಿ ಸಂಖ್ಯೆ:15015–15019/2011(ಎಲ್‌ಎ–ಬಿಡಿಎ) & 15020–15024/2011ರ ಪ್ರತಿಯಲ್ಲಿ ಲಭ್ಯವಿರುವ ವಿಳಾಸದಂತೆ ತಿಳುವಳಿಕೆ ಪತ್ರವನ್ನು ಖುದ್ದು ಜಾರಿ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ. ಆದರೆ ರಿಟ್ ಅರ್ಜಿಯಲ್ಲಿ ನಮೂದಾಗಿರುವ ವಿಳಾಸಗಳಲ್ಲಿ ಪ್ರತಿವಾದಿಗಳು ಲಭ್ಯವಿರುವುದಿಲ್ಲ ಹಾಗೂ ವಿಳಾಸಗಳು ತಪ್ಪಾಗಿರುತ್ತದೆ, ಆದ್ದರಿಂದ ಮಾನ್ಯ ನ್ಯಾಯಾಲಯದ ಆದೇಶದ ಪ್ರತಿಯನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ಅದರಂತೆ ಮೇಲ್ಕಂಡ ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ: Special Leave to Appeal(C) No(S):10058/2023 ರ ದಿನಾಂಕ:19.05.2023ರ ಆದೇಶವನ್ನು ಜಾರಿ ಮಾಡಲಾಗಿರುತ್ತದೆ.
ಸಹಿ/– ವಿಶೇಷ ಅಪರ ಭೂಸ್ವಾಧೀನಾಧಿಕಾರಿಗಳು, ಬೆಂಅಪ್ರಾ, ಬೆಂಗಳೂರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಗುಡಿಬಂಡೆ
ಬಿ.ಸಿ.ಎಂ ಹಾಸ್ಟೆಲ್ ಮುಂಭಾಗ, TVS ಶೋರೂಂ ಕಟ್ಟಡ, ಮೂರನೇ ಮಹಡಿ, ಮುಖ್ಯರಸ್ತೆ, ಗುಡಿಬಂಡೆ, ಚಿಕ್ಕಬಳ್ಳಾಪುರ ಜಿಲ್ಲೆ. ದೂರವಾಣಿ ಸಂಖ್ಯೆ:08156–261116, ಇ–ಮೇಲ್:cdpogudibande@gmail.com
ಸಂಖ್ಯೆ:ಶಿಅಯೋ/ಗುಡಿಬ/ಆ.ಪ.ಸಾ./ಟೆಂ.ಪ್ರ/2023–24
ದಿನಾಂಕ:14.07.2023
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
ವಿಷಯ: 2023–24ನೇ ಸಾಲಿಗೆ ಗುಡಿಬಂಡೆ ತಾಲ್ಲೂಕಿನ 130 ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳ ಸಾಗಾಣಿಕೆ, ಎಫ್.ಸಿ.ಐ ಗೋದಾಮು, ಬೆಂಗಳೂರು ಇಲ್ಲಿಂದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಗೋದಾಮಿಗೆ ಅಕ್ಕಿ/ಗೋಧಿ ಎತ್ತುವಳಿ ಕಾರ್ಯ ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದಿರುವ ಬಗ್ಗೆ. ಉಲ್ಲೇಖ: (1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ತಿದ್ದುಪಡಿ ನಿಯಮಗಳು 2022 (2) ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಆದೇಶ ಸಂಖ್ಯೆ: ಜಿಚಿ/ಉನಿಚಿ/ಮಮಅಇ/ದನಿ/2021–22 ದಿ:31.03.2022, (3) ಕಾರ್ಯನಿರ್ವಾಹಕ ಅಧಿಕಾರಿಗಳು, ಗುಡಿಬಂಡೆ ಇವರ ಟಿಪ್ಪಣಿ ಅನುಮೋದನೆ ದಿನಾಂಕ: 13.06.2023. ಶಿಶು ಅಭಿವೃದ್ಧಿ ಯೋಜನೆ ಗುಡಿಬಂಡೆ ಇಲ್ಲಿಯ 130 ಅಂಗನವಾಡಿ ಕೇಂದ್ರಗಳಿಗೆ ಎಂ.ಎಸ್.ಪಿ.ಸಿ., ಬಾಗೇಪಲ್ಲಿ ತಾಲ್ಲೂಕು, ಬಾಗೇಪಲ್ಲಿ ಗೋದಾಮಿನಿಂದ ಹಾಗೂ ಎಫ್.ಸಿ.ಐ ಗೋದಾಮು, ಬೆಂಗಳೂರು ನಿಂದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಗೋದಾಮಿಗೆ ಅಕ್ಕಿ/ಗೋಧಿ ಎತ್ತುವಳಿ ಮಾಡಲು 2023–24 ನೇ ಸಾಲಿಗೆ ಅಥವಾ ಮುಂದಿನ ಆದೇಶದವರೆಗೆ ಆಹಾರ ಸಾಮಾಗ್ರಿಗಳನ್ನು ಸಾಗಾಣಿಕೆ ಮಾಡಲು ಇಚ್ಚೆಯುಳ್ಳ ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯ ಮಹಿಳಾ ಮಂಡಳಿ /ಸ್ವಸಹಾಯ ಗುಂಪು/ ಗ್ರಾಮ ಸಮುದಾಯದಿಂದ ದ್ವಿ–ಲಕೋಟೆ ಪದ್ಧತಿ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಷೆಡ್ಯೂಲ್ ಈ ಕೆಳಕಂಡಂತಿರುತ್ತದೆ. (1) ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ–1 ಮತ್ತು ಅನುಬಂಧ–2 ನ್ನು) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವ ಮತ್ತು ಅರ್ಜಿ ಸಲ್ಲಿಸುವ ಆರಂಭದ ದಿನಾಂಕ: 14.07.2023 https://kppp.karnataka.gov.in online ಮೂಲಕ, (2) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 26.07.2023 ರಂದು ಸಾಯಂಕಾಲ 5.00 ಗಂಟೆಯೊಳಗೆ (3) ಇ–ಪೋರ್ಟಲ್‌ನಲ್ಲಿ ದಾಖಲಾತಿಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: ದಿನಾಂಕ: 28.07.2023, (4) ಇ–ಪೋರ್ಟಲ್‌ನಲ್ಲಿ ದಾಖಲಾತಿಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: ದಿನಾಂಕ: 31.07.2023 ರಂದು ಬೆಳಿಗ್ಗೆ 11 ಗಂಟೆಗೆ ಅಥವಾ ತಾಂತ್ರಿಕ ಬಿಡ್ ತೆಗೆದ ದಿನಾಂಕದಂದು ಸೂಚಿಸುವ ದಿನಾಂಕ ಮತ್ತು ಸಮಯದಂದು ತೆರೆಯಲಾಗುವುದು, (5) ಇ.ಎಂ.ಡಿ ಮೊತ್ತ ವಿವರ: ರೂ.50,000/– (ಐವತ್ತು ಸಾವಿರ ಮಾತ್ರ) E-portal ಮುಖಾಂತರ ಪಾವತಿ ಮಾಡಬೇಕು. ಹೆಚ್ಚಿನ ಮಾಹಿತಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬಿ.ಸಿ.ಎಂ ಹಾಸ್ಟೆಲ್ ಮುಂಭಾಗ, TVS ಶೋರೂಂ ಕಟ್ಟಡ, ಮೂರನೇ ಮಹಡಿ, ಮುಖ್ಯರಸ್ತೆ, ಗುಡಿಬಂಡೆ, ಇವರಿಂದ ಹಾಗೂ ದೂರವಾಣಿ ಸಂಖ್ಯೆ: 08156–261116 ರಲ್ಲಿ ಪಡೆಯಬಹುದಾಗಿದೆ.
ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಗುಡಿಬಂಡೆ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:42/ಕೆಎಸ್‌ಎಂ.ಸಿ.ಎ/2023–24

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಇಮೇಲ್: comp.secy@astrazeneca.com ವೆಬ್: www.astrazeneca.com/india
ದೂರವಾಣಿ: +91 80 67748000, ಫ್ಯಾಕ್ಸ್: +91 80 6774 8557
ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಮತ್ತು ಇ–ಮತದಾನದ ಬಗ್ಗೆ ಮಾಹಿತಿ
ಸದಸ್ಯರಿಗೆ ಪ್ರತ್ಯೇಕವಾಗಿ ಇಮೇಲ್ ಮೂಲಕ ಕಳಿಸಿಕೊಡಲಾಗುವ ಮೇ 30, 2023ರ ಸೂಚನೆಯಲ್ಲಿ ತಿಳಿಸಲಾಗಿರುವಂತಹ ವ್ಯವಹಾರವನ್ನು ನಡೆಸುವ ಸಲುವಾಗಿ ಆಸ್ಟ್ರಾಜೆನಿಕ ಫಾರ್ಮ ಇಂಡಿಯಾ ಲಿಮಿಟೆಡ್‌ನ ("ಕಂಪನಿ") 44ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ("ಎಜಿಎಮ್") ಸೋಮವಾರ, ಆಗಸ್ಟ್ 14, 2023ರಂದು ಮಧ್ಯಾಹ್ನ 03.00 ಗಂಟೆಗೆ (ಭಾ.ಕಾ.) ವಿಡಿಯೊ ಕಾನ್ಫರೆನ್ಸ್ (VC) / ಇತರ ಶ್ರವಣ ದೃಶ್ಯ ಮಾಧ್ಯಮಗಳ (OAVM) ಮೂಲಕ ಕಂಪನಿಗಳ ಅಧಿನಿಯಮ, 2013 ('ಅಧಿನಿಯಮ') ರಲ್ಲಿನ ಅನ್ವಯವಾಗುವ ನಿಬಂಧನೆಗಳನ್ನು ಕಾರ್ಪೊರೇಟ್ ಸಚಿವಾಲಯವು ಹೊರಡಿಸಿರುವ ಮೇ 5, 2020 ಸುತ್ತೋಲೆಯನ್ನು ಏಪ್ರಿಲ್ 08, 2020, ಏಪ್ರಿಲ್ 13, 2020, ಜನವರಿ 13, 2021, ಡಿಸೆಂಬರ್ 14, 2021, ಮೇ 05 2022 ಮತ್ತು ಡಿಸೆಂಬರ್ 28, 2022 ದಿನಾಂಕದ ಸುತ್ತೋಲೆ(ಗಳ) ('ಎಂಸಿಎ ಸುತ್ತೋಲೆಗಳು') ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ('SEBI') ಹೊರಡಿಸಿರುವ ಮೇ 12, 2020ರ ಜನವರಿ 15, 2021ರ ಮತ್ತು ಮೇ 13, 2022 ದಿನಾಂಕದ ಸುತ್ತೋಲೆಗಳ ಜೊತೆ ಓದಿ ಅರ್ಥೈಸಿಕೊಂಡ ಪ್ರಕಾರ ನಡೆಸಲಾಗುವುದು ಎಂದು ಈ ಸೂಚನೆಯನ್ನು ನೀಡಲಾಗಿದೆ.
ಕಂಪನಿಯ ರಿಜಿಸ್ಟ್ರಾರ್ ಮತ್ತು ಶೇರು ವರ್ಗಾವಣೆ ಏಜೆಂಟರು/ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆಲ್ಲ ಸದರಿ ಅಧಿನಿಯಮ ಹಾಗೂ ಅದರ ಅಡಿಯಲ್ಲಿ ರಚಿಸಲಾಗಿರುವ ನಿಯಮಾವಳಿ ಮತ್ತು ಮೇಲೆ ಹೇಳಿರುವ ಸುತ್ತೋಲೆಗಳ ಅನುಸಾರ 'ಎಜಿಎಂ'ನ ಸೂಚನೆಯ ಮತ್ತು 2022–23 ಸಾಲಿನ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ಇಮೇಲ್ ಮೂಲಕ ಕಳುಹಿಸಲಾಗುವುದು. 2022–23 ವಿತ್ತೀಯ ವರ್ಷದ ವಾರ್ಷಿಕ ವರದಿಯ ಜೊತೆಗೆ ಎಜಿಎಂ ಸೂಚನೆಯನ್ನು ಕೂಡ ಕಂಪನಿಯ www.astrazeneca.com/india, ಸ್ಟಾಕ್ ಎಕ್ಸ್‌ಚೇಂಜುಗಳ www.nseindia.com/www.bseindia.com ವೆಬ್‌ಸೈಟುಗಳಲ್ಲಿ ಮತ್ತು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್(NSDL)ನ https://www.evoting.nsdl.com ವೆಬ್‌ಸೈಟಿನಲ್ಲಿ ಕೂಡ ಹಾಕಲಾಗುವುದು.
ಸದಸ್ಯರು ದಯವಿಟ್ಟು ಈ ಕೆಳಗಿನ ಅಂಶಗಳನ್ನು ಗಮನಿಸಬೇಕು:
ಎ) ವಿದ್ಯುನ್ಮಾನ ಮತಚಲಾವಣೆ ವ್ಯವಸ್ಥೆಯನ್ನು (ಇ–ಮತದಾನ) ಬಳಸಿಕೊಂಡು ಎಜಿಎಂ ಸೂಚನೆಯಲ್ಲಿ ಹೇಳಿರುವಂತಹ ಎಲ್ಲ ನಿರ್ಣಯಗಳ ಮೇಲೆ ತಮ್ಮ ಮತ ಚಲಾಯಿಸಲು ಅನುವಾಗುವಂತೆ ಸದಸ್ಯರಿಗೆ ಎನ್‌ಎಸ್‌ಡಿಎಲ್‌ನ ಇ–ಮತದಾನ ಸೌಲಭ್ಯವನ್ನು ಒದಗಿಸಲಾಗುವುದು. ವಿದ್ಯುನ್ಮಾನ ಮತ್ತು ಭೌತಿಕ ರೂಪದಲ್ಲಿ ಶೇರುಗಳನ್ನು ಹೊಂದಿರುವ ಸದಸ್ಯರಿಂದ 'ರಿಮೋಟ್' ಮತ ಚಲಾವಣೆ, ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರದ ಸದಸ್ಯರಿಂದ ಮತ ಚಲಾವಣೆ ಮಾಡುವ ವಿಧಾನಗಳ ಕುರಿತಾದ ವಿವರಗಳನ್ನು ಎಜಿಎಂ ಸೂಚನೆಯಲ್ಲಿ ತಿಳಿಸಲಾಗುವುದು.
ಬಿ) ಇ–ಮತದಾನದ ಅವಧಿಯು ಆಗಸ್ಟ್ 10, 2023 ಬೆಳಿಗ್ಗೆ 09.00ಕ್ಕೆ (ಭಾ.ಕಾ.) ಪ್ರಾರಂಭವಾಗಿ ಆಗಸ್ಟ್ 13, 2023 ಸಂಜೆ 05.00ಕ್ಕೆ (ಭಾ.ಕಾ.) ಮುಗಿಯುತ್ತದೆ. ಸದಸ್ಯರು ಈ ಅವಧಿಯಲ್ಲಿ ವಿದ್ಯುನ್ಮಾನ ರೂಪದಲ್ಲಿ ತಮ್ಮ ಮತಗಳನ್ನು ಚಲಾಯಿಸಬಹುದು. ತದನಂತರ ಎನ್‌ಎಸ್‌ಡಿಎಲ್, ಇ–ಮತದಾನದ ಮಾಡ್ಯೂಲನ್ನು ತೆಗೆದುಬಿಡುತ್ತದೆ. ಸದಸ್ಯರ ಮತದಾನದ ಹಕ್ಕುಗಳು ಅವರು ಆಗಸ್ಟ್ 07, 2023ರಂದು ('ಅಂತಿಮ ದಿನಾಂಕ') ಕಂಪನಿಯಲ್ಲಿ ಹೊಂದಿರುವ ಪಾವತಿಸಿದ ಇಕ್ವಿಟಿ ಶೇರು ಬಂಡವಾಳದ ಪ್ರಮಾಣಗಳಿಗೆ ಅನುಗುಣವಾಗಿರುತ್ತದೆ. ಕಂಪನಿಯ ಸದಸ್ಯರಾಗಿರುವ, ಸದರಿ ಅಂತಿಮ ದಿನಾಂಕದಂದು ಡೀಮ್ಯಾಟ್ ರೂಪದಲ್ಲಿ ಅಥವಾ ಭೌತಿಕ ರೂಪದಲ್ಲಿ ಶೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿಯು ಸಾಮಾನ್ಯ ಸಭೆಯ ಸಂದರ್ಭದಲ್ಲಿ ರಿಮೋಟ್ ಇ–ಮತದಾನ ಮಾಡ್ಯೂಲನ್ನು ಮಾತ್ರವಲ್ಲ, ಮತದಾನ ಸೌಲಭ್ಯವನ್ನು ಬಳಸಿಕೊಂಡು ಎಜಿಎಂ ಸೂಚನೆಯಲ್ಲಿ ಹೇಳಿರುವಂತಹ ಎಲ್ಲ ನಿರ್ಣಯಗಳ ಮೇಲೆ ಮತಗಳನ್ನು ಚಲಾಯಿಸಬಹುದು.
ಸಿ) VC / OAVM ಸೌಲಭ್ಯದ ಮೂಲಕ 'ಎಜಿಎಂ'ನಲ್ಲಿ ಹಾಜರಿರುವ, ಮತ್ತು ರಿಮೋಟ್ ಇ–ಮತದಾನದ ಮೂಲಕ ನಿರ್ಣಯಗಳ ಮೇಲೆ ಈಗಾಗಲೇ ತಮ್ಮ ಮತವನ್ನು ಚಲಾಯಿಸದಿರುವ, ಮತ್ತು ಹಾಗೆ ಮತ ಚಲಾಯಿಸಲು ಯಾವುದೇ ವಿಧವಾದ ನಿರ್ಬಂಧಗಳಿಗೆ ಒಳಗಾಗಿಲ್ಲದ ಶೇರುದಾರರು ಎಜಿಎಂ ನಡೆಯುವ ಸಮಯದಲ್ಲಿ ರಿಮೋಟ್ ಇ–ಮತದಾನ ವ್ಯವಸ್ಥೆಯ ಮೂಲಕ ತಮ್ಮ ಮತವನ್ನು ಚಲಾಯಿಸಲು ಅರ್ಹರಾಗಿರುತ್ತಾರೆ.
ಡಿ) ಎಜಿಎಂ ಪೂರ್ವದಲ್ಲಿಯೇ ಯಾರು ತಮ್ಮ ಮತಗಳನ್ನು ರಿಮೋಟ್ ಇ–ಮತದಾನ ವ್ಯವಸ್ಥೆಯ ಮೂಲಕ ಚಲಾಯಿಸಿರುತ್ತಾರೋ ಅಂತಹವರು ಕೂಡ VC / OAVM ಸೌಲಭ್ಯದ ಮೂಲಕ 'ಎಜಿಎಂ'ನಲ್ಲಿ ಹಾಜರಿರಬಹುದಾದರೂ/ಪಾಲ್ಗೊಳ್ಳಬಹುದಾದರೂ ಮತ್ತೊಮ್ಮೆ ಮತಗಳನ್ನು ಚಲಾಯಿಸಲು ಅವರಿಗೆ ಹಕ್ಕಿರುವುದಿಲ್ಲ.
ತಮ್ಮ ಇಮೇಲ್‌ಗಳನ್ನು ನೋಂದಾಯಿಸಿಕೊಂಡಿರದ ಆದರೆ ಮೊಬೈಲ್ ಸಂಖ್ಯೆಗಳು ಲಭ್ಯವಿರುವ ಸದಸ್ಯರು ಸೂಚನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಸಾಧ್ಯವಾಗುವಂತೆ, ಇಂಟೆಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಎಸ್ಸೆಮೆಸ್ ಮೂಲಕ ಒಂದು ವೆಬ್ ಲಿಂಕ್ ಕಳುಹಿಸುತ್ತದೆ. ಈ ವಿಷಯದ ಬಗ್ಗೆ ಇನ್ಯಾವುದೇ ಬಗೆಯ ಸಂದೇಶವು ದೊರೆತಿಲ್ಲದ, ಆದರೆ ಪ್ರಸ್ತಾವಿತ ರಿಮೋಟ್ ಇ–ಮತದಾನದಲ್ಲಿ ಪಾಲ್ಗೊಳ್ಳಲು ಉದ್ದೇಶಿಸಿರುವ, ನಮ್ಮ ಸದಸ್ಯರೆಲ್ಲರಿಗೂ ಈ ಸೂಚನೆಯು ತಲುಪಲಿ ಎಂದು ನಾವು ಮಾಡುತ್ತಿರುವ ಪ್ರಯತ್ನ ಇದು, ಎಂದು ಸದಸ್ಯರೆಲ್ಲರೂ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.
ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರದ ಕಾರಣವಾಗಿ ಸದರಿ ಸೂಚನೆಯನ್ನು ಸ್ವೀಕರಿಸಲು ಸಾಧ್ಯವಾಗಿರದ ಸದಸ್ಯರು https://www.integratedindia.in/emailupdation.aspx ಲಿಂಕ್ ಮೇಲೆ ಕ್ಲಿಕ್ಕಿಸಿ ಅದರಲ್ಲಿ ಹೇಳುವಂತಹ ನೋಂದಾವಣಿ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ RTAನೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಳ್ಳಬಹುದು. ಇಮೇಲ್ ವಿಳಾಸದ ನೋಂದಾವಣಿ ಯಶಸ್ವಿಯಾದ ಬಳಿಕ ಈ ಸೂಚನೆಯ ಮೇಲೆ ರಿಮೋಟ್ ಇ–ಮತದಾನ ಮಾಡಲು ಸಾಧ್ಯವಾಗುವಂತೆ ಸದಸ್ಯರಿಗೆ ಸದರಿ ಸೂಚನೆಯ ಸಾಫ್ಟ್ ಪ್ರತಿ ಮತ್ತು ರಿಮೋಟ್ ಇ–ಮತದಾನದ ವಿಧಾನ ಜೊತೆಗೆ ಯೂಸರ್ ಐಡಿ ಹಾಗೂ ಪಾಸ್‌ವರ್ಡ್‌ಗಳು ದೊರೆಯುತ್ತವೆ. ಏನಾದರೂ ಸಂದೇಹಗಳಿದ್ದರೆ ಈ ವಿಳಾಸಕ್ಕೆ ಬರೆದು ಪರಿಹರಿಸಿಕೊಳ್ಳಬಹುದು:– giri@integratedindia.in ಅಥವಾ ಮತದಾನದ ಅವಧಿ ಕೊನೆಯಾಗುವುದಕ್ಕೆ ಇನ್ನೂ 48 ತಾಸುಗಳಿರುವವರೆಗೆ ಇಲ್ಲಿ ಕೆಳಗೆ ಹೇಳಿರುವ ಕಂಪನಿಯ ಇಮೇಲ್ ವಿಳಾಸಕ್ಕೆ ಅಥವಾ RTAಗೆ ಕೋರಿಕೆ/ಸಂದೇಶವನ್ನು ಕಳುಹಿಸಬಹುದು; ಅದರಲ್ಲಿ ಪುಟ ಸಂಖ್ಯೆ / ಡೀಮ್ಯಾಟ್ ಖಾತೆ ಸಂಖ್ಯೆಯನ್ನು ಉದ್ಧರಿಸಿರಬೇಕು. ಕಂಪನಿಯ ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು: comp.secy@astrazeneca.com/080 67748000. RTA ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು: giri@integratedindia.in / 080 23460815-18.
ಇಲೆಕ್ಟ್ರಾನಿಕ್ ರೂಪದಲ್ಲಿ ಶೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇಮೇಲ್ ವಿಳಾಸವನ್ನು ಡಿಪಾಸಿಟರೀಸ್/ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೂ, ಭೌತಿಕ ರೂಪದಲ್ಲಿ ಶೇರುಗಳನ್ನು ಹೊಂದಿರುವವರು RTAನೊಂದಿಗೂ ನೋಂದಾಯಿಸಿ ಕೊಳ್ಳಬೇಕಾಗಿ ಕೋರುತ್ತೇವೆ.
ಯಾವುದೇ ವ್ಯಕ್ತಿಯು ಸದರಿ ಸೂಚನೆಯನ್ನು ರವಾನಿಸಿದ ನಂತರದಲ್ಲಿ ಕಂಪನಿಯ ಶೇರುಗಳನ್ನು ಹೊಂದುವ ಮೂಲಕ ಕಂಪನಿಯ ಸದಸ್ಯರಾಗಿ, ಕೊನೆಯ ದಿನಾಂಕವಾದ ಆಗಸ್ಟ್ 7, 2023ರಂದು ಶೇರುಗಳನ್ನು ಹೊಂದಿದ್ದರೆ, ಅಂತಹವರು evoting@nsdl.co.in or giri@integratedindia.in ಗೆ ಮನವಿಯನ್ನು ಕಳುಹಿಸಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಗಳನ್ನು ಪಡೆದುಕೊಳ್ಳಬಹುದು. ಆದರೆ, ಈಗಾಗಲೇ 'ಎನ್‌ಎಸ್‌ಡಿಎಲ್'ನೊಂದಿಗೆ ರಿಮೋಟ್ ಇ–ಮತದಾನಕ್ಕಾಗಿ ನೋಂದಾಯಿಸಿಕೊಂಡಿದ್ದರೆ ಅಂತಹ ಸದಸ್ಯರು ಈಗಿರುವ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಗಳನ್ನು ಬಳಸಿಕೊಂಡೇ ತಮ್ಮ ಮತಗಳನ್ನು ಚಲಾಯಿಸಬಹುದು.
ಅಂಚೆ ಮತದಾನ ಪ್ರಕ್ರಿಯೆಯು ನ್ಯಾಯವಾಗಿ ಮತ್ತು ಪಾರದರ್ಶಕವಾಗಿ ನಡೆಯಬೇಕೆಂದು ಕಂಪನಿಯ ನಿರ್ದೇಶಕರ ಮಂಡಳಿಯು ಶ್ರೀ ವಿಜಯಕೃಷ್ಣ ಕೆ.ಟಿ., ವೃತ್ತಿಪರ ಕಂಪನಿ ಸೆಕ್ರೆಟರಿ, ಬೆಂಗಳೂರು, ಸಿ.ಪಿ. ಸಂ. 980, ಸದಸ್ಯತ್ವ ಸಂಖ್ಯೆ FCS:1788, ಇವರನ್ನು ಅಂಚೆ ಮತದಾನ ಪ್ರಕ್ರಿಯೆಯ ಸೂಕ್ಷ್ಮ ಪರಿಶೀಲಕರೆಂದು ನೇಮಕ ಮಾಡಿದೆ.
ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಹಕ್ಕಿರುವ ವ್ಯಕ್ತಿಗಳು ಖುದ್ದಾಗಿ/ಅಧಿಕೃತ ಪ್ರತಿನಿಧಿಯ ಮೂಲಕ ಮತ ಚಲಾಯಿಸಬಹುದು, ಆದರೆ ಸಭೆಯಲ್ಲಿ ಹಾಜರಿರಲು ಮತ್ತು ಮತಚಲಾಯಿಸಲು ಅಧಿಕಾರವಿರುವ ವ್ಯಕ್ತಿಯು ಮೊದಲೇ, ವಿಧ್ಯುಕ್ತವಾಗಿ ಸಹಿಮಾಡಿರುವ ಎಲ್ಲ ನಿಗದಿತ ನಮೂನೆ/ಅಧಿಕಾರ ಪತ್ರಗಳನ್ನು ಸೂಕ್ಷ್ಮ ಪರಿಶೀಲಕರ vijaykt@vjkt.in ಇಮೇಲ್ ವಿಳಾಸಕ್ಕೆ ಕಳುಹಿಸಿ ಅದರ ಪ್ರತಿಯೊಂದನ್ನು evoting@nsdl.co.in ಗೆ ಕಳುಹಿಸಿರಬೇಕು.
ಇಲೆಕ್ಟ್ರಾನಿಕ್ ವೋಟಿಂಗ್‌ಗೆ ಸಂಬಂಧಿಸಿದಂತೆ ಏನಾದರೂ ಪ್ರಶ್ನೆಗಳಿದ್ದರೆ: www.evoting.nsdl.com ನ ಡೌನ್‌ಲೋಡ್ ವಿಭಾಗಗಳಲ್ಲಿರುವ 'ಸಾಮಾನ್ಯವಾಗಿ ಕೇಳುತ್ತಿರುವ ಪ್ರಶ್ನೆಗಳು (FAQs)' ಮತ್ತು 'ಶೇರುದಾರರಿಗಾಗಿ ಇ–ವೋಟಿಂಗ್ ಬಳಕೆದಾರರ ಕೈಪಿಡಿ' ಗಳನ್ನು ಪರಾಮರ್ಶಿಸಬಹುದು ಅಥವಾ NSDL ಶುಲ್ಕರಹಿತ ಸಂಖ್ಯೆ 022–4886 7000 ಮತ್ತು 022–2488 7000 ಕ್ಕೆ ಕರೆಮಾಡಬಹುದು ಅಥವಾ evoting@nsdl.co.in ಗೆ ಮನವಿಯನ್ನು ಕಳುಹಿಸಬಹುದು. ವಿದ್ಯುನ್ಮಾನ ವಿಧಾನದಲ್ಲಿ ಮತದಾನ ಮಾಡುವ ಸೌಲಭ್ಯಕ್ಕೆ ಸಂಬಂಧಿಸಿದ ಯಾವುದೇ ಕುಂದುಕೊರತೆಗಳಿದ್ದಲ್ಲಿ, ಅದನ್ನು ಶ್ರೀ ಸೋನಿ ಸಿಂಗ್, ಸಹಾಯಕ ವ್ಯವಸ್ಥಾಪಕರು ಮತ್ತು ಶ್ರೀಮತಿ ಸರಿತಾ ಮೋಟೆ, ಸಹಾಯಕ ವ್ಯವಸ್ಥಾಪಕರು, ಎನ್‌ಎಸ್‌ಡಿಎಲ್, 4 ನೇ ಮಹಡಿ, 'ಎ' ವಿಂಗ್, ಟ್ರೇಡ್ ವರ್ಲ್ಡ್, ಕಮಲಾ ಮಿಲ್ಸ್ ಕಾಂಪೌಂಡ್, ಸೇನಾಪತಿ ಬಾಪತ್ ಮಾರ್ಗ, ಲೋವರ್ ಪರೇಲ್, ಮುಂಬೈ – 400 013 @1800–1020–990/1800–224–430 / evoting @nsdl.co.in ಇವರಿಗೆ ತಿಳಿಸಬಹುದು ಅಥವಾ ಕಂಪನಿಯ comp.secy@astrazeneca.com ವಿಳಾಸಕ್ಕೆ ಬರೆಯಿರಿ.
2022–23ನೇ ಆರ್ಥಿಕ ವರ್ಷಕ್ಕೆ ಅಂತಿಮ ಡಿವಿಡೆಂಡಿಗೆ ಸದಸ್ಯರ ಅರ್ಹತೆಯನ್ನು ಗುರುತಿಸಲು ಶುಕ್ರವಾರ, 14ನೇ ಜುಲೈ, 2023 ದಾಖಲೆ ದಿನಾಂಕವಾಗಿತ್ತು. 44ನೇ ಎಜಿಎಮ್‌ನಲ್ಲಿ ಸದಸ್ಯರ ಒಪ್ಪಿಗೆಗೆ ಒಳಪಟ್ಟು, ಸದರಿ ಡಿವಿಡೆಂಡನ್ನು ನಿಗದಿತ ಸಮಯದಲ್ಲಿ ಪಾವತಿಸಲಾಗುವುದು. ಸದಸ್ಯರು ಗಮನಿಸಬಹುದು, ಏನೆಂದರೆ: ಆದಾಯ ತೆರಿಗೆ ಕಾಯ್ದೆ, 1961ರ ಅನುಸಾರ, ಡಿವಿಡೆಂಡ್ ಆದಾಯವು ಸದಸ್ಯರ ಕೈಯಲ್ಲಿ ತೆರಿಗೆಗೆ ಒಳಪಡುತ್ತದೆ, ಮತ್ತು ಆದಾಯ ತೆರಿಗೆ ಕಾಯ್ದೆ, 1961ರಲ್ಲಿ ನಿರ್ದಿಷ್ಟ ಪಡಿಸಿದ ದರಗಳ ಪ್ರಕಾರ ಸದಸ್ಯರಿಗೆ ಪಾವತಿಸುವ ಡಿವಿಡೆಂಡಿನಿಂದ ಕಂಪನಿಯು ಮೂಲದಲ್ಲೇ ತೆರಿಗೆಯನ್ನು ಕಡಿತ (ಟಿಡಿಎಸ್) ಮಾಡಬೇಕಾಗಿರುತ್ತದೆ. ಆದಾಯ ತೆರಿಗೆ ಕಾಯ್ದೆ, 1961ರ ಪ್ರಕಾರ ನಿಗದಿಪಡಿಸಿದ ದಾಖಲೆಗಳನ್ನು https://www.integratedindia.in/ExemptionFormSubmission.aspx ನಲ್ಲಿ ಸಲ್ಲಿಸಲು ಸದಸ್ಯರಲ್ಲಿ ಕೋರಲಾಗಿದೆ. ಈ ವಿಚಾರದಲ್ಲಿ ಜುಲೈ 17, 2023ನೇ ದಿನಾಂಕದ ಕಂಪನಿಯ ಈಮೇಲ್ ಸಂವಹನವನ್ನು ದಯವಿಟ್ಟು ಗಮನಿಸಿ; ಅದನ್ನು www.nseindia.com ಹಾಗೂ www.bseindia.com ನಲ್ಲೂ ಅಪ್‌ಲೋಡ್ ಮಾಡಲಾಗಿದೆ.
ಸ್ಥಳ: ಬೆಂಗಳೂರು
ದಿನಾಂಕ: ಜುಲೈ 20, 2023
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್‌ಗಾಗಿ
ಮಾನಸ. ಆರ್
ಕಂಪನಿ ಸೆಕ್ರಟರಿ

ಬಿಜೆಪಿ ಬೆಂಬಲಿಸಿದ ಜೆಡಿಎಸ್ • ಥಾವರಚಂದ್ ಗೆಹಲೋತ್‌ಗೆ ಮಾಹಿತಿ ನೀಡಿದ ಸಭಾಧ್ಯಕ್ಷ ಯು.ಟಿ.ಖಾದರ್

ಕಲಾಪ ಬಹಿಷ್ಕಾರ, ರಾಜ್ಯಪಾಲರಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಕಲಾಪದ ವೇಳೆ ಸಭಾಧ್ಯಕ್ಷರ ಪೀಠದತ್ತ ಕಾಗದ ತೂರಿದ 10 ಸದಸ್ಯರನ್ನು ಅಮಾನತು ಗೊಳಿಸಿದ ಕ್ರಮವನ್ನು ವಿರೋಧಿಸಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಗುರುವಾರ ವಿಧಾನಸಭೆ ಮತ್ತು ವಿಧಾನಪರಿಷತ್ ಕಲಾಪವನ್ನು ಬಹಿಷ್ಕರಿಸಿದವು.

ಬಿಜೆಪಿ ಸದಸ್ಯರು ಶಾಸಕ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿ, ಬಳಿಕ ಕಾಲ್ನಡಿಗೆಯಲ್ಲಿ ರಾಜಭವನಕ್ಕೆ ತೆರಳಿ ಸಭಾಧ್ಯಕ್ಷರು ಮತ್ತು ಸರ್ಕಾರದ ವಿರುದ್ಧ ದೂರು ನೀಡಿದರು.

ಪಕ್ಷದ ಕಚೇರಿಯಲ್ಲಿ ಬೆಳಿಗ್ಗೆ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಸಿ ಸದನ ಬಹಿಷ್ಕರಿಸಿ, ಪ್ರತಿಭಟನೆ ನಡೆಸುವ ಮತ್ತು ರಾಜ್ಯಪಾಲರಿಗೆ ದೂರು ಸಲ್ಲಿಸಲು ತೀರ್ಮಾನಿಸಲಾಯಿತು. ಅಲ್ಲದೇ, ರಾಜ್ಯವ್ಯಾಪಿ ಪ್ರತಿಭಟನೆ ನಡೆಸಲು ನಿರ್ಧರಿಸಲಾಯಿತು.

ಮತ್ತೊಂದೆಡೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಸಿ, ಕಲಾಪವನ್ನು ಬಹಿಷ್ಕರಿಸಲು ತೀರ್ಮಾನಿಸಿದರು. ಇದೇ ಸಂದರ್ಭದಲ್ಲಿ ಬಸವರಾಜ ಬೊಮ್ಮಾಯಿ ಅವರು ಎಚ್.ಡಿ.ಕುಮಾರಸ್ವಾಮಿ ಅವರಿಗೆ ದೂರವಾಣಿ ಕರೆ ಮಾಡಿ ಪ್ರತಿಭಟನೆಗೆ ಕೈ ಜೋಡಿಸುವಂತೆ ಮನವಿ ಮಾಡಿದರು. ಪಕ್ಷದ ಶಾಸಕರ ಜತೆ ಚರ್ಚಿಸಿ ತಿಳಿಸುವುದಾಗಿ ಕುಮಾರಸ್ವಾಮಿ ಹೇಳಿದರು. ಪ್ರತಿಭಟನೆಯಲ್ಲಿ ಭಾಗವಹಿಸದ ಕುಮಾರಸ್ವಾಮಿ ಮತ್ತು ಜೆಡಿಎಸ್ ಸದಸ್ಯರು ರಾಜಭವನದಲ್ಲಿ ಬಿಜೆಪಿ ನಾಯಕರು ಮನವಿ ಪತ್ರ ಸಲ್ಲಿಸುವ ಸಂದರ್ಭದಲ್ಲಿ ಹಾಜರಿದ್ದರು. ಮನವಿಪತ್ರಕ್ಕೆ ಮೊದಲ ಸಹಿ ಕುಮಾರಸ್ವಾಮಿ ಅವರದ್ದೇ ಇದ್ದಿದ್ದು ವಿಶೇಷ.

ಗಾಂಧಿ ಪ್ರತಿಮೆ ಬಳಿ ಕುಳಿತು ಬಿಜೆಪಿ ಸದಸ್ಯರು ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನೆಯಲ್ಲಿ ಎಸ್. ಸುರೇಶ್ ಕುಮಾರ್, ಕೋಟ ಶ್ರೀನಿವಾಸಪೂಜಾರಿ, ಸುನಿಲ್‌ಕುಮಾರ್, ಆರಗ ಜ್ಞಾನೇಂದ್ರ, ಮುನಿರತ್ನ, ಬೈರತಿ ಬಸವರಾಜ್ ಸೇರಿ ಬಹುತೇಕ ಶಾಸಕರು ಭಾಗವಹಿಸಿದ್ದರು.

ಬಳಿಕ ಅವರು ಕಾಲ್ನಡಿಗೆ ಯಲ್ಲಿ ರಾಜಭವನಕ್ಕೆ ತೆರಳಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ದೂರು ನೀಡಿದರು. ನಗರದಲ್ಲಿ ಇತ್ತೀಚೆಗೆ ನಡೆದ ವಿಪಕ್ಷಗಳ ನಾಯಕರ ಸಭೆಯ ಸಂದರ್ಭದಲ್ಲಿ ಆತಿಥ್ಯಕ್ಕಾಗಿ ಐಎಎಸ್ ಅಧಿಕಾರಿಗಳನ್ನು ಬಳಕೆ ಮಾಡಿಕೊಂಡಿದ್ದು, ಈ ಬಗ್ಗೆ ಸದನದಲ್ಲಿ ವಿಷಯ ಪ್ರಸ್ತಾಪಿಸಿದಾಗ ನಡೆದ ಬೆಳವಣಿಗೆಗಳ ಅಷ್ಟೂ ಮಾಹಿತಿಯನ್ನು ರಾಜ್ಯಪಾಲರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಇದ್ದರು.

ಸಭಾಧ್ಯಕ್ಷರಿಂದಲೂ ಭೇಟಿ: ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಬೆಳಿಗ್ಗೆ ರಾಜ್ಯಪಾಲರನ್ನು ಭೇಟಿ ಮಾಡಿ, ಕಲಾಪದ ವೇಳೆ ನಡೆದ ಘಟನೆಗಳು ಮತ್ತು 10 ಶಾಸಕರನ್ನು ಅಮಾನತುಗೊಳಿಸಬೇಕಾದ ಸಂದರ್ಭದ ವಿವರಿಸಿ, ವರದಿಯೊಂದನ್ನು ಸಲ್ಲಿಸಿದರು.

ಖಾದರ್ ಜತೆಯಲ್ಲಿ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಇದ್ದರು. ಕಲಾಪವನ್ನು ಉತ್ತಮ ವಾತಾವರಣದಲ್ಲಿ ನಡೆಸಿಕೊಂಡು ಹೋಗುವಂತೆ ರಾಜ್ಯಪಾಲರು ಸಲಹೆ ನೀಡಿದರು ಎಂದು ಮೂಲಗಳು ಹೇಳಿವೆ.

ಬಿಜೆಪಿಯ ಶಾಸಕರನ್ನು ಅಮಾನತು ಮಾಡಿರುವ ಸ್ಪೀಕರ್ ನಡೆ ಖಂಡಿಸಿ ಬಸವರಾಜ ಬೊಮ್ಮಾಯಿ ಮತ್ತು ಎಚ್‌.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ರಾಜ್ಯಪಾಲರಿಗೆ ದೂರು ಸಲ್ಲಿಸಿದರು

ಸಭಾಧ್ಯಕ್ಷರ ಕೆಟ್ಟ ನಿರ್ಧಾರ: ಬೊಮ್ಮಾಯಿ ಕಿಡಿ

‘ವಿಪಕ್ಷಗಳ ರಾಜಕೀಯ ಕಾರ್ಯಕ್ರಮಕ್ಕೆ ಐಎಎಸ್ ಅಧಿಕಾರಿಗಳನ್ನು ಕಳುಹಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ನಮ್ಮ ಪಕ್ಷದ 10 ಸದಸ್ಯರನ್ನು ಅಮಾನತು ಮಾಡಿದ್ದಾರೆ. ಇಂತಹ ಕೆಟ್ಟ ನಿರ್ಧಾರ ಇತಿಹಾಸದಲ್ಲೇ ನಡೆದಿಲ್ಲ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಕಿಡಿ ಕಾರಿದ್ದಾರೆ.

ರಾಜ್ಯಪಾಲರ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ರಾಜಕೀಯ ಲಾಭಕ್ಕಾಗಿ ಸಭಾಧ್ಯಕ್ಷರ ಹುದ್ದೆಯನ್ನು ಬಳಕೆ ಮಾಡಿಕೊಳ್ಳುತ್ತಿದೆ ಎಂದು ದೂರಿದರು.

‘ಧರಣಿಯಲ್ಲಿದ್ದ ನಮ್ಮನ್ನು ಕರೆದು ಮಾತನಾಡಿಸಿ ಸಮಸ್ಯೆ ಬಗೆಹರಿಸಬಹುದಿತ್ತು. ಈ ರೀತಿಯ ಪ್ರಕರಣಗಳು ಹಿಂದೆಯೂ ನಡೆದಿವೆ. ಆದರೆ, ಈ ರೀತಿ ತೀರ್ಮಾನಗಳನ್ನು ಯಾರೂ ಮಾಡಿರಲಿಲ್ಲ. ಸಭಾಧ್ಯಕ್ಷರು ರಾಜಕೀಯ ಪಕ್ಷಗಳ ಕಾರ್ಯಕ್ರಮಗಳಲ್ಲಿ ಹಾಜರಾಗಬಾರದು ಎಂಬ ನಿಯಮ ಪಾಲಿಸಿಕೊಂಡು ಬರಲಾಗಿದೆ’ ಎಂದು ಬೊಮ್ಮಾಯಿ ಹೇಳಿದರು.

‘ಸಭಾಧ್ಯಕ್ಷರು ಕಾಂಗ್ರೆಸ್ ಪಕ್ಷದ ಔತಣಕೂಟಕ್ಕೆ ಹಾಜರಾಗಿ ಊಟ ಮಾಡಿ ಬಂದಿದ್ದಾರೆ. ಅವರ ಮೇಲೆ ವಿಶ್ವಾಸವಿಲ್ಲ ಎಂದು ನಾವು ಅವಿಶ್ವಾಸ ಗೊತ್ತುವಳಿ ಮಂಡನೆಗೆ ಅವಕಾಶ ಕೇಳಿದ್ದೇವೆ. ಸರ್ಕಾರ ತನ್ನ ತಪ್ಪುಗಳನ್ನು ಮುಚ್ಚಿಕೊಳ್ಳಲು ಈ ರೀತಿ ವರ್ತಿಸುತ್ತಿದೆ. ಜನರು ಅವರಿಗೆ ಅಧಿಕಾರ ನೀಡಿದ್ದರೆ, ಜನರ ಪರವಾಗಿ ಧ್ವನಿ ಎತ್ತಲು ನಮಗೂ ಅವಕಾಶ ನೀಡಿದ್ದಾರೆ’ ಎಂದರು.

ಸದನಕ್ಕೆ ಸಿ.ಎಂ ತಪ್ಪು ಮಾಹಿತಿ: ಎಚ್‌ಡಿಕೆ

‘ಅಧಿಕಾರಿಗಳ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸದನಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ ಮತ್ತು ಸಭಾಧ್ಯಕ್ಷರು ಏಕಪಕ್ಷೀಯವಾಗಿ ವರ್ತಿಸಿದ್ದಾರೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ದೂರಿದ್ದಾರೆ.

ರಾಜ್ಯಪಾಲರ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಾನು ಮುಖ್ಯಮಂತ್ರಿ ಆಗಿದ್ದ ವೇಳೆ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡಿಲ್ಲ. ಅವರನ್ನು ಗೌರವದಿಂದಲೇ ನಡೆಸಿಕೊಂಡಿದ್ದೇನೆ. ಪ್ರಮಾಣ ವಚನ ಸ್ವೀಕಾರ ಸಂದರ್ಭದಲ್ಲೂ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡಿಲ್ಲ. ಹೀಗೆ ಸುಳ್ಳು ಹೇಳುವುದಕ್ಕೆ ನಾಚಿಕೆ ಆಗಬೇಕು. ನನ್ನ ವಿರುದ್ಧ ದಾಖಲೆ ಇದ್ದರೆ ಬಿಡುಗಡೆ ಮಾಡಲಿ’ ಎಂದು ಅವರು ಸವಾಲು ಹಾಕಿದರು.

‘ವಿಧಾನಸಭೆಯಲ್ಲಿ ಬುಧವಾರ ನಡೆದ ಗೊಂದಲಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರವೇ ನೇರ ಕಾರಣ. ಸಭಾಧ್ಯಕ್ಷರ ಪೀಠವನ್ನು ದುರ್ಬಳಕೆ ಮಾಡಿಕೊಂಡಿದೆ. ಎರಡು ನಿಮಿಷದಲ್ಲಿ ಬಗೆಹರಿಸುವ ವಿಷಯವನ್ನು ಇಷ್ಟು ದೂರ ಎಳೆದು ತರಲಾಗಿದೆ’ ಎಂದು ಹೇಳಿದರು.

‘ಸಭ್ಯತೆ ಕಾಪಾಡುವುದು ಸಭಾಧ್ಯಕ್ಷರ ಹೊಣೆ’

‘ಸದನದ ಸಭ್ಯತೆ ಕಾಪಾಡುವುದು ಸಭಾಧ್ಯಕ್ಷರ ಹೊಣೆ. ಅದೇ ರೀತಿ ಆಡಳಿತ ಪಕ್ಷದ ಲೋಪದೋಷ ತಿಳಿಸುವುದು ವಿಪಕ್ಷಗಳ ಜವಾಬ್ದಾರಿ ಆಗಿದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

‘ಸರ್ಕಾರ ತನ್ನ ಮನಸ್ಸಿಗೆ ಬಂದಂತೆ ವರ್ತಿಸಬಾರದು. ಮೊನ್ನೆ ಬಂದವರು ಸರ್ಕಾರದ ಅತಿಥಿಗಳಲ್ಲ ಎಂದ ಅವರು, ಐಎಎಸ್, ಐಪಿಎಸ್ ಅಧಿಕಾರಿಗಳನ್ನು ನಿಯೋಜಿಸಿ ಸೇವಾ ನಿಯಮ ಉಲ್ಲಂಘಿಸಿದ್ದಾರೆ’ ಎಂದು ಟೀಕಿಸಿದರು.

‘ಕಾಗದ ಹರಿದು ಹಾಕಿದ್ದಕ್ಕೆ ಅಮಾನತು ಮಾಡುವುದಾದರೆ ಹಿಂದೆ ಸಭಾಪತಿಯವರ ಕುರ್ಚಿ ಎಳೆದುದಕ್ಕೆ ವಜಾ ಮಾಡಬೇಕಿತ್ತು’ ಎಂದರು.

ಭಣಗುಟ್ಟಿದ ವಿಧಾನಸಭೆ, ಪರಿಷತ್

ಬಿಜೆಪಿ ಮತ್ತು ಜೆಡಿಎಸ್ ಶಾಸಕರು ವಿಧಾನಸಭೆ ಮತ್ತು ಪರಿಷತ್ ಕಲಾಪವನ್ನು ಬಹಿಷ್ಕರಿಸಿದ್ದರಿಂದ ವಿರೋಧ ಪಕ್ಷಗಳ ಆಸನಗಳು ಖಾಲಿ ಇದ್ದವು.

ವಿಧಾನಸಭೆಯಲ್ಲಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಗಾಲಿ ಜನಾರ್ದನ ರೆಡ್ಡಿ ಮಾತ್ರ ಹಾಜರಿದ್ದರು. ಆಡಳಿತ ಪಕ್ಷದ ಸದಸ್ಯರು ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು.

ವಿಧಾನ ಪರಿಷತ್‌ನಲ್ಲೂ ಬಿಜೆಪಿ, ಜೆಡಿಎಸ್ ಸದಸ್ಯರು ಕಲಾಪ ಬಹಿಷ್ಕರಿಸಿದರು. ಕೋರಂ ಕೊರತೆಯಿಂದ ಒಂದೂವರೆ ಗಂಟೆ ತಡವಾಗಿ ಕಲಾಪ ಆರಂಭವಾಯಿತು. ಸಭಾಪತಿ ಬಸವರಾಜ ಹೊರಟ್ಟಿ ನಡೆಸಿದ ವಿರೋಧ ಪಕ್ಷಗಳ ಸದಸ್ಯರ ಮನವೊಲಿಕೆ ಪ್ರಯತ್ನ ಫಲನೀಡಲಿಲ್ಲ. ಬಿಜೆಪಿಯ ಎಚ್. ವಿಶ್ವನಾಥ್, ಜೆಡಿಎಸ್‌ನ ಮರಿತಿಬ್ಬೇಗೌಡ ಮಾತ್ರ ಹಾಜರಿದ್ದು, ಮಸೂದೆಗಳ ಪರ ಮಾತನಾಡಿದರು.

ಸುದ್ದಿ 2 ನಿಮಿಷ

ಇದನ್ನೆಲ್ಲ ಎಸೆದು ಹೋಗ್ತೇನೆ: ಶಿವಲಿಂಗೇಗೌಡ ಆಕ್ರೋಶ

ಬೆಂಗಳೂರು: ಅಧಿವೇಶನ ನಡೆಯುವಾಗ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅವರು ‘ಆದಷ್ಟು ಬೇಗ ಮಾತನ್ನು ಮುಗಿಸಿ, ಬೇರೆಯವರಿಗೂ ಮಾತನಾಡಲು ಅವಕಾಶ ನೀಡಬೇಕು’ ಎಂದು ಕೆ.ಎಂ.ಶಿವಲಿಂಗೇಗೌಡರಿಗೆ ಸೂಚಿಸಿದರು.

ಇದರಿಂದ ಕೆಂಡಾಮಂಡಲರಾದ ಶಿವಲಿಂಗೇಗೌಡ, ‘ಹೀಗೆ ಹೇಳಿದರೆ ಇದನ್ನೆಲ್ಲ(ಬಜೆಟ್ ಪ್ರತಿ) ಎಸೆದು ಹೋಗುತ್ತೇನೆ’ ಎಂದು ಪ್ರತಿಯನ್ನು ಮೇಜಿಗೆ ಕುಕ್ಕಿದರು.

‘ಏ ಇದೇನ್ ಹೀಗ್ ಹೇಳ್ತೀರಿ, ನೀವು ಹೀಗೆ ಹೇಳಿದರೆ ನಾವ್ಯಾಕೆ ಇಲ್ಲಿಗೆ ಬರಬೇಕು. ಒಂದು-ಎರಡು ನಿಮಿಷದಲ್ಲಿ ಭಾಷಣ ಮುಗಿಸಬೇಕೇನ್ರಿ. ನಮಗೆ ಸ್ವಲ್ಪವೂ ಗೌರವವಿಲ್ಲವೇ? ಇಲ್ಲಿ ಹರಟೆ ಹೊಡೆ ಯುವವರಿಗೆ ಒಂದರಿಂದ ಎರಡು ಗಂಟೆ ಅವಕಾಶ ಕೊಡ್ತೀರಿ. ಮಾತನಾಡುವುದಿಲ್ಲ, ಕೂತ್ಕೋತಿನಿ’ ಎಂದು ರೇಗಿದರು.

ಇದರಿಂದ ಗಲಿಬಿಲಿಗೊಂಡ ಲಮಾಣಿ ‘ಮಾತಾಡಿ... ಮಾತಾಡಿ’ ಎಂದರು.

5 ಮಸೂದೆ ಅಂಗೀಕಾರ

ಬೆಂಗಳೂರು: ವಿರೋಧ ಪಕ್ಷದ ಸದಸ್ಯರ ಗೈರುಹಾಜರಿಯ ಮಧ್ಯೆಯೇ ಐದು ತಿದ್ದುಪಡಿ ಮಸೂದೆಗಳಿಗೆ ಗುರುವಾರ ವಿಧಾನ ಪರಿಷತ್‌ನಲ್ಲಿ ಅಂಗೀಕಾರ ದೊರೆಯಿತು.

ವಿಧಾನಸಭೆಯಲ್ಲಿ ಅಂಗೀಕಾರವಾಗಿದ್ದ ಸಿವಿಲ್ ಪ್ರಕ್ರಿಯಾ ಸಂಹಿತೆ, ಕರ್ನಾಟಕ ಸರ್ಕಾರಿ ವ್ಯಾಜ್ಯಗಳ ನಿರ್ವಹಣೆ ಮಸೂದೆಗಳನ್ನು ಕಾನೂನು ಸಚಿವ ಎಚ್.ಕೆ.ಪಾಟೀಲ, ಕರ್ನಾಟಕ ಭೂ ಕಂದಾಯ, ನೋಂದಣಿ ಮಸೂದೆಗಳನ್ನು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹಾಗೂ ಕರ್ನಾಟಕ ಸಹಕಾರ ಸಂಘಗಳ ಮಸೂದೆಯನ್ನು ಸಹಕಾರ ಸಚಿವ ಕೆ.ಎನ್.ರಾಜಣ್ಣ ಮಂಡಿಸಿದರು.

ಮಸೂದೆಗಳ ಪರವಾಗಿ ಸರ್ಕಾರದ ಮುಖ್ಯಸಚೇತಕ ಸಲೀಂ ಅಹಮದ್, ಕಾಂಗ್ರೆಸ್‌ನ ಜಗದೀಶ ಶೆಟ್ಟರ್, ನಜೀರ್ ಅಹಮದ್, ಯು.ಬಿ.ವೆಂಕಟೇಶ್, ಪ್ರಕಾಶ್ ಹುಕ್ಕೇರಿ, ಬಿಜೆಪಿಯ ಎಚ್.ವಿಶ್ವನಾಥ್, ಜೆಡಿಎಸ್‌ನ ಮರಿತಿಬ್ಬೇಗೌಡ ಮಾತನಾಡಿದರು.

‘ಸರ್ಕಾರಿ ವ್ಯಾಜ್ಯಗಳನ್ನು ಲೋಕ ಅದಾಲತ್ ಮಾದರಿಯಲ್ಲಿ ನಿರ್ವಹಿಸಿದರೆ ಕೋರ್ಟ್ ಒತ್ತಡವನ್ನೂ ಕಡಿಮೆ ಮಾಡಬಹುದು. ಸರ್ಕಾರ ಹಾಗೂ ಜನರಿಗೂ ಒಳಿತಾಗುತ್ತದೆ. ಆಸ್ತಿ ದಾಖಲೆಗಳನ್ನು ನಕಲು ಮಾಡಿ ಮಾರಾಟ ಮಾಡುವ ಜಾಲ ನಿಯಂತ್ರಣಕ್ಕೆ ನೋಂದಣಿ ತಿದ್ದುಪಡಿ ಸಹಕಾರಿಯಾಗುತ್ತದೆ. ಹಾಗೆಯೇ, ತಪ್ಪು ಎಸಗುವ ನೋಂದಣಾಧಿಕಾರಿ ವಿರುದ್ಧವೂ ಕ್ರಮ ಕೈಗೊಳ್ಳಬೇಕು’ ಎಂದು ಜಗದೀಶ ಶೆಟ್ಟರ್ ಸಲಹೆ ನೀಡಿದರು.

ವಾಹನ ತೆರಿಗೆ ಪರಿಷ್ಕರಣೆ ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಕು ಸಾಗಣೆ ವಾಹನಗಳು, ಕ್ಯಾಬ್‌ಗಳು ಮತ್ತು ಹೊರ ರಾಜ್ಯಗಳಲ್ಲಿ ನೋಂದಣಿಯಾಗಿರುವ ಕ್ಯಾಬ್‌ಗಳ ಮೋಟಾರು ವಾಹನ ತೆರಿಗೆಯ ದರ ಪರಿಷ್ಕರಣೆಗೆ ಅವಕಾಶ ಕಲ್ಪಿಸುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ(ತಿದ್ದುಪಡಿ) ಮಸೂದೆ–2023ಕ್ಕೆ ವಿಧಾನಸಭೆ ಗುರುವಾರ ಒಪ್ಪಿಗೆ ನೀಡಿತು.

ವಾಹನ ತೆರಿಗೆ ಪರಿಷ್ಕರಣೆ ಕುರಿತು ಬಜೆಟ್‌ನಲ್ಲಿ ಮಾಡಿದ್ದ ಘೋಷಣೆಗೆ ಪೂರಕವಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಸೂದೆ ಮಂಡಿಸಿದರು. ಆಡಳಿತ ಪಕ್ಷದ ಸದಸ್ಯರು ಧ್ವನಿಮತದ ಮೂಲಕ ಅಂಗೀಕಾರ ನೀಡಿದರು.

ಶಾಲಾ ವಾಹನಗಳಿಗೆ ತೆರಿಗೆಯಲ್ಲಿ ಅಲ್ಪ ಪ್ರಮಾಣದ ರಿಯಾಯಿತಿ, ಸರಕು ಸಾಗಣೆ ವಾಹನಗಳು, ಕ್ಯಾಬ್‌ಗಳು ಮತ್ತು ಹೊ ರಾಜ್ಯಗಳಲ್ಲಿ ನೋಂದಣಿಯಾದ ಕ್ಯಾಬ್‌ಗಳಿಗೆ ನಾಲ್ಕು ತಿಂಗಳಿಗೊಮ್ಮೆ ತೆರಿಗೆ ಸಂಗ್ರಹಿಸುವ ಬದಲಿಗೆ ಜೀವಿತಾವಧಿ ತೆರಿಗೆ ಸಂಗ್ರಹಿಸುವ ತಿದ್ದುಪಡಿಯನ್ನು ಅಂಗೀಕರಿಸಲಾಗಿದೆ.

1.5 ಟನ್ ತೂಕದಿಂದ 12 ಟನ್ ಒಟ್ಟು ತೂಕದ ಸರಕು ಸಾಗಣೆ ವಾಹನಗಳ ಪೂರ್ಣಾವಧಿ ತೆರಿಗೆ, ರಾಜ್ಯದ ಹೊರಗೆ ನೋಂದಣಿಯಾಗಿರುವ ಕ್ಯಾಬ್‌ಗಳ ಪೂರ್ಣಾವಧಿ ತೆರಿಗೆ, ₹ 10 ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ಕ್ಯಾಬ್‌ಗಳ ತೆರಿಗೆ ದರವನ್ನು ಪರಿಷ್ಕರಣೆ ಮಾಡಲಾಗಿದೆ.

ಪಿಟಿಸಿಎಲ್ ತಿದ್ದುಪಡಿ ಮಸೂದೆಗೆ ಒಪ್ಪಿಗೆ

ಬೆಂಗಳೂರು: ಪರಿಶಿಷ್ಟರ ಜಮೀನುಗಳ ಅಕ್ರಮ ಪರಭಾರೆಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸುವುದಕ್ಕೆ ಕಾಲಮಿತಿಯನ್ನು ತೆಗೆದುಹಾಕುವ ಕರ್ನಾಟಕ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) (ಕೆಲವು ಭೂಮಿಗಳ ವರ್ಗಾವಣೆ ನಿಷೇಧ– ಪಿಟಿಸಿಎಲ್) (ತಿದ್ದುಪಡಿ) ಮಸೂದೆ–2023ಕ್ಕೆ ವಿಧಾನಸಭೆ ಗುರುವಾರ ಒಪ್ಪಿಗೆ ನೀಡಿತು.

‘1978ರಿಂದ ಈ ಕಾಯ್ದೆ ಜಾರಿಯಲ್ಲಿದೆ. ಆದರೆ, 2017ರಲ್ಲಿ ಪ್ರಕರಣವೊಂದರಲ್ಲಿ ತೀರ್ಪು ನೀಡಿದ ಸುಪ್ರೀಂ ಕೋರ್ಟ್, ಕಾಯ್ದೆಯಲ್ಲಿ ಅರ್ಜಿ ಸಲ್ಲಿಸುವುದಕ್ಕೆ ಕಾಲಮಿತಿ ಕುರಿತು ಸ್ಪಷ್ಟತೆ ಇಲ್ಲದ ಕಾರಣ ಗೊಂದಲವಿದೆ ಎಂದು ಹೇಳಿತ್ತು. ಅದರ ಆಧಾರದಲ್ಲೇ ಅರ್ಜಿಯನ್ನು ತಿರಸ್ಕರಿಸಿತ್ತು. ನಂತರ ಬಹುತೇಕ ಪ್ರಕರಣಗಳು ವಜಾಗೊಂಡಿದ್ದವು. ಪರಿಶಿಷ್ಟರಿಗೆ ಅನ್ಯಾಯ ಆಗುವುದನ್ನು ತಪ್ಪಿಸಲು ತಿದ್ದುಪಡಿ ತರಲಾಗುತ್ತಿದೆ’ ಎಂದರು.

‘ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಪಿಟಿಸಿಎಲ್ ಕಾಯ್ದೆಯಡಿ ಅರ್ಜಿ ಸಲ್ಲಿಸಲು ಯಾವುದೇ ಕಾಲಮಿತಿ ಇರುವುದಿಲ್ಲ. ಈ ಸಂಬಂಧದ ಮೊಕದ್ದಮೆಗಳನ್ನು ನ್ಯಾಯ ನಿರ್ಣಯ ಮಾಡುವ ಎಲ್ಲ ಸಕ್ಷಮ ಪ್ರಾಧಿಕಾರಗಳು ಮತ್ತು ಎಲ್ಲ ನ್ಯಾಯಾಲಯಗಳಿಗೂ ಈ ತಿದ್ದುಪಡಿ ಅನ್ವಯವಾಗುತ್ತದೆ’ ಎಂಬ ಅಂಶ ತಿದ್ದುಪಡಿಯಲ್ಲಿದೆ.

ವಿಶ್ವಗುರು ಏಕೆ ವಿಪಕ್ಷ ನಾಯಕನ ನೇಮಿಸಿಲ್ಲ?

ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸುವಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ

ಆರ್ಥಿಕತೆಯ ಚಲನಶೀಲತೆ ಉತ್ತೇಜಿಸಲು ಐದು ಗ್ಯಾರಂಟಿ ಯೋಜನೆ ಮೂಲಕ ಸಾರ್ವತ್ರಿಕ ಮೂಲ ಆದಾಯದ ಪರಿಕಲ್ಪನೆ ಪರಿಚಯಿ ಸುತ್ತಿರುವ ಮೊದಲ ರಾಜ್ಯ ಕರ್ನಾಟಕ. ಇದು ಕರ್ನಾಟಕದ ಮಾದರಿ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಧಾನಿ ನರೇಂದ್ರ ಮೋದಿ ವಿಶ್ವಗುರು ಎಂದು ಬಿಜೆಪಿಯವರು ಹೇಳುತ್ತಾರೆ. ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಆಗದಿರುವುದೇ ವಿಶ್ವ ಗುರುವಾ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಗೆ ಗುರುವಾರ ಉತ್ತರ ನೀಡಿದ ಅವರು, ‘ವಿಧಾನಸಭೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವಿರೋಧ ಪಕ್ಷದ ನಾಯಕನಿಲ್ಲದೇ ಅಧಿವೇಶನ ಮುಗಿದಿದೆ. ಇದು ಬಿಜೆಪಿ ರಾಜಕೀಯವಾಗಿ ದಿವಾಳಿಯಾಗಿರುವುದರ ಸಂಕೇತ’ ಎಂದರು.

‘ಬಿಜೆಪಿಯವರು ನರೇಂದ್ರ ಮೋದಿ ಒಬ್ಬರನ್ನೇ ನೆಚ್ಚಿಕೊಂಡಿದ್ದಾರೆ. ಅವರ ಜನಪ್ರಿಯತೆ ಕುಸಿಯುತ್ತಿದೆ. ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ 20ಕ್ಕೂ ಹೆಚ್ಚು ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ’ ಎಂದು ಹೇಳಿದರು.

ತಮ್ಮ ಸರ್ಕಾರ ಎಲ್ಲರನ್ನೂ ಒಳಗೊಳ್ಳುವ ಬಜೆಟ್ ಮಂಡಿಸಿದೆ. ಸಾರ್ವತ್ರಿಕ ಮೂಲ ಆದಾಯ ಪರಿಕಲ್ಪನೆಯನ್ನು ಬಜೆಟ್‌ನಲ್ಲಿ ಅಳವಡಿಸಿಕೊಳ್ಳುವ ಮೂಲಕ, ಎಲ್ಲ ಜನರಿಗೂ ನೇರವಾಗಿ ಆರ್ಥಿಕ ನೆರವನ್ನು ಒದಗಿಸುವ ಕೆಲಸ ಮಾಡಲಾಗುತ್ತಿದೆ. ಐದು ಗ್ಯಾರಂಟಿಗಳ ಮೂಲಕ ಜನರಿಗೆ ವರ್ಷಕ್ಕೆ ₹ 52,068 ಕೋಟಿ ನೆರವು ನೀಡಲಾಗುತ್ತಿದೆ. ಪ್ರತಿ ಕುಟುಂಬಕ್ಕೆ ವರ್ಷಕ್ಕೆ ₹ 48,000ದಿಂದ ₹ 60,000ದವರೆಗೆ ನೇರವಾಗಿ ನೆರವು ಕೊಡಲಾಗುವುದು. ದೇಶದ ಯಾವ ರಾಜ್ಯದಲ್ಲಿ ಇಂತಹ ಯೋಜನೆಗಳಿವೆ ಎಂದು ಪ್ರಶ್ನಿಸಿದರು.

ಈ ಬಜೆಟ್ ಐದು ಗ್ಯಾರಂಟಿಗಳ ಅನುಷ್ಠಾನಕ್ಕೆ ಸೀಮಿತವಾಗಿಲ್ಲ. ಅವುಗಳ ಜತೆಯಲ್ಲಿ 76 ಭರವಸೆಗಳನ್ನು ಈಡೇರಿಸಲಾಗಿದೆ. ರಾಜಕೀಯ ಪ್ರಭುತ್ವಕ್ಕೆ ಸಾಮಾಜಿಕ ಪ್ರಭುತ್ವದ ತಳಹದಿಯನ್ನು ಕಲ್ಪಿಸುವ ಮೂಲಮಂತ್ರದ ಮೇಲೆ ಈ ಬಜೆಟ್ ಮಂಡಿಸಲಾಗಿದೆ. ಈ ಬಜೆಟ್‌ನ ಅನುಷ್ಠಾನದಿಂದ ಜನರ ಕೈಯಲ್ಲಿ ಹಣದ ಹರಿವು ಹೆಚ್ಚಲಿದೆ. ಪರಿಣಾಮವಾಗಿ ಆರ್ಥಿಕ ಚಟುವಟಿಕೆಗಳಿಗೆ ವೇಗ ದೊರಕಲಿದೆ ಎಂದರು.

2013ರಿಂದ 2018ರ ಅವಧಿಯಲ್ಲಿ ಹಗರಣ ಮುಕ್ತ ಆಡಳಿತ ನೀಡಿದ ಕೀರ್ತಿ ತಮ್ಮದು. ಅದಕ್ಕಾಗಿಯೇ ಕಾಂಗ್ರೆಸ್ ಪಕ್ಷಕ್ಕೆ ಈ ಬಾರಿ ಜನರು 135 ಸ್ಥಾನ ನೀಡಿದ್ದಾರೆ. ಒಡೆದು ಆಳುವ ನೀತಿ ಅನುಸರಿಸುವವರನ್ನು ಜನರು ನಂಬುವುದಿಲ್ಲ ಎಂದು ಹೇಳಿದರು.

2 ಗಂಟೆಗೂ ಹೆಚ್ಚು ಕಾಲ ಉತ್ತರ ನೀಡಿದ ಸಿ.ಎಂ, ಬಹುತೇಕ ಸಮಯವನ್ನು ಬಿಜೆಪಿ ವಿರುದ್ಧ ವಾಗ್ದಾಳಿಗೆ ಮೀಸಲಿಟ್ಟರು. ಹೊಸ ಘೋಷಣೆಗಳನ್ನು ಮಾಡಲಿಲ್ಲ.

ಧನ ವಿನಿಯೋಗ ಮಸೂದೆಗೆ ಒಪ್ಪಿಗೆ

ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಫೆಬ್ರುವರಿಯಲ್ಲಿ ಬಜೆಟ್ ಮಂಡಿಸಿದ್ದ ವೇಳೆ ಲೇಖಾನುದಾನ ಪಡೆದಿದ್ದ 1.07 ಲಕ್ಷ ಕೋಟಿಯೂ ಸೇರಿದಂತೆ ಒಟ್ಟು ₹ 3.41 ಲಕ್ಷ ಕೋಟಿಯನ್ನು ವೆಚ್ಚಮಾಡಲು ಅವಕಾಶ ಕಲ್ಪಿಸುವ ಕರ್ನಾಟಕ ಧನ ವಿನಿಯೋಗ ಮಸೂದೆಗೆ ವಿಧಾನಸಭೆ ಒಪ್ಪಿಗೆ ನೀಡಿತು.

ಜೆಡಿಎಸ್ ಶಾಸಕರ ಜತೆ ಎಚ್‌.ಡಿ.ದೇವೇಗೌಡ ಸಭೆ

ಬೆಂಗಳೂರು: ಪಕ್ಷದ ಶಾಸಕರ ಜತೆ ಗುರುವಾರ ರಾತ್ರಿ ಸಭೆ ನಡೆಸಿದ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ, ಒಗ್ಗಟ್ಟು ಕಾಯ್ದುಕೊಳ್ಳುವುದು, ಲೋಕಸಭಾ ಚುನಾವಣೆಯಲ್ಲಿ ಪಕ್ಷ ತಳೆಯಬೇಕಿರುವ ನಿಲುವು ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಹಲವು ಪ್ರಮುಖರು ಸಭೆಯಲ್ಲಿದ್ದರು. ಎಲ್ಲರ ಜತೆ ಸುದೀರ್ಘವಾಗಿ ಮಾತುಕತೆ ನಡೆಸಿದ ಪಕ್ಷದ ವರಿಷ್ಠರು, ವಿಧಾನಸಭಾ ಚುನಾವಣೆಯ ನಂತರದ ಬೆಳವಣಿಗೆಗಳ ಕುರಿತು ವಿಚಾರ ವಿನಿಮಯ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎಲ್ಲ ಶಾಸಕರು ಒಗ್ಗಟ್ಟಿನಿಂದ ಇರುವಂತೆ ದೇವೇಗೌಡರು ಸಭೆಯಲ್ಲಿ ಸಲಹೆ ನೀಡಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಸೇರಬೇಕೆ? ಅಥವಾ ಸ್ವತಂತ್ರವಾಗಿ ಸ್ಪರ್ಧಿಸಬೇಕೆ? ಎಂಬುದರ ಕುರಿತು ಎಲ್ಲ ಶಾಸಕರಿಂದಲೂ ವೈಯಕ್ತಿಕವಾಗಿ ಅಭಿಪ್ರಾಯ ಸಂಗ್ರಹಿಸಿದ್ದಾರೆ ಎಂದು ಗೊತ್ತಾಗಿದೆ.

ಎನ್‌ಡಿಎ ಮೈತ್ರಿಕೂಟ ಸೇರುವಂತೆ ಬಿಜೆಪಿ ವರಿಷ್ಠರು ಆಹ್ವಾನ ನೀಡಿರುವ ಕುರಿತು ದೇವೇಗೌಡ ಮತ್ತು ಕುಮಾರಸ್ವಾಮಿ ಶಾಸಕರೊಂದಿಗೆ ಸಮಾಲೋಚನೆ ನಡೆಸಿದ್ದಾರೆ. ಈ ವಿಷಯದಲ್ಲಿ ಖಚಿತವಾದ ಅಭಿಪ್ರಾಯ ನೀಡುವಂತೆ ಶಾಸಕರನ್ನು ಕೋರಿದ್ದಾರೆ ಎಂದು ಮೂಲಗಳು ಹೇಳಿವೆ.

ಅಮಲು ಬರಿಸುವ ಚಾಕೊಲೇಟ್ ವಶ

ಮಂಗಳೂರು: ನಗರದಲ್ಲಿ ಶಾಲಾ ಕಾಲೇಜುಗಳ ಸಮೀಪದ ಅಂಗಡಿಗಳಲ್ಲಿ ತಂಬಾಕು ಉತ್ಪನ್ನ ಮಾರಾಟ ಮಾಡುವುದನ್ನು ಪತ್ತೆಹಚ್ಚಲು ಪೊಲೀಸರು ದಾಳಿ ನಡೆಸಿದ್ದು, ಈ ವೇಳೆ ಎರಡು ಅಂಗಡಿಗಳಲ್ಲಿ ಅಮಲು ಬರಿಸುವ ಚಾಕೊಲೇಟ್ ಮಾರಾಟ ಮಾಡುತ್ತಿದ್ದುದು ಪತ್ತೆಯಾಗಿದೆ. ಇಬ್ಬರನ್ನು ಬಂಧಿಸಿ, 108 ಕೆ.ಜಿ. ಚಾಕೊಲೇಟ್ ವಶಪಡಿಸಿಕೊಳ್ಳಲಾಗಿದೆ.

‘ನಗರದ ವೈಭವ್ ಪೂಜಾ ಸೇಲ್ಸ್ ಅಂಗಡಿಯಲ್ಲಿ ಅಮಲು ಉಂಟು ಮಾಡುವಂತಹ ‘ಬಾಂಗ್’ ಎಂಬ ಚಾಕೊಲೇಟ್ 83 ಕೆ.ಜಿ.ಗಳಷ್ಟು ಪತ್ತೆಯಾಗಿದೆ. ಮಾಲೀಕ ಮನೋಹರ್ ಶೇಟ್‌ನನ್ನು ಬಂಧಿಸಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಜೈನ್ ತಿಳಿಸಿದ್ದಾರೆ.

‘ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ’ ಬಿಡುಗಡೆಗೆ ಹಸಿರು ನಿಶಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ’ ಚಿತ್ರ ಬಿಡುಗಡೆಗೆ 83ನೇ ಹೆಚ್ಚುವರಿ ಸೆಷನ್ಸ್ (ವಾಣಿಜ್ಯ ಕೋರ್ಟ್ ಸಂಖ್ಯೆ-84) ನ್ಯಾಯಾಲಯ ಹಸಿರು ನಿಶಾನೆ ತೋರಿದೆ.

ಈ ಕುರಿತಂತೆ ಗುಲ್‌ಮೊಹರ್ ಫಿಲಂಸ್ ಸೇರಿದಂತೆ ಏಳು ಪ್ರತಿವಾದಿಗಳು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಧೀಶ ರವೀಂದ್ರ ಹೆಗ್ಡೆ ಗುರುವಾರ ವಿಚಾರಣೆ ನಡೆಸಿದರು. ಬುಧವಾರವಷ್ಟೇ (ಜು.19) ವಾದಿಗಳ ಪರವಾಗಿ ಏಕಪಕ್ಷೀಯ ವಾದ ಆಲಿಸಿ ನೀಡಿದ್ದ ತಡೆ ಆದೇಶವನ್ನು ತೆರವುಗೊಳಿಸಿದರು. ಪ್ರತಿವಾದಿಗಳ ಪರ ಕೆ.ವಿ.ಧನಂಜಯ, ಓಜಸ್ವಿ ಗೌಡ, ವೇಲನ್ ಸಲ್ಲಿಸಿದ ಉಭಯ ಪಕ್ಷಗಾರರ ವಾದ ಆಲಿಸುವ ಮನವಿಯನ್ನು ನ್ಯಾಯಾಧೀಶರು ಪುರಸ್ಕರಿಸಿದರು.

‘ನನ್ನ ವಿಡಿಯೊ ಕ್ಲಿಪ್ ಅನ್ನು ಚಿತ್ರ ಮತ್ತು ಟ್ರೇಲರ್‌ನಲ್ಲಿ ಅನಧಿಕೃತವಾಗಿ ಬಳಸಲಾಗಿದೆ’ ಎಂದು ಆರೋಪಿಸಿ ರಮ್ಯಾ ದಾವೆ ಸಲ್ಲಿಸಿದ್ದರು. ಈ ಸಂಬಂಧ ನ್ಯಾಯಾಲಯ ಜು.19ರಂದು ‘ಯೂ–ಟ್ಯೂಬ್ ಹಾಗೂ ಇತರೆ ಎಲ್ಲಾ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರ ಮಾಡಿರುವ ‘ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ’ ಚಿತ್ರದ ಟ್ರೇಲರ್‌ನಿಂದ ಅವರ ವಿಡಿಯೊ ತುಣುಕು ತೆಗೆದುಹಾಬೇಕು’ ಎಂದು ಚಿತ್ರದ ನಿರ್ಮಾಣ ಸಂಸ್ಥೆ ಗುಲ್‌ಮೊಹರ್ ಫಿಲ್ಮ್ ಪ್ರೈ.ಲಿಮಿಟೆಡ್ ಕಂಪನಿ ಹಾಗೂ ವಿತರಕ ಸಂಸ್ಥೆ ಜೀ ಎಂಟರ್‌ಟೈನ್ಮೆಂಟ್ ಎಂಟರ್‌ಪ್ರೈಸೆಸ್ ಪ್ರೈ.ಲಿಮಿಟೆಡ್ ಹಾಗೂ ದಾವೆಯ ಇತರೆ ಪ್ರತಿವಾದಿಗಳಿಗೆ ಇದೇ 19ರಂದು ಆದೇಶಿಸಿತ್ತು.

‘ಸರ್ಕಾರದ ಐದು ಗ್ಯಾರಂಟಿ ಲಂಚದಂತೆ’

ಪ್ರಜಾವಾಣಿ ವಾರ್ತೆ

ಹಾಸನ: ‘ಕಾಂಗ್ರೆಸ್ ಸರ್ಕಾರದ 5 ಗ್ಯಾರಂಟಿ ಒಂದು ತರಹದ ಲಂಚ. ಮತ ಪಡೆಯಲು ಲಂಚ ಕೊಟ್ಟಿದ್ದಾರೆ’ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಹೇಳಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ‘ಗ್ಯಾರಂಟಿಗಳ ಬಗ್ಗೆ ಈ ಹಿಂದೆಯೇ ಪ್ರತಿಕ್ರಿಯೆ ನೀಡಿದ್ದೇನೆ. ಇದರ ಹೊಣೆ ಜನರ ಮೇಲೆ, ತೆರಿಗೆ ಕಟ್ಟುವವರ ಮೇಲೆ. ಈಗಾಗಲೇ ವಿದ್ಯುತ್ ದರ ಹೆಚ್ಚು ಮಾಡಿದ್ದಾರೆ. ಮುಂದೆ ಬಹಳಷ್ಟು ಆರ್ಥಿಕ ತೊಂದರೆ ಬರಬಹುದು. ಅದನ್ನೆಲ್ಲ ಅಧಿಕಾರಕ್ಕೆ ಬರಲು ದುರ್ಬಳಕೆ ಮಾಡಿದ್ದಾರೆ’ ಎಂದರು.

‘ಪ್ರತಿಪಕ್ಷದ ನಾಯಕ ಇಲ್ಲದೇ ಇರುವುದಕ್ಕೂ ಅಧಿವೇಶನಕ್ಕೂ ಸಂಬಂಧವಿಲ್ಲ. ಸಂವಿಧಾನದಲ್ಲೂ ವಿರೋಧ ಪಕ್ಷದ ನಾಯಕನಿಲ್ಲದೆ ಕಲಾಪಗಳು ನಡೆಯಬಾರದು ಎಂದು ಉಲ್ಲೇಖಿಸಿಲ್ಲ, ಎರಡು ತಿಂಗಳಾದರೂ ಆ ಹುದ್ದೆಗೆ ಆಯ್ಕೆ ಮಾಡದೇ ಇರುವುದನ್ನು ನೋಡಿದರೆ, ಆ ನಿರ್ಧಾರಕ್ಕೆ ಬರಲು ಧೈರ್ಯ ಅವರಿಗೆ ಇಲ್ಲ ಎಂದು ಕಾಣುತ್ತದೆ. ಆದರೆ, ಕಲಾಪಗಳು ವಿರೋಧ ಪಕ್ಷದ ನಾಯಕನಿಲ್ಲದೆ ಮುಂದುವರಿಯಬಹುದು’ ಎಂದು ತಿಳಿಸಿದರು. ‘ಕೆಲ ಶಾಸಕರು ವಿಧಾನಸಭೆ ಉಪಸಭಾಧ್ಯಕ್ಷರ ಮೇಲೆ ವಿಧೇಯಕ ಪ್ರತಿಗಳನ್ನು ಹರಿದು ಬಿಸಾಡಿರುವುದು ಸಂಪೂರ್ಣ ಬೇಜವಾಬ್ದಾರಿ ವರ್ತನೆ. ವಿಧೇಯಕ ಕುರಿತು ಅಭಿಪ್ರಾಯ ವ್ಯಕ್ತಪಡಿಸುವ ವೇಳೆ, ನಿಮಗೆ ಸರಿ ಕಾಣದಿದ್ದರೆ ಅದಕ್ಕೆ ಬೇರೆ ದಾರಿ ಇರಬಹುದು, ಆದರೆ ಪ್ರತಿಭಟನೆ ಮಾಡಬಾರದು’ ಎಂದರು.

ನ್ಯಾ. ಪಾಲೆಕಂಡ ಪಿ.ಬೋಪಣ್ಣ ನಿಧನ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಾಲೆಕಂಡ ಪಿ. ಬೋಪಣ್ಣ (96) ಗುರುವಾರ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ ಒಬ್ಬ ಪುತ್ರಿ ಮತ್ತು ಮೂವರು ಪುತ್ರರಿದ್ದಾರೆ.

ಪಿ.ಪಿ.ಬೋಪಣ್ಣ

1927ರ ಏಪ್ರಿಲ್ 23ರಂದು ಜನಿಸಿದ್ದ ಬೋಪಣ್ಣ ಮದ್ರಾಸ್ ಕ್ರಿಶ್ಚಿಯನ್ ಕಾಲೇಜು ಮತ್ತು ಮದ್ರಾಸ್ ಕಾನೂನು ಕಾಲೇಜಿನಲ್ಲಿ ಪದವಿ ಪಡೆದು ಮದ್ರಾಸ್ ಹೈಕೋರ್ಟ್‌ನಲ್ಲಿ ವಕೀಲಿ ವೃತ್ತಿ ಆರಂಭಿಸಿದರು. ನಂತರ ಬೆಂಗಳೂರಿಗೆ ಮರಳಿದ ಅವರು, 1977ರ ನವೆಂಬರ್ 28ರಂದು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡು 1989ರಲ್ಲಿ ನಿವೃತ್ತಿ ಹೊಂದಿದ್ದರು.

’ಪಾಲೆಕಂಡ ಬೋಪಣ್ಣ ಕರ್ನಾಟಕ ಹೈಕೋರ್ಟ್ ಕಂಡ ಒಬ್ಬ ಅತ್ಯಂತ ಮೇಧಾವಿ, ನ್ಯಾಯವೇತ್ತರು. ನ್ಯಾಯಮೂರ್ತಿಯಾಗಿ ಅವರು ಭೂ ಸುಧಾರಣೆ ಕಾಯ್ದೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಸಾವಿರಾರು ಮಹತ್ವದ ತೀರ್ಪುಗಳನ್ನು ನೀಡಿದ್ದರು. ಶ್ರದ್ಧೆ ಮತ್ತು ಪರಿಶ್ರಮದ ಪ್ರತೀಕವಾಗಿದ್ದ ಅವರೊಬ್ಬ ಸಾರ್ವಕಾಲಿಕ ಶಿಸ್ತಿನ ಸಿಪಾಯಿಯಾಗಿದ್ದರು. ನ್ಯಾಯಾಂಗದ ಪ್ರಾಜ್ಞತೆಗೆ ಮಾದರಿಯಾಗಿದ್ದರು‘ ಎಂದು ಹಿರಿಯ ವಕೀಲರಾದ ಉದಯ ಹೊಳ್ಳ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಮತ್ತು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಸ್ಮರಿಸಿದ್ದಾರೆ.

ರಿಚ್ಮಂಡ್ ಟೌನ್‌ನಲ್ಲಿರುವ ಅವರ ನಿವಾಸದಲ್ಲಿ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಶುಕ್ರವಾರ (ಜು.21) ಸಂಜೆ 4 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ. ವಿವರಗಳಿಗೆ ಪುತ್ರ ಪಿ.ಬಿ. ಅಪ್ಪಯ್ಯ ಅವರ ದೂರವಾಣಿ ಸಂಖ್ಯೆ: 98450–15216

ರಾಜ್ಯದಿಂದ ಕೇಂದ್ರಕ್ಕೆ ಶಿಫಾರಸು

‘ಎಸ್‌ಟಿ ಪಟ್ಟಿಗೆ ಕುರುಬರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡದ (ಎಸ್‌ಟಿ) ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಿದೆ.

ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಈ ಶಿಫಾರಸು ಮಾಡಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್ ಅವರು ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯಕ್ಕೆ ಗುರುವಾರ(ಜುಲೈ 20) ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಮೈಸೂರಿನಲ್ಲಿ ಬುಡಕಟ್ಟು ಸಂಶೋಧನಾ ಸಂಸ್ಥೆ ನಡೆಸಿದ ಕುಲಶಾಸ್ತ್ರೀಯ ಅಧ್ಯಯನದ ವರದಿಯನ್ನು ಶಿಫಾರಸನ್ನು ಪತ್ರದ ಜೊತೆ ಲಗತ್ತಿಲಾಗಿದೆ.

ಮೈಸೂರು, ಚಾಮರಾಜನಗರ ಜಿಲ್ಲೆಯ ಕೆಲವು ಭಾಗಗಳಲ್ಲಿ ವಾಸಿಸುತ್ತಿರುವ ಕಾಡು ಕುರುಬರು, ಜೇನು ಕುರುಬರು ಎಸ್‌ಟಿ ಮೀಸಲಾತಿಯ ಸೌಲಭ್ಯ ಪಡೆಯುತ್ತಿದ್ದಾರೆ. ಉಳಿದ ಕುರುಬ ಸಮುದಾಯ ಪ್ರಸ್ತುತ ರಾಜ್ಯದ 2 ‘ಎ’ ಪಟ್ಟಿಯಲ್ಲಿದೆ.

ಪರಿಶಿಷ್ಟ ಪಂಗಡದ ಮೀಸಲಾತಿಗೆ ಒತ್ತಾಯಿಸಿ ಕನಕಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ನೇತೃತ್ವದಲ್ಲಿ 2022ರ ಜನವರಿ 15ರಂದು ಕಾಗಿನೆಲೆಯಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು. ಫೆ.7ರಂದು ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ನಡೆಸಿ, ಎಸ್‌ಟಿಗೆ ಸೇರಿಸುವಂತೆ ಹಕ್ಕೊತ್ತಾಯ ಮಾಡಿದ್ದರು. ಪಾದಯಾತ್ರೆಯಲ್ಲಿ ಅಂದಿನ ಬಿಜೆಪಿ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

‘ಬಂಡೆ ಕುರುಬ ಸೇರಿದಂತೆ ಇತರೆ ಉಪ ಜಾತಿಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಬೇಕು ಎಂಬ ಬೇಡಿಕೆ ಇದೆ. ಅದರ ಬಗ್ಗೆಯೂ ಚರ್ಚೆ ನಡೆದಿದೆ. ನಾಲ್ಕು ಜಿಲ್ಲೆಗಳಲ್ಲಿ ಕುಲಶಾಸ್ತ್ರೀಯ ಅಧ್ಯಯನ ನಡೆದಿದೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ ನಡೆಯಬೇಕಿದೆ. ಶಿಫಾರಸು ಬಂದ ಬಳಿಕ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಚುನಾವಣೆಗೂ ಮುನ್ನ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದರು.

‘ಕುರುಬರು ಭಾರತದ ಮೂಲ ನಿವಾಸಿಗಳು. 1868 ಮತ್ತು 1901ರ ಜನಗಣತಿಯಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗಿತ್ತು. ಸ್ವಾತಂತ್ರ್ಯ ನಂತರ ಕೈಬಿಡಲಾಗಿದೆ. ದೇವರಾಜ ಅರಸು ಆಡಳಿತದ ಅವಧಿಯಲ್ಲಿ ಜೇನು ಕುರುಬ ಮತ್ತು ಕಾಡು ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದ್ದರು. ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಎಸ್‌ಟಿ ಮೀಸಲಾತಿ ಸೌಲಭ್ಯ ಸಿಗುತ್ತಿದೆ’ ಎಂದು ಕುರುಬ ಸಮುದಾಯ ಪ್ರತಿಪಾದಿಸಿತ್ತು.

ಶಂಕಿತ ಉಗ್ರಗಾಮಿ ಮನೆಯಲ್ಲಿ 4 ಗ್ರೆನೇಡ್

ಒಂದನೇ ಪುಟದಿಂದ

‘ಈ ಬಗ್ಗೆ ಮನೆಯವರು ಕೇಳಿದ್ದಕ್ಕೆ, ಸ್ನೇಹಿತನ ಪಾರ್ಸೆಲ್ ಎಂಬುದಾಗಿ ಹೇಳಿ ಸುಮ್ಮನಾಗಿಸಿದ್ದ’ ಎಂದು ತಿಳಿಸಿವೆ.

‘ಗ್ರೆನೇಡ್ ತಂದುಕೊಟ್ಟಿದ್ದವ ಉತ್ತರ ಪ್ರದೇಶದವನು ಎಂದು ಗೊತ್ತಾಗಿದೆ. ಆತನ ಬಗ್ಗೆ ಪ್ರತ್ಯೇಕ ತಂಡ ಮಾಹಿತಿ ಸಂಗ್ರಹಿಸುತ್ತಿದೆ’ ಎಂದಿವೆ.

‘ಲಷ್ಕರ್–ಎ–ತಯಬಾ’ದ ದಕ್ಷಿಣ ಭಾರತದ ಕಮಾಂಡರ್’: ‘ಬೆಂಗಳೂರಿನಲ್ಲಿ 2008ರಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟದ ಆರೋಪಿಯಾಗಿರುವ ಟಿ. ನಜೀರ್ ಸದ್ಯ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾನೆ. ಈತ, ಲಷ್ಕರ್–ಎ–ತಯಬಾ ನಿಷೇಧಿತ ಉಗ್ರ ಸಂಘಟನೆಯ ದಕ್ಷಿಣ ಭಾರತದ ಕಮಾಂಡರ್ ಆಗಿದ್ದನೆಂಬ ಮಾಹಿತಿ ಲಭ್ಯವಾಗಿದೆ. ಈತನನ್ನು ಕಸ್ಟಡಿಗೆ ಪಡೆದು ತನಿಖೆ ನಡೆಸಲು ಸಿದ್ಧತೆ ನಡೆಸಲಾಗುತ್ತಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ದೇಶದ ಹಲವೆಡೆ ಸಂಭವಿಸಿದ್ದ ಸ್ಫೋಟ ಪ್ರಕರಣದ ಪ್ರಮುಖ ಆರೋಪಿಗಳ ಜೊತೆ ನಜೀರ್ ಗುರುತಿಸಿಕೊಂಡಿದ್ದ. ಧರ್ಮ ರಕ್ಷಣೆ ಹೆಸರಿನಲ್ಲಿ ಮುಸ್ಲಿಂ ಯುವಕರನ್ನು ಉಗ್ರ ಸಂಘಟನೆಗೆ ಸೇರಿಸುತ್ತಿದ್ದ. ಹಲವು ವರ್ಷಗಳ ಹಿಂದೆಯೇ ಪಾಕಿಸ್ತಾನಕ್ಕೂ ಹೋಗಿ ಬಂದಿರುವ ಈತ, ಅಲ್ಲಿಯೇ ಶಸ್ತ್ರಾಸ್ತ್ರ ಹಾಗೂ ಸ್ಫೋಟಕ ಬಳಕೆ ಬಗ್ಗೆ ತರಬೇತಿ ಪಡೆದಿದ್ದನೆಂದು ಗೊತ್ತಾಗಿದೆ.’

‘ಹೊರ ದೇಶಗಳಿಂದ ಭಾರತದೊಳಗೆ ಬಂದು ಭಯೋತ್ಪಾದನಾ ಕೃತ್ಯ ಎಸಗುವುದು ತುಂಬಾ ಕಷ್ಟ. ಇದನ್ನು ತಿಳಿದಿದ್ದ ನಜೀರ್, ಜೈಲಿಗೆ ಬರುತ್ತಿದ್ದ ಸ್ಥಳೀಯ ಮುಸ್ಲಿಂ ಯುವಕರ ಜೊತೆ ಒಡನಾಟ ಬೆಳೆಸಿಕೊಳ್ಳುತ್ತಿದ್ದ. ಆರ್ಥಿಕ ಸಹಾಯ ಹಾಗೂ ಇತರೆ ಸೌಲಭ್ಯ ನೀಡುವುದಾಗಿ ಹೇಳಿ, ಕಾನೂನುಬಾಹಿರ ಚಟುವಟಿಕೆಗಳಿಗೆ ಪ್ರಚೋದಿಸುತ್ತಿದ್ದ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಆರ್‌.ಟಿ.ನಗರದಲ್ಲಿ 2017ರಲ್ಲಿ ನಡೆದಿದ್ದ ಕೊಲೆ ಪ್ರಕರಣದಲ್ಲಿ ಜುನೈದ್ ಹಾಗೂ ಇತರರು, ಜೈಲು ಸೇರಿದ್ದರು. ಬಹುತೇಕ ಆರೋಪಿಗಳ ವಯಸ್ಸು 20ರಿಂದ 30 ವರ್ಷವಿತ್ತು. ಇಡೀ ತಂಡವನ್ನೇ ಪರಿಚಯ ಮಾಡಿಕೊಂಡಿದ್ದ ಈತ, ಎಲ್ಲರನ್ನೂ ಸಂಘಟನೆಗೆ ಸೇರಿಸಿದ್ದ. ಜಾಮೀನು ಮೇಲೆ ಆರೋಪಿಗಳು ಹೊರಗೆ ಬಂದ ಕೂಡಲೇ, ಹಲವೆಡೆ ತರಬೇತಿಯನ್ನೂ ಕೊಡಿಸಿದ್ದ’ ಎಂದು ಹೇಳಿವೆ.

‘ಸದ್ಯ ಐವರು ಶಂಕಿತರು ಮಾತ್ರ ಸಿಕ್ಕಿಬಿದ್ದಿದ್ದಾರೆ. ಜೊತೆಗೆ, ಮತ್ತೊಬ್ಬ ಪ್ರಮುಖ ಆರೋಪಿ ಜುನೈದ್ ವಿದೇಶದಲ್ಲಿದ್ದಾನೆ. ಆತನನ್ನೂ ಬಂಧಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಪರಾರಿಗೆ ಯತ್ನಿಸಿ ಸಿಕ್ಕಿಬಿದ್ದಿದ್ದ: ‘2008ರಲ್ಲಿ ಬೆಂಗಳೂರಿನಲ್ಲಿ ಬಾಂಬ್ ಸ್ಫೋಟವಾದ ನಂತರ ನಜೀರ್ ನಗರ ತೊರೆದಿದ್ದ. ಪಶ್ಚಿಮ ಬಂಗಾಳದ ಗಡಿ ಮೂಲಕ ಬಾಂಗ್ಲಾದೇಶಕ್ಕೆ ಪರಾರಿಯಾಗಲು ಮುಂದಾಗಿದ್ದ. ಇದೇ ವೇಳೆ ಗಡಿ ಭದ್ರತಾ ಪಡೆ ಸಿಬ್ಬಂದಿ ಕೈಗೆ ಸಿಕ್ಕಿಬಿದ್ದಿದ್ದ. ನಂತರ, ಈತನನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದರು’ ಎಂದು ಮೂಲಗಳು ಹೇಳಿವೆ.

‘ಪೊಲೀಸರೇ ಗ್ರೆನೇಡ್ ತಂದಿಟ್ಟಿದ್ದಾರೆ’

‘ನನ್ನ ಸಹೋದರ ಯಾರ ತಂಟೆಗೂ ಹೋಗುತ್ತಿರಲಿಲ್ಲ. ಅಲ್ಯುಮಿನಿಯಂ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತ ಜೀವನ ಸಾಗಿಸುತ್ತಿದ್ದ. ಈತನನ್ನು ಪೊಲೀಸರು ಏಕಾಏಕಿ ಬಂಧಿಸಿದ್ದಾರೆ. ಜೊತೆಗೆ, ಪೊಲೀಸರೇ ಗ್ರೆನೇಡ್ ತಂದು ಮನೆಯಲ್ಲಿಟ್ಟು ಜಪ್ತಿ ಎನ್ನುತ್ತಿದ್ದಾರೆ’ ಎಂದು ಶಂಕಿತ ಜಾಹೀದ್ ತಬ್ರೇಜ್‌ನ ಸಹೋದರ ಅವೇಜ್ ದೂರಿದರು.

ಪೊಲೀಸರು ದಾಳಿ ಮಾಡಿದ್ದ ಸಂದರ್ಭದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವೇಜ್, ‘2017ರಲ್ಲಿ ಕೊಲೆ ಪ್ರಕರಣದಲ್ಲಿ ಜೈಲಿಗೆ ಹೋಗಿ ಬಂದ ನಂತರ ನನ್ನ ಸಹೋದರ ಯಾರ ಸಂಪರ್ಕದಲ್ಲೂ ಇರಲಿಲ್ಲ. ಜಪ್ತಿ ಮಾಡಲಾಗಿದೆ ಎನ್ನಲಾದ ಗ್ರೆನೇಡ್ ನಮ್ಮ ಮನೆಯಲ್ಲಿ ಇರಲಿಲ್ಲ. ಅವುಗಳನ್ನು ನಾವ್ಯಾಕೆ ಇಟ್ಟುಕೊಳ್ಳುತ್ತೇವೆ’ ಎಂದು ಪ್ರಶ್ನಿಸಿದರು.

ಮಹಾರಾಷ್ಟ್ರದ ರಾಯಗಡ ಜಿಲ್ಲೆಯಲ್ಲಿ ದುರಂತ • ಅವಶೇಷಗಳಡಿ 80ರಿಂದ 100 ಮಂದಿ ಸಿಲುಕಿರುವ ಶಂಕೆ

ಭೂಕುಸಿತ: 16 ಮಂದಿ ಜೀವಂತ ಸಮಾಧಿ

ಪ್ರಜಾವಾಣಿ ವಾರ್ತೆ

ಭಾರಿ ಭೂಕುಸಿತ ಸಂಭವಿಸಿರುವ ಮಹಾರಾಷ್ಟ್ರದ ರಾಯಗಡ ಜಿಲ್ಲೆಯ ಇರ್ಶಾಲವಾಡಿ ಗ್ರಾಮದಲ್ಲಿ ಎನ್‌ಡಿಆರ್‌ಎಫ್ ಸಿಬ್ಬಂದಿಯಿಂದ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆ ಬಿರುಸಿನಿಂದ ಸಾಗಿದೆ (ಎಡಚಿತ್ರ). ದುಃಖತಪ್ತರಾಗಿ ಕುಳಿತಿರುವ ಸಂತ್ರಸ್ತ ಕುಟುಂಬದ ಸದಸ್ಯರು —ಪಿಟಿಐ ಚಿತ್ರ

ರಾಯಗಡ/ಮುಂಬೈ: ಮಹಾರಾಷ್ಟ್ರದ ಕರಾವಳಿ ಕೊಂಕಣ ಪ್ರದೇಶಕ್ಕೆ ಸೇರಿದ ರಾಯಗಡ ಜಿಲ್ಲೆಯಲ್ಲಿ ಬುಧವಾರ ರಾತ್ರಿ ಸಂಭವಿಸಿದ ಭಾರಿ ಭೂಕುಸಿತದಲ್ಲಿ 16 ಬುಡಕಟ್ಟು ಜನರು ಜೀವಂತ ಸಮಾಧಿಯಾಗಿದ್ದಾರೆ. ಅವಶೇಷಗಳಡಿ 80–100 ಮಂದಿ ಸಿಲುಕಿರುವ ಶಂಕೆಯಿದ್ದು, ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆ ಭರದಿಂದ ಸಾಗಿದೆ.

ರಾಯಗಡ ಜಿಲ್ಲೆಯ ಖಲಾಪುರ ತಾಲ್ಲೂಕಿನ ಇರ್ಶಾಲವಾಡಿ ಗ್ರಾಮದಲ್ಲಿ ಈ ದುರಂತ ಸಂಭವಿಸಿದೆ. ಧಾರಾಕಾರವಾಗಿ ಸುರಿದ ಮಳೆಯೇ ಅವಘಡಕ್ಕೆ ಕಾರಣವಾಗಿದೆ. ಈ ಹಳ್ಳಿಯಲ್ಲಿ 48 ಮನೆಗಳಿದ್ದು, ಈ ಪೈಕಿ 17 ಮನೆಗಳು ನೆಲಸಮಗೊಂಡಿವೆ. ಒಟ್ಟು 288 ಜನರು ಇಲ್ಲಿ ವಾಸಿಸುತ್ತಿದ್ದರು.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ನಾಲ್ಕು ತಂಡಗಳು, ರಾಜ್ಯ ವಿಪತ್ತು ನಿರ್ವಹಣಾ ತಂಡಗಳು (ಎಸ್‌ಡಿಆರ್‌ಎಫ್), ಮಹಾರಾಷ್ಟ್ರ ಪರ್ವತಾರೋಹಿ ರಕ್ಷಣಾ ತಂಡ, ಅಗ್ನಿಶಾಮಕ ದಳದ ಸಿಬ್ಬಂದಿಯು ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ. ಚಾರಣಿಗರು, ಸ್ಥಳೀಯ ಅಧಿಕಾರಿಗಳು ಇದಕ್ಕೆ ಕೈಜೋಡಿಸಿದ್ದಾರೆ. ಪುಣೆಯಿಂದಲೂ ರಕ್ಷಣಾ ತಂಡ ಕಳುಹಿಸಲಾಗಿದೆ. ನಗರ ಮತ್ತು ಕೈಗಾರಿಕಾ ಅಭಿವೃದ್ಧಿ ನಿಗಮದ 500ಕ್ಕೂ ಹೆಚ್ಚು ನೌಕರರನ್ನು ಕಾರ್ಯಾಚರಣೆಗೆ ನಿಯೋಜಿಸಲಾಗಿದೆ.

ಮುಂಬೈ ಮಹಾನಗರಿಗೆ ಕುಡಿಯುವ ನೀರು ಪೂರೈಸುವ ಮೋರ್ಬೆ ಜಲಾಶಯಕ್ಕೆ ಆರು ಕಿ.ಮೀ ಸನಿಹದಲ್ಲಿಯೇ ಈ ಹಳ್ಳಿಯಿದೆ. ಬುಡಕಟ್ಟು ಜನರೇ ಹೆಚ್ಚಿರುವ ಈ ಗ್ರಾಮವು ಸುತ್ತಲೂ ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಕಚ್ಚಾ ರಸ್ತೆ ಮೂಲಕವೇ ಇಲ್ಲಿಗೆ ತೆರಳಬೇಕಿದೆ.

ಕಳೆದ ಮೂರು ದಿನಗಳಲ್ಲಿ ಈ ಭಾಗದಲ್ಲಿ 499 ಮಿ.ಮೀ ಮಳೆ ಸುರಿದಿದೆ. 15ರಿಂದ 20 ಅಡಿ ಎತ್ತರದವರೆಗೆ ಕಲ್ಲು, ಮಣ್ಣಿನ ರಾಶಿ ಬಿದ್ದಿದೆ. ಮತ್ತೊಂಡೆದೆ ಮಳೆಯೂ ನಿಂತಿಲ್ಲ. ಹಾಗಾಗಿ, ರಕ್ಷಣಾ ಪರಿಕರಗಳನ್ನು ತೆಗೆದುಕೊಂಡು ಹೋಗುವುದು ಸವಾಲಾಗಿದೆ.

> ಎನ್‌ಡಿಆರ್‌ಎಫ್ ತಂಡಗಳು ಸ್ಥಳೀಯ ಆಡಳಿತದ ಜೊತೆಗೂಡಿ ರಕ್ಷಣಾ ಕಾರ್ಯದಲ್ಲಿ ತೊಡಗಿವೆ. ಕಾರ್ಯಾಚರಣೆಗೆ ಕೇಂದ್ರವು ಅಗತ್ಯ ನೆರವು ನೀಡಲಿದೆ
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಕಾರ್ಯಾಚರಣೆಗೆ ನೆರವಾಗಲು ಭಾರತೀಯ ವಾಯುಪಡೆಗೆ ಸೇರಿದ ಎರಡು ಹೆಲಿಕಾಪ್ಟರ್‌ಗಳು ಕೂಡ ಸನ್ನದ್ಧವಾಗಿವೆ. ಗ್ರಾಮದ ಬಳಿಕ ತಾತ್ಕಾಲಿಕ ಹೆಲಿಪ್ಯಾಡ್ ನಿರ್ಮಿಸಲಾಗಿದೆ. ಆದರೆ, ಪ್ರತಿಕೂಲ ಹವಾಮಾನದಿಂದ ಅಲ್ಲಿಗೆ ತೆರಳಲು ಸಾಧ್ಯವಾಗುತ್ತಿಲ್ಲ. ದುರಂತದ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೂ ಮಾಹಿತಿ ನೀಡಲಾಗಿದೆ ಎಂದು ಮಹಾರಾಷ್ಟ್ರ ಸರ್ಕಾರ ತಿಳಿಸಿದೆ.

ಕಾರ್ಯಾಚರಣೆ ಸ್ಥಗಿತ: ಸ್ಥಳದಲ್ಲಿ ಎಡಬಿಡದೆ ಮಳೆ ಸುರಿಯುತ್ತಿದೆ. ಮತ್ತೆ ಭೂಕುಸಿತ ಸಂಭವಿಸುವ ಸಾಧ್ಯತೆ ಇದೆ. ಜೊತೆಗೆ, ಕತ್ತಲು ಆವರಿಸುವುದರಿಂದ ಸಂಜೆ 5ಕ್ಕೆ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ. ಶುಕ್ರವಾರ ಬೆಳಿಗ್ಗೆ 5ಗಂಟೆಯಿಂದ ಮತ್ತೆ ಆರಂಭಿಸಲಾಗುತ್ತದೆ ಎಂದು ಎನ್‌ಡಿಆರ್‌ಎಫ್ ತಿಳಿಸಿದೆ.

153 ಮಂದಿ ಮೃತ: ಪುಣೆ ಜಿಲ್ಲೆಯ ಅಂಬೆಗಾಂವ್ ತಾಲ್ಲೂಕಿನ ಮಲಿನ್ ಗ್ರಾಮದಲ್ಲಿ 2014ರ ಜುಲೈ 30ರಂದು ಸಂಭವಿಸಿದ ಭೂಕುಸಿತದಲ್ಲಿ 153 ಮಂದಿ ಮೃತಪಟ್ಟಿದ್ದರು. ಬುಡಕಟ್ಟು ಜನರೇ ವಾಸಿಸುತ್ತಿದ್ದ ಈ ಗ್ರಾಮದ 50 ಕುಟುಂಬಗಳ ಬದುಕನ್ನು ಮಳೆ ಕಸಿದುಕೊಂಡಿತ್ತು.

ದುರಂತ ಸ್ಥಳಕ್ಕೆ ಸಿ.ಎಂ ಶಿಂದೆ ಭೇಟಿ: ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಗುರುವಾರ ಬೆಳಿಗ್ಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಕಾರ್ಯಾಚರಣೆಯನ್ನು ಪರಿಶೀಲಿಸಿದರು. ರಕ್ಷಣಾ ಕಾರ್ಯ ಚುರುಕುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಮೃತಪಟ್ಟವರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ಘೋಷಿಸಿದ ಅವರು, ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದರು.

ಗ್ರಾಮವು ಭೂಕುಸಿತದ ಅಪಾಯ ಪಟ್ಟಿಯಲ್ಲಿ ಇಲ್ಲ. 103 ಜನರು ಜೀವಂತವಾಗಿದ್ದಾರೆ. ಕೆಲವರು ಭತ್ತದ ಗದ್ದೆಗಳಲ್ಲಿ ಕೆಲಸಕ್ಕೆ ತೆರಳಿದ್ದಾರೆ. ಮಕ್ಕಳು ಶಾಲೆಗಳಿಗೆ ಹೋಗಿದ್ದಾರೆ. ಉಳಿದವರ ಪತ್ತೆ ಹಚ್ಚುವ ಕಾರ್ಯ ನಡೆದಿದೆ ಎಂದು ತಿಳಿಸಿದರು.

‘ಸಂತ್ರಸ್ತರಿಗೆ ಸುರಕ್ಷಿತ ಸ್ಥಳದಲ್ಲಿ ತಾತ್ಕಾಲಿಕ ಪುನರ್ವಸತಿ ಕಲ್ಪಿಸಲಾಗಿದೆ. ಅವರಿಗೆ ಶಾಶ್ವತ ಪುನರ್ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರ ಬದ್ಧವಾಗಿದೆ. ಈ ಕುರಿತು ಜಿಲ್ಲಾಡಳಿತದ ಜೊತೆಗೆ ಚರ್ಚಿಸಿದ್ದೇನೆ’ ಎಂದು ತಿಳಿಸಿದರು.

ಇರ್ಶಾಲ ದೇವಿಗೆ ಮೊರೆಯಿಟ್ಟ ಗ್ರಾಮಸ್ಥರು

ಗ್ರಾಮಸ್ಥರಿಗೆ ಇರ್ಶಾಲ ದೇವಿಯೇ ಆರಾಧ್ಯ ದೇವತೆ. ಬೆಟ್ಟದ ತಪ್ಪಲಿನಲ್ಲಿರುವ ಈ ಪುಟ್ಟ ಗುಡಿ ಮುಂದೆ ನಿತ್ಯ ಕೈಮುಗಿದು ತಮ್ಮ ಇಷ್ಟಾರ್ಥ ಸಿದ್ಧಿಸುವಂತೆ ಬೇಡುತ್ತಿದ್ದರು.

ದುರಂತದ ಬಳಿಕ ಗುಡಿ ಮುಂದೆ ನೆರೆದಿದ್ದ ಜನರು ಮಣ್ಣಿನಡಿ ಸಿಲುಕಿರುವ ಕುಟುಂಬದ ಸದಸ್ಯರನ್ನು ಬದುಕಿಸುವಂತೆ ಪ್ರಾರ್ಥಿಸುತ್ತಿದ್ದ ದೃಶ್ಯವು ನೋಡುಗರ ಕಣ್ಣಾಲಿಗಳನ್ನು ತೇವಗೊಳಿಸಿತು. ಭೂಕುಸಿತದಿಂದ ಗುಡಿಗೂ ಹಾನಿಯಾಗಿದೆ.

ಗ್ರಾಮದಿಂದ ಅನತಿ ದೂರದಲ್ಲಿರುವ ಆಶ್ರಮ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿನಿ ಜಯಶ್ರೀ ದುರಂತದ ಸುದ್ದಿ ತಿಳಿದು ಗ್ರಾಮಕ್ಕೆ ಓಡಿ ಬಂದಿದ್ದಳು. ತನ್ನ ಅಪ್ಪ, ಅಮ್ಮ, ಅಜ್ಜ, ಅಜ್ಜಿ, ಒಡಹುಟ್ಟಿದವರನ್ನು ಕಳೆದುಕೊಂಡಿದ್ದ ಆಕೆ ಗೋಳಿಟ್ಟಳು.

‘ನನ್ನ ಇಡೀ ಕುಟುಂಬವೇ ಮಣ್ಣಿನಡಿ ಸಿಲುಕಿದೆ. ಅವರನ್ನು ರಕ್ಷಿಸಿ’ ಎಂದು ಬಾಳಿನ ಮುಸ್ಸಂಜೆಯಲ್ಲಿದ್ದ ವೃದ್ಧೆಯೊಬ್ಬರು ಗೋಗೆರೆಯುತ್ತಿದ್ದರು. ತನ್ನ ಮಕ್ಕಳು ಮತ್ತು ಕುಟುಂಬದವರ ಬಗ್ಗೆ ಕಾರ್ಯಾಚರಣೆಯಲ್ಲಿ ತೊಡಗಿದ್ದ ಸಿಬ್ಬಂದಿ ಬಳಿ ಅವರು ವಿಚಾರಿಸುತ್ತಿದ್ದ ದೃಶ್ಯ ಮನಕಲಕುತ್ತಿತ್ತು.

‘ನಾನು ಗಾಢನಿದ್ರೆಗೆ ಜಾರಿದ್ದೆ. ಶಬ್ದದಿಂದ ಎಚ್ಚರಗೊಂಡಾಗ ಸುತ್ತಲೂ ಕಲ್ಲುಮಣ್ಣು ಆವರಿಸಿತ್ತು. ನನ್ನ ಪಕ್ಕದಲ್ಲಿಯೇ ಇದ್ದ ಹೆಂಡತಿ, ಮಕ್ಕಳು ಹರಸಾಹಸಪಟ್ಟು ಮನೆಯಿಂದ ಹೊರಗೆ ಬಂದೆವು. ಆ ಕಗ್ಗತ್ತಲಿನಲ್ಲಿ ಜನರ ನರಳಾಟವಷ್ಟೇ ಕೇಳಿಸುತ್ತಿತ್ತು. ಆದರೆ, ಏನನ್ನೂ ಮಾಡಲಾಗದೆ ನಾನು ಅಸಹಾಯಕನಾಗಿದ್ದೆ’ ಎಂದು ಹೇಳಿದ ಬದುಕುಳಿದ ವ್ಯಕ್ತಿಯೊಬ್ಬರು, ಕುಸಿದು ಬಿದ್ದಿರುವ ತನ್ನ ಸೂರಿನತ್ತ ದೃಷ್ಟಿನೆಟ್ಟು ಕಣ್ಣೀರಿಟ್ಟರು.

ಜಿಲ್ಲಾಡಳಿತವು ಸಂತ್ರಸ್ತರಿಗೆ ತಾತ್ಕಾಲಿಕ ಶಿಬಿರ ನಿರ್ಮಿಸಿದ್ದು, ಬಟ್ಟೆ ಹಾಗೂ ಆಹಾರ ಪೊಟ್ಟಣಗಳನ್ನು ಪೂರೈಸುತ್ತಿದೆ. ಸ್ಥಳಕ್ಕೆ ಪ್ರತಿಪಕ್ಷಗಳ ನಾಯಕರು ಭೇಟಿ ನೀಡಿ ಪರಿಶೀಲಿಸಿದರು.

ಮುಂಬೈ: ಇಂದು ಮಳೆ ಸಾಧ್ಯತೆ

ಮುಂಬೈ (ಪಿಟಿಐ): ಗುರುವಾರ ಬೆಳಿಗ್ಗೆ 8ಕ್ಕೆ ಮುಕ್ತಾಯಗೊಂಡ ಹವಾಮಾನ ವರದಿ ಅನ್ವಯ 24 ಗಂಟೆಗಳಲ್ಲಿ ಮುಂಬೈನಲ್ಲಿ 100 ಮಿ.ಮೀ ಮಳೆ ಸುರಿದಿದೆ. ಕರಾವಳಿ ಭಾಗದ ರಾಯಗಡ ಮತ್ತು ರತ್ನಗಿರಿ ಜಿಲ್ಲೆಯಲ್ಲಿ ದಾಖಲೆ ಮಳೆ ಸುರಿದಿದೆ.

ಶುಕ್ರವಾರ ಕೂಡ ಮುಂಬೈ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಧಾರಾಕಾರ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ಹಾಗಾಗಿ, ಅನಗತ್ಯವಾಗಿ ಜನರು ಮನೆಯಿಂದ ಹೊರಗೆ ಬರಬಾರದು ಎಂದು ಸರ್ಕಾರ ಕೋರಿದೆ.

ಮಳೆಗೆ ಮುಂಬೈ ನಗರಿ ಅಸ್ತವ್ಯಸ್ತಗೊಂಡಿತ್ತು. ತಗ್ಗುಪ್ರದೇಶಗಳು ಜಲಾವೃತಗೊಂಡಿದ್ದು, ಸ್ಥಳೀಯ ರೈಲು ಸೇವೆಯಲ್ಲಿ ವ್ಯತ್ಯಯಗೊಂಡಿದೆ.

ಪುಣೆ ಜಿಲ್ಲೆಯಲ್ಲಿ ಶುಕ್ರವಾರ ಮತ್ತು ಶನಿವಾರ ಶಾಲಾ, ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಕೆಲವು ಭಾಗಗಳಲ್ಲಿ ಗುರುವಾರವೂ ಶಾಲೆಗಳನ್ನು ತೆರೆದಿರಲಿಲ್ಲ. ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಬ್ಲಾಕ್‌ವಾರು ಶಿಕ್ಷಣ ಅಧಿಕಾರಿಗಳಿಗೆ ಜಿಲ್ಲಾಡಳಿತ ಸೂಚಿಸಿದೆ.

ಚಂದ್ರನ ಕಕ್ಷೆಗೆ ನೌಕೆ ಬದಲಾವಣೆ ಇನ್ನೊಂದು ಹೆಜ್ಜೆಯಷ್ಟೇ ಬಾಕಿ

ಬೆಂಗಳೂರು: ಭೂಕಕ್ಷೆಯಲ್ಲಿ ಪರಿಭ್ರಮಿಸುತ್ತಿರುವ ‘ಚಂದ್ರಯಾನ 3’ರ ಗಗನನೌಕೆಯ ಕಕ್ಷೆ ಬದಲಿಸುವ ನಾಲ್ಕನೇ ಹಂತದ ಪ್ರಕ್ರಿಯೆಯು ಗುರುವಾರ ಯಶಸ್ವಿಯಾಗಿದ್ದು, ಚಂದ್ರನ ಕಕ್ಷೆ ಪ್ರವೇಶಿಸಲು ಇನ್ನೊಂದು ಹಂತವಷ್ಟೇ ಬಾಕಿ ಉಳಿದಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಿಳಿಸಿದೆ.

ಇಸ್ರೊದ ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ) ಕೇಂದ್ರದಿಂದ ನೌಕೆಗೆ ಅಗತ್ಯ ನೂಕುಬಲ ನೀಡುವ ನಾಲ್ಕನೇ ಹಂತದ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ ಎಂದು ಹೇಳಿದೆ. ಚಂದ್ರನ ದಕ್ಷಿಣ ಧ್ರುವದತ್ತ ತಲುಪಲು ನೌಕೆಗೆ ಅಗತ್ಯವಿರುವ ನೂಕುಬಲ ನೀಡುವ ಪ್ರಕ್ರಿಯೆಗಳು ಯಶಸ್ವಿಯಾಗಿ ನಡೆಯುತ್ತಿವೆ. ಐದನೇ ಹಂತದ ಪ್ರಕ್ರಿಯೆಯು ಜುಲೈ 25ರಂದು ಮಧ್ಯಾಹ್ನ 2ರಿಂದ 3ಗಂಟೆ ನಡುವೆ ನಡೆಯಲಿದೆ ಎಂದು ವಿವರಿಸಿದೆ.

ಜುಲೈ 31ರಂದು ನಡೆಯುವ ಆರನೇ ಹಂತದ ಪ್ರಕ್ರಿಯೆ ಮೂಲಕ ಚಂದ್ರನ ಕಕ್ಷೆಗೆ ಗಗನನೌಕೆಯನ್ನು ಸೇರಿಸುವ ಕಾರ್ಯ ಆರಂಭವಾಗಲಿದೆ. ಆಗಸ್ಟ್ 23ರಂದು ಚಂದಿರನ ಅಂಗಳದಲ್ಲಿ ಲ್ಯಾಂಡರ್ ಅನ್ನು ಸುರಕ್ಷಿತವಾಗಿ ‘ಸಾಫ್ಟ್ ಲ್ಯಾಂಡಿಂಗ್’ ಮಾಡಲಾಗುತ್ತದೆ ಎಂದು ತಿಳಿಸಿದೆ.

ಕುರುವೈ ಬೆಳೆಗೆ ಕಾವೇರಿ ನೀರು ಕೇಂದ್ರದ ಮಧ್ಯಪ್ರವೇಶಕ್ಕೆ ಮನವಿ

ಎಂ.ಕೆ. ಸ್ಟಾಲಿನ್

ಚೆನ್ನೈ (ಪಿಟಿಐ): ತಮಿಳುನಾಡಿಗೆ ನೀಡಬೇಕಾದ ಕಾವೇರಿ ನೀರಿನ ಪಾಲನ್ನು ಕರ್ನಾಟಕ ಕೊಟ್ಟಿಲ್ಲ. ಈಗಲೇ ನೀರು ಹರಿಸಿದರೆ ಮಾತ್ರ ಕುರುವೈ (ಅಲ್ಪಾವಧಿ) ಬೆಳೆ ಉಳಿಸಬಹುದು. ಹಾಗಾಗಿ ಈ ವಿಷಯದಲ್ಲಿ ತಕ್ಷಣ ಮಧ್ಯಪ್ರವೇಶಿಸುವಂತೆ ತಮಿಳುನಾಡು ಸರ್ಕಾರವು ಕೇಂದ್ರಕ್ಕೆ ಮನವಿ ಮಾಡಿದೆ.

ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಪತ್ರ ಬರೆದಿರುವ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ತಮಿಳುನಾಡಿನ ಕಾವೇರಿ ಮುಖಜಭೂಮಿ ಪ್ರದೇಶದ ರೈತರಿಗೆ ಅಲ್ಪಾವಧಿಯ ಕುರುವೈ ಬೆಳೆ ನಿರ್ಣಾಯಕವಾಗಿದೆ. ಈ ಅವಧಿಯಲ್ಲಿ ನಿಗದಿಪಡಿಸಿರುವ 26.32 ಟಿಎಂಸಿ ಅಡಿ ನೀರಿನ ಬದಲಿಗೆ ಜೂನ್ 1 ರಿಂದ ಜುಲೈ 17 ರವರೆಗೆ ಅಂತರರಾಜ್ಯ ಗಡಿ ಬಿಳಿಗುಂಡ್ಲುವಿನಲ್ಲಿ 3.78 ಟಿಎಂಸಿ ಅಡಿ ನೀರು ಮಾತ್ರ ಬಂದಿದೆ. ಇದರಿಂದ 22.54 ಟಿಎಂಸಿ ಅಡಿ ನೀರಿನ ಕೊರತೆ ಉಂಟಾಗಿದೆ ಎಂದು ಹೇಳಿದ್ದಾರೆ.

ಸಕಾಲದಲ್ಲಿ ಕುರುವೈ ಬೆಳೆ ಬೆಳೆಯಲು ಅನುಕೂಲವಾಗುವಂತೆ ಈ ವರ್ಷ ಜೂನ್ 12ರಂದು ತಮಿಳುನಾಡಿನ ಮೆಟ್ಟೂರು ಜಲಾಶಯದಿಂದ ನೀರು ಬಿಡಲಾಗಿದೆ. ನೈರುತ್ಯ ಮಾನ್ಸೂನ್ ವಿಳಂಬವಾಗಿದ್ದರೂ, ಜುಲೈನಲ್ಲಿ ವೇಗ ಪಡೆದುಕೊಂಡಿದೆ. ಆದರೆ, ಕರ್ನಾಟಕ ಎರಡೂ ಜಲಾಶಯಗಳಿಂದ ನೀರು ಹರಿಸಿಲ್ಲ. ಇದರ ಪರಿಣಾಮ ಮೆಟ್ಟೂರು ಜಲಾಶಯದಲ್ಲಿನ ನೀರಿನ ಸಂಗ್ರಹ ಕ್ಷೀಣಿಸುತ್ತಿದೆ ಮತ್ತು ಪ್ರಸ್ತುತ ಸಂಗ್ರಹವು ಸುಮಾರು 20 ದಿನಗಳವರೆಗೆ ಮಾತ್ರ ನೀರಾವರಿಗೆ ಬಳಸಿಕೊಳ್ಳಬಹುದು ಎಂದು ಸ್ಟಾಲಿನ್ ಮಾಹಿತಿ ನೀಡಿದ್ದಾರೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕರ್ನಾಟಕ ತಕ್ಷಣ ನೀರು ಬಿಟ್ಟರೆ ಮಾತ್ರ ಕುರುವೈ ಬೆಳೆ ಉಳಿಸಬಹುದು. ಆದ್ದರಿಂದ, ಈ ವಿಷಯದ ಬಗ್ಗೆ ಕೇಂದ್ರ ಕೂಡಲೇ ಮಧ್ಯಪ್ರವೇಶಿಸಬೇಕು. ಸುಪ್ರೀಂ ಕೋರ್ಟ್ ಸೂಚಿಸಿದ ಮಾಸಿಕ ವೇಳಾಪಟ್ಟಿ ಪಾಲಿಸಲು ಕರ್ನಾಟಕಕ್ಕೆ ನಿರ್ದೇಶನ ನೀಡುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ (ಸಿಡಬ್ಲ್ಯುಎಂಎ) ನಿರ್ದೇಶಿಸಬೇಕು ಎಂದು ಮನವಿ ಮಾಡಿದ್ದಾರೆ.

ಕರ್ನಾಟಕದಿಂದ ನೀರು ಬಿಡಲು ಅಗತ್ಯ ಕಾರ್ಯವಿಧಾನ ಜಾರಿಗೆ ತರಲು ಸಿಡಬ್ಲ್ಯುಎಂಎಗೆ ಸಲಹೆ ನೀಡಲಾಗುವುದು ಎಂದು ಕೇಂದ್ರ ಸಚಿವರು ತಮಿಳುನಾಡು ಜಲಸಂಪನ್ಮೂಲ ಸಚಿವ ದುರೈಮುರುಗನ್ ಅವರಿಗೆ ಭರವಸೆ ನೀಡಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

‘ಜಾಗ್ವಾರ್’ ನುಗ್ಗಿ 9 ಸಾವು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್‌ನ ಅಹಮದಾಬಾದ್ ನಗರದ ಸರ್ಖೇಜ್-ಗಾಂಧಿನಗರ ಹೆದ್ದಾರಿಯಲ್ಲಿ ಬುಧವಾರ ತಡರಾತ್ರಿ ಸಂಭವಿಸಿದ ಅಪಘಾತದ ಸ್ಥಳದಲ್ಲಿ ಸೇರಿದ್ದ ಜನರ ಮೇಲೆ ಅತಿವೇಗವಾಗಿ ಚಲಿಸುತ್ತಿದ್ದ ಐಷಾರಾಮಿ ಕಾರು ನುಗ್ಗಿ 9 ಮಂದಿ ಮೃತಪಟ್ಟಿದ್ದಾರೆ. 13 ಮಂದಿ ಗಾಯಗೊಂಡಿದ್ದಾರೆ.

ಕಾರೊಂದು ಸರಕು ಸಾಗಣೆ ವಾಹನಕ್ಕೆ ಹಿಂಬದಿಯಿಂದ ಡಿಕ್ಕಿ ಹೊಡೆದಿತ್ತು. ಗಾಯಾಳುಗಳ ರಕ್ಷಣೆಗೆ ಧಾವಿಸಿದ್ದ ಪೊಲೀಸರು ಹಾಗೂ ದಾರಿಹೋಕರು, ಆಸ್ಪತ್ರೆಗೆ ಸಾಗಿಸಲು ನೆರವಾಗುತ್ತಿದ್ದರು. ಉಳಿದ ಕೆಲವರು ನೋಡುತ್ತಾ ನಿಂತಿದ್ದರು. ಈ ವೇಳೆ ಜಾಗ್ವಾರ್ ಕಾರು ಗುಂಪಿನ ಮೇಲೆ ನುಗ್ಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೊದಲ ಅಪಘಾತ ಸಂಭವಿಸಿದ ವೇಳೆ ಘಟನಾ ಸ್ಥಳಕ್ಕೆ ರಕ್ಷಣೆಗಾಗಿ ತೆರಳಿದ್ದ ಇಬ್ಬರು ಪೊಲೀಸರು ಹಾಗೂ ಒಬ್ಬ ಗೃಹರಕ್ಷಕ ಸಿಬ್ಬಂದಿ ಕೂಡ ಮೃತಪಟ್ಟವರಲ್ಲಿ ಇದ್ದಾರೆ.

ಅವಘಡದಿಂದ ಕೋಪೋದ್ರಿಕ್ತಗೊಂಡ ಜನರು ಚಾಲಕ ತಾತ್ಯ ಪಟೇಲ್ ಎಂಬವರನ್ನು ಕಾರಿನಿಂದ ಹೊರಗೆ ಎಳೆದುಕೊಂಡು ಥಳಿಸಿದ್ದಾರೆ. ಆ ವ್ಯಕ್ತಿ ಗುಂಪಿನತ್ತ ಕೈಮುಗಿದು ಕ್ಷಮೆ ಕೋರುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಕಾರು ಗುದ್ದಿದ ರಭಸಕ್ಕೆ ಮೃತದೇಹಗಳು 20ರಿಂದ 25 ಅಡಿ ದೂರಕ್ಕೆ ಹೋಗಿ ಬಿದ್ದಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ದುರಂತದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಮೃತಪಟ್ಟವರ ಕುಟುಂಬಗಳಿಗೆ ತಲಾ ₹4 ಲಕ್ಷ ಹಾಗೂ ಗಾಯಾಳುಗಳಿಗೆ ಚಿಕಿತ್ಸೆಗೆ ನೆರವಾಗಲು ತಲಾ ₹50 ಸಾವಿರ ಪರಿಹಾರ ಘೋಷಿಸಿದ್ದಾರೆ.

ತ್ವರಿತ ವಿಚಾರಣೆ: ಗೃಹ ಖಾತೆ ರಾಜ್ಯ ಸಚಿವ ಹರ್ಷ ಸಾಂಘವಿ ಗುರುವಾರ ಮಾತನಾಡಿ, ‘ಅಸ್ವಸ್ಥಗೊಂಡಿರುವ ಆರೋಪಿ ತಾತ್ಯ ಪಟೇಲ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆತನ ತಂದೆ ಕೂಡ ಅಪರಾಧ ಹಿನ್ನೆಲೆ ಹೊಂದಿದ್ದಾರೆ. ಒಂದು ವಾರದೊಳಗೆ ಪ್ರಕರಣದ ಬಗ್ಗೆ ವಿಚಾರಣೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಾಗುವುದು. ದುರಂತದ ಬಗ್ಗೆ ಪೊಲೀಸರು ಎಲ್ಲಾ ಆಯಾಮದಲ್ಲೂ ತನಿಖೆ ನಡೆಸುತ್ತಿದ್ದಾರೆ’ ಎಂದು ತಿಳಿಸಿದ್ದಾರೆ.

ಕೋವಿಡ್ ಚಿಕಿತ್ಸಾ ಕೇಂದ್ರ ಸ್ಥಾಪನೆಯಲ್ಲಿ ಅಕ್ರಮ ಆರೋಪ

ಉದ್ಯಮಿ ಪಾಟ್ಕರ್ ಇ.ಡಿ ವಶಕ್ಕೆ

ಮುಂಬೈ (ಪಿಟಿಐ): ಕೋವಿಡ್–19 ಚಿಕಿತ್ಸಾ ಕೇಂದ್ರ ಸ್ಥಾಪನೆಯಲ್ಲಿನ ಅವ್ಯವಹಾರಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿಸಲಾಗಿರುವ ಉದ್ಯಮಿ ಸುಜಿತ್ ಪಾಟ್ಕರ್ ಹಾಗೂ ಡಾ.ಕಿಶೋರ್ ಬಿಸುರೆ ಅವರನ್ನು ಇದೇ 27ರ ವರೆಗೆ ಜಾರಿ ನಿರ್ದೇಶನಾಲಯ ಕಸ್ಟಡಿಗೆ ಒಪ್ಪಿಸಿ ಪಿಎಂಎಲ್‌ಎ ವಿಶೇಷ ಕೋರ್ಟ್ ಗುರುವಾರ ಆದೇಶಿಸಿದೆ.

ಪಾಟ್ಕರ್ ಅವರು ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ಅವರ ಸ್ನೇಹಿತ.

ಅಕ್ರಮ ಕುರಿತು ಇಬ್ಬರು ಆರೋಪಿಗಳನ್ನು ಮತ್ತಷ್ಟು ವಿಚಾರಣೆಗೆ ಒಳಪಡಿಸಬೇಕಿರುವ ಕಾರಣ ಎಂಟು ದಿನಗಳ ಕಾಲ ಕಸ್ಟಡಿಗೆ ನೀಡುವಂತೆ ಜಾರಿ ನಿರ್ದೇಶನಾಲಯದ (ಇ.ಡಿ) ಮನವಿಯನ್ನು ವಿಶೇಷ ನ್ಯಾಯಾಧೀಶ ಎಂ.ಜಿ.ದೇಶಪಾಂಡೆ ಪುರಸ್ಕರಿಸಿ, ಆದೇಶಿಸಿದರು.

ಬೃಹನ್ ಮುಂಬೈನಗರ ಪಾಲಿಕೆಯ (ಬಿಎಂಸಿ) ಕೋವಿಡ್–19 ಚಿಕಿತ್ಸಾ ಕೇಂದ್ರ ಸ್ಥಾಪನೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದಲ್ಲಿ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಪಾಟ್ಕರ್ ಹಾಗೂ ಡಾ.ಕಿಶೋರ್ ಬಿಸುರೆ ಅವರನ್ನು ಬುಧವಾರ ರಾತ್ರಿ ಇ.ಡಿ ಬಂಧಿಸಿತ್ತು.

ಡಾ.ಬಿಸುರೆ ಅವರು ಮುಂಬೈನಲ್ಲಿ ಸ್ಥಾಪಿಸಿದ್ದ ‘ದಹಿಸರ್ ಕೋವಿಡ್–19 ಕೇಂದ್ರ’ದ ಡೀನ್ ಆಗಿದ್ದರು. ಪಾಟ್ಕರ್ ಹಾಗೂ ಅವರ ಮೂವರು ಪಾಲುದಾರರು ಕೋವಿಡ್–19 ಚಿಕಿತ್ಸಾ ಕೇಂದ್ರಗಳ ಸ್ಥಾಪನೆಗಾಗಿ ಪಾಲಿಕೆಯಿಂದ ಅಕ್ರಮವಾಗಿ ಗುತ್ತಿಗೆ ಪಡೆದಿದ್ದರು ಎಂದು ಆರೋಪಿಸಲಾಗಿದೆ.

ಹಣ ಅಕ್ರಮ ವರ್ಗಾವಣೆ ಸಂಬಂಧಿಸಿ ಇ.ಡಿ ಅಧಿಕಾರಿಗಳು ಮುಂಬೈನ 15 ಸ್ಥಳಗಳಲ್ಲಿ ಕಳೆದ ತಿಂಗಳು ದಾಳಿ ನಡೆಸಿದ್ದರು. ಅಲ್ಲದೇ, ಕೋವಿಡ್–19 ಆಸ್ಪತ್ರೆಗಳ ನಿರ್ವಹಣೆ ಗುತ್ತಿಗೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿ ಐಎಎಸ್ ಅಧಿಕಾರಿ ಸಂಜೀವ್ ಜೈಸ್ವಾಲ್, ಯುವಸೇನಾ (ಯುಬಿಟಿ)ದ ಕೋರ್ ಕಮಿಟಿ ಸದಸ್ಯ ಸೂರಜ್ ಚವಾಣ್ ಅವರಿಗೆ ಸೇರಿದ ಸ್ಥಳಗಳ ಮೇಲೂ ದಾಳಿ ನಡೆಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುನೊ ರಾಷ್ಟ್ರೀಯ ಉದ್ಯಾನದಲ್ಲಿ 8 ಚೀತಾಗಳ ಸಾವಿಗೆ ‘ಸುಪ್ರೀಂ’ ಕಳವಳ

‘ಪ್ರತಿಷ್ಠೆ ಬೇಡ; ಸ್ಥಳಾಂತರ ಸಾಧ್ಯತೆ ಪರಿಶೀಲಿಸಿ’

ನವದೆಹಲಿ (ಪಿಟಿಐ): ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನ(ಕೆಎನ್‌ಪಿ)ದಲ್ಲಿ ಎಂಟು ಚೀತಾಗಳು ಮೃತಪಟ್ಟಿರುವ ಬಗ್ಗೆ ಸುಪ್ರೀಂಕೋರ್ಟ್ ಗುರುವಾರ ಕಳವಳ ವ್ಯಕ್ತಪಡಿಸಿದೆ.

ಈ ವಿಷಯವನ್ನು ಪ್ರತಿಷ್ಠೆಯನ್ನಾಗಿ ಮಾಡಿಕೊಳ್ಳದೇ ಈ ಮೃಗಗಳನ್ನು ಬೇರೆ ವನ್ಯಜೀವಿಧಾಮಗಳಿಗೆ ಸ್ಥಳಾಂತರಿಸುವ ಸಾಧ್ಯತೆ ಪರಿಶೀಲಿಸುವಂತೆ ಕೇಂದ್ರಕ್ಕೆ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಜೆ.ಬಿ.ಪಾರ್ದೀವಾಲಾ ಮತ್ತು ಪ್ರಶಾಂತಕುಮಾರ್ ಮಿಶ್ರಾ ಅವರಿದ್ದ ನ್ಯಾಯಪೀಠ ಚೀತಾಗಳ ಸಾವು ಕುರಿತ ವಿಷಯದ ಪರಿಶೀಲನೆ ನಡೆಸಿತು.

‘ಚೀತಾಗಳ ಸಾವುಗಳನ್ನು ತಡೆಯುವ ಕುರಿತ ಸಲಹೆಗಳನ್ನು ಒಳಗೊಂಡ ಪ್ರತಿಕ್ರಿಯೆಯನ್ನು ಜುಲೈ 29ರ ಒಳಗೆ ಸಲ್ಲಿಸುವಂತೆ’ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರಿಗೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಆಗಸ್ಟ್ 1ಕ್ಕೆ ಮುಂದೂಡಿತು.

ಮಾರ್ಚ್ 8ರಂದು ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಚೀತಾದ ಮೊದಲ ಸಾವು ಸಂಭವಿಸಿದ ಮರು ದಿನವೇ ‘ಚೀತಾ ಕಾರ್ಯಪಡೆ’ಯಲ್ಲಿರುವ ತಜ್ಞರ ಶೈಕ್ಷಣಿಕ ಅರ್ಹತೆ ಹಾಗೂ ಅನುಭವ ಕುರಿತು ವಿವರ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಸೂಚಿಸಿತ್ತು.

‘ಸಮಸ್ಯೆ ಏನು’: ‘ಕುನೊ ರಾಷ್ಟ್ರೀಯ ಉದ್ಯಾನದಲ್ಲಿರುವ 20 ಚೀತಾಗಳ ಪೈಕಿ 8 ಮೃತಪಟ್ಟಿವೆ. ಹಾಗಾದರೆ, ಅಲ್ಲಿರುವ ಸಮಸ್ಯೆ ಏನು’ ಎಂದು ಪ್ರಶ್ನಿಸಿದ ನ್ಯಾಯಪೀಠ, ಅವುಗಳಿಗೆ ಹವಾಮಾನ ಒಗ್ಗುತ್ತಿಲ್ಲವೇ ಅಥವಾ ಬೇರೆ ಏನಾದರೂ ಕಾರಣಗಳಿವೆ’ ಎಂದು ಕೇಳಿತು.

‘ಇವುಗಳನ್ನು ಬೇರೆಡೆ ಸ್ಥಳಾಂತರಿಸುವ ಸಾಧ್ಯತೆಗಳ ಬಗ್ಗೆ ನೀವು ಯಾಕೆ ಪರಿಶೀಲಿಸುತ್ತಿಲ್ಲ? ಇದನ್ನು ನೀವು ಪ್ರತಿಷ್ಠೆಯನ್ನಾಗಿ ಮಾಡಿಕೊಳ್ಳುತ್ತಿರುವಿರೇಕೆ’ ಎಂದು ಕೇಂದ್ರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಭಾಟಿ ಅವರನ್ನು ಕೇಳಿತು.

‘ಚೀತಾಗಳ ಸಾವಿಗೆ ಕಾರಣವಾದ ಅಂಶಗಳ ಕುರಿತು ಕೇಂದ್ರ ಸರ್ಕಾರ ಪ್ರತಿಕ್ರಿಯೆ ಸಲ್ಲಿಸುವುದರಲ್ಲಿತ್ತು. ಪ್ರತಿ ಚೀತಾ ಸಾವಿಗೆ ಕಾರಣವಾಗಿದ್ದ ಸನ್ನಿವೇಶಗಳ ಕುರಿತು ವಿವರವಾದ ಪ್ರಮಾಣಪತ್ರ ಸಲ್ಲಿಸಲು ಮತ್ತಷ್ಟು ಅವಕಾಶ ನೀಡಬೇಕು’ ಎಂದು ಭಾಟಿ ಮನವಿ ಮಾಡಿದರು.

‘ದೇಶದ ಪಾಲಿಗೆ ಇದೊಂದು ಪ್ರತಿಷ್ಠಿತ ಯೋಜನೆ. ಚೀತಾಗಳ ಸಾವು ತಡೆಗಟ್ಟಲು ಹಾಗೂ ಅವುಗಳನ್ನು ಬೇರೆ ವನ್ಯಜೀವಿಧಾಮಗಳಿಗೆ ಸ್ಥಳಾಂತರಿಸುವುದು ಸೇರಿದಂತೆ ಎಲ್ಲ ಸಾಧ್ಯತೆಗಳ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಗಳು ಪರಿಶೀಲಿಸುತ್ತಿವೆ’ ಎಂದು ಅವರು ನ್ಯಾಯಪೀಠದ ಗಮನಕ್ಕೆ ತಂದರು.

‘ಇದು ಪ್ರತಿಷ್ಠೆಯ ಯೋಜನೆಯೇ ಆಗಿದ್ದಲ್ಲಿ, ಒಂದು ವರ್ಷದ ಒಳಗಾಗಿ ಶೇ 40ರಷ್ಟು ಚೀತಾಗಳು ಮೃತಪಟ್ಟಿರುವುದು ಯೋಜನೆ ಬಗ್ಗೆ ಒಳ್ಳೆಯ ಚಿತ್ರಣ ನೀಡುವುದಿಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು. ಆಗ, ಹಿರಿಯ ವಕೀಲ ಪಿ.ಸಿ.ಸೇನ್ ಅವರು ಚೀತಾಗಳ ಸಾವು ತಡೆಗಟ್ಟುವ ಸಲುವಾಗಿ ತಜ್ಞರು ನೀಡಿರುವ ಸಲಹೆಗಳನ್ನು ನ್ಯಾಯಪೀಠದ ಗಮನಕ್ಕೆ ತಂದರು.

‘ಈ ಸಲಹೆಗಳನ್ನು ಭಾಟಿ ಅವರಿಗೆ ನೀಡಿ. ಅವುಗಳನ್ನೂ ಸೇರಿದಂತೆ ವಿಸ್ತೃತ ಪ್ರತಿಕ್ರಿಯೆಯನ್ನು ಅವರು ಸಲ್ಲಿಸಲಿ’ ಎಂದು ನ್ಯಾಯಪೀಠ ಹೇಳಿತು.

ದಕ್ಷಿಣ ಆಫ್ರಿಕಾ ಮತ್ತು ನಮೀಬಿಯಾದಿಂದ ಒಟ್ಟು 20 ಚೀತಾಗಳನ್ನು ತರಲಾಗಿದ್ದು, ಈ ಪೈಕಿ 8 ಮೃತಪಟ್ಟಿವೆ. ವರ್ಷಕ್ಕೆ 8 ರಿಂದ 14 ಚೀತಾಗಳಂತೆ ಮುಂದಿನ ಐದು ವರ್ಷಗಳ ವರೆಗೆ ಈ ಪ್ರಾಣಿಗಳನ್ನು ದೇಶಕ್ಕೆ ತರುವ ಸಂಬಂಧ ಈ ಎರಡು ರಾಷ್ಟ್ರಗಳೊಂದಿಗೆ ಭಾರತ ಒಪ್ಪಂದ ಮಾಡಿಕೊಂಡಿದೆ.

ಪ್ರಕರಣ ರದ್ದು: ತೀಸ್ತಾ ಅರ್ಜಿ ತಿರಸ್ಕರಿಸಿದ ಸೆಷನ್ಸ್ ಕೋರ್ಟ್

ಅಹಮದಾಬಾದ್(ಪಿಟಿಐ): ಗೋಧ್ರೋತ್ತರ ಗಲಭೆಗಳಿಗೆ ಸಂಬಂಧಿಸಿದ ಸಾಕ್ಷ್ಯಗಳನ್ನು ತಿರುಚಿದ ಆರೋಪದಡಿ ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ರದ್ದು ಮಾಡುವಂತೆ ಕೋರಿ ಸಾಮಾಜಿಕ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಸಲ್ಲಿಸಿದ್ದ ಅರ್ಜಿಯನ್ನು ಇಲ್ಲಿನ ಸೆಷನ್ಸ್ ಕೋರ್ಟ್ ಗುರುವಾರ ತಿರಸ್ಕರಿಸಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಎ.ಆರ್.ಪಟೇಲ್ ಅರ್ಜಿ ವಿಚಾರಣೆ ನಡೆಸಿದರು.

ಇದಕ್ಕೂ ಮುನ್ನ, ತೀಸ್ತಾ ಅವರ ಅರ್ಜಿಗೆ ಗುಜರಾತ್ ಸರ್ಕಾರ ವಿರೋಧ ವ್ಯಕ್ತಪಡಿಸಿತು. ‘ಗಲಭೆಯ ಸಂತ್ರಸ್ತರ ವಿಶ್ವಾಸವನ್ನು ದುರುಪಯೋಗಪಡಿಸಿಕೊಂಡಿರುವ ಅವರು, ಮುಗ್ಧರನ್ನು ಸಿಕ್ಕಿಸಿದ್ದಾರೆ’ ಎಂದು ನ್ಯಾಯಾಲಯಕ್ಕೆ ತಿಳಿಸಿತು.

ಇದೇ ಪ್ರಕರಣಕ್ಕೆ ಸಂಬಂಧಿಸಿ ತೀಸ್ತಾ ಅವರಿಗೆ ಗುಜರಾತ್ ಹೈಕೋರ್ಟ್ ಇತ್ತೀಚೆಗೆ ಜಾಮೀನು ನಿರಾಕರಿಸಿತ್ತು. ಆದರೆ, ಅವರಿಗೆ ಸುಪ್ರೀಂಕೋರ್ಟ್ ಬುಧವಾರ ಜಾಮೀನು ನೀಡಿತ್ತು.

ಬಾಲಕಿಗೆ ಹಿಂಸೆ: ಪೈಲಟ್, ಪತಿ ನ್ಯಾಯಾಂಗ ವಶಕ್ಕೆ

ನವದೆಹಲಿ (ಪಿಟಿಐ): ನೈರುತ್ಯ ದೆಹಲಿಯ ದ್ವಾರಕಾ ಪ್ರದೇಶದಲ್ಲಿ ಮನೆಗೆಲಸಕ್ಕೆ ನೇಮಿಸಿಕೊಂಡಿದ್ದ 10 ವರ್ಷದ ಬಾಲಕಿಯ ಮೇಲೆ ಹಲ್ಲೆ ನಡೆಸಿರುವ ಆರೋಪದಲ್ಲಿ ಬಂಧನಕ್ಕೊಳಗಾಗಿರುವ ಮಹಿಳಾ ಪೈಲಟ್ ಮತ್ತು ಆಕೆಯ ಪತಿಯನ್ನು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್ ಆಗಸ್ಟ್ 2ರವರೆಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಮಹಿಳಾ ಪೈಲಟ್ ಪೂರ್ಣಿಮಾ ಬಾಗ್ಚಿ ಮತ್ತು ಆಕೆಯ ಪತಿ ಕೌಶಿಕ್ ಬಾಗ್ಚಿ ಬಾಲಕಿಯ ಮೇಲೆ ದೌರ್ಜನ್ಯ ನಡೆಸಿದ್ದಾರೆಂದು ಆರೋಪಿಸಿ, ಗುಂಪೊಂದು ಬುಧವಾರ ದಂಪತಿಯನ್ನು ನಡುರಸ್ತೆಗೆ ಎಳೆತಂದು ತೀವ್ರ ಹಲ್ಲೆ ನಡೆಸಿತ್ತು.

ಆರೋಪಿ ಪೂರ್ಣಿಮಾ ಅವರನ್ನು ಬುಧವಾರವೇ ಮತ್ತು ಆಕೆಯ ಪತಿಯನ್ನು ಗುರುವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಕೃತಿಕಾ ಚತುರ್ವೇದಿ ಅವರು ಆರೋಪಿ ದಂಪತಿಯನ್ನು ಆಗಸ್ಟ್ 2ರವರೆಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಿದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದಂಪತಿ ವಿರುದ್ಧ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಮತ್ತು ಬಾಲಕಾರ್ಮಿಕ ಕಾಯ್ದೆ ಮತ್ತು ಬಾಲಾಪರಾಧ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆಯ ಸೆಕ್ಷನ್ 75ರಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಬಾಲಕಿಗೆ ಕಾದ ಕಬ್ಬಿಣದ ಇಕ್ಕಳದಿಂದ ಬರೆ’

ದಂಪತಿಯು ಬಾಲಕಿಗೆ ಕಾದ ಕಬ್ಬಿಣದ ಇಕ್ಕಳದಿಂದ ಹಲ್ಲೆ ನಡೆಸಿದ್ದಾರೆ ಎಂದು ಸಂತ್ರಸ್ತ ಬಾಲಕಿಯ ಸಂಬಂಧಿಕರು ಆರೋಪಿಸಿದ್ದು, ದಂಪತಿ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಆರೋಪಿ ದಂಪತಿಯು ತಮ್ಮ ಮಗುವಿನ ಕಾಳಜಿ ಮಾಡಲು ಎರಡು ತಿಂಗಳ ಹಿಂದೆ ಬಾಲಕಿಯನ್ನು ನೇಮಿಸಿಕೊಂಡಿದ್ದರು. ಆದರೆ, ಆಕೆಯಿಂದ ಮನೆಗೆಲಸವನ್ನೂ ಮಾಡಿಸುತ್ತಿದ್ದರು. ಆದರೆ, ಬಾಲಕಿಯ ಮೇಲೆ ದೌರ್ಜನ್ಯ ನಡೆಯುತ್ತಿರುವುದು ಆಕೆಯ ಪೋಷಕರಿಗೆ ತಿಳಿದಿರಲಿಲ್ಲ ಎಂದು ಸಂಬಂಧಿಕರು ಹೇಳಿದ್ದಾರೆ.

ಬಾಲ್ಕನಿಯಲ್ಲಿ ಕೆಲಸ ಮಾಡುತ್ತಿದ್ದ ಬಾಲಕಿಯ ಮೇಲೆ ಮಹಿಳೆ ಹಲ್ಲೆ ನಡೆಸುತ್ತಿರುವುದು ಬುಧವಾರ ಬೆಳಿಗ್ಗೆ ಅದೇ ರಸ್ತೆಯಲ್ಲಿ ಕೆಲಸಕ್ಕೆ ಹೋಗುತ್ತಿದ್ದ ಬಾಲಕಿಯ ಚಿಕ್ಕಮ್ಮನ ಕಣ್ಣಿಗೆ ಬಿದ್ದಿದೆ. ಆಗ, ಬಾಲಕಿಯ ಚಿಕ್ಕಮ್ಮ ಇತರರೊಂದಿಗೆ ದಂಪತಿಯ ಮನೆಗೆ ಹೋಗಿ, ಬಾಗಿಲು ತಟ್ಟಿದ್ದಾರೆ. ಆದರೆ, ಅವರು ಹೊರ ಬಂದಿರಲಿಲ್ಲ. ಗಲಾಟೆ ಮಾಡಿದ ಬಳಿಕವೇ ಬಾಗಿಲು ತೆರೆದಿದ್ದು, ಬಾಲಕಿ ಹೊರಗೆ ಬಂದು ತನ್ನ ಮೇಲೆ ನಡೆದಿರುವ ದೌರ್ಜನ್ಯ ವಿವರಿಸಿದ್ದಾಳೆ ಎಂದು ಸಂಬಂಧಿಕರು ಹೇಳಿದ್ದಾರೆ.

‘ತಪ್ಪು ಮಾಡಿದರೆ, ಬಿಸಿ ಇಕ್ಕಳ ಅಥವಾ ಕಾದ ಕಬ್ಬಿಣದಿಂದ ಮಹಿಳೆ ಹಲ್ಲೆ ನಡೆಸುತ್ತಿದ್ದರು. ಕಳೆದ ಮೂರ್ನಾಲ್ಕು ದಿನಗಳಿಂದ ಹಸಿವಿನಿಂದ ಬಳಲುತ್ತಿದ್ದೆ. ಆಗಾಗ್ಗೆ ತಿನ್ನಲು ಹಳಸಿದ ಆಹಾರ ಕೊಡುತ್ತಿದ್ದರೆಂದು ಬಾಲಕಿ ಹೇಳಿದ್ದಾಳೆ.

ಬ್ರಿಜ್‌ಭೂಷಣ್ ಸಿಂಗ್‌ಗೆ ಜಾಮೀನು

ನವದೆಹಲಿ (ಪಿಟಿಐ): ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ಭಾರತೀಯ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ಮಾಜಿ ಅಧ್ಯಕ್ಷ, ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರಿಗೆ ದೆಹಲಿಯ ನ್ಯಾಯಾಲಯವೊಂದು ಗುರುವಾರ ಜಾಮೀನು ನೀಡಿತು.

‘₹25,000 ವೈಯಕ್ತಿಕ ಬಾಂಡ್ ಮತ್ತು ಕೆಲ ಷರತ್ತುಗಳನ್ನು ವಿಧಿಸಿ ಜಾಮೀನು ನೀಡುತ್ತಿರುವೆ’ ಎಂದು ಹೆಚ್ಚುವರಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಹರ್ಜೀತ್ ಸಿಂಗ್ ಅವರು ಹೇಳಿದರು. ನ್ಯಾಯಾಲಯದ ಅನುಮತಿ ಇಲ್ಲದೆ ದೇಶದಿಂದ ಹೊರಗೆ ಪ್ರಯಾಣಿಸುವಂತಿಲ್ಲ ಮತ್ತು ಸಾಕ್ಷ್ಯನಾಶಕ್ಕೆ ಪ್ರಯತ್ನಿಸುವಂತಿಲ್ಲ ಎಂದು ಅವರು ಷರತ್ತು ವಿಧಿಸಿದ್ದಾರೆ.

ಆರೋಪಿ ಬ್ರಿಜ್‌ಭೂಷಣ್ ಪರ ವಕೀಲರು, ದೂರುದಾರರ ಪರ ವಕೀಲರು ಮತ್ತು ದೆಹಲಿ ಪೊಲೀಸರ ಪರ ನ್ಯಾಯಾಲಯದಲ್ಲಿ ಹಾಜರಿದ್ದ ಸರ್ಕಾರಿ ವಕೀಲರ ವಾದವನ್ನು ನ್ಯಾಯಾಧೀಶರು ಆದೇಶ ಹೊರಡಿಸುವ ಮೊದಲು ಆಲಿಸಿದರು.

ಜಾಮೀನು ಅರ್ಜಿಯನ್ನು ವಿರೋಧಿಸುತ್ತೀರಾ ಎಂದು ನ್ಯಾಯಾಧೀಶರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸರ್ಕಾರದ ಪರ ವಕೀಲರು, ‘ಅರ್ಜಿಯನ್ನು ವಿರೋಧಿಸುವುದೂ ಇಲ್ಲ ಬೆಂಬಲಿಸುವುದೂ ಇಲ್ಲ’ ಎಂದರು.

ಜಾಮೀನು ಅರ್ಜಿಯನ್ನು ವಿರೋಧಿಸಿದ ದೂರುದಾರರ ಪರ ವಕೀಲರು, ಆರೋಪಿ ಪ್ರಭಾವಿ ವ್ಯಕ್ತಿ. ಹೀಗಾಗಿ ಜಾಮೀನು ನೀಡಬಾರದೆಂದು ಮನವಿ ಮಾಡಿದರು. ಬಳಿಕ, ಜಾಮೀನು ನೀಡಿದರೂ ಕಠಿಣ ಷರತ್ತುಗಳನ್ನು ವಿಧಿಸಬೇಕು ಎಂದರು.

ಆರೋಪಿ ಪರ ವಕೀಲರು ಮಾತನಾಡಿ, ‘ಆರೋಪಿ ಷರತ್ತುಗಳಿಗೆ ಬದ್ಧರಾಗಿರುತ್ತಾರೆ ಎಂದು ನಾನು ವಾಗ್ದಾನ ನೀಡುತ್ತೇನೆ’ ಎಂದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು

"ನ್ಯಾಯದೇಗುಲ", ಮೊದಲನೆ ಮಹಡಿ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು–560027,
ದೂರವಾಣಿ ಸಂಖ್ಯೆ: 080–22111729, 22111875,
ಇ–ಮೇಲ್: mskar-slsa@hck.gov.in

ಸಾರ್ವಜನಿಕರ ಗಮನಕ್ಕೆ

ಕರ್ನಾಟಕ ರಾಜ್ಯದ 06 ಜಿಲ್ಲೆಗಳಲ್ಲಿ ಖಾಯಂ ಜನತಾ ನ್ಯಾಯಾಲಯಗಳು ಸ್ಥಾಪಿತವಾಗಿದ್ದು, ಧಾರವಾಡ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಖಾಲಿ ಇರುವ (ತಲಾ 02 ರಂತೆ) 04 ಸದಸ್ಯರುಗಳನ್ನು ನೇಮಕ ಮಾಡುವ ಸಲುವಾಗಿ ಅರ್ಹ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ನಿಗದಿತ ನಮೂನೆಯಲ್ಲಿ ದಿನಾಂಕ : 08–08–2023 ರ ಒಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.
ಹೆಚ್ಚಿನ ವಿವರಗಳು ಮತ್ತು ಅರ್ಜಿಯ ನಮೂನೆಯನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್ ಸೈಟ್ : www.kslsa.kar.nic.in ಇಂದ ಮಾಹಿತಿ ಪಡೆಯಬಹುದಾಗಿದೆ.

ಸಹಿ/–
(ಜೈಶಂಕರ್)
ಸದಸ್ಯ ಕಾರ್ಯದರ್ಶಿ

ಸಮಗ್ರ ಶಿಕ್ಷಣ–ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು–560 001 ದೂರವಾಣಿ : 080–22103092,

ಸಂಖ್ಯೆ: ಎಸ್.ಎಸ್.ಕೆ./ಸಿ.ಎ.ಒ./ಲೆ.ಶಾ./36/2022–23 ದಿನಾಂಕ : 20.07.2023

ಇ–ಟೆಂಡರ್ ಪ್ರಕಟಣೆ

ವಿಷಯ : 2022–23ನೇ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯ ಶಾಸನ ಬದ್ಧ ಲೆಕ್ಕಪರಿಶೋಧನಾ ಕಾರ್ಯ ನಡೆಸಲು ಲೆಕ್ಕ ಪರಿಶೋಧಕರ ಆಯ್ಕೆಗೆ ಇ–ಟೆಂಡರ್ ಆಹ್ವಾನಿಸಿರುವ ಬಗ್ಗೆ. ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ 2022–23ನೇ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯ ಶಾಸನ ಬದ್ಧ ಲೆಕ್ಕ ಪರಿಶೋಧನಾ ಕಾರ್ಯ ನಡೆಸಲು ಲೆಕ್ಕ ಪರಿಶೋಧಕರ ಆಯ್ಕೆಗೆ ಅರ್ಹ CA FIRM ಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಿದೆ. 1) ಲೆಕ್ಕ ಪರಿಶೋಧನೆ ಮಾಡುವ ಸ್ಥಳಗಳು : ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು ಮತ್ತು ರಾಜ್ಯದ ಎಲ್ಲಾ ಸಮಗ್ರ ಶಿಕ್ಷಣ ಕರ್ನಾಟಕದ ಘಟಕಗಳು, ಟೆಂಡರ್ ಮೊತ್ತ (ರೂ. ಗಳಲ್ಲಿ) : 59,00,000.00 (ಐವತ್ತೊಂಭತ್ತು ಲಕ್ಷಗಳು ಮಾತ್ರ) per year including GST, ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : ಟೆಂಡರ್ ಮೊತ್ತದಲ್ಲಿ ಶೇ. 2% ರಷ್ಟು ರೂ. 1,00,000.00 ಇ–ಪೋರ್ಟಲ್ ಮೂಲಕ. 1) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಪ್ರಕಟಣೆಯ ದಿನಾಂಕ : 19.07.2023. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ : ದಿನಾಂಕ : 02.08.2023 ಸಂಜೆ 05.00 ಗಂಟೆ. 3) ಪ್ರೀ–ಬಿಡ್ ಸಭೆ ದಿನಾಂಕ : 24.07.2023 ಮಧ್ಯಾಹ್ನ 3.00 ಗಂಟೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 04.08.2023 ಪೂರ್ವಾಹ್ನ 11.00 ಗಂಟೆ, 5) ಆರ್ಥಿಕ ಬಿಡ್ ತೆರೆಯುವ ದಿನಾಂಕ : 09.08.2023 ಪೂರ್ವಾಹ್ನ 11.00 ಗಂಟೆ. ವಿವರಗಳಿಗೆ http://eproc.karnataka.gov.in ಗಮನಿಸುವುದು

ಸಹಿ/–
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ– ಕರ್ನಾಟಕ

ವಾ.ಸಾ.ಸಂ.ಇ/ವಾಪ್ರ/615/ಶಿರಡಿಸಾಯಿ/2023–24

ಆಯುಷ್ ಇಲಾಖೆ
ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ

ಡಾ|| ಸಿದ್ದಯ್ಯ ಪುರಾಣಿಕ್ ರಸ್ತೆ, ಬಸವೇಶ್ವರನಗರ, ಬೆಂಗಳೂರು–560079.
ದೂರವಾಣಿ: 080–23116061 ಇ–ಮೇಲ್: gumcprincipal1975@gmail.com

ಸಂಖ್ಯೆ: ಸಯುಮ/06/ಸರಬ/ನ್ಯಾಮ್/2022–23 ಕಾಲ್–1 ದಿನಾಂಕ: 19.07.2023

ಇ–ಟೆಂಡರ್ ಅಧಿಸೂಚನೆ
ದ್ವಿ ಲಕೋಟೆ ಪದ್ಧತಿ ಟೆಂಡರ್ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್)

ಪ್ರಾಚಾರ್ಯರು, ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸತ್ರೆ, ಬಸವೇಶ್ವರನಗರ, ಬೆಂಗಳೂರುರವರಿಂದ ಮಹಾವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಾದ ನಿಸ್ವಾನ್ ವಾ ಕಬಾಲತ್ (OBG) ಹಾಗೂ ಆಮ್ರಾಜ್ ಜಿಲ್ದ್ ವಾ ತಜೀನಿಯತ್ (SKIN & DERMATOLOGY) ವಿಭಾಗಗಳಿಗೆ ರಾಷ್ಟ್ರೀಯ ಆಯುಷ್ ಅಭಿಯಾನದ ಅನುದಾನದಿಂದ ಅವಶ್ಯವಿರುವ ಯಂತ್ರೋಪಕರಣಗಳು, ಪೀಠೋಪಕರಣಗಳು, ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ ವಸ್ತುಗಳು ಮತ್ತು ಯುನಾನಿ ಪುಸ್ತಕಗಳ ಸರಬರಾಜಿಗಾಗಿ ಅನುಭವಿ ಮತ್ತು ಆಸಕ್ತ ಹಾಗೂ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ನಿಯಮಗಳು ಮತ್ತು ಮುಂದುವರೆದ ನಿಯಮಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೌಲ್ಯ ರೂ.36.00 ಲಕ್ಷಗಳು. (ರೂಪಾಯಿಗಳು ಮೂವತ್ತಾರು ಲಕ್ಷ ಮಾತ್ರ).
1) ಟೆಂಡರ್ ಬಿಡಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು – ದಿನಾಂಕ:19.07.2023 ಅಪರಾಹ್ನ 2.00ರ ನಂತರ. 2) ಭರ್ತಿ ಮಾಡಲಾದ ಟೆಂಡರ್‌ನ್ನು ಸಲ್ಲಿಸುವುದು – ದಿನಾಂಕ : 04.08.2023 ಅಪರಾಹ್ನ 3.00 ವರೆಗೆ. 3) ಆನ್‌ಲೈನ್ ಟೆಂಡರ್‌ನ್ನು ತೆರೆಯುವುದು ದಿನಾಂಕ: 05.08.2023ರ ಅಪರಾಹ್ನ 3:30 ಗಂಟೆಗೆ
ಇತರೆ ಯಾವುದೇ ಮಾಹಿತಿಯನ್ನು ಕಚೇರಿಯ ಸಮಯದಲ್ಲಿ ಕೆಳಕಂಡವರನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/–
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ/ಪ್ರಾಚಾರ್ಯರು
ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ,
ಬಸವೇಶ್ವರನಗರ, ಬೆಂಗಳೂರು

ವಾಸಾಸಂಇ/ವಾಪ್ರ/616/2023–24

ಅರ್ಚಕ ರಾಘವೇಂದ್ರ ಆಚಾರ್ಯ ದೂರು • ಬನಶಂಕರಿ ಠಾಣೆ ಪೊಲೀಸರಿಂದ ಕಾರ್ಯಾಚರಣೆ

₹ 1.7 ಕೋಟಿ ವಂಚನೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಠವೊಂದರ ಅರ್ಚಕ ರಾಘವೇಂದ್ರ ಆಚಾರ್ಯ ಅವರಿಂದ ₹ 1.7 ಕೋಟಿ ಪಡೆದು ವಂಚಿಸಿದ್ದ ಆರೋಪದಡಿ ಶೇಷಗಿರಿ (45) ಎಂಬುವವರನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಚೆನ್ನೈನ ಶೇಷಗಿರಿ, ಬಿ.ಕಾಂ ಪದವೀಧರ. ರಾಘವೇಂದ್ರ ಅವರು ನೀಡಿದ್ದ ದೂರಿನಲ್ಲಿ ಇತ್ತೀಚೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಈತನನ್ನು ಬಂಧಿಸಿ ₹ 45 ಲಕ್ಷ ನಗದು ಹಾಗೂ ಆಸ್ತಿ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ತಮಿಳುನಾಡಿನ ಕಂಪನಿಯೊಂದರಲ್ಲಿ ಶೇಷಗಿರಿ ಕೆಲಸ ಮಾಡುತ್ತಿದ್ದ. ಷೇರು ಮಾರುಕಟ್ಟೆಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಈತ, ಅಲ್ಲಿಯ ಕೆಲಸ ಬಿಟ್ಟು ಕೆಲ ತಿಂಗಳ ಹಿಂದೆಯಷ್ಟೇ ಬೆಂಗಳೂರಿಗೆ ಬಂದಿದ್ದ. ಅರ್ಚಕ ರಾಘವೇಂದ್ರ ಅವರನ್ನು ಪರಿಚಯ ಮಾಡಿಕೊಂಡಿದ್ದ.’

‘ರಾಘವೇಂದ್ರ ಅವರು ನಿವೇಶನ ಖರೀದಿಸಲು ಹಣ ಹೊಂದಿಸುತ್ತಿದ್ದರು. ಅದನ್ನು ತಿಳಿದಿದ್ದ ಆರೋಪಿ, ‘ನಿಮ್ಮ ಬಳಿ ಇರುವ ಹಣವನ್ನು ನನಗೆ ಕೊಡಿ. ಷೇರು ಮಾರುಕಟ್ಟೆ ಮೂಲಕ ಕೆಲವೇ ದಿನಗಳಲ್ಲಿ ಹಣವನ್ನು ದುಪ್ಪಟ್ಟು ಮಾಡಿಕೊಡುತ್ತೇನೆ’ ಎಂದಿದ್ದ. ನಂತರ, ಹಂತ ಹಂತವಾಗಿ ₹ 1.7 ಕೋಟಿ ಪಡೆದುಕೊಂಡಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಷೇರು ಮಾರುಕಟ್ಟೆಯಲ್ಲಿ ನಷ್ಟ ಉಂಟಾಗಿತ್ತು. ಇದರಿಂದಾಗಿ ಆರೋಪಿ ನಗರದಿಂದ ಪರಾರಿಯಾಗಿದ್ದ. ಹಣ ಕಳೆದುಕೊಂಡಿದ್ದ ರಾಘವೇಂದ್ರ, ಠಾಣೆ ಮೆಟ್ಟಿಲೇರಿದ್ದರು. ಕೆಲ ಸುಳಿವು ಆಧರಿಸಿ ತನಿಖೆ ಕೈಗೊಂಡಾಗ, ಆರೋಪಿ ಸಿಕ್ಕಿಬಿದ್ದ’ ಎಂದು ಹೇಳಿವೆ.

ಆಸ್ತಿ ಖರೀದಿ: ‘ಅರ್ಚಕರಿಂದ ಹಣ ಪಡೆದಿದ್ದ ಆರೋಪಿ ಶೇಷಗಿರಿ, ಆಸ್ತಿ ಖರೀದಿ ಮಾಡಿದ್ದಾನೆ. ಈ ಸಂಗತಿ ಅರ್ಚಕರಿಗೆ ಗೊತ್ತಿರಲಿಲ್ಲ. ಅದೇ ಆಸ್ತಿ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಖಿನ್ನತೆ: ತಂದೆ ಕೊಂದ ಮಗ ಬಂಧನ

ಬೆಂಗಳೂರು: ಮಾದನಾಯಕನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ವೈ.ಆರ್. ಕೃಷ್ಣಮೂರ್ತಿ (62) ಅವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಮಗ ಕೆ. ಅರ್ಜುನ್‌ನನ್ನು ಪೊಲೀಸರು ಬಂಧಿಸಿದ್ದಾರೆ.

‘ಕೃಷ್ಣಮೂರ್ತಿ, ಬಿಎಂಟಿಸಿ ನಿವೃತ್ತ ಚಾಲಕ. ಇವರಿಗೆ ಇಬ್ಬರು ಮಕ್ಕಳಿದ್ದು, ಹಿರಿಯ ಮಗಳಿಗೆ ಮದುವೆಯಾಗಿದೆ. ಮಗ ಅರ್ಜುನ್ ಜೊತೆ ಕೃಷ್ಣಮೂರ್ತಿ ವಾಸವಿದ್ದರು. ಜುಲೈ 15ರಂದು ಕೊಲೆ ನಡೆದಿದ್ದು, ತನಿಖೆ ಕೈಗೊಂಡು ಮಗನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಅರ್ಜುನ್, ಕೇರಳದ ಕಂಪನಿಯೊಂದರಲ್ಲಿ ಕೆಲ ವರ್ಷ ಕೆಲಸ ಮಾಡಿದ್ದ. ಉತ್ತಮ ಸಂಬಳ ಬರುತ್ತಿತ್ತು. ನಿವೃತ್ತಿ ಸಮಯದಲ್ಲಿ ಬಂದಿದ್ದ ಹಣದಲ್ಲಿ ಕೃಷ್ಣಮೂರ್ತಿ ಅವರು ಹೊಸ ಮನೆ ಕಟ್ಟಿಸಿದ್ದರು. ಅದಕ್ಕಾಗಿ ಅರ್ಜುನ್, ₹ 15 ಲಕ್ಷ ಕೊಟ್ಟಿದ್ದ.’

‘ಮಾನಸಿಕ ಖಿನ್ನತೆಗೆ ಒಳಗಾಗಿದ್ದ ಅರ್ಜುನ್, ಕೆಲಸದಲ್ಲಿ ನಿರಾಸಕ್ತಿ ತೋರುತ್ತಿದ್ದ. ಇದೇ ಕಾರಣಕ್ಕೆ ಈತನನ್ನು ಕೆಲಸದಿಂದ ವಜಾ ಮಾಡಲಾಗಿತ್ತು. ಬೆಂಗಳೂರಿಗೆ ಬಂದಿದ್ದ ಅರ್ಜುನ್, ತಂದೆ ಜೊತೆ ವಾಸವಿದ್ದ. ವಿಚಿತ್ರ ನಡವಳಿಕೆ ಬೆಳೆಸಿಕೊಂಡಿದ್ದ ಆರೋಪಿ, ಸ್ನಾನ ಮಾಡುತ್ತಿರಲಿಲ್ಲ. ಈತನ ಮಾನಸಿಕ ಕಾಯಿಲೆ ಅರಿತ ತಂದೆ, ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಕೊಡಿಸಿದ್ದರು. ಅಷ್ಟಾದರೂ ಆರೋಪಿ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿರಲಿಲ್ಲ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಮನೆ ನಿರ್ಮಿಸಲು ತಾನು ನೀಡಿದ್ದ ₹ 15 ಲಕ್ಷ ಹಣವನ್ನು ವಾಪಸು ನೀಡುವಂತೆ ತಂದೆ ಜೊತೆ ಜಗಳ ತೆಗೆದಿದ್ದ ಆರೋಪಿ, ಮುಖಕ್ಕೆ ಹೊಡೆದಿದ್ದ. ನಂತರ, ತಲೆಯನ್ನು ಗೋಡೆಗೆ ಗುದ್ದಿಸಿದ್ದ. ತಂದೆಯನ್ನು ಕೆಳಗೆ ಬೀಳಿಸಿ ಕುತ್ತಿಗೆ ಮೇಲೆ ಕಾಲಿಟ್ಟು ತುಳಿದಿದ್ದ. ಇದರಿಂದ ತೀವ್ರ ಗಾಯಗೊಂಡು ಕೃಷ್ಣಮೂರ್ತಿ ಮೃತಪಟ್ಟಿದ್ದರು’ ಎಂದು ಮೂಲಗಳು ಹೇಳಿವೆ.

’ಬಂಧನ ಬಳಿಕ ಅರ್ಜುನ್‌ನನ್ನು ನಿಮ್ಹಾನ್ಸ್ ಆಸ್ಪತ್ರೆಗೆ ಕರೆದೊಯ್ದು ಪರೀಕ್ಷೆ ಮಾಡಿಸಲಾಯಿತು. ಚಿಕಿತ್ಸೆ ಅಗತ್ಯವಿರುವುದರಿಂದ ಸದ್ಯ ಆತ ಆಸ್ಪತ್ರೆಯಲ್ಲಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ನಿತೀಶ್‌ಕುಮಾರ್ ಅವಹೇಳನದ ಫ್ಲೆಕ್ಸ್: ಎಫ್‌ಐಆರ್ ದಾಖಲು

ಬೆಂಗಳೂರು: ನಗರದ ಹಲವು ಸ್ಥಳಗಳಲ್ಲಿ ಫ್ಲೆಕ್ಸ್ ಅಳವಡಿಸಿ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಅವಹೇಳನ ಮಾಡಿರುವ ಆರೋಪದಡಿ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ರೇಸ್‌ಕೋರ್ಸ್ ರಸ್ತೆಯಲ್ಲಿರುವ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಇತ್ತೀಚೆಗೆ ವಿರೋಧ ಪಕ್ಷಗಳ ನಾಯಕರ ಸಭೆ ಆಯೋಜಿಸಿದ್ದ ಸಂದರ್ಭದಲ್ಲಿ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿತ್ತು. ಇದು ಹೈಕೋರ್ಟ್ ಆದೇಶ ಉಲ್ಲಂಘನೆಯಾಗಿದ್ದು, ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರೇಸ್‌ಕೋರ್ಸ್ ರಸ್ತೆಯ ಖನಿಜ ಭವನ ಹಾಗೂ ಶಕ್ತಿ ಭವನ ಮುಂಭಾಗ, ಟ್ರಿಲೈಟ್ ಜಂಕ್ಷನ್, ಹರೇಕೃಷ್ಣ ರಸ್ತೆ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮುಂಭಾಗ, ಚಾಲುಕ್ಯ ವೃತ್ತ ಹಾಗೂ ಇತರೆಡೆ ಫ್ಲೆಕ್ಸ್ ಅಳವಡಿಸಲಾಗಿತ್ತು. ‘ಪ್ರಧಾನಿ ಹುದ್ದೆಯ ಅನಿಶ್ಚಿತ ಆಕಾಂಕ್ಷಿ’ ಎಂಬ ಬರಹವಿದ್ದ ಫ್ಲೆಕ್ಸ್‌ನಲ್ಲಿ ನಿತೀಶ್‌ಕುಮಾರ್ ಭಾವಚಿತ್ರವಿತ್ತು. ಸುಲ್ತಾನ್ ಗಂಜ್ ಸೇತುವೆ ಕುಸಿತದ ಚಿತ್ರಗಳಿದ್ದವು.’

‘ಫ್ಲೆಕ್ಸ್ ಅಳವಡಿಸಲು ಯಾವುದೇ ಅನುಮತಿ ಪಡೆದಿಲ್ಲ. ಫ್ಲೆಕ್ಸ್ ಅಳವಡಿಸಿದ್ದರಿಂದ ನಗರದ ಸೌಂದರ್ಯಕ್ಕೆ ಧಕ್ಕೆ ಉಂಟಾಗಿದೆ. ಫ್ಲೆಕ್ಸ್ ಅಳವಡಿಸಿದ್ದವರನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ತಿಳಿಸಿವೆ.

ನೀರಿನ ಸಮಸ್ಯೆ ಬಗೆಹರಿಸಲು ಸೂಚನೆ

ಕೆ.ಆರ್.ಪುರ: ಮಹದೇವಪುರ ವಲಯ ವ್ಯಾಪ್ತಿಯ 110 ಹಳ್ಳಿಗಳಿಗೆ ಸಂಬಂಧಿಸಿದಂತೆ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಶೀಲಿಸಬೇಕು. ಅಗತ್ಯ ಇರುವ ಕಡೆಗಳಲ್ಲಿ ಕೊಳವೆಬಾವಿ ಕೊರೆದು ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ವಲಯ ಜಂಟಿ ಆಯುಕ್ತರಾದ ದಾಕ್ಷಾಯಿಣಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಹದೇವಪುರ ವಲಯದ ಹಗದೂರು ವಾರ್ಡ್ ಹಾಗೂ ಹೂಡಿ ಉಪ ವಿಭಾಗ ವ್ಯಾಪ್ತಿಯ ಹಳ್ಳಿಗಳಿಗೆ ಭೇಟಿ ನೀಡಿ ಸ್ಥಳೀಯ ನಿವಾಸಿಗಳ ಅಹವಾಲುಗಳನ್ನು ಸ್ವೀಕರಿಸಿ ಅವರು ಮಾತನಾಡಿದರು.

ಹಗದೂರು ವಾರ್ಡ್ ವ್ಯಾಪ್ತಿಯ ರಾಮಗೊಂಡನಹಳ್ಳಿ, ನಲ್ಲೂರಹಳ್ಳಿ, ಪಟ್ಟಂದೂರು ಅಗ್ರಹಾರ, ಗಾಂಧಿಪುರ ಗ್ರಾಮಗಳಿಗೆ ಭೇಟಿ ನೀಡಿ, ರಾಮಗೊಂಡನಹಳ್ಳಿ ಹಾಗೂ ಗಾಂಧಿ ಪುರದಲ್ಲಿ ತಲಾ 2 ಕೊಳವೆಬಾವಿ ಕೊರೆಸಲು ತಿಳಿಸಿದರು.

ಕಾಂಗ್ರೆಸ್ ಮುಖಂಡರಾದ ನಲ್ಲೂರಹಳ್ಳಿ ನಾಗೇಶ್, ಪರಿಶೀಲನೆಯಲ್ಲಿ ಪಾಲಿಕೆಯ ಎಂಜಿನಿಯರ್‌ಗಳು, ಜಲಮಂಡಳಿಯ ಎಂಜಿನಿಯರ್‌ಗಳು, ಅಧಿಕಾರಿಗಳು ಇದ್ದರು.

ಬೆತ್ತಲೆ ಮೆರವಣಿಗೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪುರದಲ್ಲಿ ನಡೆಯುತ್ತಿರುವ ಸಂಘರ್ಷ, ಮಹಿಳೆಯರ ಮೇಲಿನ ಅತ್ಯಾಚಾರ ಹಾಗೂ ಯುವತಿಯರ ಬೆತ್ತಲೆ ಮೆರವಣಿಗೆ ಪ್ರಕರಣ ಖಂಡಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ನಗರದ ಮೌರ್ಯ ವೃತ್ತದ ಗಾಂಧಿ ಪ್ರತಿಮೆಯ ಬಳಿ ಮೇಣದ ಬತ್ತಿ ಹಿಡಿದು ಪ್ರತಿಭಟನೆ ನಡೆಸಿದರು.

‘ಇತ್ತೀಚಿನ ಕೆಲವು ತಿಂಗಳುಗಳಿಂದ ಮಣಿಪುರ ರಾಜ್ಯದಲ್ಲಿ ನಡೆಯುತ್ತಿರುವ ಹಿಂಸೆ, ದೌರ್ಜನ್ಯ ಹಾಗೂ ಭದ್ರತಾ ಪಡೆಯಿಂದಲೇ ನಡೆಯುತ್ತಿರುವ ದಬ್ಬಾಳಿಕೆಯನ್ನು ಪೂರ್ವ ಯೋಚಿತವಾಗಿಯೇ ಬಿಜೆಪಿಯ ನೇತೃತ್ವದ ಕೇಂದ್ರ ಸರ್ಕಾರ ನಡೆಸುತ್ತಿರುವುದು ಖಂಡನೀಯ. ಕೂಡಲೇ ಆರೋಪಿಗಳನ್ನು ಬಂಧಿಸಿ ಶಿಕ್ಷೆಗೊಳಪಡಿಸಬೇಕು’ ಎಂದು ಪ್ರತಿಭಟನಕಾರರು ಹೇಳಿದರು.

‘ಪ್ರಕರಣ ನಡೆದು ಎರಡು ತಿಂಗಳಾಗಿದ್ದರೂ ಯಾವುದೇ ಆರೋಪಿಗಳನ್ನು ಬಂಧಿಸಿಲ್ಲ. ಬಿಜೆಪಿ ಮಹಿಳೆಯರ ವಿರೋಧಿ ಹಾಗೂ ಅತ್ಯಾಚಾರಿಗಳ ಪರ ಇರುವುದು ಸಾಬೀತಾಗುತ್ತದೆ. ಮಣಿಪುರದ ಮುಖ್ಯಮಂತ್ರಿ ಅವರ ನೇರ ಪಾತ್ರವಿರುವುದು ಸಹ ಈ ಪ್ರಕರಣದಿಂದ ಸಾಬೀತಾಗುತ್ತದೆ’ ಎಂದು ಪಕ್ಷದ ರಾಜ್ಯ ಕಾರ್ಯಾಧ್ಯಕ್ಷ ಮೋಹನ್ ದಾಸರಿ ಎಚ್ಚರಿಸಿದರು.

ಖಂಡನೆ: ಮಣಿಪುರದಲ್ಲಿ ಮೇ 4ರಂದು ನಡೆದಿದ್ದ ಹಿಂಸಾಚಾರದ ವೇಳೆ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿರುವ ಘಟನೆಯನ್ನು ಅಖಿಲ ಭಾರತ ಮಹಿಳಾ ಸಾಂಸ್ಕೃತಿ ಸಂಘಟನೆ (ಎಐಎಂಎಸ್‌ಎಸ್) ಖಂಡಿಸಿದೆ. ಪೊಲೀಸ್ ವಶದಲ್ಲಿದ್ದ ಇಬ್ಬರು ಮಹಿಳೆಯರನ್ನು ಕರೆದುಕೊಂಡು ಹೋಗಿ ಸಾಮೂಹಿಕ ಅತ್ಯಾಚಾರ ಮಾಡಲಾಗಿದೆ. ಸಂತ್ರಸ್ತೆಯರನ್ನು ರಕ್ಷಿಸಲು ಯತ್ನಿಸಿದ ಸಹೋದರರನ್ನು ಹತ್ಯೆ ಮಾಡಲಾಗಿದೆ. ಈ ಘಟನೆಯಿಂದ ಮಹಿಳೆಯರಿಗೆ ಅಷ್ಟೇ ಅಲ್ಲ, ದೇಶದ ಸಮಸ್ತ ಜನತೆಗೆ ಆಘಾತವನ್ನುಂಟು ಮಾಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಲೇ ಆರೋಪಿಗಳನ್ನು ಬಂಧಿಸಿ ಶಿಕ್ಷೆಗೊಳಪಡಿಸಬೇಕು. ಮಣಿಪುರದಲ್ಲಿ ಶಾಂತಿ ನೆಲೆಸುವಂತೆ ಕ್ರಮ ಕೈಗೊಳ್ಳಬೇಕು’ ಎಂದು ಎಐಎಂಎಸ್‌ಎಸ್‌ನ ರಾಜ್ಯ ಕಾರ್ಯದರ್ಶಿ ಶೋಭಾ ಎಸ್ ಆಗ್ರಹಿಸಿದ್ದಾರೆ.

ಟೌನ್‌ಹಾಲ್ ಮುಂದೆ ಪ್ರತಿಭಟನೆ: ಮಣಿಪುರದಲ್ಲಿ ಮಹಿಳೆಯರ ಘನತೆಯ ಬದುಕು ಖಾತ್ರಿಗೊಳಿಸುವಂತೆ ಆಗ್ರಹಿಸಿ ವಿವಿಧ ಸಂಘಟನೆಗಳಿಂದ ಶುಕ್ರವಾರ ಸಂಜೆ 4.30ಕ್ಕೆ ಟೌನ್‌ಹಾಲ್ ಮುಂಭಾಗ ಪ್ರತಿಭಟನೆ ನಡೆಯಲಿದೆ.

ಮಣಿಪುರದಲ್ಲಿ ನಡೆದಿರುವ ಮಹಿಳೆಯರ ಬೆತ್ತಲೆ ಮೆರವಣಿಗೆ ಖಂಡಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ನಗರದ ಮಯೂರ ವೃತ್ತದಲ್ಲಿ ಮೇಣದ ಬತ್ತಿ ಹಿಡಿದು ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

ಮಣಿಪುರ ಘಟನೆ: ಕಠಿಣ ಶಿಕ್ಷೆಗೆ ಆಗ್ರಹ

ಬೆಂಗಳೂರು: ‘ಮಣಿಪುರದಲ್ಲಿ ಮಹಿಳೆಯರನ್ನು ಬೆತ್ತಲುಗೊಳಿಸಿ, ಮೆರವಣಿಗೆ ನಡೆಸಿದ ಘಟನೆಗೆ ಸಂಬಂಧಿಸಿದಂತೆ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರವು ಅಲ್ಲಿ ಕಾನೂನು ಸುವ್ಯವಸ್ಥೆಯನ್ನು ಪುನಃ ಸ್ಥಾಪಿಸಬೇಕು’ ಎಂದು 'ಜಾಗೃತ ನಾಗರಿಕರು ಕರ್ನಾಟಕ' ಆಗ್ರಹಿಸಿದೆ.

ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ಎಸ್.ಜಿ.ಸಿದ್ದರಾಮಯ್ಯ, ವಿಜಯಾ, ವಿಮಲಾ.ಕೆ.ಎಸ್., ರಾಜೇಂದ್ರ ಚೆನ್ನಿ, ಬಿ.ಶ್ರೀಪಾದ ಭಟ್, ಎಚ್.ಜಿ.ಜಯಲಕ್ಷ್ಮಿ, ಲೀಲಾ ಸಂಪಿಗೆ, ಸಿ.ಕೆ.ಗುಂಡಣ್ಣ, ಕೆ. ಷರೀಫಾ ಸೇರಿ ಸಾಂಸ್ಕೃತಿಕ ಕ್ಷೇತ್ರದ 20ಕ್ಕೂ ಅಧಿಕ ಮಂದಿ ಪ್ರಮುಖರು ಈ ಘಟನೆಯನ್ನು ಖಂಡಿಸಿ, ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

‘ಮಣಿಪುರ ಘಟನೆಯು 75 ದಿನಗಳ ಹಿಂದೆ ನಡೆದಿದೆ. ಈ ಬಗ್ಗೆ ಗಮನಹರಿಸದೆಯೇ, ‘ರೋಮ್ ನಗರ ಉರಿಯುತ್ತಿದ್ದಾಗ ಚಕ್ರವರ್ತಿ ನೀರೋ ಪಿಟೀಲು ನುಡಿಸುತ್ತಿದ್ದ’ ಎಂಬಂತೆ ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವರು ಕರ್ನಾಟಕ ಚುನಾವಣೆಯಲ್ಲಿ ಅಬ್ಬರದ ಪ್ರಚಾರದಲ್ಲಿ ಮುಳುಗಿದ್ದರು. ಈ ಘಟನೆ ಭಾರತದ ಅಂತಃಸಾಕ್ಷಿಯನ್ನು ತೀವ್ರವಾಗಿ ಕಲಕಿದೆ. ಎರಡು ಸಮುದಾಯಗಳ ಮಧ್ಯೆ ಹತ್ತಿದ ಬೆಂಕಿಯನ್ನು ಆರಿಸುವ ಬದಲು, ಒಡೆದಾಳುವ ನೀತಿಯನ್ನು ಕೇಂದ್ರದ ಒಕ್ಕೂಟ ಸರ್ಕಾರವೇ ಮಾಡುತ್ತಿರುವುದು ಅಕ್ಷಮ್ಯ ಅಪರಾಧದ ಮುಂದುವರಿದ ಭಾಗ ಇದಾಗಿದೆ’ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಕೇಂದ್ರದ ಒಕ್ಕೂಟ ಸರ್ಕಾರವು ಮಣಿಪುರದ ಪರಿಸ್ಥಿತಿಯನ್ನು ಆಳುವ ಪಕ್ಷದ ಹಿತಾಸಕ್ತಿಗೆ ಉಪಯೋಗಿಸಿಕೊಳ್ಳುವುದನ್ನು ನಿಲ್ಲಿಸಬೇಕು. ಅಲ್ಲಿನ ಮುಖ್ಯಮಂತ್ರಿಯನ್ನು ಕೆಳಗಿಳಿಸಬೇಕು. ಸಾವು ನೋವಿಗೆ ತುತ್ತಾದವರಿಗೆ, ಆಸ್ತಿ ಕಳೆದುಕೊಂಡವರಿಗೆ ಸೂಕ್ತ ಪರಿಹಾರ ನೀಡಬೇಕು’ ಎಂದು ಒತ್ತಾಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಟಿಕೆಟ್ ರಹಿತ ಪ್ರಯಾಣ: ದಂಡ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಜೂನ್ ತಿಂಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸಿದ 2,627 ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ.

ಜೂನ್ ತಿಂಗಳಲ್ಲಿ 13,196 ಟ್ರಿಪ್‌ಗಳನ್ನು ತಪಾಸಣೆ ನಡೆಸಲಾಗಿತ್ತು. ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 2,627 ಪ್ರಯಾಣಿಕರು ಪತ್ತೆಯಾಗಿದ್ದರು. ಅವರಿಂದ ₹ 5,19,060 ದಂಡ ವಸೂಲಿ ಮಾಡಲಾಯಿತು. ಕರ್ತವ್ಯ ಲೋಪವೆಸಗಿದ ಕಾರಣಕ್ಕಾಗಿ ಸಂಸ್ಥೆಯ 1005 ನಿರ್ವಾಹಕರ ವಿರುದ್ಧ ಪ್ರಕರಣಗಳು ದಾಖಲಾಗಿವೆ.

‘ಕ್ಷಮೆಯಾಚಿಸಿ’

ಬೆಂಗಳೂರು: ಬಿಜೆಪಿ ಶಾಸಕರು ಉದ್ದೇಶಪೂರ್ವಕವಾಗಿ ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅವರ ಮುಖದ ಮೇಲೆ ಮಸೂದೆಗಳ ಪ್ರತಿಗಳನ್ನು ಚೂರು ಮಾಡಿ ಎಸೆದು ಅವಮಾನಿಸಿದ್ದಾರೆ ಎಂದು ಕರ್ನಾಟಕ ಬಂಜಾರ ರಕ್ಷಣಾ ವೇದಿಕೆ ಆರೋಪಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಚಿತ್ರದುರ್ಗದ ಬಂಜಾರ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ‘ಕಲಾಪದ ಸಂದರ್ಭದಲ್ಲಿ ಉಪಸಭಾಧ್ಯಕ್ಷರಾದ, ಪರಿಶಿಷ್ಟ ಸಮುದಾಯದ ರುದ್ರಪ್ಪ ಲಮಾಣಿ ಅವರ ಮುಖದ ಮೇಲೆ ಮಸೂದೆಯ ಪ್ರತಿಗಳನ್ನು ಚೂರು ಮಾಡಿ ಎಸೆದಿರುವುದು ಖಂಡನೀಯ. ಇದರಿಂದ ಇಡೀ ಪರಿಶಿಷ್ಟ ಸಮುದಾಯಕ್ಕೆ ನೋವಾಗಿದೆ. ಕೂಡಲೇ ಶಾಸಕರಾದ ಆರ್. ಅಶೋಕ, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಬಸವರಾಜ ಬೊಮ್ಮಾಯಿ ಅವರು ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ಪ್ರತಿಭಟನೆ ಮಾಡಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಉಚಿತ ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕಲಾ ಸಾಕೇತ ಕೇಂದ್ರವು ಆರು ತಿಂಗಳ ಉಚಿತ ಸೌಂಡ್ ಎಂಜಿನಿಯರಿಂಗ್ ಕೌಶಲ ತರಬೇತಿ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದೆ.

ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಜುಲೈ 24ರಿಂದ ಕೋರ್ಸ್ ಪ್ರಾರಂಭವಾಗಲಿದೆ. 50 ಅಭ್ಯರ್ಥಿಗಳಿಗೆ ಅವಕಾಶವಿದ್ದು, ಆರ್ಥಿಕವಾಗಿ ಹಿಂದುಳಿದವರಿಗೆ ಆದ್ಯತೆ ನೀಡಲಾಗುತ್ತದೆ. ಮಾರತ್ತಹಳ್ಳಿಯ ಇನ್ನೋವೇಟಿವ್ ಫಿಲ್ಮ್ ಅಕಾಡೆಮಿಯಲ್ಲಿ ತರಬೇತಿ ನಡೆಯಲಿದೆ.

ಕನಿಷ್ಠ ವಿದ್ಯಾರ್ಹತೆ ಎಸ್ಸೆಸ್ಸೆಲ್ಸಿ ನಿಗದಿಪಡಿಸಲಾಗಿದ್ದು, ಕೋರ್ಸ್ ಮುಗಿದ ಬಳಿಕ ಪ್ರಮಾಣ ಪತ್ರವನ್ನೂ ನೀಡಲಾಗುತ್ತದೆ. ಉದ್ಯೋಗ ಹೊಂದಲು ಅಗತ್ಯ ಬೆಂಬಲ ನೀಡಲಾಗುವುದು. ಆಸಕ್ತರು 9483518012 ಅಥವಾ 9448079079ಕ್ಕೆ ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

‘ಒಕ್ಕಲಿಗರಿಗೆ ಶೇ 12ರಷ್ಟು ಮೀಸಲಾತಿ ಕೊಡಿ’

ಎಚ್. ಕಾಂತರಾಜು ವರದಿ ತಿರಸ್ಕರಿಸಿ: ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಕ್ಕಲಿಗ ಸಮುದಾಯವನ್ನು ಮುಂದುವರಿದ ಜನಾಂಗವೆಂದು ಪರಿಗಣಿಸಿರುವ ಎಚ್. ಕಾಂತರಾಜ್ ಸಮಿತಿಯ ಜಾತಿ ಗಣತಿ ವರದಿಯನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕು ಎಂದು ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಗಾ.ನಂ. ಶ್ರೀಕಂಠಯ್ಯ, ‘ಹಿಂದಿನ ಬಿಜೆಪಿ ಸರ್ಕಾರ ಒಕ್ಕಲಿಗ ಸಮುದಾಯವನ್ನು ‘ಪ್ರವರ್ಗ-3ಎ’ ಯಿಂದ ‘2ಸಿ’ ಗೆ ಬದಲಾಯಿಸಿ ಶೇ 4ರಷ್ಟಿದ್ದ ಮೀಸಲಾತಿಯನ್ನು ಶೇ 6ಕ್ಕೆ ಹೆಚ್ಚಿಸಿದೆ. ಈ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿರುವ ಪ್ರಕರಣದಲ್ಲಿ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳ ಪರವಾಗಿ ಸರ್ಕಾರವೇ ವಾದ ಮಂಡಿಸುವಂತೆ ರಾಜಕೀಯ ಮುಖಂಡರು ಸರ್ಕಾರದ ಮೇಲೆ ಒತ್ತಡ ಹಾಕಬೇಕು. ಜತೆಗೆ ಮೀಸಲಾತಿ ಪ್ರಮಾಣವನ್ನು ಶೇ 12ಕ್ಕೆ ಹೆಚ್ಚಿಸಿ ಸಂವಿಧಾನದ ಪರಿಚ್ಛೇದ 9ರಲ್ಲಿ ಸೇರಿಸಬೇಕು’ ಎಂದು ಒತ್ತಾಯಿಸಿದರು.

‘ಎಚ್. ಕಾಂತರಾಜು ವರದಿ ಅವೈಜ್ಞಾನಿಕವಾಗಿದ್ದು, ವಸ್ತುನಿಷ್ಠತೆಯಿಂದ ಕೂಡಿಲ್ಲ. ಇದರಿಂದ, ಒಕ್ಕಲಿಗರಿಗೆ ಉದ್ಯೋಗ ಸೇರಿ ರಾಜಕೀಯ, ಶೈಕ್ಷಣಿಕ ಕ್ಷೇತ್ರಗಳಲ್ಲಿ ದೊರೆಯುವ ಮೀಸಲಾತಿ ಸೌಲಭ್ಯದಿಂದ ವಂಚಿತವಾಗುವ ಅಪಾಯವಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ರಾಜ್ಯದಲ್ಲಿ ಒಕ್ಕಲಿಗರ ಜನಸಂಖ್ಯೆ ಶೇ 16ರಷ್ಟಿದೆ. ಆದರೆ, ವರದಿಯಲ್ಲಿ ಶೇ 8ರಷ್ಟು ಎಂದು ಹೇಳಲಾಗಿದೆ. ಕಾಂತರಾಜು ಸಮಿತಿಯು ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆಯ ಸೋಗಿನಲ್ಲಿ ಜನಗಣತಿ ಮಾಡಿದೆ. ಇತ್ತೀಚೆಗೆ ಮಂಡನೆಯಾದ ಬಜೆಟ್‌ನಲ್ಲಿ ಪ್ರವರ್ಗ 1 ಮತ್ತು ಪ್ರವರ್ಗ 2 (ಕುರುಬ) ಸಮುದಾಯಗಳಿಗೆ ₹1 ಕೋಟಿವರೆಗಿನ ಕಾಮಗಾರಿಗಳಲ್ಲಿ ಮೀಸಲಾತಿ ನೀಡಲಾಗಿದೆ. ಇದರಲ್ಲೂ ಪ್ರವರ್ಗ 3-ಎ (ಒಕ್ಕಲಿಗ), 3 ಬಿ (ಲಿಂಗಾಯತ) ಸಮುದಾಯಗಳಿಗೆ ಅನ್ಯಾಯ ಮಾಡಲಾಗಿದೆ’ ಎಂದು ದೂರಿದರು.

‘ಚಿನ್ನಪ್ಪರೆಡ್ಡಿ (ಎಸ್.ಟಿ), ಕಾಂತರಾಜು (ಕುರುಬ) ಮತ್ತು ಭಕ್ತವತ್ಸಲಂ (ಎಸ್.ಸಿ) ಆಯೋಗಗಳು ಸಲ್ಲಿಸಿರುವ ವರದಿಗಳಲ್ಲಿ ಒಕ್ಕಲಿಗ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ. ಭಕ್ತವತ್ಸಲಂ ಆಯೋಗವು ಸ್ಥಳೀಯ ಸಂಸ್ಥೆಗಳಲ್ಲಿ ಒಕ್ಕಲಿಗರಿಗೆ ಕಡಿಮೆ ಮೀಸಲಾತಿ ನೀಡಲು ಒಳಸಂಚು ರೂಪಿಸಿತ್ತು. ಈ ಎಲ್ಲ ವರದಿಗಳನ್ನು ಸರ್ಕಾರ ತಿರಸ್ಕರಿಸಬೇಕು’ ಎಂದು ಆಗ್ರಹಿಸಿದರು.

ಪ್ರತ್ಯೇಕ ನೀತಿ ಅನುಸರಿಸಲಿ’: ‘ಹೈದರಾಬಾದ್ ಕರ್ನಾಟಕ (ಹೈ-ಕ) ಪ್ರದೇಶದ ಸರ್ಕಾರಿ ಹುದ್ದೆಗಳಿಗೆ ಪ್ರತ್ಯೇಕವಾದ ನೇಮಕಾತಿ, ಜೇಷ್ಠತೆ, ಬಡ್ತಿ ಮತ್ತು ವರ್ಗಾವಣೆ ನೀತಿ ಅನುಸರಿಸಬೇಕು’ ಎಂದು ಒತ್ತಾಯಿಸಿದರು.

ಲಂಚ ಪ್ರಕರಣ: ವೈದ್ಯ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡ ಮಹಿಳೆಯೊಬ್ಬರಿಗೆ ಸಿಸೇರಿಯನ್ ನಡೆಸಲು ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಯಲಹಂಕ ಸಾರ್ವಜನಿಕ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ. ರಾಮಚಂದ್ರ ಕೆ.ಸಿ. ಅವರನ್ನು ಅಮಾನತುಗೊಳಿಸಲಾಗಿದೆ.

ಈ ಬಗ್ಗೆ ಇಲಾಖೆಯ ಆಯುಕ್ತ ಡಿ. ರಂದೀಪ್ ಆದೇಶ ಹೊರಡಿಸಿದ್ದಾರೆ. ಡಾ. ರಾಮಚಂದ್ರ ಕೆ.ಸಿ. ಅವರು ಸಿಸೇರಿಯನ್‌ಗೆ ಸಂಬಂಧಿಸಿದಂತೆ ಮಹಿಳೆಯ ಪತಿಯಿಂದ ₹ 10 ಸಾವಿರ ಲಂಚ ಪಡೆದ ಆರೋಪ ಎದುರಿಸುತ್ತಿದ್ದು, ಲೋಕಾಯುಕ್ತದಲ್ಲಿ ದೂರು ದಾಖಲಾಗಿದೆ.

ಮಂಜುಳಾ ಎಂಬ 20 ವರ್ಷದ ಮಹಿಳೆಗೆ ಸಿಸೇರಿಯನ್ ಮಾಡಲು ಪತಿ ಅಂಗಪ್ಪ ಅವರಿಂದ ಡಾ. ರಾಮಚಂದ್ರ ಕೆ.ಸಿ. ಅವರು ₹ 15 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಆರ್ಥಿಕ ಸುಸ್ಥಿತಿಯಲ್ಲಿ ಇಲ್ಲದ ಕಾರಣ ಮಹಿಳೆಯ ಪತಿ ₹ 11 ಸಾವಿರ ಹಣ ನೀಡಲು ಒಪ್ಪಿಕೊಂಡಿರುತ್ತಾರೆ. ಸಿಸೇರಿಯನ್ ಬಳಿಕ ಹೆಣ್ಣು ಮಗು ಜನಿಸಿದ್ದು, ಬಳಿಕ ಡಾ.ರಾಮಚಂದ್ರ ಕೆ.ಸಿ. ಪರವಾಗಿ ಆಸ್ಪತ್ರೆಯ ಗುತ್ತಿಗೆ ನೌಕರ ವಾಹಿದ್ (ವಾರ್ಡ್ ಬಾಯ್) ₹ 10 ಸಾವಿರ ಲಂಚ ಪಡೆದಿರುತ್ತಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ದೂರುದಾರರ ಹೇಳಿಕೆಯ ಮೇರೆಗೆ ಲೋಕಾಯುಕ್ತ ಪೊಲೀಸರು ಪರಿಶೀಲನೆಗೆ ತೆರಳಿದಾಗ, ಆಸ್ಪತ್ರೆಯ ವಾರ್ಡ್ ಬಾಯ್ ಹಣ ಪಡೆದಿರುವುದನ್ನು ಲೋಕಾಯುಕ್ತ ಪೊಲೀಸರ ಎದುರು ಒಪ್ಪಿಕೊಂಡಿದ್ದರು. ಬಳಿಕ ಲಂಚ ಪಡೆದಿರುವ ಕುರಿತು ತನಿಖಾ ತಂಡದ ಎದುರಿನಲ್ಲೇ ಆಸ್ಪತ್ರೆಯ ಪ್ರಸೂತಿ ತಜ್ಞ ಡಾ.ರಾಮಚಂದ್ರ ಜತೆ ಮೊಬೈಲ್‌ನಲ್ಲಿ ಮಾತುಕತೆ ನಡೆಸಿದ್ದರು. ವೈದ್ಯರ ವಿರುದ್ಧ ಲೋಕಾಯುಕ್ತ ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ. ಇದು ಗಂಭೀರ ಪ್ರಕರಣವಾಗಿದೆ. ಕರ್ತವ್ಯ ಲೋಪ ಹಾಗೂ ದುರ್ನಡತೆ ಆರೋಪದ ಮೇಲೆ ಇಲಾಖೆ ವಿಚಾರಣೆ ಬಾಕಿ ಇರಿಸಿ, ಸರ್ಕಾರಿ ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಹೇಳಲಾಗಿದೆ.

ಅಮಾನತಿನ ಅವಧಿಯಲ್ಲಿ ಜೀವನಾಂಶ ಪಡೆಯುವ ಸಲುವಾಗಿ ಸದರಿ ವೈದ್ಯರನ್ನು ರಾಮನಗರದ ಬಿಡದಿಯ ಸಿಎಚ್‌ಸಿ ಹುದ್ದೆಗೆ ಸ್ಥಳಾಂತರಿಸಲಾಗಿದೆ. ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಕೇಂದ್ರ ಸ್ಥಾನ ಬಿಡಬಾರದು ಎಂದು ತಿಳಿಸಲಾಗಿದೆ.

ತಿದ್ದುಪಡಿ

ಬುಧವಾರದ ಆವೃತ್ತಿಯಲ್ಲಿ ‘ಸಿಸೇರಿಯನ್‌ಗಾಗಿ ಲಂಚ: ₹ 10 ಸಾವಿರ ವಶಕ್ಕೆ’ ವರದಿಯಲ್ಲಿ ನೆಲಮಂಗಲ ಸರ್ಕಾರಿ ಆಸ್ಪತ್ರೆ ಎಂದು ತಪ್ಪಾಗಿ ಪ್ರಕಟವಾಗಿತ್ತು.

ಪತ್ನಿಯ ಮೇಲೆ ಕಣ್ಣು: ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವನ್‌ಭಿಮಾನಗರ ಠಾಣೆ ವ್ಯಾಪ್ತಿಯಲ್ಲಿ ಸುಭಾಷ್ (26) ಎಂಬುವವರನ್ನು ಹತ್ಯೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪದಡಿ ಅಭಿಷೇಕ್ (23) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಪಶ್ಚಿಮ ಬಂಗಾಳದ ಸುಭಾಷ್, ಸ್ಥಳೀಯ ಹೋಟೆಲೊಂದರಲ್ಲಿ ಕ್ಯಾಷಿಯರ್ ಆಗಿದ್ದ. ಅದೇ ಹೋಟೆಲ್ ನಲ್ಲಿ ಆರೋಪಿ ಅಭಿಷೇಕ್, ಸ್ವಚ್ಛತೆ ಕೆಲಸ ಮಾಡುತ್ತಿದ್ದ. ಗುರುವಾರ ಬೆಳಿಗ್ಗೆ ಸುಭಾಷ್ ಕೊಲೆ ನಡೆದಿದ್ದು, ಇದಾದ ಕೆಲವೇ ಗಂಟೆಗಳಲ್ಲಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸುಭಾಷ್ ಹಾಗೂ ಅಭಿಷೇಕ್, ಇಬ್ಬರೂ ಪಶ್ಚಿಮ ಬಂಗಾಳದವರು. ಸುಭಾಷ್ ಅವಿವಾಹಿತ. ಅಭಿಷೇಕ್‌ಗೆ ಮದುವೆಯಾಗಿದ್ದು, ದಂಪತಿ ಹೋಟೆಲ್ ಬಳಿಯೇ ಕೊಠಡಿಯಲ್ಲಿ ನೆಲೆಸಿದ್ದರು. ಅಭಿಷೇಕ್ ಪತ್ನಿ ಜೊತೆ ಸ್ನೇಹ ಬೆಳೆಸಿದ್ದ ಸುಭಾಷ್, ಸಲುಗೆಯಿಂದ ಇರಲು ಯತ್ನಿಸುತ್ತಿದ್ದ. ಇದೇ ವಿಚಾರವಾಗಿ ಇಬ್ಬರ ನಡುವೆ ಕೆಲದಿನಗಳ ಹಿಂದೆ ಜಗಳವಾಗಿತ್ತು. ತನ್ನ ಪತ್ನಿ ಮೇಲೆ ಸುಭಾಷ್ ಕಣ್ಣು ಹಾಕಿದ್ದಕ್ಕೆ ಕೋಪಗೊಂಡಿದ್ದ ಅಭಿಷೇಕ್, ಕೊಲೆಗೆ ಸಂಚು ರೂಪಿಸಿದ್ದ’ ಎಂದಿವೆ.

‘ಸುಭಾಷ್ ಗುರುವಾರ ಬೆಳಿಗ್ಗೆ ಸೋಫಾ ಮೇಲೆ ಮಲಗಿದ್ದರು. ಪಾನಮತ್ತನಾಗಿ ಸ್ಥಳಕ್ಕೆ ಬಂದಿದ್ದ ಆರೋಪಿ, ದೊಣ್ಣೆಯಿಂದ ಸುಭಾಷ್ ತಲೆಗೆ ಹೊಡೆದು ಕೊಲೆ ಮಾಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಮಕ್ಕಳ ಕೈಗೆ ಮೊಬೈಲ್ ಬೇಡ’

ಬೆಂಗಳೂರು: ‘ಮಗುವಿನ ಕೈಗೆ ಪೋಷಕರೇ ಮೊಬೈಲ್ ನೀಡಿ ಸಂವೇದನಾ ಶೂನ್ಯ ಲೋಕಕ್ಕೆ ಕಳುಹಿಸುತ್ತಿದ್ದಾರೆ. ಮೊಬೈಲ್ ಪಡೆದುಕೊಂಡ ಮಗುವಿನ ಪಂಚೇಂದ್ರಿಯಗಳ ಕೆಲಸವೇ ನಿಂತುಹೋಗುತ್ತಿದೆ’ ಎಂದು ವಿಜ್ಞಾನ ಲೇಖಕ ನಾಗೇಶ್ ಹೆಗಡೆ ಹೇಳಿದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ನವದೆಹಲಿಯ ವಿಜ್ಞಾನ್ ಪ್ರಸಾರ್ ಆಯೋಜಿಸಿದ್ದ ‘ಕನ್ನಡದಲ್ಲಿ ವಿಜ್ಞಾನ ಸಂವಹನ, ಜನಪ್ರಿಯತೆ ಮತ್ತು ವಿಸ್ತರಣೆ’ ವಿಷಯ ಕುರಿತು ಮಂಗಳವಾರದಿಂದ ಆರಂಭವಾದ ಎರಡು ದಿನಗಳ ಮುಕ್ತ ಚರ್ಚಾಗೋಷ್ಠಿ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಲಿಂಗಾಯತ ಸ್ವತಂತ್ರ ಧರ್ಮಕ್ಕೆ ಆರ್‌ಎಸ್‌ಎಸ್ ಅಡ್ಡಗಾಲು

ರಾಮನಗರ: ‘ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಸಿಗದಂತೆ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್), ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಹಾಗೂ ಹಿಂದೂವಾದಿಗಳು ಅಡ್ಡಗಾಲು ಹಾಕುತ್ತಿದ್ದಾರೆ’ ಎಂದು ಕುಂಬಳಗೋಡಿನ ಬಸವ ಗಂಗೋತ್ರಿಯ ಚನ್ನಬಸವೇಶ್ವರ ಜ್ಞಾನಪೀಠದ ಪೀಠಾಧೀಶ ಡಾ. ಚನ್ನಬಸವಾನಂದ ಸ್ವಾಮೀಜಿ ಆರೋಪಿಸಿದ್ದಾರೆ.

‘ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಸಿಕ್ಕರೆ, ಹಿಂದೂ ಧರ್ಮಕ್ಕೆ ತೊಂದರೆಯಾಗುತ್ತದೆ ಎಂಬ ಭಯದಿಂದ ಹೀಗೆ ಮಾಡುತ್ತಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕೆಪಿಸಿಎಲ್ ಸಂಸ್ಥಾಪನಾ ದಿನಾಚರಣೆಯಲ್ಲಿ ಸಚಿವರ ಹೇಳಿಕೆ

ಹಸಿರು ವಿದ್ಯುತ್‌ಗೆ ಆದ್ಯತೆ: ಜಾರ್ಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರಕ್ಕೆ ಪೂರಕವಾದ ಹಸಿರು ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಲಾಗುವುದು ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ನಗರದಲ್ಲಿ ಗುರುವಾರ ನಡೆದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

’ಜಲ ವಿದ್ಯುತ್ ಉತ್ಪಾದನೆ ಮಾಡಬೇಕಿದ್ದರೆ ನದಿಗಳಿಗೆ ಅಣೆಕಟ್ಟು ಕಟ್ಟಬೇಕು. ಅಲ್ಲಿ ವಾಸಿಸುವವರನ್ನು ಬೇರೆಡೆಗೆ ಸ್ಥಳಾಂತರಿಸಬೇಕು. ಮರಗಳನ್ನು ಕಡಿಯಬೇಕು. ಉಷ್ಣವಿದ್ಯುತ್ ಸ್ಥಾವರ ಮಾಡಬೇಕಿದ್ದರೆ ಕಲ್ಲಿದ್ದಲು ಬಳಸಬೇಕು. ಅಣು ವಿದ್ಯುತ್ ಸ್ಥಾವರ ಮಾಡಬೇಕಿದ್ದರೆ ವಿಕಿರಣಗಳಿಂದ ರಕ್ಷಿಸಬೇಕು. ಹೀಗೆ ಅನೇಕ ಸವಾಲುಗಳು ಎದುರಾಗುತ್ತವೆ. ಸೌರಶಕ್ತಿ ಮತ್ತು ಪವನಶಕ್ತಿಯಿಂದ ವಿದ್ಯುತ್ ಉತ್ಪಾದನೆ ಮಾಡಿದರೆ ಅದರಿಂದ ತೊಂದರೆಗಳು ಬಹಳ ಕಡಿಮೆ’ ಎಂದು ಅವರು ವಿಶ್ಲೇಷಿಸಿದರು.

‘ಪರಿಸರಕ್ಕೆ ಪೂರಕವಾದ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ವಿದ್ಯುತ್ ನೀತಿ ರೂಪಿಸಲಾಗುವುದು’ ಎಂದು ಅವರು ತಿಳಿಸಿದರು.

‘ನಾವು ಯಾರಿಂದಲೂ ಲಂಚ ತೆಗೆದುಕೊಂಡು ವರ್ಗಾವಣೆಗಳನ್ನು ಮಾಡುವುದಿಲ್ಲ. ಪ್ರಾಮಾಣಿಕ ಅಧಿಕಾರಿಗಳು ಯಾವುದೇ ಸ್ಥಳದಲ್ಲಿ ಕೆಲಸ ಮಾಡಲು ತಯಾರಿರುತ್ತಾರೆ. ಅಂಥವರೇ ಇಲಾಖೆಯಲ್ಲಿ ಹೆಚ್ಚಿದ್ದಾರೆ’ ಎಂದು ಹೇಳಿದರು.

ಕೆಪಿಸಿಎಲ್ ನೌಕರರ ಪ್ರತಿಭಾನ್ವಿತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಸಂಸ್ಥೆಯಲ್ಲಿ 25 ವರ್ಷ ಸೇವೆ ಸಲ್ಲಿಸಿದ ನೌಕರರನ್ನು ಗೌರವಿಸಲಾಯಿತು.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ನೌಕರರ ಪ್ರತಿಭಾನ್ವಿತ ಮಕ್ಕಳನ್ನು ಸನ್ಮಾನಿಸಲಾಯಿತು. ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಇಂಧನ ಸಚಿವ ಕೆ.ಜೆ. ಜಾರ್ಜ್, ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಸಿಎಲ್ ಹಣಕಾಸು ನಿರ್ದೇಶಕ ನಾಗರಾಜ್ ಆರ್, ತಾಂತ್ರಿಕ ನಿರ್ದೇಶಕ ನರೇಂದ್ರಕುಮಾರ್ ಇದ್ದರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

‘ಬೌದ್ಧಿಕ ಆಸ್ತಿ ಹಕ್ಕುಗಳು’ ಕುರಿತು ರಾಷ್ಟ್ರೀಯ ಕಾರ್ಯಾಗಾರ: ಅತಿಥಿಗಳು: ಕೆ. ರಾಮಕೃಷ್ಣ ರೆಡ್ಡಿ, ಕೆ.ಎಸ್. ಸಮೀರ ಸಿಂಹ, ಅಧ್ಯಕ್ಷತೆ: ಜಿ.ವಿ. ವಿಶ್ವನಾಥ್, ಭಾಷಣಕಾರರು: ಟಿ.ಎಸ್. ಶ್ರೀಧರ್, ಆಯೋಜನೆ ಮತ್ತು ಸ್ಥಳ: ವಿಜಯ ಕಾಲೇಜು, ಆರ್.ವಿ ರಸ್ತೆ, ಬಸವನಗುಡಿ, ಬೆಳಿಗ್ಗೆ 9.30

2022–23ನೇ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಎನ್.ಸಿ.ಸಿ., ಎನ್.ಎಸ್.ಎಸ್., ರೋವರ್ಸ್ ಆ್ಯಂಡ್ ರೇಂಜರ್ಸ್, ಯುವ ರೆಡ್‌ಕ್ರಾಸ್, ಪಠ್ಯ, ಪಠೇತರ ಚಟುವಟಿಕೆಗಳ ಸಮಾರೋಪ ಸಮಾರಂಭ: ಅತಿಥಿಗಳು: ಎಂ. ಕೃಷ್ಣಪ್ಪ, ಎಸ್.ಬಿ. ಅಪ್ಪಾಜಿಗೌಡ, ವಾಸುದೇವ್ ನಾಡಿಗ್, ಪ್ರೀತಿ ಎಲ್. ರಾವ್, ಅಧ್ಯಕ್ಷತೆ: ವೈ. ವೆಂಕಟೇಶಪ್ಪ, ಉಪಸ್ಥಿತಿ: ಎ. ಗೀತಾ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 10

ಸಂಸ್ಥಾಪಕರ ದಿನಾಚರಣೆ, ಮಲ್ಲಿಕಾರ್ಜುನ ಖರ್ಗೆ ಅವರ ಜನ್ಮದಿನಾಚರಣೆ: ಅತಿಥಿಗಳು: ಮೂಡ್ನಾಕೂಡು ಚಿನ್ನಸ್ವಾಮಿ, ಶ್ರೀನಿವಾಸ್ ಸಿ., ಅಧ್ಯಕ್ಷತೆ: ರಾಧಾಕೃಷ್ಣ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿ, ಡಾ.ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯ, ಜೆ.ಸಿ. ನಗರ, ಮಹಾಲಕ್ಷ್ಮಿಪುರ, ಬೆಳಿಗ್ಗೆ 10.30

ಎಂ.ಎಚ್. ಕೃಷ್ಣಯ್ಯ ನೆನಪಿನ ಆಕರ ಪುಸ್ತಕ ವಿಭಾಗದ ಉದ್ಘಾಟನೆ: ಎಲ್. ಗೋಮತಿದೇವಿ, ವ್ಯಂಗ್ಯ ಚಿತ್ರಕಲೆ ಮತ್ತು ಸಮಾಜ’ ಉಪನ್ಯಾಸ: ಜೆ. ಬಾಲಕೃಷ್ಣ, ಅತಿಥಿಗಳು: ಎ.ಆರ್. ಸೂರಜ್, ಕೆ. ಯದುಕುಮಾರ್, ಉಪಸ್ಥಿತಿ: ಆರ್. ಶೋಭಾ, ಅಧ್ಯಕ್ಷತೆ: ಕೆ. ರಾಮಚಂದ್ರ, ಆಯೋಜನೆ: ಕನ್ನಡ ವಿಭಾಗ, ಭಾಷೆ ಮತ್ತು ಸಾಹಿತ್ಯ ಶಾಲೆ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಸ್ಥಳ: ರಾಣಿ ಚೆನ್ನಮ್ಮ ಸಭಾಂಗಣ, ಮಹಾರಾಣಿ ಕಲಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಬೆಳಿಗ್ಗೆ 10.30

ರಾಜರ್ಷಿ ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ಅವರ ಪುತ್ಥಳಿ ಅನಾವರಣ: ಸಿದ್ದರಾಮಯ್ಯ, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅತಿಥಿಗಳು: ಶಿವರಾಜ್ ವಿ. ಪಾಟೀಲ, ಶಿವರಾಜ ತಂಗಡಗಿ, ಉಪಸ್ಥಿತಿ: ದೊಡ್ಡರಂಗೇಗೌಡ, ಎಚ್.ಎಂ. ರೇವಣ್ಣ, ಅಧ್ಯಕ್ಷತೆ: ಮಹೇಶ ಜೋಶಿ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



ದೊಡ್ಡರಂಗೇಗೌಡ

ಸಂಧ್ಯಾಕಲರವ: ಅತಿಥಿಗಳು: ವಿಜಯ ರಾಘವೇಂದ್ರ, ಚಂದನ ಅನಂತಕೃಷ್ಣ, ಟಿ.ಎಸ್. ಹೆಂಜಾರಪ್ಪ, ವೂಡೇ ಪಿ. ಕೃಷ್ಣ, ಪ್ರತಾಪ್ ಸಿಂಗ್, ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಸಂಜೆ ಕಾಲೇಜು, ಕುವೆಂಪು ರಂಗಮಂದಿರ, ಶೇಷಾದ್ರಿಪುರ, ಸಂಜೆ 5ರಿಂದ

ವಿಜಯ ರಾಘವೇಂದ್ರ

ಮಾನವ ಕಳ್ಳ ಸಾಗಾಣಿಕೆ ವಿರೋಧಿ ಕ್ಲಬ್ ಉದ್ಘಾಟನೆ: ಕನ್ನಿಕಾ ಪರಮೇಶ್ವರಿ, ಅತಿಥಿ: ವಿಲಿಯಂ ಕ್ರಿಸ್ಟೋಫರ್, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಬೆಳಿಗ್ಗೆ 11.30

ಚೈತನ್ಯ ಸಂಜೆ: ಅಧ್ಯಕ್ಷತೆ: ಶಾಂತಾಮಣಿ ಮೃತ್ಯುಂಜಯ, ‘ಶರಣರಲ್ಲಿ ನೈತಿಕ ಪ್ರಜ್ಞೆ’ ಕುರಿತ ಉಪನ್ಯಾಸ: ಗುರುಪ್ರಸಾದ್ ಕುಚ್ಚಂಗಿ, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್. ಕಾಲೇಜು ಸಭಾಂಗಣ, ಜಯನಗರ, ಸಂಜೆ 5.30

ಪ್ರವಚನ ವಾಹಿನಿ: ‘ಭಗವಂತ ಮತ್ತು ಭಕ್ತನ ಅವಿನಾಭಾವ ಸಂಬಂಧ’ದ ಕುರಿತ ಉಪನ್ಯಾಸ: ಪವಮಾನಾಚಾರ್ ಎಂ., ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

‘ಗಂಗಾ ಕಲ್ಯಾಣ ಯೋಜನೆ ನೆರವು ₹3.5ಲಕ್ಷಕ್ಕೆ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಗಂಗಾ ಕಲ್ಯಾಣ ಯೋಜನೆಗೆ ನೀಡುವ ನೆರವಿನ ಮೊತ್ತವನ್ನು ₹ 3.50 ಲಕ್ಷಕ್ಕೆ ಹೆಚ್ಚಿಸಬೇಕು’ ಎಂದು ವಿವಿಧ ನಿಗಮ, ಮಂಡಳಿಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಸೂಚಿಸಿದರು.

ವಿಧಾನಸೌಧದ ತಮ್ಮ ಕೊಠಡಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದ ಅವರು, ‘ಗಂಗಾ ಕಲ್ಯಾಣ ಯೋಜನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಪ್ರತಿ ಘಟಕಕ್ಕೆ ₹ 2 ಲಕ್ಷ ನೀಡಲಾಗುತ್ತಿದೆ. ಆದರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ₹ 3.5 ಲಕ್ಷ ನೀಡಲಾಗುತ್ತಿದೆ. ಇಲಾಖೆಗೊಂದು ನೀತಿ ಅನುಸರಿಸುವುದು ಸೂಕ್ತವಲ್ಲ’ ಎಂದು ಅವರು ಅಭಿಪ್ರಾಯಪಟ್ಟರು.

ರ‍್ಯಾಂಕಿಂಗ್ ಹೆಚ್ಚಳ: ವಿದೇಶಿ ವಿ.ವಿಗಳಲ್ಲಿ ಉನ್ನತ ಶಿಕ್ಷಣಕ್ಕಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲು ವಿಶ್ವ ರ‍್ಯಾಂಕಿಂಗ್‌ನಲ್ಲಿ 150ರ ಒಳಗಿರಬೇಕು ಎಂಬ ನಿಯಮವನ್ನು 500 ರ‍್ಯಾಂಕಿಂಗ್ ಎಂದು ತಿದ್ದುಪಡಿಗೆ ಸಚಿವರು ಸೂಚಿಸಿದರು.

ಸಾರಥಿ ಸ್ವಾವಲಂಬನೆ: ‘ಸಾರಥಿ ಸ್ವಾವಲಂಬನೆ’ ಯೋಜನೆಯಡಿ ರೈತರಲ್ಲದ ಹಿಂದುಳಿದ ವರ್ಗಗಳ ಫಲಾನುಭವಿಗಳಿಗೆ ಸರಕು ಸಾಗಣೆ ವಾಹನ ಖರೀದಿಗೆ ₹ 3 ಲಕ್ಷವರೆಗೆ ಸಹಾಯಧನ ನೀಡಲಾಗುವುದು. ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು ಎಂದೂ ತಿಳಿಸಿದರು.

‘ಅರಿವು’ ಯೋಜನೆ: ‘ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಸಿಇಟಿ ಮೂಲಕ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದರೆ ಪ್ರತಿವರ್ಷ ₹ 1 ಲಕ್ಷದಂತೆ ಶೈಕ್ಷಣಿಕ ಸಾಲವನ್ನು ಶೇ 2ರಷ್ಟು ಬಡ್ಡಿ ದರದಲ್ಲಿ ನೀಡಲಾಗುವುದು. ದೇವರಾಜ ಅರಸು ಅಭಿವೃದ್ಧಿ ನಿಗಮದ ವತಿಯಿಂದ ಪ್ರತಿ ವರ್ಷ 1,000 ವಿದ್ಯಾರ್ಥಿಗಳಿಗೆ ಈ ಸಾಲ ನೀಡಲಾಗುತ್ತಿದೆ’ ಎಂದು ತಿಳಿಸಿದರು.

‘ಇಂಗ್ಲಿಷ್ ಮಾಧ್ಯಮ ಶಾಲೆ ಕೊಡಿ’

ಬೆಂಗಳೂರು: ರಾಜ್ಯದ ಪ್ರತಿ ಗ್ರಾಮಪಂಚಾಯಿತಿ ಕೇಂದ್ರದಲ್ಲೂ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಆರಂಭಿಸಬೇಕು ಎಂದು ಕಾಂಗ್ರೆಸ್‌ನ ಕೆ.ಎಂ.ಶಿವಲಿಂಗೇಗೌಡ ಒತ್ತಾಯಿಸಿದ್ದಾರೆ.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತರೆ ತಮ್ಮ ಮಕ್ಕಳಿಗೆ ಉಜ್ವಲ ಭವಿಷ್ಯವಿದೆ ಎಂದು ಪೋಷಕರು ಭಾವಿಸಿದ್ದಾರೆ. ಸರ್ಕಾರ ಅದಕ್ಕೆ ಮನ್ನಣೆ ನೀಡಲೇಬೇಕು ಎಂದರು.

ನಗರ ಪ್ರದೇಶದಲ್ಲಿ ಬೇಕಾದಷ್ಟು ಇಂಗ್ಲಿಷ್ ಮಾಧ್ಯಮ ಶಾಲೆಗಳಿವೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಇಲ್ಲ. ಪಕ್ಷವು 5 ಗ್ಯಾರಂಟಿ ಜತೆಗೆ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಆರಂಭಿಸುವ ಗ್ಯಾರಂಟಿ ಘೋಷಿಸಬೇಕಿತ್ತು ಎಂದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಜ್ಯ ಸಾಕಷ್ಟು ಹಿನ್ನಡೆ ಕಂಡಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ ಮತ್ತು ಕೈಗಾರಿಕಾ ಬೆಳವಣಿಗೆ ಪ್ರಮಾಣ ಕುಸಿದಿದೆ. ಲೋಕೋಪಯೋಗಿ, ಜಲಸಂಪನ್ಮೂಲ ಸೇರಿ ಪ್ರಮುಖ ಇಲಾಖೆಗಳಲ್ಲಿ 4–5 ತಿಂಗಳಲ್ಲಿ ತರಾತುರಿಯಲ್ಲಿ ₹49,116 ಕೋಟಿ ಮೊತ್ತದ ಕಾಮಗಾರಿಗಳಿಗೆ ಮಂಜೂರಾತಿ ನೀಡಿ ಟೆಂಡರ್ ಕರೆಯಲಾಗಿದೆ ಎಂದೂ ಟೀಕಿಸಿದರು.

'ಚಾಲಕನ ಆತ್ಮಹತ್ಯೆ ಯತ್ನಕ್ಕೆ ವೈಯಕ್ತಿಕ ಕಾರಣ'

ಬೆಂಗಳೂರು: ‘ಕೆಎಸ್‌ಆರ್‌ಟಿಸಿ ನಾಗಮಂಗಲ ಘಟಕದ ಚಾಲಕ ಕಂ ನಿರ್ವಾಹಕ ಎಚ್.ಆರ್. ಜಗದೀಶ್ ಆತ್ಮಹತ್ಯೆ ಯತ್ನಕ್ಕೆ ವೈಯಕ್ತಿಕ ವಿಷಯಗಳೇ ಕಾರಣ ಎಂಬುದು ಸಿಐಡಿ ತನಿಖೆಯಲ್ಲಿ ದೃಢಪಟ್ಟಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಹೇಳಿಕೆ ನೀಡಿದ ಅವರು, ‘ನಿಗಮದ ವಿಭಾಗೀಯ ನಿಯಂತ್ರಕರು ಜಗದೀಶ್ ಅವರನ್ನು ಮದ್ದೂರು ಘಟಕಕ್ಕೆ ವರ್ಗಾವಣೆ ಮಾಡಿದ್ದರು. ಅಲ್ಲಿಗೆ ಹೋಗಲು ಇಷ್ಟವಿಲ್ಲದೆ ಆತ್ಮಹತ್ಯೆಗೆ ಯತ್ನಿಸಿದ್ದರು. ವರ್ಗಾವಣೆ ತಪ್ಪಿಸಿಕೊಳ್ಳಲು ಈ ಪ್ರಯತ್ನ ಮಾಡಿದ್ದರು ಎಂಬುದು ಸಿಐಡಿ ತನಿಖೆಯಲ್ಲಿ ಪತ್ತೆಯಾಗಿದೆ’ ಎಂದರು.

‘ಆತ್ಮಹತ್ಯೆಗೆ ಯತ್ನಿಸಿದ್ದ ಜಗದೀಶ್ ಮತ್ತು ಆತ್ಮಹತ್ಯೆಗೆ ಅನುಮತಿ ಕೋರುವ ಪತ್ರ ಬರೆದುಕೊಟ್ಟಿದ್ದ ಮತ್ತೊಬ್ಬ ಚಾಲಕ ಎಂ.ಎಸ್. ನವೀನ್‌ಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ನಾಗಮಂಗಲ ಘಟಕದ ಸಹಾಯಕ ಕಾರ್ಯ ಅಧೀಕ್ಷಕ ಎಸ್.ಎಲ್. ಮಂಜುನಾಥ್ ಕರ್ತವ್ಯಲೋಪ ಎಸಗಿರುವುದು ಪತ್ತೆಯಾಗಿದೆ. ಈ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸದೇ ಠಾಣಾಧಿಕಾರಿ ಅಶೋಕ್ ಕುಮಾರ್ ಮತ್ತು ಪೊಲೀಸ್ ಇನ್‌ಸ್ಪೆಕ್ಟರ್ ಕೂಡ ಲೋಪ ಎಸಗಿದ್ದಾರೆ. ಅವರ ವಿರುದ್ಧವೂ ಕ್ರಮಕ್ಕೆ ಶಿಫಾರಸು ಮಾಡಲಾಗಿದೆ’ ಎಂದು ವಿವರಿಸಿದರು.

‘ಆತ್ಮಹತ್ಯೆಗೆ ಯತ್ನಿಸಿದ್ದ ಚಾಲಕನನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಮಾಜಿ ಶಾಸಕ ಸುರೇಶ್ ಗೌಡ ಅವರು ಆಂಬುಲೆನ್ಸ್ ತಡೆದಿರುವುದು ತನಿಖೆಯಲ್ಲಿ ದೃಢಪಟ್ಟಿದೆ. ಅವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಖಾಲಿ ಹುದ್ದೆ ಭರ್ತಿಗೆ ಆಗ್ರಹ

ಬೆಂಗಳೂರು: ‘ನಾನು ಶಾಸಕನಾದ 23 ವರ್ಷದಲ್ಲಿ ಇದೇ ಮೊದಲ ಬಾರಿಗೆ ಒಂದು ವಿಭಿನ್ನ ಬಜೆಟ್ ಮಂಡನೆಯನ್ನು ಈ ವರ್ಷ ನೋಡಿದ್ದೇನೆ’ ಎಂದು ಜೆಡಿಎಸ್‌ನ ಮರಿತಿಬ್ಬೇಗೌಡ ಬಣ್ಣಿಸಿದರು.

ವಿಧಾನ ಪರಿಷತ್‌ನಲ್ಲಿ ಬಜೆಟ್ ಮೇಲೆ ಮಾತನಾಡಿದ ಅವರು, ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಹೊಗಳಿದರು. ಅಹಿಂಸಾ ತತ್ವದ ಮೇಲೆ ಎಲ್ಲ ಸಿದ್ಧಾಂತಕ್ಕೆ ಮೆಚ್ಚುಗೆಯಾಗುವ ಬಜೆಟ್ ಎಂದೂ ಹೇಳಿದರು.

‘ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ರೈತರು, ಕಾರ್ಮಿಕರ ಮಕ್ಕಳಿಗಾಗಿ ಹಿಂದಿನ ಬಿಜೆಪಿ ಸರ್ಕಾರ ನೀಡುತ್ತಿದ್ದ ವಿದ್ಯಾರ್ಥಿ ವೇತನವನ್ನು ಮುಂದುವರಿಸಬೇಕು.
ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಯುಜಿಸಿ ಅಡಿ ಹಣ ಬರುತ್ತಿಲ್ಲ. ರಾಜ್ಯ ಸರ್ಕಾರವು ಅನುದಾನ ಬಿಡುಗಡೆ ಮಾಡುತ್ತಿಲ್ಲ. ಈ ಬಗ್ಗೆ ಗಮನಹರಿಸಬೇಕು’ ಎಂದರು.

ಆಗ ಸಚಿವ ಪ್ರಿಯಾಂಕ್ ಖರ್ಗೆ, ಯು.ಬಿ. ವೆಂಕಟೇಶ್, ಮಂಜುನಾಥ ಭಂಡಾರಿ ಕೇಂದ್ರ ಸರ್ಕಾರದ ಕೆಲವು ನೀತಿಗಳನ್ನು ಟೀಕಿಸಿದರು.

ಬಜೆಟ್ ಮೇಲೆ ಸರ್ಕಾರದ ಮುಖ್ಯಸಚೇತಕ ಸಲೀಂ ಅಹ್ಮದ್, ಅರವಿಂದಕುಮಾರ್ ಅರಳಿ, ಹರೀಶ್‌ಕುಮಾರ್, ಮಧು ಮಾದೇಗೌಡ, ಎಸ್. ರವಿ, ನಜೀರ್ ಅಹ್ಮದ್, ಅನಿಲ್‌ಕುಮಾರ್ ಕೂಡಾ ಮಾತನಾಡಿದರು.

ಕನ್ನಡ ಕಡೆಗಣನೆ ಪರಿಶೀಲನೆಗೆ ನಿರ್ಧಾರ

ಬೆಂಗಳೂರು: ಕನ್ನಡ ಕಡೆಗಣಿಸಿದೆ ಎನ್ನಲಾದ ನಗರದ ಚಾಲುಕ್ಯ ವೃತ್ತದಲ್ಲಿರುವ ಸೋಫಿಯಾ ಶಾಲೆಗೆ ತಜ್ಞರು ಹಾಗೂ ಕನ್ನಡಪರ ಹೋರಾಟಗಾರರ ತಂಡದೊಂದಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಿರ್ಧರಿಸಿದೆ.

ಈ ಬಗ್ಗೆ ಗುರುವಾರ ಶಾಲೆಯ ಪ್ರಾಂಶುಪಾಲರಾದ ಸಿಸ್ಟರ್ ಅಲ್ಪನಾ, ‘ಕನ್ನಡ ಭಾಷೆ ಕೈಬಿಟ್ಟಿರುವುದು ಸತ್ಯಕ್ಕೆ ದೂರವಾಗಿದೆ. ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಡ್ಡಾಯವಾಗಿ ಕಲಿಸುತ್ತಿದ್ದೇವೆ’ ಎಂದು ಸ್ಪಷ್ಟನೆ ನೀಡಿದ್ದರು.

‘ಶಾಲಾ ಆಡಳಿತ ಮಂಡಳಿ ಸ್ಪಷ್ಟನೆ ನೀಡಿದ್ದರೂ ತಜ್ಞರ ತಂಡ ಭೇಟಿ ನೀಡಿ, ಪರಿಶೀಲಿಸಲಿದೆ’ ಎಂದು ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ತಿಳಿಸಿದ್ದಾರೆ.

ನಿಧನ

ಕೆ.ಎಸ್. ಸುರೇಶ್
(ಕೆ.ಶ್ರೀನಿವಾಸ ರೆಡ್ಡಿಯವರ ಪುತ್ರ)
ಕಸವನಹಳ್ಳಿ, ಬೆಂಗಳೂರು
ಇವರು ಇಂದು 20–07–2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇಂತಿ ದುಃಖತಪ್ತರು:
ಪತ್ನಿ, ಮಕ್ಕಳು ಹಾಗೂ ಕುಟುಂಬ ವರ್ಗದವರು.

On the Occasion of Varamahalakshmi Presenting
New Crafts ನ್ಯೂ ಕ್ರಾಫ್ಟ್ಸ್ ಸಿಲ್ಕ್ ಇಂಡಿಯಾ
Silk India® 2023
Exhibition & Sale
An opulent show of Ethnic & Traditional Silk, Cotton Handloom Products made by master 100 Weavers from all over India
Silk Saree I Suits I Dress Material I Stoles | Dupattas | Kurtas Kurties I Pure & Probable Silk | Tussar Silk I Shanthipur Silk
SINDOOR CONVENTION CENTER
15th Cross, Sarakki, 1st Phase, J.P. Nagar Ring Road, Bengaluru
From : 19th to 30th Jul. 2023
Full A/c
Products on Display - Orissa : Sambhalpuri Ikkat Silk Saree, Bihar : Oragnic Tassar Silk Sarees, Suit & Stoles, Assam : Muga & Eri Silk Sarees, Karnataka : Creap Silk, Georgette Silk, Arini Silk & Printed Sarees, Tamilnadu : Kanjeevaram Silk Sarees & Designer Fancy Sarees, Andra Pradesh : Dharmavara, Uppada, Gadwal, Mangalagiri & Pochampalli Sarees, Uttar Pradesh : Mulbari Silk, Jamdani, Jamawar Silk Sarees & Chiffon Silk, Maharashtra : Designer Dress materials, Chhatisgarh : Exclusive Raw Silk Sarees, Kosa Silk, Tassar Suit & Duppatta, Madhya Pradesh : Maheswari, Chanderi Silk Sarees & Suit, West Bengal : Baluchari, Dhaka Masli, Gicha Sarees, Boutique Sarees, Kantha Sarees, Zordoshi, Jammu & Kashmir : Chinon Silk, Tady Silk Printed Sarees, Pashmina Shawls & Suit, Rajasthan : Kota Silk, Hand Block Print Dress & Sarees, Punjab : Fulkari Dress and many more...

10 Days Only
Don’t miss it...
Time : 10.30 am - 8.30 pm Call: 08850 902824
All Credit & Debit Cards Accepted
Entry & Parking Free

ಸಂಕ್ಷಿಪ್ತ ಸುದ್ದಿ

ಸಮಾಜಮುಖಿ ಯುವ ಪ್ರಬಂಧ ಸ್ಪರ್ಧೆಗೆ ಆಹ್ವಾನ

ಬೆಂಗಳೂರು: ಸಮಾಜಮುಖಿ ಪ್ರಕಾಶನದಿಂದ ‘ಯುವ ಪ್ರಬಂಧ ಸ್ಪರ್ಧೆ’ ಆಯೋಜಿಸದೆ.

ಕರ್ನಾಟಕದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಭಾಷಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿನ ಬದಲಾವಣೆ ಗುರುತಿಸುವ ಅಥವಾ ಬದಲಾವಣೆ ಬಯಸುವ ಪ್ರಬಂಧವಾಗಿರಬೇಕು. ಪ್ರಬಂಧವು 1,600 ಪದಗಳಿಗಿಂತ ಕಡಿಮೆ 2,000 ಪದಗಳಿಗಿಂತ ಹೆಚ್ಚು ಇರಬಾರದು.

ಲೇಖಕರು ಪ್ರಬಂಧದ ಜೊತೆಗೆ ತಮ್ಮ ಜನ್ಮ ದಿನಾಂಕದ ಯಾವುದಾದರೂ ದಾಖಲೆಯ ಪ್ರತಿ, ಪೂರ್ಣ ಅಂಚೆ ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಭಾವಚಿತ್ರ ಕಳುಹಿಸಬೇಕು.

ನುಡಿ/ಯುನಿಕೋಡ್ ಲಿಪಿಯಲ್ಲಿರುವ ಪ್ರಬಂಧವನ್ನು ವರ್ಡ್ ಕಡತದಲ್ಲಿ ಅಗಸ್ಟ್ 15ರೊಳಗೆ ಇ–ಮೇಲ್ ವಿಳಾಸ samajamukhi2017@gmail.com ಕಳುಹಿಸಬೇಕು.

ಆಯ್ಕೆಯಾದ ಐದು ಪ್ರಬಂಧಗಳಿಗೆ ತಲಾ ₹5 ಸಾವಿರ ಬಹುಮಾನ, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ನೀಡಲಾಗುವುದು. 10 ಉತ್ತಮ ಪ್ರಬಂಧಗಳನ್ನು ಸಮಾಜಮುಖಿ ಪತ್ರಿಕೆಯ 2023ರ ನವೆಂಬರ್ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು ಎಂದು ಸಮಾಜಮುಖಿ ಪ್ರಕಾಶನದ ಚಂದ್ರಕಾಂತ್ ವಡ್ಡು ತಿಳಿಸಿದ್ದಾರೆ.

‘ಲಿಂಗತ್ವ ಸಮಾನತೆ ಸಂಹಿತೆ ಜಾರಿಗೊಳಿಸಿ’

ಬೆಂಗಳೂರು: ‘ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಬದಲು ಲಿಂಗತ್ವ ಸಮಾನತೆಯ ಸಂಹಿತೆ ಜಾರಿಗೊಳಿಸಬೇಕು’ ಎಂದು ನಾವೆದ್ದು ನಿಲ್ಲದಿದ್ದರೆ ಸಂಘಟನೆ ಸಂಚಾಲಕಿ ಮಧು ಭೂಷಣ್ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಯುಸಿಸಿ ಸಂಹಿತೆ ಅತ್ಯಂತ ಸಂಕೀರ್ಣ ವಿಷಯ. ಅದರ ಜಾರಿಗೆ ಮುನ್ನ ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರು (ಎಲ್‌ಜಿಬಿಟಿಕ್ಯೂ) ಸಂಘಟನೆಗಳ ಜೊತೆ ಕೇಂದ್ರ ಸರ್ಕಾರ ಚರ್ಚಿಸಲಿ’ ಎಂದರು.

‘ಏಕರೂಪ ನಾಗರಿಕ ಸಂಹಿತೆ ಬಹುತ್ವಕ್ಕೆ ವಿರುದ್ಧವಾಗಿದೆ. ಇದು ಮಹಿಳೆಯರು, ಲೈಂಗಿಕ ಅಲ್ಪಸಂಖ್ಯಾತರಿಗೆ ಸಮಸ್ಯೆ ಉಂಟು ಮಾಡುವ ಆತಂಕವಿದೆ. ಈ ಬಗ್ಗೆ ಮಾನವ ಹಕ್ಕುಗಳ ಸಂಘಟನೆಯ ಪ್ರತಿನಿಧಿಗಳು ಭಾರತ ಕಾನೂನು ಆಯೋಗದ ಅಧ್ಯಕ್ಷರಿಗೆ ಪ್ರತಿಕ್ರಿಯೆ ಪತ್ರವನ್ನು ಸಲ್ಲಿಸಿದ್ದೇವೆ’ ಎಂದು ಮಾಹಿತಿ ನೀಡಿದರು.

ವಕೀಲೆ ಮೈತ್ರೇಯಿ ಮಾತನಾಡಿ, ‘ಯುಸಿಸಿ ಜಾರಿಯ ಹಿಂದೆ ಸ್ಪಷ್ಟ ಉದ್ದೇಶವಿಲ್ಲ. ಇದರಲ್ಲಿ ಮಹಿಳಾ ಹಕ್ಕುಗಳ ಕುರಿತು, ಒಂದು ಧರ್ಮದ ಹಕ್ಕುಗಳನ್ನೇ ಗುರಿ ಮಾಡಿರುವ ಅನುಮಾನವಿದೆ’ ಎಂದರು.

ಮಯೂರ ಓದಿರಿ

CONNECT

First Time in KR PURAM Under Water Aquarium Tunnel
ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
ITI Ground, Next to Hanging Bridge, KR Puram, Bengaluru
AQUA TUNNEL SHOW
July & August

Complete Family Shopping & Amusement Exhibition
VISIT TODAY | Daily : 4pm - 9pm | Call : 8904727123

PROPERTY CORNER

Agricultural FARMLAND
Divine Euphoria
@ KANAKPURA
•Fully Developed •Swimming Pool •Clubhouse •Children Play area •Temple •Meditation Center •Birds & Animals •Adventure Sports
₹ 13 Lakhs
550+ CUSTOMERS | 55+ COTTAGES BUILT
7760574999 - 7892154461
www.divineeuphoria.co.in

AVAILABLE FOR LEASE / RENT
VACANT SITE
in IDEAL HOMES SOCIETY, RR NAGAR, Mysore Rd
Ideal for LOGISTICS/ WAREHOUSE/ SERVICE CENTRE FOR VEHICLES.
1. 8000 Sft PLOT: with COMPOUND WALL on all sides and SECURITY.
2. 1500 Sft OPEN PLOT: Excellent Location
Contact: Mr. Rajesh - 9900522163

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

General

General

DC CONVERSION/ Change of land use, Phodi Durasti, NOC,Approvals, Khata, RERA Work,Para Legal Services.Barton Centre MG Road. 9916310226/ 9353128035. vernadevelopers.com

Sites

Multiple Locations

WANTED 4000-20000SFT Land Jayanagar, Basavangudi, Chamrajpet, J.P.Nagar, CBD Surrounding area. Purchase & JV, Verna Developers, MG Road, Bangalore. 9353128035/ 9620253180

REAL ESTATE SELLING

Sites

Yelahanka

30x40 Converted Plot @ 1,65,000/-
138/- per sq.ft, 90 minutes Journey from Yelahanka
Ready for Registration
9343510635, 9010559539

DH DECCAN HERALD | ಪ್ರಜಾವಾಣಿ
REAL ESTATE
PAY FOR 2 GET 1 FREE
BOOK YOUR PROPERTY AD IN DECCAN HERALD ALL KARNATAKA + PRAJAVANI BENGALURU CITY
conditions apply*
@ 1070/-* Per Sqcm Single Column
@ 1100/-* Per Sqcm Multi Column
For More Details Contact:
9845114560 | 9731810277
9901641752 | 9886213331
080- 45557163 | 45557164

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

JOB OPPORTUNITIES

Wanted

LOOKING FOR Telecallers for Insurance/ Car Loan Process /Field Executive Basaveshwarnagar/ Peenya/ Kengeri: 9611450180

General

OPPORTUNITY TO Earn INCOME 60k & Above per month with Fixed Salary for Retired, Bankers, Sr.Citizens, Business People's, Homemaker's. Part/ Full Time. Contact:- 9035303572/ 9060034387.

Part-Time Jobs

RETIRED/ VRS Persons, Age above 45yrs Earn 50K- 60K PM here No Retirement: 9886641282/ 7019215243

PERSONAL

Lost

LOST
I, Chandrika Sundarraman residing B 110, Oman Tapaz, Sarjapur Road, HSR Layout, Bangalore have lost Original Sale Deed Document No. 5105/ 1997-98 dated 28.07.1997 While taking xerox in HSR Layout on dated 14.11.2022. If found contact nearest police station or Call: 9962450868

Change of Name

I, AFROZI W/o. #1138523, Hav, Late M. Joseph, R/o. #01, May in Villa, 01st 'A' Cross Road, Vinayakanagar, Bengaluru-17, have changed my name to AFROZI JOSEPH affidavit dated 17.07.2023 notary L. Goapakrishna Bangaore.

CHANGE OF NAME
I, C.B. DHASAMI Daughter of No. 13864594-H, EX-HAV. C.S.BOSE, Residing at D-102, 3rd Floor, Gagan Castle Apartment, R.R. Nagar, Bengaluru have changed my name from C.B.DHASAMI to DASHAMI C.B. vide affidavit dated 19.07.2023 sworn before Advocate and Notary S.R. Thulasikrishna at Bengaluru.

KUMARI RAJYALAKSHMI, Wife/o, 6494008F, NK, BUSSA RAMANJAYULU, H.No. 6-409, Nagulaputta Street, Markapur, Prakasam, Andhra Pradesh changed name from KUMARI RAJYALAKSHMI to BUSSA RAJYALAKSHMI, 19/07/2023 Notary K.V. Mani Bangalore

CHANGE OF NAME
I, ADITYA SUNITHA RADHAKRISHNA S/o Radhakrishna K. M., R/at. # 2970, 2nd Stage, Rajajinagar, Srirampura Post, Bengaluru-560021 have changed my name to ADITYA RADHAKRISHNA vide affidavit dt. 20/07/2023, before Notary N.Narayanaswamy, Bangalore. Henceforth, I shall be called ADITYA RADHAKRISHNA only

CHANGE OF NAME
I, R. GOPALAKRISHNA Residing at No. 52/2, 3rd cross, Vijaya Bank Colony, Dodda Banaswadi, Bengaluru - 560043 have changed my name from R. GOPALAKRISHNAN to R. GOPALAKRISHNA vide affidavit dated 30.06.2023 before notary L. Gopalakrishna, Bengaluru. Henceforth he shall be called R. GOPALAKRISHNA only.

JAGDISH PRASAD, Father/o, 4005638P, CHM/APTC, ANOOP KUMAR, Vill- Balh, Ghumarwin, Bilaspur, Himachal Pradesh, changed name JAGDISH PRASAD to JAGDISH PARSAD, 18/07/2023 Notary K.V. Mani Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Kirloskar

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್.,

ನೋಂದಾಯಿತ ಕಛೇರಿ : ಸಂ. 19, 2ನೇ ಮುಖ್ಯ ರಸ್ತೆ, ಪೀಣ್ಯ 1ನೇ ಸ್ಟೇಜ್, ಫೇಸ್–1, ಪೀಣ್ಯ, ಬೆಂಗಳೂರು – 560058. **ದೂರವಾಣಿ :** 080 28397256; **ಫ್ಯಾಕ್ಸ್ :** 080 28396727;
ವೆಬ್‌ಸೈಟ್ : www.kirloskarelectric.com **ಇ–ಮೇಲ್ :** investors@kirloskarelectric.com
CIN : L31100KA1946PLC000415

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್‌ನ 76ನೇ ವಾರ್ಷಿಕ ಮಹಾಸಭೆಯ ಸೂಚನೆ

ಈ ಮೂಲಕ ಸೂಚನೆ ನೀಡುವುದೇನೆಂದರೆ, ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯ (“ಎಂ.ಸಿ.ಎ”)ದ ಎಲ್ಲಾ ಕಾಯಿದೆ ಕಟ್ಟಳೆಗಳನ್ವಯ ಕಂಪನಿ ಕಾಯ್ದೆ 2013ರ (ಕಾಯ್ದೆ) ಅನ್ವಯವಾಗುವ ಎಲ್ಲಾ ನಿಯಮಗಳೂ ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳು ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (“ಸೆಬಿ”) (ಪಟ್ಟಿಮಾಡುವ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು 2015ರ ಅನುಸಾರವಾಗಿ ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್ (ಕಂಪನಿ) ಯ 76ನೇ ವಾರ್ಷಿಕ ಮಹಾಸಭೆಯು (“ಎಜಿಎಂ”) ಸೋಮವಾರ, ಆಗಸ್ಟ್ 14, 2023 ರಂದು ಬೆಳಿಗ್ಗೆ 11.00 ಗಂಟೆಗೆ ವಿಡಿಯೋ ಕಾನ್ಫರೆನ್ಸ್ (“ವಿಸಿ”) / ಇತರೆ ಆಡಿಯೋ ವಿಷುಯಲ್ ಮೀನ್ಸ್ (“ಒಎವಿಎಂ”) ಮೂಲಕ ನಡೆಯಲಿದೆ.

2013ರ ಕಂಪನಿಗಳ ಕಾಯಿದೆ ಕಟ್ಟಳೆಗಳ ಅನುಸಾರ 2015ರ ಸೆಬಿ (ಲಿಸ್ಟಿಂಗ್ ಹೊಣೆಗಾರಿಕೆಗಳು ಮತ್ತು ಬಹಿರಂಗ–ಪಡಿಸುವಿಕೆಯ ಅಗತ್ಯತೆಗಳು) ನಿಯಂತ್ರಣಗಳು (ಸೆಬಿ ಲಿಸ್ಟಿಂಗ್ ರೆಗ್ಯೂಲೇಶನ್ ಮತ್ತು ಎಂಸಿಎ ಸುತ್ತೋಲೆಗಳಂತೆ ಕಂಪನಿಯ ಎಜಿಎಂನ್ನು ವಿಸಿ/ಓಎವಿಎಂ ಮೂಲಕ ನಡೆಸಲಾಗುತ್ತದೆ. ಹಾಗಾಗಿ ಸದಸ್ಯರು ಮುಂಬರುವ ಎಜಿಎಂಗೆ ವಿಸಿ/ಓಎವಿಎಂ ಮೂಲಕ ಹಾಜರಾಗಿ ಭಾಗವಹಿಸಬಹುದಾಗಿರುತ್ತದೆ.

76ನೇ ಎಜಿಎಂನ ಸೂಚನೆಯನ್ನು ಮತ್ತು ಹಣಕಾಸು ವರ್ಷ 2022–23 ರ ವಾರ್ಷಿಕ ವರದಿಯನ್ನು ವಿದ್ಯುನ್ಮಾನ ಮಾದರಿಯಲ್ಲಿ ಕಂಪನಿ/ ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ / ಡೆಪಾಸಿಟರೀಸ್ / ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಇವರಲ್ಲಿ ಇ–ಮೇಲ್ ವಿಳಾಸ ನೋಂದಾಯಿತವಾದ ಸದಸ್ಯರಿಗೆ ಕಳುಹಿಸಲಾಗುತ್ತದೆ. ವಾರ್ಷಿಕ ವರದಿಯ ಭೌತಿಕ ಪ್ರತಿಗಳನ್ನು ನೀಡುವುದಕ್ಕೆ ವಿನಾಯಿತಿ ಇದ್ದರೂ ನಿರ್ದಿಷ್ಟವಾಗಿ ವಿನಂತಿಸುವ ಸದಸ್ಯರಿಗೆ ಕಳುಹಿಸಲಾಗುತದೆ. ಎಜಿಎಂನ ಸೂಚನೆ ಮತ್ತು ವಾರ್ಷಿಕ ವರದಿಯು ಕಂಪನಿಯ ವೆಬ್ ಸೈಟ್ www.kirloskarelectric.com ದಲ್ಲಿ ಲಭ್ಯವಿದ್ದು, ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ನ ವೆಬ್‌ಸೈಟ್‌ಗಳಾದ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ ವೆಬ್‌ಸೈಟ್‌ಗಳಾದ ಕ್ರಮವಾಗಿ www.bseindia.com ಮತ್ತು www.nseindia.com ಮತ್ತು ಸಿಡಿಎಸ್‌ಎಲ್ ನ ವೆಬ್‌ಸೈಟ್ www.evotingindia.com ಗಳಲ್ಲಿ ಲಭ್ಯವಿರುತ್ತದೆ.

ಕಂಪನಿಯು ವಿಸಿ / ಓಎವಿಎಂ ಸೌಲಭ್ಯವನ್ನು ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (“ಸಿಡಿಎಸ್‌ಎಲ್”) ನಿಂದ ಪಡೆಯುತ್ತಿದೆ. ಸದಸ್ಯರು ವಿಸಿ / ಓಎವಿಎಂ ಸೌಲಭ್ಯದ ಮೂಲಕ ಮಾತ್ರ ಎಜಿಎಂಗೆ ಹಾಜರಾಗಿ ಭಾಗವಹಿಸಬಹುದು. ವಿಸಿ / ಓಎವಿಎಂ ಮೂಲಕ ಸಭೆಗೆ ಹಾಜರಾಗುವ ಸದಸ್ಯರನ್ನು ಕಂಪನಿಗಳ ಕಾಯಿದೆ 2013 ರ ಸೆಕ್ಷನ್ 103 ಅಡಿಯಲ್ಲಿ ಕೋರಂ ಉದ್ದೇಶಕ್ಕಾಗಿ ಎಣಿಕೆ ಮಾಡಲಾಗುತ್ತದೆ. ಎಜಿಎಂ ಗೆ ಸೇರುವ ಸೂಚನೆಗಳು ಮತ್ತು ಎಜಿಎಂ ನಲ್ಲಿ ಭಾಗವಹಿಸುವ ವಿಧಾನವನ್ನು ಎಜಿಎಂ ನ ಸೂಚನೆಯಲ್ಲಿ ಒದಗಿಸಲಾಗಿದೆ.

ಸದಸ್ಯರುಗಳು ರಿಮೋಟ್ ಇ–ಮತದಾನದ ಮೂಲಕ ಎಜಿಎಂ ಸೂಚನೆಯಲ್ಲಿ ಸೂಚಿಸಿರುವಂತೆ ತಮ್ಮ ಮತಗಳನ್ನು ದೂರದಿಂದಲೇ ವ್ಯವಹಾರದ ಮೇಲೆ ಚಲಾಯಿಸಲು ಅವಕಾಶವನ್ನು ಹೊಂದಿರುತ್ತಾರೆ. ಎಲೆಕ್ಟ್ರಾನಿಕ್ ಫೋಲಿಯೊ, ಭೌತಿಕ ಫೋಲಿಯೋ ಮತ್ತು ಇ–ಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರುಗಳು ರಿಮೋಟ್ ಇ–ಮತದಾನ ಮಾಡುವ ವಿಧಾನವನ್ನು ಎಜಿಎಂ ಸೂಚನೆಯಲ್ಲಿ ತಿಳಿಯಪಡಿಸಲಾಗುತ್ತದೆ, ಎಜಿಎಂಗೆ ವಿಸಿ / ಓಎವಿಎಂ ಮೂಲಕ ಹಾಜರಾದಾಗ ಪಾಲಿಸಬೇಕಾದ ಸೂಚನೆಗಳು ಎಜಿಎಂ ಸೂಚನೆಯಲ್ಲಿ ತಿಳಿಯಪಡಿಸಲಾಗಿದೆ. ಇ–ಮತದಾನದ ವ್ಯವಸ್ಥೆಯನ್ನು ಎಜಿಎಂನ್ನು ಹಾಜರಾಗುವ ಸದಸ್ಯರುಗಳಿಗೆ ಎಜಿಎಂ ನಲ್ಲಿ ನೀಡಲಾಗುವದು, ಯಾರು ರಿಮೋಟ್ ಇ–ಮತದಾನದ ಮೂಲಕ ಮಾಡಿರುವದಿಲ್ಲವೋ ಅವರು ಸಭೆ ನಡೆಯುವ ವೇಳೆಯಲ್ಲಿ ಮತದಾನ ಮಾಡಬಹುದಾಗಿದೆ. ಎಲೆಕ್ಟ್ರಾನಿಕ್ ರೂಪದಲ್ಲಿ ಅಥವಾ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ (“ಆರ್‌ಟಿಎ”) ಷೇರುಗಳನ್ನು ಹೊಂದಿದ್ದರೆ, ಸದಸ್ಯರು ತಮ್ಮ ಅರ್ಜಿ, ಇ–ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಗಳನ್ನು ಮೌಲೀಕರಿಸಲು / ನವೀಕರಿಸಲು ಡಿಪಾಸಿಟರಿ ಭಾಗೀದಾರರನ್ನು (ಡಿಪಿ) ಸಂಪರ್ಕಿಸಲು ಕೋರಲಾಗಿದೆ. ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ತಾತ್ಕಾಲಿಕವಾಗಿ ತಮ್ಮ ಇ–ಮೇಲ್ ವಿಳಾಸಗಳನ್ನು ಮತ್ತು ಆರ್‌ಟಿಎನಲ್ಲಿ ನೋಂದಾಯಿಸಿದ ಮೊಬೈಲ್ ಸಂಖ್ಯೆಗಳನ್ನು ಪಡೆಯಬಹುದು. ಯಾವುದೇ ಪ್ರಶ್ನೆಗಳಿದ್ದಲ್ಲಿ ಸದಸ್ಯರು irg@integratedindia.in ಪರ್ಯಾಯವಾಗಿ ಎಲೆಕ್ಟ್ರಾನಿಕ್ ಫೋಲಿಯೋ ಮತ್ತು ಭೌತಿಕ ಫೋಲಿಯೋ ಸಂದರ್ಭದಲ್ಲಿ ಷೇರು ಪ್ರಮಾಣಪತ್ರದ ಪ್ರತಿಯೊಂದಿಗೆ ಸದಸ್ಯರು ಇ–ಮೇಲ್ ಐಡಿಗಾಗಿ ವಿನಂತಿಯನ್ನು irg@integratedindia.in ಕಳುಹಿಸಬಹುದು ಮತ್ತು ಮೊಬೈಲ್ ಸಂಖ್ಯೆ, ಇ–ಮೇಲ್ ವಿಳಾಸ, ಸ್ವಯಂ ದೃಢೀಕೃತ ಪ್ಯಾನ್ ಪ್ರತಿ ಮತ್ತು ಕ್ಲೈಂಟ್ ಮಾಸ್ಟರ್ ಒದಗಿಸುವ ಸಹಿ ಮಾಡಿದ ವಿನಂತಿಯ ಪತ್ರದ ಸ್ಕ್ಯಾನ್ ಮಾಡಿದ ಪ್ರತಿಯನ್ನು ಕಳುಹಿಸಬಹುದು. ಅಲ್ಲದೇ ಭೌತಿಕ ಷೇರುಗಳನ್ನು ಹೊಂದಿರುವ ಹಾಗೂ ಕೆವೈಸಿ ವಿವರಗಳನ್ನು ಸಲ್ಲಿಸಿರದ ಸದಸ್ಯರುಗಳು ಕಂಪನಿಯ ಆರ್‌ಟಿಎ ಗೆ ಆಯ್.ಎಸ್.ಆರ್–1 ಅರ್ಜಿಯನ್ನು ಪ್ಯಾನ ಮತ್ತು ಇತರ ಕೆವೈಸಿ ವಿವರಗಳನ್ನು ನವೀಕರಿಸಲು ಸಲ್ಲಿಸಬೇಕು. ಅರ್ಜಿಯ ನಮೂನೆಯನ್ನು ಕಂಪನಿಯ ವೆಬ್‌ಸೈಟ್ www.kirloskarelectric.com/investors/investors-information/ investor-service-request.html ನಲ್ಲಿ ಪಡೆಯಬಹುದು.

ಸದಸ್ಯರುಗಳು ತಮಗೆ ಕೊಡಮಾಡಲಾಗುವ ಎಜಿಎಂ ಸೂಚನೆಯಲ್ಲಿನ ಎಲ್ಲಾ ವಿವರಗಳನ್ನು ವಿಶೇಷವಾಗಿ ಎಜಿಎಂ ಗೆ ಭಾಗವಹಿಸುವ, ಮತವನ್ನು ದೂರದಿಂದ ಚಲಾಯಿಸುವ ಅಥವಾ ಸಭೆಯಲ್ಲಿ ಭಾಗವಹಿಸುವಾಗ ಮತ ಚಲಾಯಿಸುವ ಕುರಿತಾದ ವಿವರಗಳನ್ನು ಜಾಗರೂಕತೆಯಿಂದ ಓದಿಕೊಳ್ಳಲು ಸೂಚಿಸಲಾಗಿದೆ.

ನಿರ್ದೇಶಕರ ಮಂಡಳಿಯ ಆದೇಶದ ಅನುಸಾರ,
ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್‌ನ ಪರವಾಗಿ,
ಮಹಾಬಲೇಶ್ವರ ಭಟ್,
ಜನರಲ್ ಮ್ಯಾನೇಜರ್ – ಕಾರ್ಪೊರೇಟ್ ವ್ಯವಹಾರಗಳು ಮತ್ತು ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಜುಲೈ 21, 2023

ದೇಶದಾದ್ಯಂತ ಆಘಾತ, ಆಕ್ರೋಶ

ಪ್ರಜಾವಾಣಿ ವಾರ್ತೆ

ಇಂಫಾಲ್/ನವದೆಹಲಿ/ಬೆಂಗಳೂರು: ಮಣಿಪುರದಲ್ಲಿ ಕುಕಿ ಬುಡಕಟ್ಟು ಸಮುದಾಯದ ಮೂವರು ಮಹಿಳೆಯರನ್ನು ಬೆತ್ತಲುಗೊಳಿಸಿ, ಲೈಂಗಿಕ ದೌರ್ಜನ್ಯ ನಡೆಸಿದ ಮತ್ತು ಒಬ್ಬ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಕೃತ್ಯಕ್ಕೆ ದೇಶದಾದ್ಯಂತ ಆಘಾತ ಮತ್ತು ಆಕ್ರೋಶ ವ್ಯಕ್ತವಾಗಿದೆ.

ಇದು ಮನುಕುಲವೇ ತಲೆತಗ್ಗಿಸುವಂತಹ ಕೃತ್ಯ ಎಂದು ಹಲವು ಗಣ್ಯರು ಟ್ವೀಟ್ ಮಾಡಿದ್ದಾರೆ. ಬಾಲಿವುಡ್‌ನ ಹಲವು ತಾರೆಯರು ಕೃತ್ಯದ ಬಗ್ಗೆ ಆಘಾತ ವ್ಯಕ್ತಪಡಿಸಿದ್ದಾರೆ. ಕೃತ್ಯ ನಡೆದು 75 ದಿನಗಳಾದರೂ, ಕ್ರಮ ತೆಗೆದುಕೊಳ್ಳದೇ ಇರುವುದರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಈ ವಿಷಯದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಎಂದು ಜುಲೈ 10ರಂದು ಆದೇಶ ನೀಡಿದ್ದ ಸುಪ್ರೀಂ ಕೋರ್ಟ್ ವಿರುದ್ಧವೂ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತವಾಗಿದೆ.

ಮಣಿಪುರದಲ್ಲಿ ಶಾಂತಿ ಸ್ಥಾಪನೆಗೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ವಿರೋಧ ಪಕ್ಷಗಳ ನಾಯಕರು ಒತ್ತಾಯಿಸಿದ್ದಾರೆ. ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಕೇಂದ್ರ ಮತ್ತು ಮಣಿಪುರ ಸರ್ಕಾರವನ್ನು ಟೀಕಿಸಿದ್ದಾರೆ.

ಈಗಲಾದರೂ ನಿಮ್ಮ ಬಾಯಿ ತೆರೆದು ಈ ಮಹಿಳೆಯರಲ್ಲಿ ಕ್ಷಮೆಯಾಚಿಸದಿದ್ದರೆ ನಿಮ್ಮ 56 ಇಂಚಿನ ಬಡಾಯಿಗೆ ಧಿಕ್ಕಾರ ವಿರಲಿ. ಹೌದು, ನಿಮ್ಮಿಂದ ನಾವು ಏನನ್ನಾದರೂ ನಿರೀಕ್ಷಿಸಲು ಹೇಗೆ ಸಾಧ್ಯ? ಮಹಿಳಾ ಕುಸ್ತಿಪಟುಗಳ ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿಗಳನ್ನು ಸದ್ದಿಲ್ಲದೆ ಬೆಂಬಲಿಸಿದವರು ನೀವೇ ಅಲ್ಲವೇ? ಬಿಲ್ಕಿಸ್ ಬಾನು ಪ್ರಕರಣದ ಆರೋಪಿಗಳನ್ನು ಸದ್ದಿಲ್ಲದೆ ಬಿಡುಗಡೆ ಮಾಡಿ ಸಂಭ್ರಮಿಸಿದವರು ನೀವೇ ಅಲ್ಲವೇ? ಹಾಥರಸ್‌ನ ದಲಿತ ಹೆಣ್ಣುಮಕ್ಕಳ ಮೇಲೆ ನಡೆದ ಅತ್ಯಾಚಾರ ಮತ್ತು ಹತ್ಯೆಯನ್ನು ಮುಚ್ಚಿ ಮುಗಿಸಿದವರು ನೀವೇ ಅಲ್ಲವೇ? ನಿಮ್ಮ ಘೋಷಣೆಗಳನ್ನು ನಿಲ್ಲಿಸಿ ಮೊದಲು ಕೆಲಸ ಮಾಡಿ. ನಿಮ್ಮ ಬೇಟಿ ಬಚಾವೋ ನಾಟಕಕ್ಕೆ ಧಿಕ್ಕಾರವಿರಲಿ

ಕಿಶೋರ್, ನಟ

ಮಣಿಪುರದ ಚುರಚಾಂದ್‌ಪುರ್‌ನಲ್ಲಿ ಇಂಡಿಜಿನಸ್ ಟ್ರೈಬಲ್ ಲೀಡರ್ಸ್ ಫೋರಂನ (ಐಟಿಎಲ್‌ಎಫ್) ಸದಸ್ಯರು ಸಾವಿರಾರು ಸಂಖ್ಯೆಯಲ್ಲಿ ಸೇರಿ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಪ್ರಮುಖ ಬೆಳವಣಿಗೆಗಳು

- ಮಣಿಪುರದಲ್ಲಿನ ಹಿಂಸಾಚಾರದ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಸಲಾಗುತ್ತದೆ ಎಂದು ಸರ್ಕಾರವು ಬುಧವಾರ ಹೇಳಿತ್ತು. ಆದರೆ ಇದರ ಮಧ್ಯೆ ಈ ಕೃತ್ಯದ ವಿಡಿಯೊ ಬಹಿರಂಗವಾದ ಕಾರಣ, ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನಲ್ಲಿ ಉತ್ತರ ನೀಡಬೇಕು ಎಂದು ವಿರೋಧ ಪಕ್ಷಗಳ ಸಂಸದರು ಆಗ್ರಹಿಸಿದರು
- ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನ ಹೊರಗೆ ಉತ್ತರ ನೀಡಿದ್ದಕ್ಕೆ, ವಿರೋಧ ಪಕ್ಷಗಳ ನಾಯಕರು ಸಂಸತ್ತಿನ ಒಳಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಗದ್ದಲ ಹೆಚ್ಚಾದ ಕಾರಣ ಉಭಯ ಸದನಗಳ ಕಲಾಪವನ್ನು ಮೊದಲು ಮಧ್ಯಾಹ್ನದವರೆಗೆ ಮತ್ತು ಆನಂತರ ದಿನದಮಟ್ಟಿಗೆ ಮುಂದೂಡಲಾಯಿತು
- ಸಂತ್ರಸ್ತ ಮಹಿಳೆಯರ ಗುರುತನ್ನು ಬಹಿರಂಗಪಡಿಸುವಂತಹ ವಿಡಿಯೊವನ್ನು ಹಂಚಿಕೊಳ್ಳಲು, ಆ ಮೂಲಕ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಟ್ವಿಟರ್ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಕೇಂದ್ರ ಸರ್ಕಾರದ ಮೂಲಗಳು ಹೇಳಿವೆ ಎಂದು ಕೆಲವು ಸುದ್ದಿ ಮಾಧ್ಯಮಗಳು ವರದಿ ಮಾಡಿವೆ
- ಟ್ವಿಟರ್ ವಿರುದ್ಧ ಕೇಂದ್ರ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ಜಮಾತ್ ಎ ಇಸ್ಲಾಮ್ ಹಿಂದ್ (ಜೆಐಎಚ್) ಖಂಡಿಸಿದೆ. 'ಕೃತ್ಯವು ಇಡೀ ದೇಶಕ್ಕೆ ಗೊತ್ತಾಗುವಂತೆ ಮಾಡಿದ ಸಾಮಾಜಿಕ ಜಾಲತಾಣದ ವಿರುದ್ಧ ಕ್ರಮ ತೆಗೆದುಕೊಳ್ಳುವುದು, ದೂತನನ್ನು ಕೊಂದಂತೆ. ಸರ್ಕಾರವು ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಮತ್ತು ಗಮನ ಬೇರೆಡೆ ಸೆಳೆಯಲು ಈ ರೀತಿ ಮಾಡುತ್ತಿದೆ' ಎಂದು ಜೆಐಎಚ್ ಹೇಳಿದೆ
- ವಿಡಿಯೊವನ್ನು ತೆಗೆದುಹಾಕುವಂತೆ ರಾಷ್ಟ್ರೀಯ ಮಹಿಳಾ ಆಯೋಗವು ಟ್ವಿಟರ್‌ಗೆ ಆದೇಶಿಸಿದೆ

ಇದೊಂದು ಅಮಾನವೀಯ ಕೃತ್ಯ. ಈ ಕೃತ್ಯ ಎಸಗಿದವರಿಗೆ ಮರಣದಂಡನೆ ವಿಧಿಸಬೇಕು. ನಮ್ಮ ಸರ್ಕಾರವು ಇಂಥ ಹೇಯ ಕೃತ್ಯದ ಕುರಿತು ಸುಮ್ಮನಿರುವುದಿಲ್ಲ. ಈ ವಿಡಿಯೊದ ಸತ್ಯಾಸತ್ಯತೆಯ ಕುರಿತು ತನಿಖೆ ನಡೆಸುವಂತೆ ಸೈಬರ್ ಅಪರಾಧ ಇಲಾಖೆಗೆ ನಿರ್ದೇಶನ ನೀಡಿದ್ದೇನೆ. ಅಪರಾಧಿಗಳನ್ನು ಪತ್ತೆ ಮಾಡಲು ಘಟನೆ ನಡೆದ ಸುತ್ತಮುತ್ತಲ ಪ್ರದೇಶಗಳಲ್ಲಿ ಶೋಧ ಕಾರ್ಯ ನಡೆಸಲೂ ಪೊಲೀಸರಿಗೆ ಆದೇಶ ನೀಡಿದ್ದೇನೆ

ಎನ್.ಬಿರೇನ್ ಸಿಂಗ್, ಮುಖ್ಯಮಂತ್ರಿ, ಮಣಿಪುರ

ಇಂಥ ಕೃತ್ಯವು ಖಂಡನೀಯ ಹಾಗೂ ಅಮಾನವೀಯ. ಬಿರೇನ್ ಸಿಂಗ್ ಅವರೊಂದಿಗೆ ಮಾತನಾಡಿ, ಪ್ರಕರಣದ ತನಿಖೆಯ ಕುರಿತು ಮಾಹಿತಿ ನೀಡುವಂತೆ ಹೇಳಿದ್ದೇನೆ. ಅಪರಾಧಿಗಳನ್ನು ನ್ಯಾಯಾಂಗದ ಮುಂದೆ ತಂದು ನಿಲ್ಲಿಸುವ ಎಲ್ಲ ಪ್ರಯತ್ನವನ್ನು ಮಾಡಲಾಗುವುದು. ಮಹಿಳೆಯ ಸುರಕ್ಷತೆ, ಗೌರವ ಹಾಗೂ ರಕ್ಷಣೆಯ ಬಗ್ಗೆ ಸಮರ್ಪಣೆಯಿಂದ ಕೆಲಸ ಮಾಡುವಂತೆ ಪ್ರಧಾನಿ ಮೋದಿ ಅವರು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಹೇಳಿದ್ದಾರೆ. ಇಂಥ ಪ್ರಕರಣಗಳು ರಾಜಸ್ಥಾನದಲ್ಲಿ ನಡೆದಿರಲಿ ಅಥವಾ ಛತ್ತೀಸಗಢದಲ್ಲಿ ಅಥವಾ ಮಣಿಪುರದಲ್ಲಿ. ಯಾರೇ ಅಪರಾಧ ಎಸಗಿದರೂ ಅವರನ್ನು ಉಳಿಸುವುದಿಲ್ಲ

ಸ್ಮೃತಿ ಇರಾನಿ, ಕೇಂದ್ರ ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಬಿರೇನ್ ಸಿಂಗ್, ಮೋದಿ ರಾಜೀನಾಮೆಗೆ ಆಗ್ರಹ



ಕೃತ್ಯ ನಡೆದು 75 ದಿನಗಳವರೆಗೂ ಮಣಿಪುರ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಎಫ್‌ಐಆರ್ ದಾಖಲಾಗಿದ್ದರೂ, ವಿಡಿಯೊ ಬಹಿರಂಗವಾಗುವರೆಗೆ ಸರ್ಕಾರ ಸುಮ್ಮನಿತ್ತು. ಇದು ರಾಜ್ಯ ಸರ್ಕಾರದ ವೈಫಲ್ಯ. ಇದರ ಹೊಣೆ ಹೊತ್ತು ಮುಖ್ಯಮಂತ್ರಿ ಬಿರೇನ್ ಸಿಂಗ್ ರಾಜೀನಾಮೆ ನೀಡಬೇಕು ಎಂದು ವಿರೋಧ ಪಕ್ಷಗಳ ನಾಯಕರು ಆಗ್ರಹಿಸಿದ್ದಾರೆ. ಬಿಜೆಪಿಯೇತರ ಪಕ್ಷಗಳ ಸರ್ಕಾರಗಳಿರುವ ಹಲವು ರಾಜ್ಯಗಳ ಮುಖ್ಯಮಂತ್ರಿಗಳೂ ಟ್ವೀಟ್ ಮಾಡಿ, ಬಿರೇನ್ ಸಿಂಗ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿಯೂ ಈ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿದೆ. ಮಣಿಪುರದಲ್ಲಿ ಮೂರು ತಿಂಗಳಿಂದ ಹಿಂಸಾಚಾರ ನಡೆಯುತ್ತಿದ್ದರೂ, ಪ್ರಧಾನಿ ನರೇಂದ್ರ ಮೋದಿ ಆ ಬಗ್ಗೆ ಮಾತನಾಡಿಲ್ಲ. ಈಗ ವಿಡಿಯೊ ಬಹಿರಂಗವಾದ ನಂತರ ತಮಗೆ ನೋವಾಗಿದೆ ಎಂದು ಹೇಳಿಕೊಂಡಿದ್ದಾರೆ. ಮಣಿಪುರದ ಇಂದಿನ ಸ್ಥಿತಿಗೆ ಕೇಂದ್ರ ಸರ್ಕಾರವೇ ಹೊಣೆ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ರಾಜೀನಾಮೆ ನೀಡಬೇಕು ಎಂದು ಹಲವರು ಒತ್ತಾಯಿಸಿದ್ದಾರೆ. ಈ ಸಂಬಂಧ ಟ್ವಿಟರ್‌ನಲ್ಲಿ #नरेंद्र_मोदी_इस्तीफा_दो ಹ್ಯಾಷ್‌ಟ್ಯಾಗ್‌ನಲ್ಲಿ 1.41 ಲಕ್ಷಕ್ಕೂ ಹೆಚ್ಚು ಜನರು ಪ್ರಧಾನಿ ಮೋದಿ ಅವರ ರಾಜೀನಾಮೆಗೆ ಒತ್ತಾಯಿಸಿದ್ದಾರೆ.

ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಸ್ಮೃತಿ ಇರಾನಿ ಅವರೂ ರಾಜೀನಾಮೆ ನೀಡಬೇಕು ಎಂದು ಕೆಲವರು ಒತ್ತಾಯಿಸಿದ್ದಾರೆ.

ಅತ್ಯಾಚಾರ ಆರೋಪವನ್ನೇ ಕೈಬಿಟ್ಟಿದ್ದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪುರದ ಕಂಗ್‌ಪೋಕ್ಪಿ ಜಿಲ್ಲೆಯ ಫೈನೋಮ್ ಗ್ರಾಮದಲ್ಲಿ ಮೇ 4ರಂದು ಮೈತೇಯಿ ಸಮುದಾಯದ ಪುರುಷರು, ಕುಕಿ-ಜೋ ಬುಡಕಟ್ಟು ಸಮುದಾಯದ ಮಹಿಳೆಯರನ್ನು ಬೆತ್ತಲೆಗೊಳಿಸಿ, ಮೆರವಣಿಗೆ ಮಾಡಿದ ಮತ್ತು ಒಬ್ಬ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಸಂಬಂಧ ಮೇ 18ರಂದೇ ಸಂತ್ರಸ್ತ ಕುಟುಂಬದವರು ದೂರು ನೀಡಿದ್ದಾರೆ. ಅಂದೇ ಎಫ್‌ಐಆರ್ ದಾಖಲಾಗಿದೆ. ಆದರೆ, ಕೃತ್ಯದ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವವರೆಗೆ ಪೊಲೀಸರು ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಪೊಲೀಸರಿಂದ ಆಗಿರುವ ಈ ವಿಳಂಬಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿದೆ. ವಿರೋಧ ಪಕ್ಷಗಳ ಮುಖಂಡರು, ಸಾಮಾಜಿಕ ಕಾರ್ಯಕರ್ತರು ಮಣಿಪುರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಘಟನೆ ನಡೆದ ಫೈನೋಮ್ ಗ್ರಾಮದಿಂದ 68 ಕಿ.ಮೀ. ದೂರದಲ್ಲಿರುವ ಸೈಕುಲ್ ಪೊಲೀಸ್ ಠಾಣೆಯಲ್ಲಿ ಸಂತ್ರಸ್ತ ಕುಟುಂಬದ ಹಿರಿಯ ಮಹಿಳೆ ಮೇ 18ರಂದು ದೂರು ನೀಡಿದ್ದಾರೆ. 'ಕೋಮುಗಲಭೆ ತೀವ್ರವಾಗಿದ್ದ ಕಾರಣ ದೂರು ನೀಡುವಲ್ಲಿ ವಿಳಂಬವಾಗಿದೆ' ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಂತ್ರಸ್ತ ಕುಟುಂಬದ ಹಿರಿಯ ಮಹಿಳೆ ನೀಡಿದ ದೂರಿನ ಪ್ರತಿಯ ಮೇಲೆ ಠಾಣಾಧಿಕಾರಿಯು 'ಶೂನ್ಯ ಎಫ್‌ಐಆರ್' ದಾಖಲಿಸಿಕೊಳ್ಳಬೇಕು. ಐಪಿಸಿ ಸೆಕ್ಷನ್ 354, 376/34 (ಡಕಾಯಿತಿ, ದರೋಡೆ, ಕಳ್ಳತನ, ಮನೆಗೆ ಬೆಂಕಿ ಹಚ್ಚಿರುವುದು, ಹತ್ಯೆ, ಮಹಿಳೆಯ ಗೌರವಕ್ಕೆ ಧಕ್ಕೆ, ಸಾಮೂಹಿಕ ಅತ್ಯಾಚಾರ) ಸೇರಿ ಇನ್ನೂ ಹಲವು ಸೆಕ್ಷನ್‌ಗಳ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಷರಾ ಬರೆದಿದ್ದಾರೆ.

ಈ ದೂರು ಮತ್ತು ಠಾಣಾಧಿಕಾರಿಯ ಷರಾದ ಆಧಾರದ ಮೇಲೆ ಮೇ 18ರಂದೇ ಎಫ್‌ಐಆರ್ ದಾಖಲಿಸಲಾಗಿದೆ. ಎಫ್‌ಐಆರ್‌ನಲ್ಲಿ ಅತ್ಯಾಚಾರ ಎಂದು ಉಲ್ಲೇಖಿಸಲಾಗಿದೆ. ಆದರೆ, ಭಾರತೀಯ ದಂಡ ಸಂಹಿತೆಯ (ಐಪಿಸಿ) ಯಾವ ಸೆಕ್ಷನ್‌ಗಳ ಅಡಿಯಲ್ಲಿ ತನಿಖೆ ನಡೆಸಬೇಕು ಎಂದು ಉಲ್ಲೇಖಿಸಿರುವಲ್ಲಿ 'ಐಪಿಸಿ ಸೆಕ್ಷನ್ 153ಎ, 397, 398, 427, 436, 448/34 ಮತ್ತು 25ರ ಅಡಿಯಲ್ಲಿ' ಎಂದಷ್ಟೇ ನಮೂದಿಸಲಾಗಿದೆ. ಈ ಎಫ್‌ಐಆರ್‌ನಲ್ಲಿ ಮಹಿಳೆಯ ಗೌರವಕ್ಕೆ ಧಕ್ಕೆ ತಂದ (ಐಪಿಸಿ ಸೆಕ್ಷನ್ 354) ಮತ್ತು ಸಾಮೂಹಿಕ ಅತ್ಯಾಚಾರ (ಐಪಿಸಿ ಸೆಕ್ಷನ್ 376/34) ಎಸಗಿದ ಆರೋಪಗಳನ್ನು ಕೈಬಿಡಲಾಗಿದೆ.

ಈ ಪ್ರಕರಣದ ತನಿಖೆಗೆ ಅಂದೇ ಅಧಿಕಾರಿಯೊಬ್ಬರನ್ನು ನಿಯೋಜನೆ ಮಾಡಲಾಗಿದೆ. ಅದರ ಜತೆಯಲ್ಲೇ ಘಟನೆ ನಡೆದ ಸ್ಥಳದ ವ್ಯಾಪ್ತಿಯ ನಾಗ್‌ಪೋಕ್ ಪೊಲೀಸ್ ಠಾಣೆಗೆ ಪ್ರಕರಣವನ್ನು ವರ್ಗಾಯಿಸಬೇಕು ಎಂದು ಮೇ 18ರಂದೇ ಆದೇಶಿಸಲಾಗಿದೆ. ಹೀಗಿದ್ದೂ ನಾಗ್‌ಪೋಕ್ ಪೊಲೀಸ್ ಠಾಣೆಗೆ 37 ದಿನ ತಡವಾಗಿ, ಜೂನ್ 21ರಂದು ಎಫ್‌ಐಆರ್ ವರ್ಗಾಯಿಸಲಾಗಿದೆ. ನಾಗ್‌ಪೋಕ್ ಪೊಲೀಸ್ ಠಾಣೆಯ ಅಧಿಕಾರಿಗಳು ಎಫ್‌ಐಆರ್‌ನಲ್ಲಿ ಮಹಿಳೆಯ ಗೌರವಕ್ಕೆ ಧಕ್ಕೆ ತಂದ (ಐಪಿಸಿ ಸೆಕ್ಷನ್ 354) ಮತ್ತು ಸಾಮೂಹಿಕ ಅತ್ಯಾಚಾರ (ಐಪಿಸಿ ಸೆಕ್ಷನ್ 376/34) ಎಸಗಿದ ಆರೋಪಗಳನ್ನು ಸೇರಿಸಿದ್ದಾರೆ.

'ಪೊಲೀಸರ ಎದುರೇ ಕೃತ್ಯ'

'ನಮ್ಮ ಮನೆಗಳಿಗೆ ಬೆಂಕಿ ಹಚ್ಚಿದಾಗ, ಅಲ್ಲಿಂದ ಕಾಡುಹಾದಿಯಲ್ಲಿ ತಪ್ಪಿಸಿಕೊಂಡು ನಾಗ್‌ಪೋಕ್ ಪೊಲೀಸ್ ಠಾಣೆಯತ್ತ ಹೋಗುತ್ತಿದ್ದೆವು. ರಸ್ತೆಗೆ ತಲುಪಿದಾಗ ಅಲ್ಲಿಯೇ ಇದ್ದ ಪೊಲೀಸರು ನಮ್ಮನ್ನು ರಕ್ಷಿಸಿ ಪೊಲೀಸ್ ವಾಹನದಲ್ಲಿ ಠಾಣೆಯತ್ತ ಕರೆದೊಯ್ಯುತ್ತಿದ್ದರು. ಆಗ ಪೊಲೀಸ್ ವಾಹನವನ್ನು ತಡೆಗಟ್ಟಿದ ಗುಂಪು, ಪೊಲೀಸರ ಎದುರಲ್ಲಿಯೇ ನಮ್ಮನ್ನು ಹೊರಗೆ ಎಳೆಯಿತು. ನಮ್ಮ ಹುಡುಗನನ್ನು ಸ್ಥಳದಲ್ಲೇ ಹತ್ಯೆ ಮಾಡಿತು' ಎಂದು 65 ವರ್ಷದ ದೂರುದಾರ ಮಹಿಳೆ ತಮ್ಮ ದೂರಿನಲ್ಲಿ ವಿವರಿಸಿದ್ದಾರೆ.

'ನಮ್ಮ ಗುಂಪಿನಲ್ಲಿದ್ದ ಮೂವರು ಮಹಿಳೆಯರನ್ನೂ ಗುಂಪು ಬಲವಂತವಾಗಿ ಬೆತ್ತಲುಗೊಳಿಸಿತು. ಇದನ್ನು ತಡೆಯಲು ಯತ್ನಿಸಿದ 19 ವರ್ಷದ ಮತ್ತೊಬ್ಬ ಯುವಕನನ್ನು ಹತ್ಯೆ ಮಾಡಿತು. ಆನಂತರ 21 ವರ್ಷದ ಯುವತಿಯ ಮೇಲೆ ಎಲ್ಲರೆದುರೇ ಗುಂಪಿನಲ್ಲಿದ್ದ ಹಲವರು ಸಾಮೂಹಿಕ ಅತ್ಯಾಚಾರ ಎಸಗಿದರು' ಎಂದು ದೂರಿನಲ್ಲಿ ಆ ಮಹಿಳೆ ವಿವರಿಸಿದ್ದಾರೆ.

ಸುಳ್ಳು ಸುದ್ದಿ ಮತ್ತು ಮಣಿಪುರ ಅತ್ಯಾಚಾರ

ಮೇ 3ರಂದು ಮಣಿಪುರದಲ್ಲಿ ಮೈತೇಯಿ ಹಾಗೂ ಕುಕಿ ಸಮುದಾಯದ ನಡುವಣ ಹಿಂಸಾಚಾರವು ಆರಂಭವಾಯಿತು. ರಸ್ತೆಯಲ್ಲಿ ಬಿದ್ದಿರುವ ಕೆಂಪು ಟ್ರಾಲಿ ಬ್ಯಾಗು, ಪ್ಲಾಸ್ಟಿಕ್‌ನಿಂದ ಸುತ್ತಿದ್ದ ಯುವತಿಯ ಶವ ಇರುವ ಫೋಟೊವು ಇದೇ ದಿನವೇ ಮಣಿಪುರದಾದ್ಯಂತ ಕಾಡ್ಗಿಚ್ಚಿಗಿಂತಲೂ ವೇಗವಾಗಿ ಹಬ್ಬಿತು.

ಈ ಫೋಟೊದೊಂದಿಗೆ 'ಮೈತೇಯಿ ಸಮುದಾಯದ ನರ್ಸ್ ಒಬ್ಬರ ಮೇಲೆ ಚುರಾಚಾಂದ್‌ಪುರ್‌ನಲ್ಲಿ ಕುಕಿ ಸಮುದಾಯದ ಯುವಕರು ಅತ್ಯಾಚಾರ ನಡೆಸಿದ್ದಾರೆ' ಎಂಬ ಬರಹವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಯಿತು. ಆದರೆ, ಇದೊಂದು ಸುಳ್ಳು ಸುದ್ದಿ. ಈ ಬಗ್ಗೆ ಮೇ 8ರ ಹೊತ್ತಿಗೆ ಪಿಟಿಐ, ದಿ ಲಾಜಿಕಲ್ ಇಂಡಿಯನ್ ಸೇರಿದಂತೆ ಹಲವು ಸುದ್ದಿ ಸಂಸ್ಥೆಗಳು ಫ್ಯಾಕ್ಟ್‌ಚೆಕ್ ಪ್ರಕಟಿಸಿದವು. 'ಈ ಫೋಟೊವು ಉತ್ತರ ಪ್ರದೇಶದ್ದಾಗಿದ್ದು, ತಂದೆಯೇ ಮಗಳನ್ನು ಹತ್ಯೆ ಮಾಡಿ ಮಥುರಾ ಎಕ್ಸ್‌ಪ್ರೆಸ್ ವೇನಲ್ಲಿ ಹೆಣವನ್ನು ಟ್ರಾಲಿ ಬ್ಯಾಗ್‌ನಲ್ಲಿ ಇರಿಸಿದ್ದರು' ಎಂದು ಪಿಟಿಐ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ಹೇಳಿತ್ತು.

ಇಬ್ಬರು ಕುಕಿ ಸಮುದಾಯದ ಹೆಣ್ಣುಮಕ್ಕಳನ್ನು ಬೆತ್ತಲೆಯಾಗಿ ಮೆರವಣಿಗೆ ಮಾಡಲು ಈ ಸುಳ್ಳು ಸುದ್ದಿಯೇ ಕಾರಣವಾಯಿತು ಎಂದು ಹಲವು ಸುದ್ದಿ ಸಂಸ್ಥೆಗಳು ವರದಿ ಮಾಡಿವೆ. 'ಚುರಾಚಾಂದ್‌ಪುರ್‌ನಲ್ಲಿ ಯಾವುದೇ ಅತ್ಯಾಚಾರದ ಪ್ರಕರಣಗಳು ವರದಿಯಾಗಿಲ್ಲ. ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಮೇ 5ರಂದು ಮಣಿಪುರದ ಅಂದಿನ ಡಿಜಿಪಿ ಪಿ. ಡಾಂಗಲ್ ಹೇಳಿಕೆ ನೀಡಿದ್ದರು.

ಈ ಅರಾಜಕತೆಯು ಕೊನೆಗಾಣಲೇಬೇಕು. ಕೇಂದ್ರ ಸರ್ಕಾರದ ನೀತಿಗಳಿಂದಲೇ ದೇಶ ಹೊತ್ತಿ ಉರಿಯುತ್ತಿದೆ
ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಸಿ.ಎಂ

ಆರ್‌ಎಸ್‌ಎಸ್‌ನ ದ್ವೇಷ ನೀತಿ, ಬಿಜೆಪಿಯ ಮತ ರಾಜಕೀಯವು ಮಣಿಪುರ ಇಂದಿನ ಸ್ಥಿತಿಗೆ ಜವಾಬ್ದಾರ. ಬಿಜೆಪಿಯನ್ನು ಕಣ್ಣೆತ್ತಿ ನೋಡಲೂ ನಮ್ಮ ಸಹೋದರಿಯರು ಯೋಚಿಸುತ್ತಾರೆ
ಅಖಿಲೇಶ್ ಯಾದವ್, ಅಧ್ಯಕ್ಷ, ಎಸ್‌ಪಿ

ಮಣಿಪುರದ ಕಾನೂನು ಸುವ್ಯವಸ್ಥೆ ಮೊದಲೇ ಹದಗೆಟ್ಟಿದೆ. ಇಷ್ಟಾದ ಮೇಲೂ ತನ್ನ ಮುಖ್ಯಮಂತ್ರಿಯನ್ನು ರಕ್ಷಿಸಲು ಬಿಜೆಪಿಯು ಯತ್ನಿಸಲಿದೆಯೇ?
ಮಾಯಾವತಿ, ಅಧ್ಯಕ್ಷೆ, ಬಿಎಸ್‌ಪಿ

ಇಂಥ ಹೀನ ಕೃತ್ಯ ಎಸಗಿದವರಿಗೆ ಮರಣದಂಡನೆ ವಿಧಿಸಲಿಲ್ಲ ಎಂದಾದರೆ, ನಮ್ಮನ್ನು ನಾವು ಮನುಷ್ಯರು ಎಂದು ಕರೆದುಕೊಳ್ಳುವುದನ್ನು ನಿಲ್ಲಿಸಬೇಕು
ಹರಭಜನ್ ಸಿಂಗ್, ಮಾಜಿ ಕ್ರಿಕೆಟಿಗ

ಪ್ರಧಾನಿ ಯಾಕಾಗಿ ಮಣಿಪುರಕ್ಕೆ ಹೋಗಿಲ್ಲ. ರಾಹುಲ್ ಗಾಂಧಿ ಅವರು ಮಣಿಪುರಕ್ಕೆ ಹೋಗಲು ಸಾಧ್ಯವಾಗುವುದಾದರೆ ಪ್ರಧಾನಿಗೆ ಯಾಕೆ ಸಾಧ್ಯವಾಗಿಲ್ಲ
ತೇಜಸ್ವಿ ಯಾದವ್, ಡಿ.ಸಿ.ಎಂ, ಬಿಹಾರ

ಜಪಾನ್, ಅಮೆರಿಕ, ಆಸ್ಟ್ರೇಲಿಯಾ, ಫ್ರಾನ್ಸ್, ಯುಎಇಗೆ ಪ್ರಧಾನಿ ಹೋಗಿದ್ದಾರೆ. ಆದರೆ, ಮಣಿಪುರಕ್ಕೆ ಭೇಟಿ ನೀಡಲು ಅವರಿಗೆ ಸಮಯವಿಲ್ಲ
ಅತಿಶಿ, ದೆಹಲಿ ಸಚಿವೆ

ಮೌನವು ನಮ್ಮ ಆಯ್ಕೆಯಾಗಬಾರದು. ಬಿರೇನ್ ಸಿಂಗ್ ಹಾಗೂ ಪ್ರಧಾನಿ ಮೋದಿ ಅವರು ತಕ್ಷಣದಲ್ಲಿ ಕ್ರಮ ಕೈಗೊಳ್ಳಬೇಕು. ಅಪರಾಧಿಗಳಿಗೆ ಶಿಕ್ಷೆಯಾಗಬೇಕು
ಝೊರಾಮ್‌ತಂಗ, ಮಿಜೋರಾಂ ಸಿ.ಎಂ

ಪ್ರಧಾನಿಯವರೆ, ದೇಶಕ್ಕೆ ಇಂಥ ಕೃತ್ಯಗಳು ನಾಚಿಕೆಗೇಡು ಎನ್ನುವುದು ವಿಷಯವಲ್ಲ. ಮಹಿಳೆಯರಲ್ಲಿ ಈ ಘಟನೆಯು ಉಂಟು ಮಾಡಿರುವ ನೋವು ಮುಖ್ಯ ವಿಷಯ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ನರೇಂದ್ರ ಮೋದಿ ಜತೆಗೆ ತೇಜಸ್ವಿನಿ ಅನಂತಕುಮಾರ್ ಮಾತುಕತೆ ನಡೆಸಿದರು.

ಪ್ರಧಾನಿ ಭೇಟಿ ಮಾಡಿದ ತೇಜಸ್ವಿನಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅದಮ್ಯ ಚೇತನ ಪ್ರತಿಷ್ಠಾನದ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರುವಾರ ಭೇಟಿ ಮಾಡಿದರು.

ತೇಜಸ್ವಿನಿ ಅವರು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ ಎಂಬ ಸುದ್ದಿಗಳು ಹರಿದಾಡಿದ್ದವು. 'ದಯವಿಟ್ಟು ಊಹಾಪೋಹಗಳಿಗೆ ಕಿವಿಗೊಡಬೇಡಿ. ನಾನು ಬಿಜೆಪಿ ಜತೆಗೆ ದೃಢವಾಗಿ ಇದ್ದೇನೆ' ಎಂದು ತೇಜಸ್ವಿನಿ ಟ್ವೀಟ್ ಮಾಡಿದ್ದರು.

'ದೆಹಲಿಗೆ ಬಂದಿದ್ದೆ. ಈ ವೇಳೆ ಪ್ರಧಾನಿ ಅವರನ್ನು ಭೇಟಿ ಮಾಡಿದ್ದೇನೆ. ಇದೊಂದು ಸೌಹಾರ್ದದ ಭೇಟಿ. ಜೆ.ಪಿ. ನಡ್ಡಾ ಅವರನ್ನೂ ಭೇಟಿ ಮಾಡುತ್ತೇನೆ. ಭೇಟಿಯ ಹಿಂದೆ ರಾಜಕೀಯ ಉದ್ದೇಶವೂ ಇದೆ. ಕಾಲ ಪಕ್ವವಾದಾಗ ಅದನ್ನು ಬಹಿರಂಗಪಡಿಸುತ್ತೇನೆ' ಎಂದು ತೇಜಸ್ವಿನಿ ತಿಳಿಸಿದರು.

ಶಾ, ನಡ್ಡಾ ಭೇಟಿಯಾದ ವಿಜಯೇಂದ್ರ: ಶಿಕಾರಿಪುರದ ಬಿಜೆಪಿ ಶಾಸಕ ಬಿ.ವೈ. ವಿಜಯೇಂದ್ರ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

'ರಾಜ್ಯದಲ್ಲಿ ವೈಫಲ್ಯದ ಗ್ಯಾರಂಟಿ ಬೆನ್ನಿಗಂಟಿಸಿಕೊಂಡಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಡಲು ಹಾಗೂ ಮುಂದಿನ ಲೋಕಸಭಾ ಚುನಾವಣೆಗೆ ಕಾರ್ಯಕರ್ತರನ್ನು ಸಜ್ಜುಗೊಳಿಸುವ ಕುರಿತು ಮಾರ್ಗದರ್ಶನ ಪಡೆಯಲಾಯಿತು' ಎಂದು ವಿಜಯೇಂದ್ರ ಟ್ವೀಟ್ ಮಾಡಿದ್ದಾರೆ.

'ಶಾಸಕನಾಗಿ ಆಯ್ಕೆಯಾದ ಬಳಿಕ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಿ ಆಶೀರ್ವಾದ ಪಡೆದಿದ್ದೇನೆ. ಯಾವುದೇ ರಾಜಕೀಯ ವಿಚಾರಗಳ ಮಾತುಕತೆ ನಡೆಸಿಲ್ಲ' ಎಂದು ವಿಜಯೇಂದ್ರ ತಿಳಿಸಿದರು.

ಕಲಾಪ ಸಮಿತಿ ಪುನರ್‌ರಚನೆ ಮಹಿಳೆಯರಿಗೆ ಆದ್ಯತೆ

ನವದೆಹಲಿ (ಪಿಟಿಐ): ರಾಜ್ಯಸಭೆಯ ಸಭಾಪತಿ ಮತ್ತು ಉಪ ಸಭಾಪತಿ ಅವರ ಅನುಪಸ್ಥಿತಿಯಲ್ಲಿ ಕಲಾಪ ನಡೆಸುವ ಸದಸ್ಯರ ಸಮಿತಿಯನ್ನು ಸಭಾಪತಿ ಜಗದೀಪ್ ಧನಕರ್ ಅವರು ಗುರುವಾರ ಪುನರ್‌ರಚಿಸಿದರು.

ಸಮಿತಿಯಲ್ಲಿ ಶೇ 50 ಮಹಿಳಾ ಸದಸ್ಯರಿಗೆ ಅವಕಾಶ ನೀಡಿರುವುದು ವಿಶೇಷ.

ಪಿ.ಟಿ. ಉಷಾ, ಎಸ್. ಫಾಂಗ್‌ನೋನ್ ಕೊನ್ಯಾಕ್, ಫೌಜಿಯಾ ಖಾನ್, ಸುಲತಾ ದೇವ್, ವಿ. ವಿಜಯ್‌ಸಾಯಿ ರೆಡ್ಡಿ, ಘನಶ್ಯಾಮ್ ತಿವಾರಿ, ಎಲ್. ಹನುಮಂತಯ್ಯ ಮತ್ತು ಸುಖೇಂದು ಶೇಖರ್ ರೇ ಅವರು ಹೊಸದಾಗಿ ರಚನೆಯಾಗಿರುವ ಸಮಿತಿಯಲ್ಲಿದ್ದಾರೆ.

ಈ ಕುರಿತು ರಾಜ್ಯಸಭೆ ಸದಸ್ಯರಿಗೆ ಮಾಹಿತಿ ನೀಡಿದ ಧನಕರ್ ಅವರು, ಪುನರ್‌ರಚನೆಯಾದ ಸಮಿತಿಯು ಜುಲೈ 17ರಿಂದಲೇ ಜಾರಿಗೆ ಬಂದಿದೆ ಎಂದರು.

ಈ ಸಮಿತಿಯಲ್ಲಿ ಆರು ಮಂದಿ ರಾಜ್ಯಸಭಾ ಸದಸ್ಯರಿರುತ್ತಾರೆ. ಸಭಾಪತಿ ಅವರು ಪುನಃ ಹೊಸ ಸಮಿತಿ ರಚಿಸುವವರೆಗೂ ಈಗ ನೇಮಕವಾಗಿರುವ ಸಮಿತಿಯ ಸದಸ್ಯರು ತಮ್ಮ ಕರ್ತವ್ಯಾವಧಿ ಹೊಂದಿರುತ್ತಾರೆ.

ಬಿಆರ್‌ಎಸ್ ಸರ್ಕಾರದ ವಿರುದ್ಧ ಹೋರಾಟ: ಕೇಂದ್ರ ಸಚಿವ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿನ ಬಿಆರ್‌ಎಸ್ ನೇತೃತ್ವದ ಸರ್ಕಾರ ಬಡವರಿಗಾಗಿ ನಿರ್ಮಿಸುತ್ತಿರುವ ಮನೆಗಳ ಪರಿಶೀಲನೆಗಾಗಿ ಪಕ್ಷದ ಸ್ಥಳೀಯ ನಾಯಕರೊಂದಿಗೆ ಗುರುವಾರ ಸ್ಥಳಕ್ಕೆ ತೆರಳುತ್ತಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಹಾಗೂ ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಅವರನ್ನು ಪೊಲೀಸರು ದಾರಿ ಮಧ್ಯೆಯೇ ತಡೆದು ವಶಕ್ಕೆ ಪಡೆದರು.

ಪಕ್ಷದ ನಾಯಕರು ಮತ್ತು ತಮ್ಮನ್ನು ಗೃಹ ಬಂಧನದಲ್ಲಿರಿಸಿದ ಪೊಲೀಸರ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ರೆಡ್ಡಿ, 'ಬಿಆರ್‌ಎಸ್ ನೇತೃತ್ವದ ಸರ್ಕಾರದ ವಿರುದ್ಧ ಹೋರಾಟದ ಯುದ್ಧ ಆರಂಭವಾಗಿದೆ' ಎಂದು ಗುಡುಗಿದರು.

'ನಾನೇನು ಅಪರಾಧಿಯಾ?, ಭಯೋತ್ಪಾದಕನಾ? ಭಾರತದ ಎಲ್ಲಿಗೆ ಬೇಕಾದರೂ ಹೋಗಬಹುದಾದ ಹಕ್ಕು ನನಗಿದೆ' ಎಂದು ಕಿಡಿಕಾರಿದ ಕೇಂದ್ರ ಸಚಿವರು; ಪಕ್ಷದ ಮುಖಂಡರೊಂದಿಗೆ ತಮ್ಮನ್ನು ತಡೆದ ಸ್ಥಳದಲ್ಲೇ ಕುಳಿತು ಆಕ್ರೋಶ ವ್ಯಕ್ತಪಡಿಸಿದರು. ಒಂಬತ್ತು ವರ್ಷದಿಂದ ಬಡವರಿಗೆ ಮನೆ ವಿತರಿಸಿಲ್ಲ ಎಂದು ಮುಖ್ಯಮಂತ್ರಿ ಕೆ.ಚಂದ್ರಶೇಖರರಾವ್ ವಿರುದ್ಧ ಹರಿಹಾಯ್ದರು.

ಪೊಲೀಸರು ಮನವೊಲಿಸಲು ಯತ್ನಿಸಿದರೂ ಸ್ಥಳದಿಂದ ಕದಲಲಿಲ್ಲ. ರಸ್ತೆಯಲ್ಲೇ ಕುಳಿತಿದ್ದ ಎಲ್ಲರನ್ನೂ ಪೊಲೀಸರು ವಶಕ್ಕೆ ಪಡೆದು, ಬಿಜೆಪಿಯ ಕೇಂದ್ರ ಕಚೇರಿಗೆ ಕರೆದೊಯ್ದು ಗೃಹಬಂಧನದಲ್ಲಿರಿಸಿದರು.

'ಬಡವರಿಗೆ ಮನೆ ಕಟ್ಟಿಸಿಕೊಡುತ್ತಿರುವ ದೇಶದ ಏಕೈಕ ರಾಜ್ಯ ತೆಲಂಗಾಣ. ರಸ್ತೆಯಲ್ಲಿ ಕುಳಿತು ರಾಜಕೀಯ ನಾಟಕವಾಡುವ ಬದಲು, ಕೇಂದ್ರದಿಂದ ಅನುದಾನ ಕೊಡಿಸಲಿ. ಮೂರು ವರ್ಷಗಳಿಂದ ₹ 600 ಕೋಟಿ ಅನುದಾನ ನೀಡುವುದನ್ನು ಕೇಂದ್ರ ಸರ್ಕಾರ ಬಾಕಿ ಉಳಿಸಿಕೊಂಡಿದೆ' ಎಂದು ತೆಲಂಗಾಣದ ಪಶುಸಂಗೋಪನಾ ಸಚಿವ ಟಿ.ಶ್ರೀನಿವಾಸ ಯಾದವ್ ತಿರುಗೇಟು ನೀಡಿದ್ದಾರೆ.

ಯುಸಿಸಿ: ಕಾನೂನು ಆಯೋಗದಿಂದ ಅಭಿಪ್ರಾಯ ಸಂಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಏಕರೂಪ ನಾಗರಿಕ ಸಂಹಿತೆಯ (ಯುಸಿಸಿ) ಪ್ರಸ್ತುತತೆ ಮತ್ತು ಪ್ರಾಮುಖ್ಯತೆ, ವಿಷಯ ಕುರಿತು ವಿವಿಧ ಕೋರ್ಟ್‌ಗಳ ಆದೇಶಗಳ ಹಿನ್ನೆಲೆಯಲ್ಲಿ ಭಾರತೀಯ ಕಾನೂನು ಆಯೋಗವು ಭಾಗಿದಾರರ ಅಭಿಪ್ರಾಯಗಳನ್ನು ಆಹ್ವಾನಿಸಲು ನಿರ್ಧರಿಸಿದೆ ಎಂದು ಕೇಂದ್ರ ತಿಳಿಸಿದೆ.

ಕೇಂದ್ರದ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಈ ಸಂಬಂಧ ರಾಜ್ಯಸಭೆಯಲ್ಲಿ ಲಿಖಿತ ಉತ್ತರ ನೀಡಿದ್ದಾರೆ.

'ಯುಸಿಸಿ ಅಗತ್ಯ ಅಲ್ಲ, ಅಪೇಕ್ಷಣೀಯವೂ ಅಲ್ಲ' ಎಂದು ಆಯೋಗದ ಸಮಿತಿಯು ವರದಿ ನೀಡಿದ 4 ವರ್ಷದ ನಂತರ, ಈಗ 22ನೇ ಕಾನೂನು ಆಯೋಗವು ಸಾರ್ವಜನಿಕರು, ಭಾಗೀದಾರರ ಅಭಿಪ್ರಾಯ ಆಹ್ವಾನಿಸಲು ಕಾರಣವೇನು ಎಂಬ ಪ್ರಶ್ನೆಗೆ ಸಚಿವರು ಈ ಮಾಹಿತಿ ನೀಡಿದ್ದಾರೆ.

ಕಾನೂನು ಆಯೋಗವು ಯುಸಿಸಿ ಕುರಿತು ಭಾಗೀದಾರರಿಂದ ಕಳೆದ ಜೂನ್ ತಿಂಗಳಲ್ಲಿ ಅಭಿಪ್ರಾಯವನ್ನು ಆಹ್ವಾನಿಸಿತ್ತು. ಆಯೋಗವು ಇದುವರೆಗೂ 50 ಲಕ್ಷಕ್ಕೂ ಹೆಚ್ಚು ಜನರಿಂದ ಅಭಿಪ್ರಾಯಗಳನ್ನು ಸ್ವೀಕರಿಸಿದೆ.

ದೆಹಲಿ ಸುಗ್ರೀವಾಜ್ಞೆ: ಬಿಎಸಿ ಸಭೆಗೆ ವಿಪಕ್ಷ ಸದಸ್ಯರ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಸುಗ್ರೀವಾಜ್ಞೆಗೆ ಕಾಯ್ದೆಯ ರೂಪ ನೀಡಲು ಮಸೂದೆ ಮಂಡನೆಗಾಗಿ ಕಲಾಪ ಪಟ್ಟಿಗೆ ಸೇರಿಸಿದ ಸರ್ಕಾರದ ಕ್ರಮವನ್ನು ವಿರೋಧಿಸಿ ವಿಪಕ್ಷದ ಸದಸ್ಯರು ರಾಜ್ಯಸಭೆಯ ಕಲಾಪ ಸಲಹಾ ಸಮಿತಿ (ಬಿಎಸಿ) ಸಭೆಯನ್ನು ಬಹಿಷ್ಕರಿಸಿದರು.

ರಾಜ್ಯಸಭೆ ಅಧ್ಯಕ್ಷ ಜಗದೀಪ್ ಧನ್‌ಕರ್ ಸಭೆ ಅಧ್ಯಕ್ಷತೆ ವಹಿಸಿದ್ದರು. ಸುಗ್ರೀವಾಜ್ಞೆಗೆ ಕಾಯ್ದೆಯ ರೂಪ ನೀಡುವ 'ದೆಹಲಿ ಕೇಂದ್ರಾಡಳಿತ ಪ್ರದೇಶ (ತಿದ್ದುಪಡಿ) ಮಸೂದೆ 2023'ಯನ್ನು ಮಂಡಿಸುವ ಸಂಬಂಧ ಸದನದ ಕಲಾಪ ಪಟ್ಟಿಗೆ ಸೇರಿಸಲಾಗಿತ್ತು.

ಇದನ್ನು ಕಾಂಗ್ರೆಸ್‌ನ ಜೈರಾಂ ರಮೇಶ್, ತೃಣಮೂಲ ಕಾಂಗ್ರೆಸ್‌ನ ಡೆರೆಕ್ ಒಬ್ರಿಯಾನ್, ಆಮ್ ಆದ್ಮಿ ಪಕ್ಷದ ಸಂಜಯ್ ಸಿಂಗ್, ಬಿಆರ್‌ಎಸ್ ಪಕ್ಷದ ಕೇಶವರಾವ್ ಅವರು ವಿರೋಧಿಸಿದರು.

ಕೇಶವರಾವ್ ಅವರು ಬಳಿಕ ಪ್ರತಿಪಕ್ಷಗಳ ಒಕ್ಕೂಟ 'ಇಂಡಿಯಾ'ದ ಪ್ರತಿಭಟನೆಗೂ ಕೈಜೋಡಿಸಿದರು. ಈ ಮಸೂದೆಯು ಸಂವಿಧಾನದ ಒಕ್ಕೂಟದ ಆಶಯಕ್ಕೆ ವಿರುದ್ಧವಾಗಿದೆ ಎಂದು ಪ್ರತಿಪಾದಿಸಿದರು.

ಮೂಲಗಳ ಪ್ರಕಾರ, ಮಸೂದೆಯ ಚರ್ಚೆಗೆ ಎರಡು ಗಂಟೆ ಸಮಯ ನಿಗದಿಪಡಿಸಲು ಉದ್ದೇಶಿಸಲಾಗಿತ್ತು. ಆದರೆ, ಎಎಪಿಯ ಸಿಂಗ್ ಅವರು, 'ಸದ್ಯ ಈ ವಿಷಯ ಸುಪ್ರೀಂ ಕೋರ್ಟ್‌ನಲ್ಲಿದೆ. ಮಸೂದೆ ಮಂಡನೆ ಹೇಗೆ ಸಾಧ್ಯ?' ಎಂದು ಆಕ್ಷೇಪ ಎತ್ತಿದರು.

ಈ ಆಕ್ಷೇಪಕ್ಕೆ ಇತರರೂ ದನಿಗೂಡಿಸಿದರು. ಸಭೆ ಬಹಿಷ್ಕರಿಸಿ ಹೊರಹೋಗುವ ಮೊದಲು ನಮ್ಮ ಪ್ರತಿಭಟನೆಯನ್ನು ಸಭೆಯ ನಡಾವಳಿಯಲ್ಲಿ ದಾಖಲಿಸಬೇಕು ಎಂದು ಡೆರೆಕ್ ಒಬ್ರಿಯಾನ್ ಪಟ್ಟುಹಿಡಿದರು. 'ಕಲಾಪ ಸಲಹಾ ಸಮಿತಿಯಲ್ಲಿ ಮಸೂದೆ ಪ್ರಸ್ತಾಪವೇ ಅಸಾಂವಿಧಾನಿಕ. ನಾವು ಆಕ್ಷೇಪ ಎತ್ತಿದೆವು. ಆದರೆ, ಸರ್ಕಾರ ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಹೀಗಾಗಿ, ಸಭೆ ಬಹಿಷ್ಕರಿಸಿದೆವು' ಎಂದು ಸಿಂಗ್ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ತುಳಜಾಭವಾನಿ ಆಭರಣಗಳು ನಾಪತ್ತೆ

ಔರಂಗಾಬಾದ್(ಪಿಟಿಐ): ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯ ಪ್ರಸಿದ್ಧ ತುಳಜಾ ಭವಾನಿ ದೇವಸ್ಥಾನದಲ್ಲಿ ಕೆಲ ಆಭರಣಗಳು ನಾಪತ್ತೆಯಾಗಿವೆ ಎಂದು ಗುರುವಾರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೇವಿಯ ಆಭರಣಗಳನ್ನು ಎಣಿಸಲು ರಚಿಸಲಾದ ಸಮಿತಿಯು ಇತ್ತೀಚೆಗೆ ಈ ಕುರಿತು ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿದೆ.

ಸಂಸತ್ ಹೊರಗೆ ಮೋದಿ ಹೇಳಿಕೆ– ಖರ್ಗೆ ಟೀಕೆ

ನವದೆಹಲಿ (ಪಿಟಿಐ): ಅಧಿವೇಶನ ನಡೆಯುತ್ತಿದ್ದರೂ ಮಣಿಪುರದಲ್ಲಿನ ಪರಿಸ್ಥಿತಿ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್‌ನ ಹೊರಗಡೆ ಹೇಳಿಕೆ ನೀಡಿರುವುದನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುರುವಾರ ಟೀಕಿಸಿದ್ದಾರೆ.

'ಮೋದಿ ಅವರ ಈ ನಡೆ ಸಂಸದೀಯ ಶಿಷ್ಟಾಚಾರ ಮತ್ತು ಸಂಸದರ ಹಕ್ಕುಗಳ ಉಲ್ಲಂಘನೆಯಾಗಿದೆ. ಮಣಿಪುರ ವಿದ್ಯಮಾನ ಕುರಿತು ಸಂಸತ್‌ನಲ್ಲಿಯೇ ಪ್ರಧಾನಿ ಹೇಳಿಕೆ ನೀಡುವಂತೆ ಒತ್ತಾಯಿಸುವ ನಿಲುವಳಿ ಮಂಡಿಸಲಾಗುವುದು' ಎಂದು ಹೇಳಿದ್ದಾರೆ.ಇದಕ್ಕೂ ಮುನ್ನ ಅವರು ನಿಯಮ 267ರ ಅಡಿ ನಿಲುವಳಿ ಸೂಚನೆ ಮಂಡನೆ ಕುರಿತು ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರಿಗೆ ಮನವಿ ಸಲ್ಲಿಸಿದ್ದರು.

ರಾಜ್ಯದ 948 ಜಲಮೂಲ ಒತ್ತುವರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ 948 ಜಲಮೂಲಗಳು ಒತ್ತುವರಿಯಾಗಿದೆ ಎಂದು ಕೇಂದ್ರ ಜಲಶಕ್ತಿ ಸಚಿವಾಲಯವು ಲೋಕಸಭೆಗೆ ಗುರುವಾರ ತಿಳಿಸಿದೆ.

ಸಚಿವಾಲಯವು ಈ ವರ್ಷ ಜಲಮೂಲಗಳ ಸಮೀಕ್ಷೆ ನಡೆಸಿದ್ದು, ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ 26,224 ಹಾಗೂ ನಗರ ಪ್ರದೇಶದಲ್ಲಿ 789 ಜಲಮೂಲಗಳಿವೆ. ಈ ಪೈಕಿ, ಗ್ರಾಮೀಣ ಪ್ರದೇಶದ 948 ಜಲಮೂಲಗಳು ಒತ್ತುವರಿಯಾಗಿವೆ. ನಗರ ಪ್ರದೇಶದ ಯಾವುದೇ ಜಲಮೂಲ ಒತ್ತುವರಿಯಾಗಿಲ್ಲ ಎಂದು ಜಲಶಕ್ತಿ ರಾಜ್ಯ ಸಚಿವ ಬಿಶ್ವೇಶ್ವರ ತುಡು ಉತ್ತರದಲ್ಲಿ ತಿಳಿಸಿದ್ದಾರೆ.

ಅರಣ್ಯ ಸಂರಕ್ಷಣೆ ತಿದ್ದುಪಡಿ ಮಸೂದೆ: ಸದನ ಸಮಿತಿ ಅನುಮೋದನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಾದಾತ್ಮಕ ಅರಣ್ಯ ಸಂರಕ್ಷಣೆ (ತಿದ್ದುಪಡಿ) ಮಸೂದೆಗೆ ಜಂಟಿ ಸದನ ಸಮಿತಿ ಗುರುವಾರ ಅನುಮೋದನೆ ನೀಡಿದೆ.

ಕಳೆದ ಮಾರ್ಚ್ 29ರಂದು ಲೋಕಸಭೆಯಲ್ಲಿ ಮಂಡಿಸಲಾಗಿದ್ದ ಮಸೂದೆಯನ್ನು ಅದೇ ದಿನ ಸಮಿತಿಗೆ ಒಪ್ಪಿಸಲಾಗಿತ್ತು. ಅಂತರರಾಷ್ಟ್ರೀಯ ಗಡಿಯಿಂದ 100 ಕಿ.ಮೀ. ವ್ಯಾಪ್ತಿಯಲ್ಲಿ ರಕ್ಷಣಾ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಅರಣ್ಯ ಅನುಮೋದನೆ ಅಗತ್ಯ ಇಲ್ಲ ಎಂಬ ನಿಯಮವನ್ನು ಈ ಮಸೂದೆ ಒಳಗೊಂಡಿದೆ. ಇದು ವಿವಾದಕ್ಕೆ ಕಾರಣವಾಗಿತ್ತು.

ಸಂಕ್ಷಿಪ್ತ ಸುದ್ದಿ

ಗಗನಸಖಿ ಆತ್ಮಹತ್ಯೆ ಪ್ರಕರಣದ ತೀರ್ಪು ಜು. 25ಕ್ಕೆ

ನವದೆಹಲಿ(ಪಿಟಿಐ): ಗಗನಸಖಿ ಗೀತಿಕಾ ಶರ್ಮ ಅವರ ಆತ್ಮಹತ್ಯೆ ಪ್ರಕರಣದ ತೀರ್ಪನ್ನು ದೆಹಲಿ ಹೈಕೋರ್ಟ್ ಜುಲೈ 25ರಂದು ಪ್ರಕಟಿಸಲಿದೆ. ಈ ಪ್ರಕರಣದಲ್ಲಿ ಹರಿಯಾಣದ ಮಾಜಿ ಸಚಿವ ಗೋಪಾಲ್ ಗೊಯಲ್ ಕಾಂಡ ಅವರು ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪ ಎದುರಿಸುತ್ತಿದ್ದಾರೆ.

ಕಾಂಡಾ ಅವರ ಒಡೆತನದ ಎಂಎಲ್‌ಡಿಆರ್ ಏರ್‌ಲೈನ್ಸ್‌ನಲ್ಲಿ ಗಗನಸಖಿಯಾಗಿದ್ದ ಗೀತಿಕಾ ಶರ್ಮ ಅವರನ್ನು ನಂತರದ ದಿನಗಳಲ್ಲಿ ಕಂಪನಿಯ ನಿರ್ದೇಶಕಿಯನ್ನಾಗಿ ಮಾಡಲಾಗಿತ್ತು. 2012ರ ಆಗಸ್ಟ್ 5ರಂದು ಅವರು ದೆಹಲಿಯ ಅಶೋಕನಗರದಲ್ಲಿರುವ ತಮ್ಮ ನಿವಾಸದಲ್ಲಿ ಶವವಾಗಿ ಪತ್ತೆಯಾಗಿದ್ದರು. ಕಾಂಡ ಅವರ ಕಿರುಕುಳಕ್ಕೆ ಬೇಸತ್ತು ತಾವು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಅವರು ಸಾವಿಗೂ ಮುನ್ನ ಪತ್ರ ಬರೆದಿಟ್ಟಿದ್ದರು.

ಭೂಪೇಂದರ್ ಸಿಂಗ್ ಹೂಡಾ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿದ್ದ ಕಾಂಡ, ಗೀತಿಕಾ ಶರ್ಮ ಆತ್ಮಹತ್ಯೆ ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಭಯೋತ್ಪಾದನೆ ಕಾರ್ಯಾಚರಣೆ: ಮೂವರ ಬಂಧನ

ನವದೆಹಲಿ/ಶ್ರೀನಗರ(ಪಿಟಿಐ): ಭಯೋತ್ಪಾದಕರಿಗೆ ನೆರವು, ನಿಷೇಧಿತ ಸಂಘಟನೆಯೊಂದಿಗೆ ನಂಟಿಗೆ ಸಂಬಂಧಿಸಿ ದೇಶದ ವಿವಿಧೆಡೆ ಗುರುವಾರ ನಡೆದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಮೂವರನ್ನು ಬಂಧಿಸಲಾಗಿದೆ.

ಜಮ್ಮು ಕಾಶ್ಮೀರದಲ್ಲಿನ ಭಯೋತ್ಪಾದಕ ಚಟುವಟಿಕೆಗಳಿಗಾಗಿ ಹಣ ಸಂಗ್ರಹಿಸುತ್ತಿದ್ದ ಆರೋಪದ ಮೇಲೆ ಸ್ವಯಂ ಘೋಷಿತ ಪತ್ರಕರ್ತ ಮುಜಾಮಿಲ್ ಜಹೂರ್ ಮಲಿಕ್ ಎಂಬುವವರನ್ನು ಇಂದರಗಾಮ್ ಪಟ್ಟಣ ಎಂಬಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯಾರ್ಥಿ ಸೆರೆ: ಭಯೋತ್ಪಾದಕ ಸಂಘಟನೆ ಐಎಸ್ ಸದಸ್ಯನಾಗಿದ್ದ ಎಂಬ ಆರೋಪದಡಿ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ 19 ವರ್ಷದ ವಿದ್ಯಾರ್ಥಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ. ಜಾರ್ಖಂಡ್ ಮೂಲದ ಫೈಜನ್ ಅನ್ಸಾರಿ ಅಲಿಯಾಸ್ ಫೈಸ್ ಬಂಧಿತ ಆರೋಪಿ.

ಬಂಧನ: ನಿಷೇದಿತ ಸಂಘಟನೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ನಂಟಿನ ಕಾನೂನು ಬಾಹಿರ, ರಾಷ್ಟ್ರ ವಿರೋಧಿ ಕೃತ್ಯಕ್ಕೆ ಸಂಚು ರೂಪಿಸಿದ ಸಂಬಂಧಿಸಿದ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ ಯಾಕೂಬ್ ಖಾನ್ (20) ಎಂಬಾತನನ್ನು ಎನ್‌ಐಎ ಬಿಹಾರದಲ್ಲಿ ಬಂಧಿಸಿದೆ. ಈ ಪ್ರಕರಣದಲ್ಲಿ ಬಂಧನಕ್ಕೊಳಗಾದವರ ಸಂಖ್ಯೆ 15ಕ್ಕೆ ಏರಿಕೆಯಾದಂತಾಗಿದೆ.'

'ಸೀಮಾ ಪ್ರಕರಣದ ತನಿಖೆ ಪ್ರಗತಿಯಲ್ಲಿ'

ನವದೆಹಲಿ (ಪಿಟಿಐ): ಎರಡು ತಿಂಗಳ ಹಿಂದೆ ಗಡಿ ದಾಟಿ ಭಾರತಕ್ಕೆ ಬಂದಿದ್ದ ಪಾಕಿಸ್ತಾನದ ಪ್ರಜೆ ಸೀಮಾ ಹೈದರ್‌ಗೆ ಸಂಬಂಧಿಸಿದ ಪ್ರಕರಣದ ತನಿಖೆ ನಡೆಯುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ಹೇಳಿದೆ.

ಪಾಕಿಸ್ತಾನದ ಸಿಂಧ್ ಪ್ರಾಂತ್ಯದ 30 ವರ್ಷದ ಸೀಮಾ, ತನ್ನ ನಾಲ್ಕು ಮಕ್ಕಳ ಜೊತೆಗೆ ಗಡಿ ದಾಟಿ ನೇಪಾಳದ ಮೂಲಕ ಮೇ 13ರಂದು ಅಕ್ರಮವಾಗಿ ಭಾರತ ಪ್ರವೇಶಿಸಿದ್ದರು.

'ನಮಗೆ ಈ ಪ್ರಕರಣದ ಅರಿವಿದೆ. ಆಕೆ ಕೋರ್ಟ್ ಎದುರು ಹಾಜರಾಗಿದ್ದು, ಜಾಮೀನು ದೊರೆತಿದೆ. ಪ್ರಕರಣ ಈಗ ನ್ಯಾಯಾಲಯದಲ್ಲಿರುವ ಕಾರಣ ಹೆಚ್ಚು ಹೇಳಲು ಬಯಸುವುದಿಲ್ಲ' ಎಂದು ಸಚಿವಾಲಯದ ವಕ್ತಾರರಾದ ಅರಿಂದಮ್ ಬಾಗ್ಚಿ ಹೇಳಿದರು.

ಸಿನಿಮಾ ಪುರವಣಿ

ಪ್ರಜಾವಾಣಿ ನೋಡಿಯೊ

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಬೃಂದಾ

ಕಾಲಿವುಡ್‌ಗೆ ಬೃಂದಾ

ಅಭಿಲಾಷ್ ಪಿ.ಎಸ್.

'ಪ್ರೇಮಂ ಪೂಜ್ಯಂ' ಸಿನಿಮಾ ಮೂಲಕ ಕಿರುತೆರೆಯಿಂದ ಬೆಳ್ಳಿತೆರೆಯ ಪಯಣ ಆರಂಭಿಸಿದ ನಟಿ ಬೃಂದಾ ಆಚಾರ್ಯ, ಇದೀಗ ತಮ್ಮ ಮೂರನೇ ಪ್ರಾಜೆಕ್ಟ್ ರಿಲೀಸ್ ಹೊಸ್ತಿಲಲ್ಲಿದ್ದಾರೆ. ಶಶಾಂಕ್ ನಿರ್ದೇಶನದ **'ಕೌಸಲ್ಯಾ ಸುಪ್ರಜಾ ರಾಮ'** ಜುಲೈ 28ಕ್ಕೆ ತೆರೆಕಾಣುತ್ತಿದೆ. ಕನ್ನಡದಲ್ಲಷ್ಟೇ ಅಲ್ಲ, ತಮಿಳು ಚಿತ್ರರಂಗದತ್ತಲೂ ಬೃಂದಾ ಹೆಜ್ಜೆ ಹಾಕಲಿದ್ದಾರೆ.

- **'ಪ್ರೇಮಂ ಪೂಜ್ಯಂ' ಬಳಿಕದ ಬೃಂದಾ ಅವರ ಜೀವನ ಹೇಗಿದೆ?**

ಐ.ಟಿ ಉದ್ಯೋಗ ಬಿಟ್ಟು ಬಣ್ಣದ ಲೋಕದ ಕನಸು ಕಟ್ಟಿಕೊಂಡು ಈ ಕ್ಷೇತ್ರಕ್ಕೆ ಬಂದವಳು ನಾನು. 'ಪ್ರೇಮಂ ಪೂಜ್ಯಂ' ಬಿಡುಗಡೆ ಬಳಿಕ ಕನಸು ನನಸಾದ ಭಾವ. ಇದಾದ ಬಳಿಕ ಜವಾಬ್ದಾರಿ ಹೆಚ್ಚಿತು. ಒಳ್ಳೆಯ ಸ್ಕ್ರಿಪ್ಟ್‌ಗಳು ಬರಲಾರಂಭಿಸಿದವು. ಅತ್ಯುತ್ತಮ ನಿರ್ದೇಶಕರ ಜೊತೆ ಕೆಲಸ ಮಾಡಬೇಕು, ಒಳ್ಳೊಳ್ಳೆಯ ಪಾತ್ರಗಳನ್ನು ಮಾಡಿ ಪ್ರೇಕ್ಷಕರೆದುರಿಗೆ ಬರಬೇಕು ಎನ್ನುವ ತುಡಿತ ಆರಂಭವಾಯಿತು. ಹೀಗಾಗಿಯೇ ಹೊಸ ಸಿನಿಮಾ ಒಪ್ಪಿಕೊಳ್ಳಲು ಸಮಯ ತೆಗೆದುಕೊಂಡೆ.

- **ಐ.ಟಿ. ಉದ್ಯೋಗದತ್ತ ಮತ್ತೆ ಯೋಚನೆ ಹೊರಳಿತ್ತೇ?**

ಮುಂಬೈನಿಂದ ಬೆಂಗಳೂರಿಗೆ ಬಂದು ಐ.ಟಿ. ಉದ್ಯೋಗ ಮಾಡುತ್ತಿದ್ದ ಸಂದರ್ಭದಲ್ಲೇ 'ಪ್ರೇಮಂ ಪೂಜ್ಯಂ' ಸಿನಿಮಾ ಅವಕಾಶ ಸಿಕ್ಕಿತ್ತು. ಆ ಸಿನಿಮಾಗಾಗಿ ಉದ್ಯೋಗವನ್ನು ಬಿಟ್ಟಿದ್ದೆ. ಸಿನಿಮಾ ಬಿಡುಗಡೆಯಾದ ಬಳಿಕ ಐ.ಟಿ ಉದ್ಯೋಗ ಮತ್ತೆ ಸೇರಿಕೊಳ್ಳುವ ಬಗ್ಗೆ ಯೋಚಿಸಿಲ್ಲ. ಆದರೆ, ಮಧ್ಯಮವರ್ಗದ ಕುಟುಂಬದಲ್ಲಿ ಏನಾಗುತ್ತದೆ ಎಂದರೆ ನಾವು ಯೋಚನೆ ಮಾಡದೇ ಇದ್ದರೂ ಕುಟುಂಬದವರು ಬಿಡುವುದಿಲ್ಲ. 'ಸಿನಿಮಾ ಕ್ಷೇತ್ರ ನಮಗೆಲ್ಲಾ ಬೇಕಾ? ಐ.ಟಿ ಉದ್ಯೋಗ ಸೇರಿಕೋ. ದೀರ್ಘಾವಧಿಯಲ್ಲಿ ಜೀವನ ನಡೆಸಲು ಇದರಿಂದಷ್ಟೇ ಸಾಧ್ಯ' ಎನ್ನುವ ಮಾತು ಅವರದ್ದು. ಹೀಗೆ ಸ್ವಲ್ಪ ಒತ್ತಡ ಇದ್ದರೂ ಬಣ್ಣದ ಜೀವನವನ್ನೇ ನಾನು ಇಷ್ಟಪಡುತ್ತಿದ್ದೇನೆ. ಇಲ್ಲಿನ ಜನರು ನನಗೆ ಪ್ರೀತಿ ನೀಡಿದ್ದಾರೆ.

- **ಪಾತ್ರಗಳ ಆಯ್ಕೆ ವಿಚಾರದಲ್ಲಿ ಬೃಂದಾ ಅವರ ನಿಯಮಗಳು...**

ಈ ವಿಚಾರದಲ್ಲಿ ನಾನು ಸಾಂಪ್ರದಾಯಿಕ ಚೌಕಟ್ಟಿನ ಒಳಗಿದ್ದೇನೆ. ನಿರ್ದೇಶಕರು ಕಥೆ ಹೇಳುವಾಗ ಒಂದು ಪೆನ್, ಪೇಪರ್ ಹಿಡಿದುಕೊಂಡು ಕೂರುತ್ತೇನೆ. ಒನ್ ಲೈನ್ ಸ್ಟೋರಿಯನ್ನು ನಿರ್ದೇಶಕರು ಮುಂದಿಟ್ಟರೆ ನಾನು ಒಪ್ಪುವುದಿಲ್ಲ. ಚಿತ್ರದ ಕಥೆ, ನನ್ನ ಪಾತ್ರದ ವಿಸ್ತೃತ ವಿವರಣೆಯನ್ನು ಬಯಸುತ್ತೇನೆ. ಹೀಗಾದಾಗಷ್ಟೇ ನನ್ನ ಪಾತ್ರದ ಬಗ್ಗೆ ನನಗೆ ನಂಬಿಕೆ ಹುಟ್ಟಿಕೊಳ್ಳುತ್ತದೆ. ಒಂದು ರೀತಿಯಲ್ಲಿ ಇದೊಂದು ಸುದೀರ್ಘ ಪಯಣ. ಈ ಕ್ಷಣಕ್ಕೂ ನಾನು ರೊಮ್ಯಾಂಟಿಕ್ ಸಿನಿಮಾಗಳ ಕಡೆ ವಾಲುವುದು ಕೊಂಚ ಜಾಸ್ತಿ. ಒಬ್ಬ ಕಲಾವಿದೆಯಾಗಿ ಎಲ್ಲ ಜಾನರ್ ಪಾತ್ರಗಳನ್ನು ಮಾಡುವ ಆಸೆ ಇದೆ. 'ಜೂಲಿಯೆಟ್' ಸಿನಿಮಾದಲ್ಲಿನ ನಟನೆಗಾಗಿ ನಾನು ಎರಡು ತಿಂಗಳು ಮಾರ್ಷಿಯಲ್ ಆರ್ಟ್ಸ್ ಕಲಿತು ಆ ಪಾತ್ರ ಮಾಡಿದ್ದೆ. ಸಿನಿಮಾಗಳ ಸಂಖ್ಯೆಗಳಿಗಿಂತಲೂ ಗುಣಮಟ್ಟದ ಸಿನಿಮಾಗಳನ್ನು ಮಾಡುವ ನಿಯಮ ಹಾಕಿಕೊಂಡಿದ್ದೇನೆ. ಈ ಹೆಜ್ಜೆಗಳಲ್ಲಿ ಖಂಡಿತವಾಗಿಯೂ ಕಷ್ಟ, ಸವಾಲುಗಳಿವೆ ಎಂದು ತಿಳಿದಿದೆ.

- **'ಕೌಸಲ್ಯಾ..'ದಲ್ಲಿನ 'ಶಿವಾನಿ' ಯಾರು?**

ಶಶಾಂಕ್ ಅವರ ನಿರ್ದೇಶನದ 'ಕೌಸಲ್ಯಾ ಸುಪ್ರಜಾ ರಾಮ' ಸಿನಿಮಾದಲ್ಲಿ ಬಬ್ಲಿ ಗರ್ಲ್ ಆಗಿ ಕಾಣಿಸಿಕೊಂಡಿದ್ದೇನೆ. 'ಶಿವಾನಿ' ಬಬ್ಲಿಯಾಗಿದ್ದರೂ, ಬಹಳ ಪಕ್ವವಾಗಿರುವ ಪಾತ್ರವದು. ಆಕೆಯಲ್ಲೊಂದು ಜೀವಕಳೆಯಿದೆ. ಶಶಾಂಕ್ ಅವರ ಸಿನಿಮಾಗಳಲ್ಲಿ ನಾಯಕಿಯ ಪಾತ್ರಕ್ಕೆ ತೂಕ ಇರುತ್ತದೆ. ಅವರ ಸಿನಿಮಾಗಳಲ್ಲಿ ಸಂದೇಶವಿರುತ್ತದೆ. 'ಮೊಗ್ಗಿನ ಮನಸು' ಸಿನಿಮಾದ ಫ್ಯಾನ್ ನಾನು. 'ಕೌಸಲ್ಯಾ..' ಪ್ರತಿಯೊಬ್ಬರ ಮನೆಯಲ್ಲೂ ನಡೆಯುವ ಕಥೆ. ಆದರೆ ಯಾರೂ ಹೇಳಿಕೊಳ್ಳುವುದಿಲ್ಲ. ಭಾರತೀಯ ಸಮಾಜದಲ್ಲಿ ಇಂದಿಗೂ ಪುರುಷ ಪ್ರಧಾನ ಪದ್ಧತಿ ಅನುಷ್ಠಾನದಲ್ಲಿದೆ. ನಾವು ಇಂದಿಗೂ ಮನೆಗೆ ಹೋದರೆ ಅಮ್ಮನ ಬಳಿಯೇ ಕಾಫಿ ಕೇಳುತ್ತೇವೆ ವಿನಃ ಅಪ್ಪನ ಬಳಿ ಕೇಳುವುದಿಲ್ಲ. ಇದು ಎಲ್ಲರ ತಲೆಯಲ್ಲೂ ಕುಳಿತಿದೆ. ಮಗುವೊಂದು ಇಂತಹ ಮನಃಸ್ಥಿತಿ ಬೆಳೆಸಿಕೊಂಡರೆ ಹೇಗಿರುತ್ತದೆ ಎನ್ನುವ ಕಥೆಯ ಎಳೆ ಇಟ್ಟುಕೊಂಡು ಶಶಾಂಕ್ ಅವರು ಸಿನಿಮಾ ಹೆಣೆದಿದ್ದಾರೆ. 'ರಾಮ' ಎನ್ನುವ ಪುರುಷಾಭಿಮಾನಿ(ಮೇಲ್ ಷೋವಿನಿಷ್ಟ್) ಜೀವನದಲ್ಲಿ ಶಿವಾನಿ ಬಂದ ಬಳಿಕ ಏನಾಗುತ್ತದೆ ಎನ್ನುವುದೇ ಕಥೆ.

ನಾನು ಬೇರೊಂದು ಪ್ರಾಜೆಕ್ಟ್‌ಗೆ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ, ಶೂಟಿಂಗ್ ಸ್ಥಳ ನೋಡಲು ಶಶಾಂಕ್ ಅವರು ಅಲ್ಲಿಗೆ ಬಂದಿದ್ದರು. ನನ್ನ ನಟನೆಯನ್ನು ನೋಡಿ ಅಲ್ಲಿಯೇ 'ಶಿವಾನಿ' ಪಾತ್ರಕ್ಕೆ ನನ್ನನ್ನು ಆಯ್ಕೆ ಮಾಡಿಕೊಂಡಿದ್ದರಂತೆ. ಆಗಲೇ ಚಿತ್ರದ ಒಂದು ಶೆಡ್ಯೂಲ್ ಮುಗಿದಿತ್ತಂತೆ.

- **ಮಾಡೆಲಿಂಗ್ ಕಡೆಗೆ ಹೋಗುವ ಲಕ್ಷಣಗಳಿವೆ..**

ಸಿನಿಮಾ ಹಾಗೂ ಮಾಡೆಲಿಂಗ್ ಜೊತೆ ಜೊತೆಯಾಗಿ ಸಾಗುವ ಹೆಜ್ಜೆಗಳು. ಯಾವುದಾದರೂ ಅವಕಾಶಗಳು ಬಂದರೆ ಖಂಡಿತವಾಗಿಯೂ ಅತ್ತಲೂ ಗಮನಹರಿಸುತ್ತೇನೆ. ಮಾಡೆಲಿಂಗ್‌ನಿಂದ ಮತ್ತಷ್ಟು ಸಿನಿಮಾ ಅವಕಾಶಗಳೂ ಸಿಗಬಹುದೇನೋ!

- **ಬೃಂದಾ ಅವರ ಮುಂದಿನ ಪ್ರಾಜೆಕ್ಟ್‌ಗಳು..**

ಸದ್ಯ ಎರಡು ಕನ್ನಡ ಸಿನಿಮಾಗಳನ್ನು ಒಪ್ಪಿಕೊಂಡಿದ್ದೇನೆ. ಇದರಲ್ಲಿ ಒಂದು ಚಿತ್ರದ ಚಿತ್ರೀಕರಣ ಆರಂಭವಾಗಿದೆ. ಜೊತೆಗೆ ಒಂದು ತಮಿಳು ಸಿನಿಮಾವನ್ನು ಒಪ್ಪಿಕೊಂಡಿದ್ದೇನೆ. ಅದರಲ್ಲಿ ವಿಎಫ್‌ಎಕ್ಸ್ ಭಾಗವೇ ಹೆಚ್ಚಿದ್ದು, ಹೀಗಾಗಿ ಆ ಸಿನಿಮಾ ಬಿಡುಗಡೆಗೆ ಕೊಂಚ ಸಮಯ ಹಿಡಿಯಲಿದೆ. ❖

'ಪ್ರತಿಭೆಗೆ ವಿಶ್ವಾಸಾರ್ಹತೆಯ ಮುದ್ರೆ'

ಪ್ರಜಾವಾಣಿ ಪತ್ರಿಕೆಯು ಈ ವರ್ಷ 'ಸಿನಿ ಸಮ್ಮಾನ' ಪುರಸ್ಕಾರ ನೀಡಿ ಚಿತ್ರರಂಗದ ಪ್ರತಿಭೆಗಳನ್ನು ಗೌರವಿಸಿತ್ತು. ಪ್ರಶಸ್ತಿ ಪುರಸ್ಕಾರ ಕಾರ್ಯಕ್ರಮ ನಿರೂಪಿಸಿದ್ದ ಖ್ಯಾತ ನಟ ರಮೇಶ್ ಅರವಿಂದ್ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

ನಾವೆಲ್ಲ ಸಿನಿಮಾ ಕೆಲಸಗಳಲ್ಲಿ ತೊಡಗಿಸಿಕೊಂಡು ಇರುತ್ತೇವೆ. ಸದಾ ಓಡುತ್ತಾ ಇರುತ್ತೇವೆ. ಸರಿಯಾದ ದಿಕ್ಕಿನಲ್ಲಿ ಓಡುತ್ತಾ ಇದ್ದೇವೆಯೋ ಇಲ್ಲವೋ ಎಂಬ ಅನುಮಾನ ಆಗೀಗ ಎದುರಾಗುತ್ತದೆ. ಆಗ ಯಾರಾದರೂ ವಿಶ್ವಾಸಾರ್ಹತೆ ಇರುವವರು ಪ್ರಶಸ್ತಿ ನೀಡಿದರೆ ಓಡುತ್ತಿರುವ ದಿಕ್ಕು ಸರಿಯಾಗಿದೆ ಎಂದು ಸ್ಪಷ್ಟವಾಗುತ್ತದೆ. ಇನ್ನಷ್ಟು ಒಳ್ಳೆಯ ಕೆಲಸ ಮಾಡಲು ಪ್ರೇರಣೆ ಸಿಗುತ್ತದೆ. ಇದು ಬರಿ ಪ್ರಶಸ್ತಿ ಅಲ್ಲ, 'ಪ್ರಜಾವಾಣಿ' ನೀಡುವ ಪ್ರಶಸ್ತಿ. ಎಪ್ಪತ್ತೈದು ವರ್ಷಗಳ ಇತಿಹಾಸ ಇರುವ, ವಿಶ್ವಾಸಾರ್ಹತೆಯನ್ನು ಕಾಪಾಡಿಕೊಂಡು ಬಂದಿರುವ ಪತ್ರಿಕೆ 'ಪ್ರಜಾವಾಣಿ'. ಬೆಳೆಯುವ ಹಂತದಲ್ಲಿ ಇರುವ ನಟ-ನಟಿ, ನಿರ್ದೇಶಕರು, ತಂತ್ರಜ್ಞರಿಗೆ ಈ ರೀತಿಯ ಪ್ರಶಸ್ತಿ ಬಹಳ ಮಹತ್ವದ್ದು. 'ಪ್ರಜಾವಾಣಿ' ಮೊದಲ ಸಲ ಸಿನಿ ಸಮ್ಮಾನ ಪುರಸ್ಕಾರ ನೀಡಿತು. ನಾನು ನಿರೀಕ್ಷಿಸಿದ್ದಕ್ಕಿಂತ ಅಚ್ಚುಕಟ್ಟಾಗಿ, ಅದ್ದೂರಿಯಾಗಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿತವಾಗಿತ್ತು. ಫಿಲಂಫೇರ್ ಪ್ರಶಸ್ತಿ ಸಮಾರಂಭವನ್ನು ನಾನು ನೋಡಿದ್ದೆ, ನಿರೂಪಿಸಿದ್ದೆ. ಕನ್ನಡದ ಪತ್ರಿಕೆ ಕೂಡ ಅದೇ ಮಟ್ಟಕ್ಕೆ ಕಾರ್ಯಕ್ರಮ ಆಯೋಜಿಸಿದ್ದು ತುಂಬಾ ಖುಷಿ ತಂದಿತು.

ಕಾರ್ಯಕ್ರಮದಲ್ಲಿ ನಿರೂಪಣೆ ಮಾಡುವಂತೆ ನನ್ನನ್ನು ಕೇಳಿದಾಗ ನಾನು ಮೊದಲು ಕೇಳಿದ್ದು- ತೀರ್ಪುಗಾರರು ಯಾರು ಎಂದು. ಗಿರೀಶ್ ಕಾಸರವಳ್ಳಿ ತರಹದವರು ನೇತೃತ್ವ ವಹಿಸಿದ್ದಾರೆ ಎನ್ನುವುದನ್ನು ಕೇಳಿಯೇ ನನಗೆ ಈ ಪ್ರಶಸ್ತಿಯ ಆಯ್ಕೆಯ ಬಗೆಗೆ ಸ್ಪಷ್ಟತೆ ಸಿಕ್ಕಿತು. ಯಾವುದೇ ಪೂರ್ವಗ್ರಹವಿಲ್ಲದೆ ಆಯ್ಕೆ ಮಾಡುವ ಸಮಿತಿ ತುಂಬಾ ಮುಖ್ಯ. ಅದು 'ಪ್ರಜಾವಾಣಿ' ಎಚ್ಚರಿಕೆಯಿಂದ ನಿರ್ವಹಿಸಿದ್ದು ಇನ್ನೊಂದು ಗಮನ ಸೆಳೆಯುವ ವಿಷಯ.

ಈ ಎಲ್ಲ ಕಾರಣಗಳಿಂದ ನಾನು, ಅದರಲ್ಲಿಯೂ 'ಪ್ರಜಾವಾಣಿ' ಪ್ರಶಸ್ತಿ ನೀಡುತ್ತಿದೆ ಎನ್ನುವ ಕಾರಣಕ್ಕೆ ಕಾರ್ಯಕ್ರಮ ನಿರೂಪಿಸಲು ಒಪ್ಪಿಕೊಂಡೆ.

ಹೀಗೆ ಪ್ರಶಸ್ತಿ ನೀಡುವ ಪರಿಪಾಟ ವರ್ಷದಿಂದ ವರ್ಷಕ್ಕೆ ಇನ್ನಷ್ಟು ಕಳೆಗಟ್ಟಲಿ. ಇಡೀ ಚಿತ್ರರಂಗಕ್ಕೆ ಇಂತಹ ಪ್ರಶಸ್ತಿಯ ಅಗತ್ಯ ಖಂಡಿತ ಇತ್ತು. ❖

ನಟನೆ ಜೊತೆ ಸಿದ್ಧಾರ್ಥ್ ಆ್ಯಕ್ಷನ್ ಕಟ್

ಸಿದ್ಧಾರ್ಥ್

'ನನ್ನ ಸಿಪಾಯಿ' ಮತ್ತು 'ಗರುಡ' ಸಿನಿಮಾಗಳಲ್ಲಿ ನಟಿಸುವ ಮೂಲಕ ಗಾಂಧಿನಗರದಲ್ಲಿ ಗುರುತಿಸಿಕೊಂಡಿರುವ ನಟ ಸಿದ್ಧಾರ್ಥ್ ಮಹೇಶ್ ಇದೀಗ ನಿರ್ದೇಶನಕ್ಕೆ ಕೈಹಾಕಿದ್ದಾರೆ.

ಅವರ ಜನ್ಮದಿನದಂದೇ ಸಿದ್ಧಾರ್ಥ್ ಅವರ ಹೊಸ ಸಿನಿಮಾ ಘೋಷಣೆಯಾಗಿದೆ. ಈ ಚಿತ್ರದಲ್ಲಿ ನಾಯಕನಾಗಿ ಬಣ್ಣ ಹಚ್ಚುತ್ತಿರುವ ಸಿದ್ಧಾರ್ಥ್ ಮಹೇಶ್ ನಿರ್ದೇಶಕರಾಗಿಯೂ ಹೊಸ ಹೆಜ್ಜೆ ಇಡುತ್ತಿದ್ದಾರೆ. ಈ ಮೂಲಕ ತಮ್ಮ ಕನಸನ್ನು ನನಸು ಮಾಡಿಕೊಳ್ಳುತ್ತಿದ್ದಾರೆ.

ನಿರ್ದೇಶನದ ಜೊತೆಗೆ ಚಿತ್ರದ ಕಥೆಯೂ ಅವರದ್ದೇ. ಅತಶ್ರೀ ಮೀಡಿಯಾ ಕ್ರಿಯೇಶನ್ಸ್ ಮತ್ತು ಆರೇಂಜ್ ಪಿಕ್ಸೆಲ್ಸ್‌ನಡಿ ಸಿದ್ಧಾರ್ಥ್ ಮಹೇಶ್ ಸ್ನೇಹಿತರಾಗಿರುವ ಎಸ್.ಚಂದನ್ ಈ ಸಿನಿಮಾಗೆ ಬಂಡವಾಳ ಹೂಡುತ್ತಿದ್ದಾರೆ. ತಮಿಳು ಸಿನಿಮಾ ನಿರ್ಮಿಸಿದ್ದ ಚಂದನ್ ಅವರಿಗೆ ಇದು ಕನ್ನಡದಲ್ಲಿ ಚೊಚ್ಚಲ ನಿರ್ಮಾಣದ ಸಿನಿಮಾ. ಕಥೆ ಕೊನೆಯ ಹಂತದಲ್ಲಿದ್ದು, ಶೀಘ್ರದಲ್ಲೇ ಮತ್ತಷ್ಟು ಮಾಹಿತಿ ನೀಡಲು ಚಿತ್ರತಂಡ ಸಜ್ಜಾಗಿದೆ. ಈ ಸಿನಿಮಾ ಪ್ರೇಮಕಥೆ, ಆ್ಯಕ್ಷನ್ ಕಥಾಹಂದರ ಹೊಂದಿದೆ. ❖

ಸುಭಾಷಿತ

ಮನುಷ್ಯನಲ್ಲಿನ ಎಲ್ಲ ಬಗೆಯ ಅತ್ಯುನ್ನತ ಸಾಮರ್ಥ್ಯಗಳ ಮೂಲವು ಏಕಾಗ್ರತೆಯೇ ಆಗಿರುತ್ತದೆ.

-ಬ್ರೂಸ್ ಲೀ

ನವದೆಹಲಿಯಲ್ಲಿ ಎನ್‌ಡಿಎ ಸಭೆ ಕುಗ್ಗಿತೇ ಬಿಜೆಪಿಯ ವಿಶ್ವಾಸ?

ಬಿಜೆಪಿಯು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟಕ್ಕೆ (ಎನ್‌ಡಿಎ) ಮತ್ತೆ ಜೀವ ತುಂಬಲು ಮುಂದಾಗಿದೆ. ಇದಕ್ಕೆ ಕೆಲವು ಕಾರಣಗಳಿವೆ. ಬಿಜೆಪಿಗೆ ಈಗ ಚುನಾವಣೆಯ ವಿಚಾರದಲ್ಲಿ ತುಸು ಅಭದ್ರತೆ ಕಾಡುತ್ತಿದೆ. ಯಾಜಮಾನ್ಯ ಧೋರಣೆಯ ಒಂದು ಪ್ರಬಲ ರಾಜಕೀಯ ಪಕ್ಷವಾಗಿ ಗುರುತಿಸಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ, ರಾಜಕೀಯ ಮೈತ್ರಿಕೂಟದ ಜೊತೆ ಗುರುತಿಸಿಕೊಳ್ಳುವುದು ಹೆಚ್ಚು ಪ್ರಯೋಜನಕಾರಿ ಎಂದು ಅದಕ್ಕೆ ಅನ್ನಿಸಿದೆ. ಅದರಲ್ಲೂ ಮುಖ್ಯವಾಗಿ, ಹಲವು ವರ್ಗಗಳನ್ನು ಪ್ರತಿನಿಧಿಸುವ ಮೈತ್ರಿಕೂಟವೊಂದು ಎದುರಾಳಿಯಾಗಿ ರೂಪುಗೊಂಡಿರುವಾಗ ತಾನು ಕೂಡ ಒಂದು ಮೈತ್ರಿಕೂಟವನ್ನು ಹೊಂದುವುದು ಒಳಿತು ಎಂದು ಅದಕ್ಕೆ ಅನ್ನಿಸಿದೆ. ಹೀಗಾಗಿ, ಬಿಜೆಪಿಯು ಹಲವು ರಾಜಕೀಯ ಪಕ್ಷಗಳನ್ನು ಒಗ್ಗೂಡಿಸಿ ದೆಹಲಿಯಲ್ಲಿ ಸಭೆ ನಡೆಸಿದೆ. ಈ ಪಕ್ಷಗಳ ಪೈಕಿ ಕೆಲವು ಪಕ್ಷಗಳಿಗೆ ಸಂಸತ್ತಿನಲ್ಲಿ ಅಥವಾ ಯಾವುದೇ ರಾಜ್ಯದ ವಿಧಾನಸಭೆಯಲ್ಲಿ ಪ್ರಾತಿನಿಧ್ಯವೇ ಇಲ್ಲ. ಆದರೆ ಈ ಪಕ್ಷಗಳು ಹಲವು ಸಮುದಾಯಗಳನ್ನು ಪ್ರತಿನಿಧಿಸುವುದು ನಿಜ. ಕೆಲವು ಪಕ್ಷಗಳು ಹಿಂದಿನ ಎನ್‌ಡಿಎ ಭಾಗವಾಗಿದ್ದುದೂ ಹೌದು, ಈ ಪಕ್ಷಗಳನ್ನು ಬಿಜೆಪಿಯೇ ಒಡೆದಿರುವುದೂ ನಿಜ! ಐಎನ್‌ಡಿಐಎ ಮೈತ್ರಿಕೂಟದಲ್ಲಿ 26 ರಾಜಕೀಯ ಪಕ್ಷಗಳಿದ್ದರೆ ತನ್ನ ಜೊತೆ 38 ಪಕ್ಷಗಳು ಇವೆ ಎಂದು ಬಿಜೆಪಿ ಹೇಳಿಕೊಂಡಿದೆ. ಮೈತ್ರಿಕೂಟದಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಕ್ಷಗಳನ್ನು ಒಳಗೊಳ್ಳುವುದು ಮುಖ್ಯ, ಅದು ಇತರರನ್ನು ಮೆಚ್ಚಿಸುವ ಉದ್ದೇಶವನ್ನೂ ಹೊಂದಿರುತ್ತದೆ. ವಿರೋಧ ಪಕ್ಷಗಳ ಒಕ್ಕೂಟವು ಪಟ್ನಾದಲ್ಲಿ ಹಾಗೂ ಬೆಂಗಳೂರಿನಲ್ಲಿ ಸಭೆ ನಡೆಸಿದ್ದಕ್ಕೂ, ತಾನು ಎನ್‌ಡಿಎ ಸಭೆಯನ್ನು ದೆಹಲಿಯಲ್ಲಿ ನಡೆಸಿದ್ದಕ್ಕೂ ಸಂಬಂಧವೇ ಇಲ್ಲ ಎಂದು ಬಿಜೆಪಿ ಹೇಳಿಕೊಂಡಿದೆ. ಆದರೆ ಇದು ರಾಜಕೀಯ ವಿರೋಧಿಗಳ ಸಭೆಗೆ ಪ್ರತಿಯಾಗಿ ನಡೆದ ಸಭೆ ಎಂಬುದರಲ್ಲಿ ಅನುಮಾನವಿಲ್ಲ.

ದೆಹಲಿಯಲ್ಲಿ ನಡೆದ ಎನ್‌ಡಿಎ ಸಭೆಯು ರಾಜಕೀಯ ವಿರೋಧಿಗಳ ಸಭೆಗೆ ಪ್ರತಿಯಾಗಿ ನಡೆದ ಸಭೆ ಎಂಬುದರಲ್ಲಿ ಅನುಮಾನವಿಲ್ಲ

ಮೇ ತಿಂಗಳಲ್ಲಿ ಕರ್ನಾಟಕ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಸೋಲು ಅನುಭವಿಸಿತು. ಈ ಸೋಲು, 2024ರ ಲೋಕಸಭಾ ಚುನಾವಣೆಯನ್ನು ತಾನು ಏಕಾಂಗಿಯಾಗಿ ಎದುರಿಸಬಲ್ಲೆ ಎಂದು ಬಿಜೆಪಿ ಹೊಂದಿದ್ದ ವಿಶ್ವಾಸವನ್ನು ಕುಗ್ಗಿಸಿರಬಹುದು. ಹಿಂದಿನ ಎನ್‌ಡಿಎ ಭಾಗವಾಗಿದ್ದ ಶಿವಸೇನಾ (ಉದ್ಧವ್ ಬಣ) ಮತ್ತು ಶಿರೋಮಣಿ ಅಕಾಲಿದಳ ಈಗಿನ ಎನ್‌ಡಿಎ ಜೊತೆ ಇಲ್ಲ. ನಿತೀಶ್ ಕುಮಾರ್ ಅವರ ಜೆಡಿಯು ಈಗ ವಿರೋಧ ಪಕ್ಷಗಳ ಐಎನ್‌ಡಿಐಎ ಒಕ್ಕೂಟದ ಜೊತೆಗಿದೆ. ತಾನು ಅಧಿಕಾರದಲ್ಲಿ ಇಲ್ಲದ ರಾಜ್ಯಗಳಲ್ಲಿ ಚುನಾವಣಾ ಸವಾಲುಗಳು ತೀವ್ರವಾಗಿರಬಹುದು ಎಂದು ಕೂಡ ಬಿಜೆಪಿಗೆ ಅನ್ನಿಸಿರಬಹುದು. ಪ್ರಧಾನಿ ನರೇಂದ್ರ ಮೋದಿ ಅವರು ಇಂದಿಗೂ ದೇಶದ ಅತ್ಯಂತ ಜನಪ್ರಿಯ ನಾಯಕನಾಗಿ ಮುಂದುವರಿದಿದ್ದಾರೆ. ಮತದಾರರ ನಡುವೆ ಅವರಿಗೆ ಭಾರಿ ಜನಪ್ರಿಯತೆ ಇದೆ. ಆದರೆ ಜನಪ್ರಿಯತೆಯ ತೀವ್ರತೆಯು ತಗ್ಗಿರಬಹುದು ಎಂಬ ಸೂಚನೆಗಳಿವೆ. ನಿರುದ್ಯೋಗ, ಬೆಲೆ ಏರಿಕೆ ಮತ್ತು ಸಾಮಾಜಿಕ ಬಿಕ್ಕಟ್ಟುಗಳು ದೇಶದ ಹಲವು ಸಮುದಾಯಗಳನ್ನು ಕಾಡುತ್ತಿವೆ. ಇವೆಲ್ಲ ಸರ್ಕಾರದ ವಿರುದ್ಧ ಅಸಮಾಧಾನವನ್ನು ತೀವ್ರಗೊಳಿಸಬಲ್ಲವು.

ಎನ್‌ಡಿಎ ಸಭೆಯಲ್ಲಿ ಪ್ರಧಾನಿ ಹಾಗೂ ಬಿಜೆಪಿಯ ಪ್ರಮುಖ ನಾಯಕರು ಭಾಗವಹಿಸಿದ್ದರು. 'ಒಂಬತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರ ಮಾಡಿದ ಸಾಧನೆಯನ್ನು ಹೇಳುವುದು ಹಾಗೂ ಮುಂದಿನ ಚುನಾವಣೆಗಳ ಬಗ್ಗೆ ಚರ್ಚಿಸುವ' ಉದ್ದೇಶವನ್ನು ಸಭೆಯು ಹೊಂದಿತ್ತು. ಆದರೆ, ಅಲ್ಲಿ ಚುನಾವಣೆಯ ಬಗ್ಗೆ ಹೆಚ್ಚು ಚರ್ಚೆ ಆಗಲಿಲ್ಲ. ವಿರೋಧ ಪಕ್ಷಗಳು ರಚಿಸಿರುವ ಒಕ್ಕೂಟವು ಅವಕಾಶವಾದಿತನದಿಂದ ಕೂಡಿದೆ, ಅನಿವಾರ್ಯದ ಕಾರಣಕ್ಕೆ ರಚನೆಯಾಗಿದೆ ಎಂದು ಪ್ರಧಾನಿ ಮೋದಿ ಟೀಕಿಸಿದರು. ಎನ್‌ಡಿಎ ಮೈತ್ರಿಕೂಟವು ಪ್ರಾದೇಶಿಕ ಆಕಾಂಕ್ಷೆಗಳನ್ನು ಪ್ರತಿನಿಧಿಸುವಂತಿದೆ ಎಂದು ಬಣ್ಣಿಸಿದರು. ಎನ್‌ಡಿಎಯನ್ನು ಅವರು, 'ನವ ಭಾರತ, ಅಭಿವೃದ್ಧಿ ಹೊಂದಿದ ರಾಷ್ಟ್ರ, ಜನರ ಆಕಾಂಕ್ಷೆ' ಎಂದು ಹೊಸದಾಗಿ ವ್ಯಾಖ್ಯಾನಿಸಿದರು. ಮೈತ್ರಿಕೂಟದ ಪಾಲಿಗೆ ರಾಷ್ಟ್ರ, ರಾಷ್ಟ್ರದ ಭದ್ರತೆ, ಪ್ರಗತಿ, ಜನರ ಬಲವರ್ಧನೆ ಮೊದಲು ಎಂದು ಹೇಳಿದರು. ಇವೆಲ್ಲ ಚುನಾವಣೆ ಸಂದರ್ಭದಲ್ಲಿ ರೂಪುಗೊಳ್ಳುವ ಮಾತುಗಳು. ಈ ಮಾತುಗಳು, ಘೋಷಣೆಗಳನ್ನು ಇಟ್ಟುಕೊಂಡೇ 2024ರ ಚುನಾವಣೆಯನ್ನು ಎನ್‌ಡಿಎ ಎದುರಿಸುವ ಸಾಧ್ಯತೆ ನಿಚ್ಚಳವಾಗಿದೆ.

ದಿನದ ಟ್ವೀಟ್

ಇದು ದಿಢೀರ್ ಬೆಳವಣಿಗೆಯೇ?

ಮಾನ್ಯ ಬಸವರಾಜ ಬೊಮ್ಮಾಯಿ ಅವರ 'ಬೆಂಗಳೂರು ಉಗ್ರರ ಸುರಕ್ಷಿತ ತಾಣವಾಗಿ ಬದಲಾಗುತ್ತಿದೆ' ಎಂಬ ಹೇಳಿಕೆ ಗಮನಿಸಿ ದಿಗ್ಭ್ರಮೆಯಾಗಿದೆ. ಅಲ್ಲ ಸ್ವಾಮಿ, ಕೇವಲ ಎರಡು ತಿಂಗಳಲ್ಲಿ ಈ ಬೆಳವಣಿಗೆ ಆಗಲು ಸಾಧ್ಯವೇ? ಇದಕ್ಕೆ ಮುನ್ನ ಇದ್ದ ಸರ್ಕಾರ ನಿಮ್ಮದೇ ಅಲ್ಲವೇ? ಏಕೆ ನಿಮ್ಮ ಗಮನಕ್ಕೆ ಬಂದಿರಲಿಲ್ಲ?

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಈ ಸ್ಥಿತಿಯು ನಮ್ಮ ದೇಶದಲ್ಲಿ ಎಲ್ಲಿಯೇ, ಯಾವ ವ್ಯಕ್ತಿಗೇ ಎದುರಾಗಲಿ, ನಾವೆಲ್ಲರೂ ಒಟ್ಟಾಗಿ ತಲೆತಗ್ಗಿಸಬೇಕಾದ ಪ್ರಕರಣ ಇದು! ಈ ಅಸಹ್ಯಕರ ವಿಡಿಯೊವನ್ನು ನಾನು ನೋಡಿದಾಗ, ಹೇವರಿಕೆ ಹುಟ್ಟಿಸುವ ಭಾರತೀಯ ಗಂಡಸರು, ಅಸಹಾಯಕರಾದ ಇಬ್ಬರು ಭಾರತೀಯ ಹೆಣ್ಣುಮಕ್ಕಳನ್ನು ನಗ್ನವಾಗಿ ಮೆರವಣಿಗೆ ಮಾಡುತ್ತಿರುವುದು, ಆಘಾತಕಾರಿ ಮಟ್ಟದಲ್ಲಿ ಲೈಂಗಿಕ ದೌರ್ಜನ್ಯ ಎಸಗುತ್ತಿರುವುದು ಹಾಗೂ ಅವರ ಶೋಚನೀಯ ಸ್ಥಿತಿಯನ್ನು ವಿಜಯೋತ್ಸವದ ರೀತಿಯಲ್ಲಿ ಸೆರೆ ಹಿಡಿಯುತ್ತಿರುವುದಷ್ಟೇ ಕಂಡವು. ದಯವಿಟ್ಟು ಈ ಎಡ, ಬಲ, ಮಧ್ಯ, ಭಾಷೆ, ಧರ್ಮ ಮತ್ತು ರಾಜ್ಯದಂತಹ ಸಂಕಥನಗಳನ್ನು ಮೀರಿ ನಡೆದುಕೊಳ್ಳಿ.

ರೇಣುಕಾ ಶಹಾನೆ, ಚಿತ್ರನಟಿ

25 ವರ್ಷಗಳ ಹಿಂದೆ

ಮಂಗಳವಾರ, 21-7-1998

- **ಕಾವೇರಿ ವಿವಾದ: ಸಂಸತ್ತಿನಲ್ಲಿ ರಾಜ್ಯ-ತಮಿಳುನಾಡು ಸಂಸದರ ಚಕಮಕಿ**

ನವದೆಹಲಿ, ಜುಲೈ 20– ಕಾವೇರಿ ವಿವಾದ ನಾಳೆ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬರುತ್ತಿರುವ ಹಿನ್ನೆಲೆಯಲ್ಲಿ, ಸಂಸತ್‌ನ ಉಭಯ ಸದನಗಳಲ್ಲೂ ಇಂದು ಕರ್ನಾಟಕ, ತಮಿಳುನಾಡು ಮತ್ತು ಕೇರಳ ಸದಸ್ಯರ ನಡುವೆ ತೀವ್ರ ಮಾತಿನ ಚಕಮಕಿ ನಡೆದು ಸದನ ಕೋಲಾಹಲದಲ್ಲಿ ಮುಳುಗಿತು.

ಕೇಂದ್ರದ 'ನಿಷ್ಕ್ರಿಯತೆ' ವಿರೋಧಿಸಿ, ರಾಜ್ಯಸಭೆಯಲ್ಲಿ ತಮಿಳುನಾಡು ಸದಸ್ಯರಿಗೆ ಮತ್ತೆ ಮಾತನಾಡಲು ಅವಕಾಶ ನೀಡಿದ್ದನ್ನು ಪ್ರತಿಭಟಿಸಿ ಕರ್ನಾಟಕದ ಎಸ್.ಎಂ. ಕೃಷ್ಣ ಅವರು ಸಭಾತ್ಯಾಗ ಮಾಡಿದ ಘಟನೆಯೂ ನಡೆಯಿತು. ಲೋಕಸಭೆಯ ಶೂನ್ಯವೇಳೆಯಲ್ಲಿ ಒಂದು ಗಂಟೆ ಕಾಲ ನಡೆದ ಗದ್ದಲಕ್ಕೆ ಉತ್ತರಿಸಿದ ಸಂಸದೀಯ ವ್ಯವಹಾರಗಳ ಸಚಿವ ಮದನ್‌ಲಾಲ್ ಖುರಾನ 'ಈ ವಿಷಯ ಈಗ ಸುಪ್ರೀಂ ಕೋರ್ಟ್ ಮುಂದೆ ಇದೆ. ಹಿಂದಿನ ಸಂಯುಕ್ತ ರಂಗವು ಮಾಡಿರುವ ಕರಡು ಯೋಜನೆ ಬಗೆಗೆ ಸಂಬಂಧಿಸಿದ ರಾಜ್ಯಗಳಲ್ಲಿ ಒಮ್ಮತ ಬಂದಿಲ್ಲ' ಎಂದರು.

- **'ನೌಕರರ ವರ್ಗಾವಣೆಯಲ್ಲಿ ವ್ಯಾಪಕ ಭ್ರಷ್ಟಾಚಾರ'**

ಬೀದರ್, ಜುಲೈ 20– ಪ್ರಸಕ್ತ ವರ್ಷ ನಡೆದಿರುವ ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಭಾರಿ ಪ್ರಮಾಣದ ಭ್ರಷ್ಟಾಚಾರ ನಡೆದಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿಪ್ಪೇಗೌಡ ಇಂದು ಇಲ್ಲಿ ನೇರವಾಗಿ ಆರೋಪಿಸಿದರು.

ಐದನೇ ವೇತನ ಆಯೋಗದ ಶಿಫಾರಸುಗಳ ಬಗ್ಗೆ ನೌಕರರಿಗೆ ತಿಳಿವಳಿಕೆ ಮೂಡಿಸುವ ರಾಜ್ಯ ಮಟ್ಟದ ಪ್ರವಾಸವನ್ನು ಬೀದರ್ ಜಿಲ್ಲೆಯಿಂದ ಆರಂಭಿಸಲು ಇಲ್ಲಿಗೆ ಆಗಮಿಸಿರುವ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

50 ವರ್ಷಗಳ ಹಿಂದೆ

ಶನಿವಾರ, 21-7-1973

- **ಯೋಜನಾ ಕಾರ್ಯಕ್ರಮ ರೂಪಿಸಲು ಕಾರ್ಮಿಕ ನಾಯಕರಿಗೆ ಧರ್ ಕರೆ**

ನವದೆಹಲಿ, ಜುಲೈ 20– 'ಸಂಘಟಿತ ಪಟ್ಟಭದ್ರ ಹಿತಗಳು' ಯೋಜನಾ ವ್ಯವಸ್ಥೆ ವಿರುದ್ಧ ದಾಳಿ ಮಾಡುತ್ತಿರುವಾಗ, ರಾಷ್ಟ್ರದಲ್ಲಿ ಕಾರ್ಮಿಕ ಚಳವಳಿ ನಾಯಕರು ಯೋಜನೆ ಬಗ್ಗೆ ಕಾರ್ಯವಿಧಾನವೊಂದನ್ನು ಒಪ್ಪಿಕೊಳ್ಳಬೇಕೆಂದು ಯೋಜನಾ ಸಚಿವ ಡಿ.ಪಿ. ಧರ್ ಅವರು ಇಂದು ಕರೆ ಕೊಟ್ಟರು.

ಐದನೇ ಯೋಜನೆಯ ಕರಡು ಕುರಿತು ಚರ್ಚಿಸಲು ಕಾರ್ಮಿಕ ಸಂಘಗಳ ನಾಯಕರು ಸೇರಿದ್ದ ಮೊದಲ ಸಭೆಯನ್ನುದ್ದೇಶಿಸಿ ಮಾತನಾಡಿದ ಧರ್ ಅವರು, ಯೋಜನೆಯ ತತ್ವ ಮತ್ತು ವ್ಯವಸ್ಥೆಗೆ ಸಂಘಟಿತ ಕಾರ್ಮಿಕ ವರ್ಗ ಬದ್ಧವಾಗಿದೆ ಎಂದರು.

- **ವಾಟರ್‌ಗೇಟ್ ಹಗರಣ: ಸೆನೆಟ್ ಸಮಿತಿಗೆ ಧ್ವನಿಮುದ್ರಿಕೆ ಒಪ್ಪಿಸಲು ನಿಕ್ಸನ್ ನಿರಾಕರಣೆ**

ವಾಷಿಂಗ್ಟನ್, ಜುಲೈ 20– ವಾಟರ್‌ಗೇಟ್ ಹಗರಣಕ್ಕೆ ಸಂಬಂಧಿಸಿದಂತೆ ತಮ್ಮ ಸಲಹೆಗಾರರ ಜೊತೆ ನಡೆಸಿದ ಸಮಾಲೋಚನೆಯ ಧ್ವನಿಮುದ್ರಿಕೆಗಳನ್ನು ಅಧ್ಯಕ್ಷ ನಿಕ್ಸನ್ ಅವರು ಸೆನೆಟ್ ಸಮಿತಿಗೆ ಒಪ್ಪಿಸುವುದಿಲ್ಲವೆಂದು 'ದಿ ನ್ಯೂಯಾರ್ಕ್ ಟೈಮ್ಸ್' ಮತ್ತು 'ದಿ ವಾಷಿಂಗ್ಟನ್ ಪೋಸ್ಟ್' ಇಂದು ವರದಿ ಮಾಡಿವೆ.

ಧ್ವನಿಮುದ್ರಿಕೆಗಳನ್ನು ನೀಡಲು ನಿರಾಕರಿಸಿ ಅಧ್ಯಕ್ಷ ನಿಕ್ಸನ್ ಅವರು ವಾರಾಂತ್ಯದಲ್ಲಿ ಸೆನೆಟ್ ಸಮಿತಿಗೆ ಪತ್ರ ಬರೆಯಬಹುದು.

ಹಳ್ಳಿಗಳಲ್ಲಿ ಮಂಗನಕಾಟ, ನಗರಗಳಲ್ಲಿ ನಾಯಿಯ ಭೀತಿ ಎರಡರ ಮೂಲವೂ ಒಂದೇ

ಮಂಗನಾಟ ಹಾಗೂ ನಾಯಿಬಾಲ!

ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಕಾಡು, ನದಿ, ಜಲಪಾತ, ವನ್ಯಪ್ರಾಣಿಗಳ ದರ್ಶನಕ್ಕೆಂದೇ ಕೆಲವರು ಮಲೆನಾಡಿನ ತಪ್ಪಲಿನ ಉತ್ತರ ಕನ್ನಡಕ್ಕೆ ಪ್ರವಾಸ ಬರುವುದಿದೆ. ಈಗೊಮ್ಮೆ ಅಲ್ಲಿ ತಿರುಗಾಡಿದರೆ ತೀರಾ ಭಿನ್ನ ಅನುಭವವನ್ನೇ ಪಡೆಯಬಹುದು. ಒಂದೇ ದಿನದ ಮಳೆಗೆ ನೆರೆ ಬಂದು ಬಿರುಕುಬಿಟ್ಟ ಕರಾವಳಿಯ ಮನೆ-ರಸ್ತೆಗಳು, ಅಲ್ಲಿಂದ ಬರೀ ಮೂವತ್ತು- ನಲವತ್ತು ಕಿ.ಮೀ. ದೂರದ ಸಹ್ಯಾದ್ರಿಯ ಘಟ್ಟಗಳಲ್ಲಿ ಮಳೆ ಕೊರತೆಯಿಂದ ಬಳಲಿರುವ ತೋಟಗಳು, ಅದಕ್ಕೂ ಮುಂದಿನ ಪೂರ್ವದ ಬಯಲುನಾಡಿನಲ್ಲಿ ಮಳೆ ಸಾಲದೆ ಇನ್ನೂ ಬಿತ್ತನೆಯಾಗದಿರುವ ಗದ್ದೆಗಳು. ಅರ್ಧ ದಿನದ ಪಯಣದಲ್ಲಿ ಒಂದೇ ಜಿಲ್ಲೆಯಲ್ಲಿ ಈ ಎಲ್ಲ ವೈಪರೀತ್ಯಗಳನ್ನೂ ನೋಡಬಹುದು!

ನೆಲ, ನೀರು, ಜೀವವೈವಿಧ್ಯದಂಥ ನೈಸರ್ಗಿಕ ಸಂಪನ್ಮೂಲಗಳ ಸಮರ್ಥ ನಿರ್ವಹಣೆಯಾಗದೆ, ಸುಸ್ಥಿರ ಆರ್ಥಿಕ ಪ್ರಗತಿ ಸಾಧ್ಯವಿಲ್ಲ ಎಂಬುದು ಈಗ ಎಲ್ಲರೂ ಒಪ್ಪಿರುವ ಮಾತು. ವಾರ್ಷಿಕ ಬಜೆಟ್‌ಗೆ ಮುನ್ನ ಕೇಂದ್ರ ಸರ್ಕಾರದ ಹಣಕಾಸು ಇಲಾಖೆಯು ಪ್ರತಿವರ್ಷ ಮಂಡಿಸುವ 'ಆರ್ಥಿಕ ಸಮೀಕ್ಷೆ ವರದಿ'ಗಳಂತೂ ಇದನ್ನು ಸರ್ಕಾರದ ನೆಲೆಯಲ್ಲೇ ಗಟ್ಟಿಧ್ವನಿಯಲ್ಲಿ ಸಾರುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ನಾವು ಸಾಧಿಸಿದ್ದೇವೆ ಎನ್ನಲಾಗುವ ಆರ್ಥಿಕ ಪ್ರಗತಿಯ ಬಹುಪಾಲು ಫಲಗಳು, ಬರಡಾಗುತ್ತಿರುವ ಕೃಷಿ, ಬರಿದಾಗುತ್ತಿರುವ ನೆಲ-ಜಲ, ಸೋಲುತ್ತಿರುವ ಸಾರ್ವಜನಿಕ ಆರೋಗ್ಯ, ಕುಸಿಯುತ್ತಿರುವ ಮೂಲ ಸೌಕರ್ಯದಂತಹವುಗಳಲ್ಲಿ ಕರಗಿಹೋಗುತ್ತಿರುವುದು ಸುಳ್ಳಲ್ಲ ತಾನೇ? ಮಲೆನಾಡಿನ ಪಯಣ ಇದರ ಪ್ರತ್ಯಕ್ಷ ದರ್ಶನ ಮಾಡಿಸಬಲ್ಲದು.

ನೈಸರ್ಗಿಕ ಸುರಕ್ಷತೆಯೆಂಬ ಬದುಕಿನ ಅಡಿಪಾಯ ಕುಸಿಯುತ್ತಿರುವುದು ನಾಡಿನಾದ್ಯಂತ ಢಾಳಾಗಿಯೇ ತೋರುತ್ತಿದೆ. ಕಣ್ಣಿಗೆ ರಾಚುವ ಎರಡು ದೈನಂದಿನ ಗಂಭೀರ ಸಮಸ್ಯೆಗಳ ಮೂಲಕ ಇದನ್ನು ಅರ್ಥೈಸಿಕೊಳ್ಳಬಹುದು. ಮೊದಲಿನದು, ಹಳ್ಳಿಗರ ಕೃಷಿಯನ್ನು ಕಾಡುತ್ತಿರುವ ಮಂಗ, ಹಂದಿಯಂಥ ಕಾಡುಪ್ರಾಣಿಗಳ ಕಾಟ. ಇತ್ತೀಚಿನ ಅಧ್ಯಯನಗಳ ಪ್ರಕಾರ, ಬರೀ ಮಂಗನಹಾವಳಿ ಒಂದರಿಂದಲೇ ರೈತರು ತಮ್ಮ ಬೆಳೆಯ ಶೇ 20ಕ್ಕೂ ಮೀರಿ ನಷ್ಟ ಅನುಭವಿಸಿದ್ದಿದೆ. ಬಾಳೆ, ಕಾಫಿ, ಅಡಿಕೆ, ತೆಂಗು, ಹಣ್ಣು, ತರಕಾರಿ- ಎಲ್ಲ ರೈತರದ್ದೂ ಇದೇ ಗೋಳು. ಸುಮಾರು ಎರಡು ದಶಕಗಳಿಂದ ಒಂದೇ ಸಮನೆ ಈ ಬಗೆಯ ಮನುಷ್ಯ-ಪ್ರಾಣಿ ಸಂಘರ್ಷ ಹೆಚ್ಚುತ್ತಲೇ ಇದೆ.

ವೈಜ್ಞಾನಿಕ ಸ್ಥಳಾಧ್ಯಯನಗಳು ಇದರ ಹಿಂದಿರುವ ಕಾರಣಗಳ ಬಲೆಯನ್ನು ಬಿಚ್ಚಿಡಬಲ್ಲವು. ಮಲೆನಾಡಿನ ಅರಣ್ಯ ಪರಿಸ್ಥಿತಿಯನ್ನೇ ಗಮನಿಸಿ. ಅವಿರತ ಮರಕಡಿತ, ಕಾಡಿನ ಅತಿಕ್ರಮಣ, ಗಣಿಗಾರಿಕೆ, ನೆಡುತೋಪು ನಿರ್ಮಾಣ, ಹೊಸ ಹೆದ್ದಾರಿ ನಿರ್ಮಾಣ- ಎಲ್ಲವೂ ಕಾಡನ್ನು ಛಿದ್ರಗೊಳಿಸುವಂಥವೇ. ಹಸಿರು ಮಾಯವಾಗಿ, ಮೇಲ್ಮಣ್ಣು ಸವೆದು, ಗುಡ್ಡ ಕುಸಿದು, ಮಳೆನೀರು ನೆಲದೊಡಲು ಸೇರದೆ ಕೆರೆ, ತೊರೆಗಳು ಒಣಗುತ್ತಿವೆ. ಇತ್ತ, ಊರಿನ ಭತ್ತ, ಜೋಳ, ರಾಗಿ ಗದ್ದೆಗಳೆಲ್ಲ ಅಡಿಕೆ, ಕಬ್ಬು, ಕಾಫಿ, ಶುಂಠಿಯಂಥ ವಾಣಿಜ್ಯ ಬೆಳೆಗಳಿಗೆ ಬಲಿಯಾಗುತ್ತಿವೆ.

ಕಾಡಿನಲ್ಲಿ ಆಹಾರ, ನೀರು ದೊರಕದೆ ಅನಿವಾರ್ಯವಾಗಿ ಊರು ಸೇರಿದ್ದ ಮಂಗಗಳಿಗೆ, ಇಲ್ಲಿ ನೋಡಿದರೆ ಪ್ರೋಟೀನ್‌ಯುಕ್ತ ಮೃಷ್ಟಾನ್ನ ಭೋಜನ! ಆಕ್ರಮಣ ಮಾಡಬಲ್ಲ ಹುಲಿ, ಚಿರತೆ, ಗರುಡಗಳ ಕಾಟವೂ ಇಲ್ಲ. ಇಂಥ ಸುರಕ್ಷಿತ ಪರಿಸರ ದೊರಕಿದಾಗ, ಸಹಜವಾಗಿಯೇ ಅವು ವಂಶಾಭಿವೃದ್ಧಿಯಲ್ಲಿ ಗರಿಷ್ಠ ಕ್ಷಮತೆ ಪಡೆಯುತ್ತವೆ. ಹೀಗಾಗಿ, ಕೃಷಿಭೂಮಿಯಲ್ಲಿ ಮಂಗಗಳ ಸಂಖ್ಯೆ ಏರುತ್ತಲೇ ಇದೆ. ಮಂಗನ ಹಾವಳಿ ಎಂದರೆ, ಗ್ರಾಮೀಣ ಪ್ರದೇಶದಲ್ಲಿನ ಪರಿಸರದ ಸಮತೋಲನವು ಕುಸಿಯುತ್ತಿರುವುದರ ಪ್ರತಿಫಲನವೇ ಸರಿ.

ಇನ್ನೊಂದು ಉದಾಹರಣೆಯನ್ನು ವ್ಯಾಪಕವಾಗುತ್ತಿರುವ ನಗರೀಕರಣದ ಸಂದರ್ಭದಲ್ಲಿ ಗಮನಿಸಬಹುದು. ಯಾವ ಪಟ್ಟಣಕ್ಕೆ ತೆರಳಿದರೂ ಅಲ್ಲಿ ಬೀದಿನಾಯಿಗಳ ಸಂಖ್ಯೆ ಮೀತಿಮೀರುತ್ತಿದೆ ತಾನೇ? ಮಕ್ಕಳು, ವೃದ್ಧರಂಥವರು ಹಗಲಿನಲ್ಲೂ ರಸ್ತೆಯಲ್ಲಿ ಓಡಾಡಲು ಹೆದರುವ ಪರಿಸ್ಥಿತಿ. ನಾಯಿ ಓಡಿಸಿಕೊಂಡು ಬರುವ, ಕಚ್ಚುವ, ಚುಚ್ಚುಮದ್ದಿಗಾಗಿ ಜನರು ಆಸ್ಪತ್ರೆಗಳಿಗೆ ಧಾವಿಸುವ ಸಂಗತಿಗಳು ಒಂದು ಸಾಮಾನ್ಯ ಸಾಮಾಜಿಕ ಚಿತ್ರಣವಾಗುವಷ್ಟು ಸಮಸ್ಯೆ ಬಿಗಡಾಯಿಸುತ್ತಿದೆ!

ಹಾಗಾದರೆ, ನಾಯಿಗಳ ಸಂಖ್ಯೆ ಈ ಪರಿಯಲ್ಲಿ ಏಕೆ ಹೆಚ್ಚುತ್ತಿದೆ? ನಮ್ಮ ಇತ್ತೀಚಿನ ಅಧ್ಯಯನವೊಂದರಲ್ಲಿ, ಮಲೆನಾಡಿನ ತಾಲ್ಲೂಕು ಕೇಂದ್ರಗಳಲ್ಲಿ ಚದರ ಕಿ.ಮೀ. ಒಂದಕ್ಕೆ ಐವತ್ತಕ್ಕೂ ಮೀರಿ ನಾಯಿಗಳಿದ್ದವು! ಅನಾಥ ನಾಯಿಗಳಿಗೆ ಬೀದಿಯೇ ಆರೈಕೆ ಕೇಂದ್ರ. ಜನರು ಎಗ್ಗಿಲ್ಲದೆ ಬಿಸಾಡುವ ಪಿಷ್ಟ-ಪ್ರೋಟೀನ್‌ಭರಿತ ಆಹಾರವೇ ಆಧಾರ. ಬಹಳಷ್ಟು ಆಹಾರ ಹಾಗೂ ವೈರಿಗಳಿಂದ ರಕ್ಷಣೆ ಇವೆರಡೂ ದೊರಕಿದ್ದಾದರೆ, ವಂಶಾಭಿವೃದ್ಧಿಯು ನಾಲ್ಕರಿಂದ ಆರುಪಟ್ಟು ಏರುವ ಸಸ್ತನಿಗಳ ಗುಣಲಕ್ಷಣಗಳೇ ಪಟ್ಟಣಗಳ ರಸ್ತೆಯಲ್ಲೆಲ್ಲ ಈಗ ಕಾಣಸಿಗುತ್ತಿರುವುದು.

ನಾಯಿಯೊಂದು ವರ್ಷಕ್ಕೆ ಎರಡು ಅಥವಾ ಮೂರು ಸಲ, ತಲಾ ಮೂರು-ನಾಲ್ಕು ಮರಿಗಳನ್ನಿಡುವ ಸಾಮರ್ಥ್ಯ ಪಡೆಯುತ್ತಿದೆ. ಹೀಗಾದಾಗ ಬೀದಿನಾಯಿಗಳ ಸಂಖ್ಯೆ ಕ್ಷಿಪ್ರವಾಗಿ ಏರದೆ ಇನ್ನೇನಾದೀತು? ಸಣ್ಣಮಳೆಗೂ ಪ್ರವಾಹ, ವಿಲೇವಾರಿಯಾಗದ ಕಸದಂತೆ ಬೀದಿನಾಯಿ ಸಮಸ್ಯೆಯೂ ವರ್ತಮಾನದ ನಗರಗಳ ಪರಿಸ್ಥಿತಿಯ ಗಂಭೀರತೆಯನ್ನು ಸಾರುವ ಒಂದು ಪ್ರಮುಖ ಚಿಹ್ನೆಯಾಗಿ ಹೊರಹೊಮ್ಮಿದೆ.

ಹಳ್ಳಿಗಳಲ್ಲಿ ಮಂಗನಕಾಟ ಅಥವಾ ನಗರಗಳಲ್ಲಿ ನಾಯಿಯ ಭೀತಿ- ಇವೆರಡರ ಮೂಲವೂ ಒಂದೇ. ತೀವ್ರವಾಗಿ ಏರುತ್ತಿರುವ ಜನಸಂಖ್ಯೆ ಹಾಗೂ ಮುಕ್ತ ಮಾರುಕಟ್ಟೆ ತೆರೆದಿಟ್ಟಿರುವ ಸೌಕರ್ಯಗಳನ್ನು ಒದಗಿಸಿಕೊಳ್ಳಲು ಹಾತೊರೆಯುವ ಜನರ ಭರಾಟೆ. ಇದರಿಂದಾಗಿ ಉದ್ಭವವಾಗುತ್ತಿರುವ ಬೇಡಿಕೆಗಳನ್ನು ಈಡೇರಿಸಲು ಆರ್ಥಿಕ ಪ್ರಗತಿಯ ವೇಗವನ್ನು ಹೆಚ್ಚಿಸಲೇಬೇಕಾದ ಅನಿವಾರ್ಯಕ್ಕೆ ಸರ್ಕಾರಗಳು ಸಿಲುಕಿವೆ. ಆದರೆ, ಆರ್ಥಿಕತೆ ವೃದ್ಧಿಯ ಪ್ರಮಾಣವು ನೈಸರ್ಗಿಕ ಸುರಕ್ಷತಾ ಪರಿಧಿಯನ್ನು ಮೀರಿ ಹಿಗ್ಗಲಾರದೆಂದು ಅಧ್ಯಯನಗಳು ಸಾಬೀತುಪಡಿಸುತ್ತಲೇ ಇವೆ. ಹಾಗೆಂದೇ, ಕೇಂದ್ರ ಸರ್ಕಾರದ ಈ ವರ್ಷದ ಬಜೆಟ್‌ಗೆ ಮುನ್ನ ಹಣಕಾಸು ಸಚಿವಾಲಯವು ಸಂಸತ್ತಿನಲ್ಲಿ ಮಂಡಿಸಿರುವ 'ಆರ್ಥಿಕ ಸಮೀಕ್ಷೆ- 2023' ಸಹ ಈ ಕುರಿತು ಸ್ಪಷ್ಟವಾದ ಎಚ್ಚರಿಕೆಯನ್ನೇ ನೀಡಿದೆ.

ಸ್ಥಳೀಯ ಕಾರಣಗಳಿಂದ ಜರುಗುತ್ತಿರುವ ನಿಸರ್ಗ ನಾಶ ಹಾಗೂ ಜಾಗತಿಕ ಕಾರಣಗಳಿಂದಾಗಿ ಸಂಕೀರ್ಣವಾಗುತ್ತಲೇ ಇರುವ 'ಹವಾಮಾನ ಬದಲಾವಣೆ' ಇವೆರಡರ ಒಟ್ಟೂ ಪರಿಣಾಮಗಳನ್ನು ಎದುರಿಸಲು ಅಳವಡಿಸಿಕೊಳ್ಳಲೇಬೇಕಾದ ತಕ್ಷಣದ ಹಾಗೂ ದೀರ್ಘಕಾಲೀನ ಸೂತ್ರಗಳನ್ನು ಅದು ಗುರುತಿಸಿದೆ. ಕಾಡಿನ ವಿಸ್ತಾರ ಹಾಗೂ ಗುಣಮಟ್ಟ ಹೆಚ್ಚಿಸುವುದು, ಜಲಮೂಲ ಸಂರಕ್ಷಣೆ, ನೀರಿನ ಸದ್ಬಳಕೆ, ಹಸಿರು ಇಂಧನ ಬಳಕೆ, ತ್ಯಾಜ್ಯ ವಿಲೇವಾರಿ, ಮಾಲಿನ್ಯ ನಿವಾರಣೆ ಇವೆಲ್ಲವೂ ಹಿಂದೆಂದಿಗಿಂತಲೂ ಅನಿವಾರ್ಯ ಆಗುತ್ತಿರುವುದನ್ನು ಅದು ಒತ್ತಿ ಹೇಳಿದೆ. ನೈಸರ್ಗಿಕ ಸಂಪನ್ಮೂಲಗಳನ್ನು ಕ್ಷಮತೆಯಿಂದ ಬಳಸುವ 'ಚಕ್ರೀಯ ಆರ್ಥಿಕತೆ' ತತ್ವ ಅಳವಡಿಸಿಕೊಂಡು ಸುಸ್ಥಿರ ಅಭಿವೃದ್ಧಿ ಸಾಧಿಸಬೇಕೆಂದರೆ, ನಾವು ಈ ವಿವೇಕದ ಹಾದಿಯನ್ನು ತುಳಿಯಲೇಬೇಕಿದೆ.

ಈ ಬಗೆಯಲ್ಲಿ ಅಭಿವೃದ್ಧಿ ವಿಧಾನಗಳನ್ನು ಮರುರೂಪಿಸಲೇಬೇಕಾದ ಅಗತ್ಯವನ್ನು, ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ದಿನದ ಪ್ರವಾಸ ಮಾಡಿದರೂ ಮನಗಾಣಬಹುದು. ಮೀನು ಸಿಗದೆ ಕಂಗಾಲಾಗಿರುವ ಕರಾವಳಿಯ ಮೀನುಗಾರರು, ನೆಲ-ಜಲಮೂಲ ನಾಶವಾಗಿ ನೆಲೆ ಕಳೆದುಕೊಳ್ಳುತ್ತಿರುವ ಮಲೆನಾಡಿನ ಕೃಷಿಕರು ಹಾಗೂ ವನವಾಸಿಗಳು ಮತ್ತು ಭೂಸಾರ ಕುಸಿದು ಬೆಳೆ ನಾಶವಾಗಿ ತಲೆಗೆ ಕೈಕೊಟ್ಟ ಬಯಲುನಾಡಿನ ಬೇಸಾಯಗಾರರು ಎಲ್ಲರೂ ಅಲ್ಲಿ ಕಾಣಸಿಗಬಲ್ಲರು. ಇಷ್ಟಕ್ಕೂ ನಾಡಿನ ಯಾವ ಭಾಗಕ್ಕೆ ತೆರಳಿದರೂ ಇದೇ ತೆರನ ಅನುಭವವೇ ದೊರಕೀತು. ಪ್ರಕೃತಿನಾಶದ ಹೊಳೆಯಲ್ಲಿ ಅಭಿವೃದ್ಧಿಯ ಹುಣಸೆಹಣ್ಣು ತೊಳೆದು ಹೋಗುತ್ತಿದೆ!

ಅಭಿವೃದ್ಧಿ ಕಾಮಗಾರಿಗಳೆಂಬ ದಿಕ್ಕುದೆಸೆಯಿರದ ಮಂಗನಾಟವು ಬದುಕಿಗೆ ಅತ್ಯಗತ್ಯವಾದ ಪರಿಸರ ಸಂರಚನೆಯ ಅಡಿಗಟ್ಟನ್ನೇ ಧ್ವಂಸಗೊಳಿಸುತ್ತಿದೆ. ಇಷ್ಟಾದರೂ ಎಚ್ಚೆತ್ತುಕೊಳ್ಳದೆ ಅಧಿಕಾರ ರಾಜಕಾರಣದಲ್ಲೇ ಮೈಮರೆಯುತ್ತಿದೆ ಆಡಳಿತ ವ್ಯವಸ್ಥೆಯೆಂಬ ನಾಯಿಬಾಲ! ಎಲ್ಲೆಡೆಯೂ ಈ ಅವಸ್ಥೆ ಈಗ ರಾರಾಜಿಸುತ್ತಿದೆ.

ಚುರುಮುರಿ



ಫಟಾಫಟ್ ಬಿಸಿನೆಸ್ಸು!

• ಬಿ.ಎನ್.ಮಲ್ಲೇಶ್

ಮಂಜಮ್ಮನ ಚಾದಂಗಡಿ ಮುಂದೆ ಕಾರೊಂದು ಬಂದು ನಿಂತುಕೊಂಡಿತು. ಬಾಗಿಲು ತೆರೆಯುತ್ತಿದ್ದಂತೆ ಕಪ್ಪು ಕೋಟು, ಕಪ್ಪು ಕನ್ನಡಕ ಧರಿಸಿದ್ದ, ನಾಯಿ ಕಟ್ಟೋ ಚೈನ್ ತರದ್ದು ದಪ್ಪನೆಯ ಚಿನ್ನದ ಸರ ಹಾಕಿದ್ದ ವ್ಯಕ್ತಿಯೊಬ್ಬ ಕೆಳಕ್ಕಿಳಿದ. ಹರಟೆಕಟ್ಟೆ ಸದಸ್ಯರಿಗೆ ಆಶ್ಚರ್ಯ... ನೋಡಿದರೆ ಗುಡ್ಡೆ!

'ಅರೆ ಗುಡ್ಡೆ! ಯೇ ಕ್ಯಾ ಗುಡ್ಡೆ ಭಾಯ್, ದುನಿಯಾ ಪೂರಾ ಬದ್ಲಾಗೇತಲ್ಲ?' ಗೌಸ್‌ಗೂ ನಂಬೋಕಾಗ್ಲಿಲ್ಲ.

'ಏನೋ ಗುಡ್ಡೆ ಇದು ಹೊಸಾ ವೇಷ? ಯಾರ ತಲೆ ಬೋಳಿಸಿದಿ, ಏನ್ಕತೆ?' ದುಬ್ಬೀರ ಕೇಳಿದ.

'ಎಲೆಕ್ಷನ್ ಎಲ್ಲ ಮುಗಿದ್ವು, ಈಗ ಇಟಾಕಂದು ಕಮಾಯಿ ಹೆಂಗೆ? ಯಾವದಾರ ದೊಡ್ಡ ಗಿರಾಕಿ ಸಿಕ್ಕಿರಬೇಕು, ಟ್ರಾನ್ಸ್‌ಫರ್ ಮಾಡ್ಸಿಕೊಟ್ಟಿರ್ತಾನೆ' ತೆಪರೇಸಿ ನಕ್ಕ.

'ಸರ ನಿಜವಾಗ್ಲು ಚಿನ್ನದ್ದೇನೋ ಗುಡ್ಡೆ? ಕೊಡಿಲ್ಲಿ ನೋಡಾಣ...' ಮಂಜಮ್ಮ ಕೇಳಿದಳು.

ಯಾರ ಮಾತಿಗೂ ಉತ್ತರಿಸದ ಗುಡ್ಡೆ, 'ಮಂಜಮ್ಮ, ನಂದೀಗ ಫಟಾಫಟ್ ಬಿಸಿನೆಸ್ಸು. ಹದಿನೈದು ದಿನಕ್ಕೆ ಆರು ಲಕ್ಷ ಲಾಭ. ನಿಂದು ಬಾಕಿ ಎಷ್ಟೈತೆ ಹೇಳು ಈಗ್ಲೇ ಬಿಸಾಕ್ತೀನಿ' ಎಂದ.

ಮಂಜಮ್ಮಗೆ ಸಿಟ್ಟು ಬಂತು. 'ಅಯ್ಯಾ ನಿನ್ ಮಕ ನಾಯಿ ನೆಕ್ಕ... ಈಗ ದುಡ್ಡು ಬಂತು ಅಂತ ಡೌಲ್ ತೋರಿಸ್ಬೇಡ. ಚಿತ್ರಾನ್ನದ ಗಿರಾಕಿ ನೀನು, ನಂಗೊತ್ತಿಲ್ವಾ?' ಎಂದು ರಾಂಗಾದಳು.

'ಅಲ್ಲಲೆ, ಹದಿನೈದು ದಿನಕ್ಕೆ ಆರು ಲಕ್ಷ ಲಾಭ ಬರೋ ಅಂತ ಬಿಸಿನೆಸ್ ಯಾವುದೈತಲೆ?' ದುಬ್ಬೀರ ಕೇಳಿದ.

'ಟೊಮೆಟೊ ಬಿಸಿನೆಸ್...!'

'ಅಂದ್ರೆ ಟೊಮೆಟೊ ಕದ್ದು ಮಾರಿದ್ಯಾ?'

'ಥೂ ನಿಮ್ಮ, ಟೊಮೆಟೊ ಹೊಲ ಗುತ್ತಿಗೆಗೆ ತಗಂಡೆ, ಹಣ್ಣು ಮಾರಿದೆ, ರೊಕ್ಕ ಎಣಿಸ್ಕಂಡೆ... ಫಟಾಫಟ್!'

'ವ್ಹಾ... ಕ್ಯಾ ಬಾತ್ ಹೈ ಗುಡ್ಡೆ!' ಗೌಸ್‌ಗೆ ಖುಷಿ.

'ಯೇ ಟೊಮೆಟೊ ಬಾತ್ ಹೈ ಗೌಸು...' ಗುಡ್ಡೆ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಚರ್ಚೆ

ಶಿಕ್ಷಕ ವೃತ್ತಿ: ಬೇಡ ದೈವತ್ವ

ಎಲ್ಲ ವೃತ್ತಿಗಳ ಹಾಗೆ ಶಿಕ್ಷಕ ವೃತ್ತಿಯೂ ವೇತನಸಹಿತವಾದುದರಿಂದ ಈ ವೃತ್ತಿಗೆ ನಮ್ಮ ಪರಂಪರೆಯಲ್ಲಿ ಆರೋಪಿತವಾಗಿರುವ ದೈವತ್ವವನ್ನು ಈಗ ನಾವು ತಿರಸ್ಕರಿಸಬೇಕಾಗಿದೆ

• ಪು.ಸೂ.ಲಕ್ಷ್ಮೀನಾರಾಯಣ ರಾವ್

'ಗುರುವಿನ ಮೇಲೆ ಗುರ್ರ್ ಎನ್ನುವ ಮುನ್ನ...' ಎಂಬ ಲೇಖನದಲ್ಲಿ (ಸಂಗತ, ಜುಲೈ 19), ಒಳ್ಳೆಯ ಶಿಕ್ಷಕರನ್ನು ರೂಪಿಸುವುದು ನಮ್ಮ ಕೈಯಲ್ಲೇ ಇದೆ ಎಂದು ಸದಾಶಿವ್ ಸೊರಟೂರು ಹೇಳಿದ್ದಾರೆ. ಶಿಕ್ಷಕ ವೃತ್ತಿಯ ಬಗ್ಗೆ ಸಮಾಜದ ದೃಷ್ಟಿ- ಧೋರಣೆಗಳ ಕುರಿತು ಲೇಖನದಲ್ಲಿ ವಿವೇಚಿಸಿರುವುದು ಸೂಕ್ತವಾಗಿದೆ.

ಶಿಕ್ಷಕ ಇಂದ್ರಜಾಲಿಗನಲ್ಲ. ಮೋಡಿ ಮಾಡುವ ಮಾಟಗಾರನಲ್ಲ. ಇತ್ತೀಚೆಗಂತೂ ಎಲ್ಲಿಯೂ ಸಲ್ಲದವರು ಶಿಕ್ಷಕ ವೃತ್ತಿಯನ್ನು ಕೈಗೊಳ್ಳುವುದೇ ಹೆಚ್ಚಾಗಿದೆ. ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಚೆನ್ನಾಗಿ ಅಧ್ಯಯನ ಮಾಡಿದವರು ವೈದ್ಯಕೀಯ, ತಂತ್ರಜ್ಞಾನ ಕ್ಷೇತ್ರಗಳತ್ತ ಮುಖಮಾಡುತ್ತಾರೆ. ಈ ಎರಡೂ ಕ್ಷೇತ್ರಗಳಲ್ಲಿ ಅವಕಾಶ ಲಭ್ಯವಾಗದವರು ವಾಣಿಜ್ಯ ವಿಷಯಗಳ ಅಧ್ಯಯನದಲ್ಲಿ ಆಸಕ್ತಿ ಬೆಳೆಸಿಕೊಂಡು ಆಡಳಿತಾತ್ಮಕ ಸೇವೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ವ್ಯಾಸಂಗದಲ್ಲಿ ಹಿಂದುಳಿದು ವೈಯಕ್ತಿಕವಾಗಿ ಉತ್ಸಾಹಿಗಳೂ ಕ್ರಿಯಾಶೀಲರೂ ಆದ ವ್ಯಕ್ತಿಗಳು ವ್ಯಾಪಾರೋದ್ಯಮಗಳಿಗೆ ಕೈ ಹಾಕಿ ದುಡ್ಡು ಮಾಡಿಕೊಂಡು ಬದುಕು ಸಾಗಿಸುತ್ತಾರೆ. ಬಹುಪಾಲು ಮಂದಿ ಇಲ್ಲೆಲ್ಲೂ ದಾರಿಕಾಣದೆ ಶಿಕ್ಷಕ ತರಬೇತಿಯನ್ನು ಪಡೆದುಕೊಂಡು ಶಿಕ್ಷಣ ಕ್ಷೇತ್ರಕ್ಕೆ ಪದಾರ್ಪಣೆ ಮಾಡುತ್ತಾರೆ.

ಶಿಕ್ಷಕರ ನೇಮಕಾತಿಯ ಲಿಖಿತ ಪರೀಕ್ಷೆಗಳಲ್ಲಿ (ಟಿಇಟಿ) ಅರ್ಹತೆ ಪಡೆಯುವವರ ಪ್ರಮಾಣ ಬಹಳ ಕಡಿಮೆ ಎಂಬ ವರದಿಗಳಿವೆ. ಪ್ರಾಥಮಿಕ ಶಾಲಾ ಶಿಕ್ಷಕ ಪರೀಕ್ಷೆಗಳಲ್ಲಿ ಸರಿಸುಮಾರು ಶೇ 20ರಷ್ಟು ಮಂದಿ ಅರ್ಹತೆ ಪಡೆದರೆ, ಪ್ರೌಢಶಾಲಾ ಶಿಕ್ಷಕ ಪರೀಕ್ಷೆಗಳಲ್ಲಿ ಶೇ 30ರಿಂದ 40ರಷ್ಟು ಮಂದಿ ಮಾತ್ರ ಅರ್ಹ ಶಿಕ್ಷಕರಾಗಿ ತೇರ್ಗಡೆಯಾಗುತ್ತಾರೆ. ಬೋಧನಾ ಕೌಶಲಗಳ ಪರೀಕ್ಷೆಯಂತೂ ನಡೆಯುವುದೇ ಇಲ್ಲ. ವಿಷಯಜ್ಞಾನ ಸಂಪನ್ನರು ಈ ಕ್ಷೇತ್ರಕ್ಕೆ ಬರಬೇಕಾದರೆ ಶಿಕ್ಷಕರ ವೇತನವನ್ನು ಆಕರ್ಷಕಗೊಳಿಸಬೇಕಾಗುತ್ತದೆ. ಆಗ ಪ್ರತಿಭಾವಂತರು (ಕನಿಷ್ಠಪಕ್ಷ ವಿಷಯಜ್ಞಾನಕ್ಕೆ ಸಂಬಂಧಿಸಿದಂತೆ) ಈ ಕ್ಷೇತ್ರದತ್ತ ಹರಿದು ಬರುತ್ತಾರೆ. ಈ ಮೂಲಭೂತ ವಿಚಾರದ ಬಗ್ಗೆ ಯಾರೂ ಗಮನ ಹರಿಸುತ್ತಲೇ ಇಲ್ಲ. ಕೆಲವು ವಿದೇಶಗಳಲ್ಲಿ ಶಿಕ್ಷಕರ ವೇತನ ಬೇರೆ ಎಲ್ಲರಿಗಿಂತ ಹೆಚ್ಚು ಎಂದು ಕೇಳಿದ್ದೇನೆ.

ಸತ್ಪ್ರಜೆಗಳ ನಿರ್ಮಾಣವೇ ಶಿಕ್ಷಣದ ಗುರಿ ಎಂಬುದು ಆದರ್ಶವಾದರೆ, ಗರಿಷ್ಠ ಅಂಕ ಗಳಿಕೆಯೇ ಶಿಕ್ಷಣದ ಗುರಿ ಎಂಬುದು ಪೋಷಕರ ನಿರೀಕ್ಷೆ. ಈ ಎರಡರ ಸೋಗಿನಲ್ಲಿ ದುಡ್ಡು ಮಾಡುವುದೇ ಹೆಚ್ಚಿನ ಶಿಕ್ಷಣ ಸಂಸ್ಥೆಗಳ ಮಾಲೀಕರ ಪರಮೋಚ್ಚ ಗುರಿ. ಒಂದು ಕಾಲದಲ್ಲಿ ಶಿಕ್ಷಣವು ಮೇಲ್ವರ್ಗಗಳಿಗೆ ಮೀಸಲಾಗಿತ್ತು. ಇಂದು, ಉತ್ತಮ ಹಾಗೂ ಉನ್ನತ ಶಿಕ್ಷಣವು ಉಳ್ಳವರಿಗೆ ಮಾತ್ರ ಲಭ್ಯವಾಗುವ ಹಾಗೆ ಆಗುತ್ತಿದೆ. ಶಿಕ್ಷಕರೂ ಈ ವ್ಯವಸ್ಥೆಯ ಸೂತ್ರದ ಬೊಂಬೆಗಳು ಅಷ್ಟೆ.

ಈ ವಸ್ತುಸ್ಥಿತಿಯನ್ನು ಅರಿತುಕೊಂಡು, ಕೊನೆಯಪಕ್ಷ ಶಿಕ್ಷಕರಾದವರಾದರೂ 'ಗುರುಬ್ರಹ್ಮ...' ಎಂಬ ಭ್ರಮಾತ್ಮಕ ಪರಿಕಲ್ಪನೆಯಿಂದ ಹೊರಬರಬೇಕಾಗಿದೆ. ಎಲ್ಲ ವೃತ್ತಿಗಳ ಹಾಗೆ ಶಿಕ್ಷಕ ವೃತ್ತಿಯೂ ವೇತನಸಹಿತವಾದುದರಿಂದ ಗೌರವ ಹಾಗೂ ಪಾವಿತ್ರ್ಯದ ದೃಷ್ಟಿಯಿಂದ ಒಂದೇ. ಸಮಾಜಕ್ಕೆ ಅಗತ್ಯವಾದ ಎಲ್ಲ ವೃತ್ತಿಗಳೂ ಪವಿತ್ರವೇ! ಸಮಾಜಕ್ಕೆ ಅಹಿತಕಾರಿಯಾದ ಎಲ್ಲ ಕ್ರಿಯೆಗಳೂ ಅಪವಿತ್ರವಾದವುಗಳೇ. ಶಿಕ್ಷಕ ವೃತ್ತಿಗೆ ನಮ್ಮ ಭಾರತ ಪರಂಪರೆಯಲ್ಲಿ ಆರೋಪಿತವಾಗಿರುವ ದೈವತ್ವವನ್ನು ಈಗ ನಾವು ತಿರಸ್ಕರಿಸಬೇಕಾಗಿದೆ. ಶಿಕ್ಷಕನೊಬ್ಬ ಜೀವಂತ ವ್ಯಕ್ತಿಗಳೊಂದಿಗೆ ವ್ಯವಹರಿಸುತ್ತಾನಾದರೂ ಅದು ಒಂದು ಪರಿಮಿತ ಉದ್ದೇಶ ಹಾಗೂ ನಿರ್ದಿಷ್ಟ ಸಂಬಳ, ಭತ್ಯೆಗಳಿಂದ ಕೂಡಿರುತ್ತದಾದ್ದರಿಂದ ಎಲ್ಲ ಕಸುಬುಗಳ ಹಾಗೆಯೇ ಮುಖ್ಯವಾದುದು ಅಷ್ಟೆ.

ಗಾಂಧೀಜಿ 'ನಾನು ಬೀದಿ ಗುಡಿಸುವ ಉದ್ಯೋಗಿ ಆಗಿದ್ದಿದ್ದರೆ, ನನ್ನ ಬೀದಿಯು ದೇಶದಲ್ಲಿಯೇ ಅತ್ಯಂತ ಸ್ವಚ್ಛವಾದ ಬೀದಿ ಆಗಿರುವಂತೆ ನೋಡಿಕೊಳ್ಳುತ್ತಿದ್ದೆ' ಎನ್ನುತ್ತಾರೆ. ಅವರು ಹೇಳಿದ ಹಾಗೆ, 'ಶಿಕ್ಷಕನನ್ನು ತೀರಾ ದೊಡ್ಡ ವ್ಯಕ್ತಿ ಎಂಬಂತೆ ಕಾಣದಿದ್ದರೂ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಿ, ಜ್ಞಾನ ಕೊಟ್ಟು ಪೊರೆಯುವ ವ್ಯಕ್ತಿ ಅನ್ನುವ ಸೌಜನ್ಯದಿಂದ ನೋಡಿದರೂ ಸಾಕಾದೀತು!'

ವಾಸ್ತವದಲ್ಲಿ ಯಾವುದೇ ಮಾನವೀಯ ಸಹಜವಾದ ಗೌರವ ಭಾವಗಳಿಲ್ಲದಿದ್ದರೂ 'ಗುರುಬ್ರಹ್ಮ, ಗುರುವಿಷ್ಣು, ಗುರುದೇವೋ ಮಹೇಶ್ವರಃ', 'ನಹಿ ಗುರೋಃ ಪರಂ ದೈವತಂ' ಎಂಬಂಥ ಹುಸಿ ಪಟ್ಟಗಳನ್ನು ಕಟ್ಟುವ ಕೃತಕತೆ ಕಡಿಮೆಯಾದೀತು! ಆಗ ಶಿಕ್ಷಕರು ಸಹ ಸಹಜವಾದ ಬದುಕನ್ನು ಬದುಕಲು ಸಾಧ್ಯವಾದೀತು!

ಶಿಕ್ಷಕರ ದಿನಾಚರಣೆಯ ದಿನ ಪಲ್ಲಕ್ಕಿಯಲ್ಲಿ ಕೂಡಿಸಿ ಪೂಜೆ ಮಾಡುವುದು, ದಿನನಿತ್ಯದ ಜೀವನದಲ್ಲಿ 'ಮೇಷ್ಟ್ರಾ...!' ಎಂಬ ನಿಕೃಷ್ಟ ಭಾವ. ಆ ಅನಗತ್ಯ ಆದರವೂ ಬೇಡ ಅಂತೆಯೇ ಅರ್ಥಹೀನ ಔದಾಸೀನ್ಯವೂ ಬೇಡ. ಉಪಾಧ್ಯಾಯನೂ ಎಲ್ಲರ ಹಾಗೆ ನರಮಾನವನೆ. ಅವನ ವೃತ್ತಿಯನ್ನು ಅವನು ಯಾವ ವಂಚನೆಯಿಲ್ಲದೆ ಪ್ರಾಮಾಣಿಕವಾಗಿ ನಿರ್ವಹಿಸಿದರೆ ಸಾಕು. ಪಠ್ಯವನ್ನು ವಿದ್ಯಾರ್ಥಿಗಳ ಮನಸ್ಸಿಗೆ ಸ್ಪಷ್ಟವಾಗುವಂತೆ ಬಿಡಿಸಿ ಹೇಳುವುದೇ ಅವನ ಪರಮೋಚ್ಚ ಜವಾಬ್ದಾರಿ. ಚಾರಿತ್ರ್ಯ ನಿರ್ಮಾಣ, ಸತ್ಪ್ರಜೆಗಳ ಸೃಷ್ಟಿ, ದೇಶವನ್ನು ಕಟ್ಟುವುದು, ದೇಶಭಕ್ತಿಯನ್ನು ಪ್ರಚೋದಿಸುವುದು, ವ್ಯಕ್ತಿತ್ವ ಬೆಳವಣಿಗೆಯಂತಹ ನಾನಾ ರಚನಾತ್ಮಕ ಮೌಲ್ಯಗಳು ಬರೀ ಶಾಲಾ ಕಾಲೇಜುಗಳಿಂದ ಸಂಭವಿಸುವಂತಹವಲ್ಲ.

ಇಡೀ ಸಮಾಜ ಕೊಳೆತು ನಾರುತ್ತಿದ್ದು, ರಾಜಕೀಯ ನೇತಾರರು ಗೋಮುಖ ವ್ಯಾಘ್ರರಾಗಿದ್ದು, ಧರ್ಮ ಗುರುಗಳಲ್ಲಿ ಕೆಲವರು ಜಾತ್ಯಂಧರಾಗಿದ್ದು, ಪೋಷಕರು ಸ್ವಾರ್ಥವೇ ಪರಾರ್ಥವೆಂದು ಭಾವಿಸಿರುವಾಗ ಶಾಲಾ ಕಾಲೇಜುಗಳಲ್ಲಿ ಮಾತ್ರ ಬದಲಾವಣೆ ಮರೀಚಿಕೆಯಾದೀತು! ಶಿಕ್ಷಕರೂ ತಮ್ಮ ಮಿತಿ ಅರಿತು ನಡೆಯಬೇಕು. ಆದರೆ, ತಮ್ಮ ದುಡಿಮೆಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳಬೇಕು.

ವಾಚಕರ ವಾಣಿ

ವಿದ್ಯಾರ್ಥಿ ಬಸ್‌ಪಾಸ್: ಅರ್ಜಿ ಸಲ್ಲಿಕೆಗೆ ತೊಡಕು

ಶಾಲಾ ಕಾಲೇಜು ವಿದ್ಯಾರ್ಥಿಗಳು ಈ ಶೈಕ್ಷಣಿಕ ವರ್ಷದಲ್ಲಿ ಉಚಿತ ಬಸ್‌ಪಾಸ್‌ಗಾಗಿ ಆನ್‌ಲೈನ್ ಮೂಲಕ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಆದರೆ ಶಾಲಾ SATSನಲ್ಲಿನ (ಸ್ಟೂಡೆಂಟ್ ಅಚೀವ್‌ಮೆಂಟ್ ಟ್ರ್ಯಾಕಿಂಗ್ ಸಿಸ್ಟಂ) ಮಕ್ಕಳ ಹೆಸರಿಗೂ ಅವರು ಈಗಾಗಲೇ ಮಾಡಿಸಿರುವ ಆಧಾರ್ ಕಾರ್ಡ್‌ನಲ್ಲಿನ ಹೆಸರಿಗೂ ತಾಳೆ ಆಗದೇ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಕೆಲವು ಗಂಡು ಮಕ್ಕಳಿಗೆ ಶಾಲಾ ಕಾಲೇಜಿಗೆ ಹೋಗಲು ಕಷ್ಟವಾಗುತ್ತಿದೆ. ಈ ಮೊದಲಿನಂತೆ ಅರ್ಜಿಯನ್ನು ಭೌತಿಕವಾಗಿ ಸಲ್ಲಿಸುವಂತೆ ಮಾಡುವುದು ಉತ್ತಮ.

ಅಶೋಕ ಚನ್ನಳ್ಳಿ, ಹಿರೇಕೆರೂರು

ಚಿತ್ರರಂಗದವರು ಅರಿಯಬೇಕಾದ್ದು ಬಹಳಷ್ಟಿದೆ

'ತೊಂಬತ್ತರಲ್ಲಿ ಕೆಟ್ಟು ನಿಂತ ಸಿನಿಮಾಬಂಡಿ' ಎಂಬ ರಘುನಾಥ ಚ.ಹ. ಅವರ ಲೇಖನ (ಪ್ರ.ವಾ., ಜುಲೈ 20) ಕನ್ನಡ ಚಿತ್ರರಂಗದ ಇಂದಿನ ದುಃಸ್ಥಿತಿಯನ್ನು ಸೂಕ್ಷ್ಮವಾಗಿ ತೋರಿಸಿದೆ. ಈ ಪರಿಸ್ಥಿತಿಯನ್ನು ಸಿನಿಮಾ ಮಂದಿ ಒಂದೆಡೆ ಕುಳಿತು ಅವಲೋಕನ ಮಾಡಿಕೊಳ್ಳಬೇಕಿದೆ. ಈ ಮೊಬೈಲ್ ಯುಗದಲ್ಲಿ ಜನರಿಗೆ ಸಿನಿಮಾ ಬೇಕಾಗಿಲ್ಲ ಎಂಬ ಸತ್ಯವನ್ನು, ಇಂದಿನ ದಿನಗಳಲ್ಲಿ ಹೊಸ ಸಿನಿಮಾಗಳು ಬರದಿದ್ದರೂ ಜನರ ಮನರಂಜನೆಗೇನೂ ಧಕ್ಕೆ ಇಲ್ಲ ಎಂಬುದನ್ನು ಚಿತ್ರರಂಗದವರು ಅರಿಯಬೇಕಿದೆ.

ಕರ್ನಾಟಕದಲ್ಲಿ ಈಗಾಗಲೇ ಅರ್ಧಕ್ಕಿಂತ ಹೆಚ್ಚು ಸಿನಿಮಾ ಮಂದಿರಗಳು ಮುಚ್ಚಿಹೋಗಿವೆ. ಚಿತ್ರಮಂದಿರಗಳಿಗೆ ಜನ ಬರುತ್ತಿಲ್ಲ. ಪ್ರಸಿದ್ಧ ಕಲಾವಿದರೆಲ್ಲ ಟಿ.ವಿ ಪರದೆ ಮೇಲೆ ಕಾಣಿಸುತ್ತಿದ್ದಾರೆ. ದೊಡ್ಡ ದೊಡ್ಡ ನಾಯಕನಟರು ಕೇಳಿದಷ್ಟು ಸಂಭಾವನೆ ಸಿಗದಿದ್ದರೆ ವರ್ಷಗಟ್ಟಲೆ ಸಿನಿಮಾ ಮಾಡುವುದೇ ಇಲ್ಲ. ಹೊಸಬರು ಬಂದರೂ ಒಂದೋ ಎರಡೋ ಸಿನಿಮಾ ಮಾಡಿದ ನಂತರ ತೆರೆಮರೆಗೆ ಹೋಗುತ್ತಿದ್ದಾರೆ. ಬಹಳಷ್ಟು ಸಿನಿಮಾಗಳು ಒಂದೆರಡು ದಿನ ಓಡಿ ಮೂಲೆ ಸೇರುತ್ತಿವೆ. ಇಷ್ಟೆಲ್ಲಾ ಗೊತ್ತಿದ್ದೂ ಗಾಂಧಿನಗರ ಮೌನವಾಗಿದೆ ಮತ್ತು ದುಃಸ್ಥಿತಿಯನ್ನು ಒಪ್ಪಿಕೊಂಡಂತಿದೆ. ನಿರ್ಮಾಪಕರನ್ನು ಅನ್ನದಾತರು, ಪ್ರೇಕ್ಷಕರನ್ನು ಅಭಿಮಾನಿ ದೇವರುಗಳು ಎಂದು ಹೇಳುತ್ತಿದ್ದ ಅಮೂಲ್ಯ ಮಾತುಗಳು ಕಣ್ಮರೆಯಾಗಿ ದಶಕಗಳೇ ಕಳೆದುಹೋದವು. ಚಿತ್ರರಂಗಕ್ಕೆ ಒಳ್ಳೆಯ ದಿನಗಳು ಎಂಬುದು ಇನ್ನು ಮುಂದೆ ಮರೀಚಿಕೆ ಆಗುವುವೇ?

ವಿ.ತಿಪ್ಪೇಸ್ವಾಮಿ, ಹಿರಿಯೂರು

ಸದನ ಕಲಾಪ: ಅರಸು ಮಾದರಿ

ಸದನದ ಕಲಾಪ ನಡೆಯುತ್ತಿತ್ತು. ವಿರೋಧ ಪಕ್ಷದ ಸದಸ್ಯರೊಬ್ಬರು, 'ವೃದ್ಧಾಪ್ಯ ಪಿಂಚಣಿ ಕೆಲವೇ ಜಾತಿಗಳವರ ಪಾಲಾಗುತ್ತಿದೆ, ಸಚಿವರು ತಮ್ಮ ಜಾತಿಯವರಿಗೆ ಮಾತ್ರ ಪಿಂಚಣಿ ಕೊಡಿಸುತ್ತಿದ್ದಾರೆ' ಎಂದು ಆರೋಪ ಮಾಡಿದರು. ಮುಖ್ಯಮಂತ್ರಿ ಆಗಿದ್ದ ದೇವರಾಜ ಅರಸು ಅವರು ಎದ್ದು ನಿಂತು, ತಮ್ಮ ಟೇಬಲ್ ಮೇಲಿನ ನೀರಿನ ಲೋಟವನ್ನು ಎತ್ತಿ ಕೈಯಲ್ಲಿ ಹಿಡಿದು 'ಇದು ಸರ್ಕಾರದ ಯೋಜನೆ. ಈ ನೀರಿನ ಲೋಟವನ್ನು ದಾಹವಿದ್ದವನಿಗೆ ಕೊಟ್ಟು ಬಾ ಎಂದರೆ, ನಮ್ಮ ಪಕ್ಷದವರು ತಮ್ಮ ಜಾತಿಯವರನ್ನಷ್ಟೇ ಹುಡುಕಿ ಕೊಡಬಾರದು. ಇದು ಸಚಿವರಿಗೆ, ಸರ್ಕಾರಕ್ಕೆ ಭೂಷಣವಲ್ಲ. ಹೀಗೆ ಮಾಡುವುದು ಜನದ್ರೋಹ' ಎಂದು ಗುಡುಗಿದ್ದರು.

ಬಿಜೆಪಿಯ 10 ಶಾಸಕರನ್ನು ವಿಧಾನಸಭೆಯಿಂದ ಅಮಾನತುಗೊಳಿಸಿರುವುದನ್ನು ವಿರೋಧಿಸಿ, ಶಾಸಕರಾದ ಬಸವರಾಜ ಬೊಮ್ಮಾಯಿ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರು ವಿರೋಧ ಪಕ್ಷದ ಶಾಸಕರೊಂದಿಗೆ ವಿಧಾನಸೌಧದ ಮುಂಭಾಗದಲ್ಲಿ ಬುಧವಾರ ಪ್ರತಿಭಟನೆ ನಡೆಸಿದ ಚಿತ್ರ ನೋಡಿ, ಅರಸು ಅವರ ಈ ಪ್ರಕರಣ ಎಲ್ಲ ಕಾಲಕ್ಕೂ ನೀತಿ ಪಾಠದಂತಿದೆ ಅನಿಸಿತು. ಮುಖ್ಯಮಂತ್ರಿ ಆಗಿ ಕಾರ್ಯನಿರ್ವಹಿಸಿದ್ದ ಬೊಮ್ಮಾಯಿ ಹಾಗೂ ಕುಮಾರಸ್ವಾಮಿ ಅವರು ರಾಜ್ಯ ರಾಜಕೀಯದಲ್ಲಿ ಹಿರಿಯರು ಎಂಬ ಗೌರವಕ್ಕೆ ಪಾತ್ರರಾದವರು. ಸದನದಲ್ಲಿ ಶಾಸಕರು ಮಸೂದೆಗಳ ಪ್ರತಿಗಳನ್ನು ಹರಿದು ಉಪಸಭಾಧ್ಯಕ್ಷರ ಮುಖಕ್ಕೆ ಎಸೆದದ್ದು ದೊಡ್ಡ ತಪ್ಪು, ಇದು ಹುಂಬತನದ ಪರಮಾವಧಿ ಎಂದು ಕಿವಿಮಾತು ಹೇಳಬೇಕಾಗಿತ್ತು. ಅದು ಬಿಟ್ಟು ಪ್ರತಿಭಟನೆ ನಡೆಸಿದ್ದು ವಿರೋಧಕ್ಕಾಗಿ ವಿರೋಧ ಎಂಬಂತೆ ಕಾಣಿಸುತ್ತದೆ.

ಅರಸು ಮುಖ್ಯಮಂತ್ರಿಯಾಗಿದ್ದಾಗ ವಿರೋಧ ಪಕ್ಷದ ನಾಯಕರಾಗಿದ್ದ ಎಚ್.ಡಿ.ದೇವೇಗೌಡರು ಕಾವೇರಿ ನೀರಾವರಿ ವಿಷಯವಾಗಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು ಮಾತನಾಡುತ್ತಿದ್ದರು. ಅವರ ವಾದಸರಣಿ ಒಂದೂವರೆ ಗಂಟೆಗೂ ಹೆಚ್ಚು ಕಾಲ ನಿರಂತರವಾಗಿ ಸಾಗಿತ್ತು. ಅರಸು ಮಧ್ಯಪ್ರವೇಶಿಸಿ 'ಗೌಡ್ರೆ, ನಿಮ್ಮ ಗಂಟಲು ಒಣಗಿದಂತೆ ಕಾಣುತ್ತದೆ, ದಯವಿಟ್ಟು ಸ್ವಲ್ಪ ನೀರು ಕುಡಿದು ಮುಂದುವರಿಸಿ. ನಾವು ಕೇಳುವುದಕ್ಕೆ ಸಿದ್ಧರಿದ್ದೇವೆ' ಎಂದು ಪ್ರೋತ್ಸಾಹಿಸಿದ್ದರು. ವಿರೋಧ ಪಕ್ಷದವರ ಟೀಕೆ ಟಿಪ್ಪಣಿಗಳನ್ನು ಸಹನೆಯಿಂದ ಕೇಳುವ ಮನೋಭಾವವನ್ನು ಆಡಳಿತ ಪಕ್ಷದವರು ಬೆಳೆಸಿಕೊಳ್ಳಬೇಕು ಎಂಬುದಕ್ಕೆ ಅರಸು ಅವರ ಈ ನಡೆ ಒಂದು ಮಾದರಿಯಾಗಿದೆ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಸದನದ ಗೌರವ ಕಾಪಾಡಿ...

ವಿಧಾನಸಭಾ ಅಧಿವೇಶನದಲ್ಲಿ ಬುಧವಾರ ನಡೆದ ಗದ್ದಲದ ಚಿತ್ರ ಹಾಗೂ ವಿವರವು ಪತ್ರಿಕೆಯ ಮುಖಪುಟದಲ್ಲಿ (ಪ್ರ.ವಾ., ಜುಲೈ 20) ಪ್ರಕಟವಾಗಿದೆ. ಹಾಗೆಯೇ ಶಾಲಾ ವಿದ್ಯಾರ್ಥಿಗಳು ಇದೇ ಕಲಾಪ ನೋಡಲು ಕಾಯುತ್ತಿದ್ದ ಚಿತ್ರವೊಂದು ಒಳಪುಟದಲ್ಲಿ ಪ್ರಕಟವಾಗಿದೆ. ಆದರೆ, ವಿದ್ಯಾರ್ಥಿಗಳ ಈ ಚಿತ್ರವನ್ನು ಮುಖಪುಟದಲ್ಲಿ ಪ್ರಕಟವಾಗಿರುವ ಸದನದ ಗದ್ದಲದ ಚಿತ್ರದ ಪಕ್ಕದಲ್ಲೇ ಪ್ರಕಟಿಸಿದ್ದರೆ ಚೆನ್ನಾಗಿತ್ತು ಹಾಗೂ ಅದು ಅರ್ಥಪೂರ್ಣವಾಗುತ್ತಿತ್ತು. ಸದನದಲ್ಲಿನ ಗದ್ದಲ ನೋಡಿ ಈ ಮಕ್ಕಳ ಮನಸ್ಸಿಗೆ ಎಷ್ಟೊಂದು ಗಾಸಿಯಾಗಿರಬಹುದು ಎಂಬುದರ ಬಗ್ಗೆ ಯಾರೂ ಯೋಚಿಸಲೇ ಇಲ್ಲ ಅನಿಸುತ್ತದೆ. ಸದನದ ಕಲಾಪ ಅವರಿಗೆ ಅರ್ಥವಾಯಿತೋ ಇಲ್ಲವೋ ತಿಳಿಯದು. ಆದರೆ ಅಲ್ಲಿ ಹಿರಿಯರು ನಡೆದುಕೊಂಡ ರೀತಿಯನ್ನು ನೋಡಿ, 'ಇವರೇನಾ ನಮ್ಮ ಜನಪ್ರತಿನಿಧಿಗಳು' ಎಂಬ ಭಾವನೆಯಂತೂ ಬಂದಿರಬಹುದು.

ಮಾನ್ಯ ಜನಪ್ರತಿನಿಧಿಗಳೇ, ದಯವಿಟ್ಟು ಸದನದ ಗೌರವ ಕಾಪಾಡಿ ಹಾಗೂ ನೀವು ನಿಮ್ಮ ಕ್ಷೇತ್ರದಲ್ಲಿ ಓಡಾಡಿದಾಗ ಜನರಲ್ಲಿ ನಿಮ್ಮ ಬಗ್ಗೆ ಜುಗುಪ್ಸೆ ಮೂಡದಂತೆ ನೋಡಿಕೊಳ್ಳಿ. ಆಗ ನಿಮಗೂ ಹಾಗೂ ಸದನಕ್ಕೂ ಗೌರವ ಬರುತ್ತದೆ.

ಪಿ.ಎನ್.ಎಂ. ಗುಪ್ತ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎನ್‌ಡಿಎ ಹ್ಯಾಟ್ರಿಕ್ ಕನಸು ಸುಲಭವೇ?

ಪ್ರಧಾನಿ ನರೇಂದ್ರ ಮೋದಿ ವರ್ಚಸ್ಸು, ಭ್ರಷ್ಟಾಚಾರ, ಹಿಂದುತ್ವ, ದೇಶದ ಭದ್ರತೆ ಹಾಗೂ ರಾಷ್ಟ್ರೀಯತೆಯಂತಹ ಭಾವನಾತ್ಮಕ ವಿಷಯಗಳನ್ನು ಮುಂದಿಟ್ಟುಕೊಂಡು 2014 ಹಾಗೂ 2019ರ ಲೋಕಸಭಾ ಚುನಾವಣೆಗಳಲ್ಲಿ ಸಲೀಸಾಗಿ ಗೆದ್ದ ಎನ್‌ಡಿಎ ಮೈತ್ರಿಕೂಟಕ್ಕೆ ಹ್ಯಾಟ್ರಿಕ್ ಗೆಲುವು ಸಾಧ್ಯವೇ? ಆಪರೇಷನ್ ಕಮಲದ ಮೂಲಕ ಬಿಜೆಪಿಯು ಒಂಬತ್ತು ವರ್ಷಗಳಲ್ಲಿ ಕಾಂಗ್ರೆಸ್ ಹಾಗೂ ಪ್ರಾದೇಶಿಕ ಪಕ್ಷಗಳನ್ನು ಹಣ್ಣುಗಾಯಿ ನೀರುಗಾಯಿ ಮಾಡಿದೆ. ಕೇಂದ್ರದ ತನಿಖಾ ಸಂಸ್ಥೆಗಳನ್ನು ಬಿಜೆಪಿ ತಮ್ಮ ವಿರುದ್ಧ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಬಿಜೆಪಿ ವಿರೋಧಿ ಪಕ್ಷಗಳು ನಿರಂತರವಾಗಿ ಆರೋಪಿಸುತ್ತಾ ಬಂದಿವೆ. ಈಗ, 26 ವಿಪಕ್ಷಗಳು ತಮ್ಮೊಳಗಿನ ವೈಮನಸ್ಸುಗಳನ್ನೆಲ್ಲ ಸದ್ಯಕ್ಕೆ ಮರೆತು 'ಇಂಡಿಯಾ' ಎಂಬ ಮಹಾಮೈತ್ರಿಕೂಟ ರಚಿಸಿಕೊಂಡಿವೆ. ಹೇಗಾದರೂ ಮಾಡಿ ಈ ಸಲ ಬಿಜೆಪಿ ನೇತೃತ್ವದ ಮೈತ್ರಿಕೂಟವನ್ನು ಸೋಲಿಸಲೇಬೇಕು ಎಂದು 'ಇಂಡಿಯಾ' ಕೂಟ ಮುಂದಡಿ ಇಟ್ಟಿದೆ. ವಿವಿಧ ರಾಜ್ಯಗಳಲ್ಲಿ ಬಿಜೆಪಿ ಸ್ಥಿತಿಗತಿ ಹೇಗಿದೆ ಎಂಬುದರ ಚಿತ್ರಣ ಇಲ್ಲಿದೆ:

• ಮಂಜುನಾಥ್ ಹೆಬ್ಬಾರ್

(ಆವರಣದಲ್ಲಿರುವುದು ಮತ ಪ್ರಮಾಣ)

1 ಉತ್ತರ ಪ್ರದೇಶ

ಒಟ್ಟು ಲೋಕಸಭಾ ಸ್ಥಾನ: **80**
ಬಿಜೆಪಿ : **62** (50%)
ಬಿಎಸ್‌ಪಿ : **10** (19%)
ಎಸ್‌ಪಿ : **5** (18%)

ಪ್ರಮುಖ ಸವಾಲು: 2019ರ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಶೇ 51.19 ಮತಗಳನ್ನು ಪಡೆದು 64 ಸ್ಥಾನಗಳನ್ನು (ಅಪ್ನಾದಳ್ 2 ಸ್ಥಾನ ಸೇರಿ) ಗೆದ್ದುಕೊಂಡಿತ್ತು. ಎಸ್‌ಪಿ, ಬಿಎಸ್‌ಪಿ ಹಾಗೂ ರಾಷ್ಟ್ರೀಯ ಲೋಕದಳದ 'ಮಹಾಘಟಬಂಧನ್' 15 ಕ್ಷೇತ್ರಗಳಲ್ಲಷ್ಟೇ ಗೆಲುವು ಸಾಧಿಸಿತ್ತು. ಎಸ್‌ಪಿ ಹಾಗೂ ಬಿಎಸ್‌ಪಿ ದೂರವಾಗಿವೆ. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಪರೋಕ್ಷ ಬೆಂಬಲ ನೀಡಿದ್ದ ಬಿಎಸ್‌ಪಿ ಈಗ ತಟಸ್ಥವಾಗಿದೆ. ಎಸ್‌ಪಿ/ಕಾಂಗ್ರೆಸ್ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸಿದರೆ ಬಿಜೆಪಿಯ ಚುನಾವಣಾ ಲೆಕ್ಕಾಚಾರದಲ್ಲಿ ಸ್ವಲ್ಪ ಏರುಪೇರು ಆಗಬಹುದು.

2 ಮಹಾರಾಷ್ಟ್ರ

ಒಟ್ಟು ಸ್ಥಾನಗಳು: **48**
ಬಿಜೆಪಿ : **23** (28%)
ಶಿವಸೇನಾ : **18** (24%)
ಎನ್‌ಸಿಪಿ : **4** (16%)
ಕಾಂಗ್ರೆಸ್ : **1** (16%)

ಪ್ರಮುಖ ಸವಾಲು: ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಎನ್‌ಡಿಎ ಜತೆಗೆ ಇದೆ. ಲೋಕಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬಿಜೆಪಿಯ 'ಆಪರೇಷನ್ ಬುಲ್ಡೋಜರ್' ಎನ್‌ಸಿಪಿ ಮನೆಯನ್ನು ಕೆಡವಿದೆ. ಉಪಮುಖ್ಯಮಂತ್ರಿ ಅಜಿತ್ ಪವಾರ್ ಮುಂದಾಳುತ್ವದ ಎನ್‌ಸಿಪಿ ಬಣವು ಎನ್‌ಡಿಎ ತೆಕ್ಕೆಗೆ ಬಂದಿದೆ. ಇಷ್ಟೆಲ್ಲ ಕಸರತ್ತು ನಡೆಸಿದ ಬಳಿಕವೂ ಬಿಜೆಪಿಗೆ ಉದ್ಧವ್ ಠಾಕ್ರೆ ಹಾಗೂ ಶರದ್ ಪವಾರ್ ಅವರ ಆತಂಕ ಇದ್ದೇ ಇದೆ.

3 ಬಿಹಾರ

ಒಟ್ಟು ಕ್ಷೇತ್ರಗಳು: **40**
ಬಿಜೆಪಿ : **17** (22%)
ಜೆಡಿಯು : **16** (22%)
ಲೋಕ ಜನಶಕ್ತಿ: **6** (9%)
ಆರ್‌ಜೆಡಿ : **0** (16%)
ಕಾಂಗ್ರೆಸ್ : **1** (8%)

ಪ್ರಮುಖ ಸವಾಲು: ಕಳೆದ ಚುನಾವಣೆಯಲ್ಲಿ ಬಿಜೆಪಿ–ಜೆಡಿಯು–ಎಲ್‌ಜೆಪಿ ಕೂಟವು 39 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿತ್ತು. ಈಗ ನಿತೀಶ್ ಕುಮಾರ್ ಅವರ ಜೆಡಿಯು ಬಿಜೆಪಿಯಿಂದ ದೂರವಾಗಿ 'ಇಂಡಿಯಾ' ಮೈತ್ರಿಕೂಟದ ಪ್ರಮುಖ ಪಕ್ಷವಾಗಿದೆ. ಎಲ್‌ಜೆಪಿ ವಿಭಜನೆಯಾಗಿದೆ. ಎನ್‌ಡಿಎ ಮೈತ್ರಿಕೂಟದ ಪಾಲುದಾರರಾದ ಎಲ್‌ಜೆಪಿಯ ಚಿರಾಗ್ ಪಾಸ್ವಾನ್ ಹಾಗೂ ಪಶುಪತಿನಾಥ ಪಾರಸ್ ನಡುವಣ ಬಿಕ್ಕಟ್ಟು ಬಗೆಹರಿದಿಲ್ಲ.

4 ಮಧ್ಯ ಪ್ರದೇಶ

ಒಟ್ಟು ಸ್ಥಾನ: **29**
ಬಿಜೆಪಿ : **28** (58.5%)

ಪ್ರಮುಖ ಸವಾಲು: ರಾಜ್ಯದಲ್ಲಿ ಸರಿಸುಮಾರು ಎರಡು ದಶಕಗಳಿಂದ ಬಿಜೆಪಿ ಅಧಿಕಾರದಲ್ಲಿದೆ. ಮುಖ್ಯಮಂತ್ರಿ ಶಿವರಾಜ ಸಿಂಗ್ ಚೌಹಾಣ್ ವಿರುದ್ಧ ಆಡಳಿತ ವಿರೋಧಿ ಅಲೆ ಇದೆ. ಜತೆಗೆ, ರಾಜ್ಯ ಘಟಕದಲ್ಲಿ ಮೂರು ಗುಂಪುಗಳಿವೆ.

5 ಪಶ್ಚಿಮ ಬಂಗಾಳ

ಒಟ್ಟು ಕ್ಷೇತ್ರಗಳು: **42**
ಟಿಎಂಸಿ : **22** (44%)
ಬಿಜೆಪಿ : **18** (41%)

ಪ್ರಮುಖ ಸವಾಲು: ಕಳೆದ ಚುನಾವಣೆಯಲ್ಲಿ ಬಿಜೆಪಿ ಶೇ 41 ಮತಗಳನ್ನು ಪಡೆದು ಅಚ್ಚರಿಯ ಸಾಧನೆ ಮಾಡಿತ್ತು. ಆ ಬಳಿಕ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸೋತಿತ್ತು. ಈಚೆಗೆ ನಡೆದ ಪಂಚಾಯಿತಿ ಚುನಾವಣೆಯಲ್ಲಿ ಪಕ್ಷ ಗಮನಾರ್ಹ ಸಾಧನೆ ಮಾಡಿಲ್ಲ. ರಾಜ್ಯದಲ್ಲಿ ಟಿಎಂಸಿ–ಎಡಪಕ್ಷಗಳು–ಕಾಂಗ್ರೆಸ್ ಜತೆಗೂಡುತ್ತಿರುವುದು ಬಿಜೆಪಿ ಮಟ್ಟಿಗೆ ಉತ್ತಮ ಬೆಳವಣಿಗೆ ಅಲ್ಲ.

6 ಜಾರ್ಖಂಡ್

ಒಟ್ಟು ಕ್ಷೇತ್ರಗಳು: **14**
ಬಿಜೆಪಿ : **11** (52%)
ಜೆಎಂಎಂ : **1** (12%)

ಪ್ರಮುಖ ಸವಾಲು: ಪಕ್ಷ ಕಳೆದ ಚುನಾವಣೆಯಲ್ಲಿ 11 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಈ ಸಲ ಆ ಸ್ಥಾನಗಳನ್ನು ಉಳಿಸಿಕೊಳ್ಳುವುದು ಕಷ್ಟ ಎಂಬುದನ್ನು ಬಿಜೆಪಿ ನಾಯಕರೇ ಒಪ್ಪಿಕೊಳ್ಳುತ್ತಾರೆ. ಮುಖ್ಯಮಂತ್ರಿ ಹೇಮಂತ್ ಸೊರೇನ್ ನೇತೃತ್ವದ ಜೆಎಂಎಂ–ಆರ್‌ಜೆಡಿ–ಕಾಂಗ್ರೆಸ್ ಮೈತ್ರಿಕೂಟ ಹೆಚ್ಚಿನ ಸವಾಲು ಒಡ್ಡಬಹುದು ಎಂಬುದು ಕಮಲ ಪಾಳಯದ ನಾಯಕರ ಆತಂಕಕ್ಕೆ ಕಾರಣ.

7 ಪಂಜಾಬ್

ಒಟ್ಟು ಕ್ಷೇತ್ರಗಳು: **13**
ಬಿಜೆಪಿ : **2** (10%)
ಶಿರೋಮಣಿ ಅಕಾಲಿ ದಳ: **2** (28%)
ಕಾಂಗ್ರೆಸ್ : **8** (41%)
ಎಎಪಿ : **1** (8%)

ಪ್ರಮುಖ ಸವಾಲು: ಎನ್‌ಡಿಎ ಮೈತ್ರಿಕೂಟದಿಂದ ಶಿರೋಮಣಿ ಅಕಾಲಿ ದಳ ಹೊರಕ್ಕೆ ಬಂದಿದೆ. ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಎಎಪಿ ಸಂಘಟನೆ ಪ್ರಬಲವಾಗಿದೆ. ಬಿಜೆಪಿಯ ಸಂಘಟನೆ ದುರ್ಬಲವಾಗಿದೆ. ಗ್ರಾಮೀಣ ಮತಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸುನೀಲ್ ಜಾಖಡ್ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಬಿಜೆಪಿ ಈಚೆಗೆ ನೇಮಿಸಿದೆ. ಜಾಖಡ್ ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದರು.

8 ರಾಜಸ್ಥಾನ

ಒಟ್ಟು ಕ್ಷೇತ್ರಗಳು: **25**
ಬಿಜೆಪಿ : **24** (59%)

ಪ್ರಮುಖ ಸವಾಲು: ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ. ಮುಖ್ಯಮಂತ್ರಿ ಅಶೋಕ ಗೆಹಲೋತ್ ಹಾಗೂ ಕಾಂಗ್ರೆಸ್ ಮುಖಂಡ ಸಚಿನ್ ಪೈಲಟ್ ನಡುವಣ ತಿಕ್ಕಾಟ ಈಗ ತಣ್ಣಗಾಗಿದೆ. ಬಿಜೆಪಿ ರಾಜ್ಯ ಘಟಕವು ಮನೆಯೊಂದು ಮೂರು ಬಾಗಿಲು ಎಂಬಂತೆ ಆಗಿದೆ.

9 ಛತ್ತೀಸಘಡ

ಒಟ್ಟು ಕ್ಷೇತ್ರಗಳು: **11**
ಬಿಜೆಪಿ : **9** (50.7%)

ಪ್ರಮುಖ ಸವಾಲು: ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ಕಳೆದುಕೊಂಡ ಬಳಿಕ ಬಿಜೆಪಿ ಸಂಘಟನೆ ದುರ್ಬಲವಾಗಿದೆ. ರಾಜ್ಯ ಘಟಕದಲ್ಲಿ ಪ್ರಭಾವಿ ನಾಯಕನೇ ಇಲ್ಲ ಎಂಬ ಸ್ಥಿತಿ ಇದೆ.

10 ಹರಿಯಾಣ

ಒಟ್ಟು ಕ್ಷೇತ್ರಗಳು: **10**
ಬಿಜೆಪಿ : **10** (58%)
ಕಾಂಗ್ರೆಸ್ : **0** (28%)

ಪ್ರಮುಖ ಸವಾಲು: ರಾಜ್ಯದ ಜನಸಂಖ್ಯೆಯಲ್ಲಿ ಜಾಟರ ಪಾಲು ಶೇ 27ರಷ್ಟು. ಜಾಟರು ಬಿಜೆಪಿ ಜತೆಗೆ ಮುನಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಬಿಜೆಪಿ–ಜನನಾಯಕ ಜನತಾ ಪಾರ್ಟಿಯ (ಜೆಜೆಪಿ) ಸರ್ಕಾರ ಅಧಿಕಾರದಲ್ಲಿದೆ. ಎರಡೂ ಪಕ್ಷಗಳ ನಡುವಣ ಸಂಬಂಧ ಹಳಸಿದೆ.

11 ಹಿಮಾಚಲ ಪ್ರದೇಶ

ಒಟ್ಟು ಸ್ಥಾನಗಳು: **4**
ಬಿಜೆಪಿ : **4** (69%)
ಕಾಂಗ್ರೆಸ್ : **0** (27%)

ಪ್ರಮುಖ ಸವಾಲು: ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ತವರು ರಾಜ್ಯದಲ್ಲೇ 2022ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ವಿಜಯ ಸಾಧಿಸಿದೆ. ಈ ಸೋಲಿನಿಂದ ಕಾರ್ಯಕರ್ತರ ಸ್ಥೈರ್ಯ ಕುಸಿದಿದೆ. ರಾಜ್ಯ ಘಟಕದಲ್ಲಿರುವ ಎರಡು ಗುಂಪುಗಳ ನಡುವೆ ಕಿತ್ತಾಟ ಮುಂದುವರಿದಿದೆ.



12 ತೆಲಂಗಾಣ

ಒಟ್ಟು ಕ್ಷೇತ್ರಗಳು: **17**
ಬಿಜೆಪಿ : **4** (17%)

ಪ್ರಮುಖ ಸವಾಲು: ಭಾರತೀಯ ರಾಷ್ಟ್ರ ಸಮಿತಿ (ಬಿಆರ್‌ಎಸ್) ರಾಜ್ಯದಲ್ಲಿ ಪ್ರಬಲವಾಗಿದೆ. ಇಲ್ಲೂ ಬಿಜೆಪಿ ನಾಯಕರ ನಡುವೆ ಒಳ ಜಗಳ ಇದೆ. ರಾಜ್ಯದಲ್ಲಿ ಕಾಂಗ್ರೆಸ್ ನಿಧಾನಕ್ಕೆ ಪ್ರಬಲವಾಗುತ್ತಿದೆ.

13 ಕರ್ನಾಟಕ

ಒಟ್ಟು ಕ್ಷೇತ್ರಗಳು: **28**
ಬಿಜೆಪಿ : **25** (52%)
ಕಾಂಗ್ರೆಸ್ : **1** (32%)

ಪ್ರಮುಖ ಸವಾಲು: ಈ ಸಲದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಜಯ ಗಳಿಸಿದೆ. ಹೊಸ ಸರ್ಕಾರ ರಚನೆಯಾಗಿ 50 ದಿನಗಳು ಕಳೆದರೂ ಬಿಜೆಪಿಗೆ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಸಾಧ್ಯವಾಗಿಲ್ಲ. ಪಕ್ಷದ ಮೇಲೆ ಹಿಡಿತ ಸಾಧಿಸಲು ಯಡಿಯೂರಪ್ಪ ಮತ್ತು ಬಿ. ಎಲ್. ಸಂತೋಷ್ ಬಣ ಪೈಪೋಟಿಗೆ ಇಳಿದಿರುವುದರಿಂದ ಆಂತರಿಕ ಸಂಘರ್ಷ ಬಗೆಹರಿದಿಲ್ಲ.

14 ಒರಿಸ್ಸಾ

ಒಟ್ಟು ಕ್ಷೇತ್ರಗಳು: **20**
ಬಿಜೆಡಿ : **12** (43%)
ಬಿಜೆಪಿ : **8** (38%)

ಪ್ರಮುಖ ಸವಾಲು: ರಾಜ್ಯದಲ್ಲಿ 23 ವರ್ಷಗಳಿಂದ ಬಿಜೆಡಿ ಸರ್ಕಾರ ಆಡಳಿತ ನಡೆಸುತ್ತಿದೆ. ಮುಖ್ಯಮಂತ್ರಿ ನವೀನ್ ಪಟ್ನಾಯಕ್ ವಿರುದ್ಧ ದೊಡ್ಡ ಮಟ್ಟದ ಆಡಳಿತ ವಿರೋಧಿ ಅಲೆ ಇಲ್ಲ. ಬಿಜೆಡಿ ನಾಯಕರನ್ನು ಸೆಳೆಯುವ ಬಿಜೆಪಿಯ ತಂತ್ರಕ್ಕೆ ಯಶಸ್ಸು ಸಿಕ್ಕಿಲ್ಲ.

15 ತಮಿಳುನಾಡು

ಒಟ್ಟು ಕ್ಷೇತ್ರಗಳು: **39**
ಡಿಎಂಕೆ : **24** (34%)
ಯುಪಿಎ ಮೈತ್ರಿಕೂಟದ ಇತರ ಪಕ್ಷಗಳು : **14** (19%)
ಬಿಜೆಪಿ : **0** (3.7%)

ಪ್ರಮುಖ ಸವಾಲು: ಈ ರಾಜ್ಯದಲ್ಲಿ ಎಐಎಡಿಎಂಕೆಯ ಕಿರಿಯ ಪಾಲುದಾರ ಪಕ್ಷ ಬಿಜೆಪಿ. ಹಲವು ಬಗೆಯ ಕಸರತ್ತು ನಡೆಸಿದರೂ ಪಕ್ಷ ಸಂಘಟನೆ ಬಲವಾಗಿಲ್ಲ. ಸಂಘಟನೆಗಾಗಿ ಕೇಂದ್ರ ಸಚಿವರ ದೊಡ್ಡ ದಂಡನ್ನೇ ಕಳುಹಿಸಿದರೂ ಹೆಚ್ಚಿನ ಅನುಕೂಲ ಆಗಿಲ್ಲ

ಬಿಜೆಪಿ ಪ್ರಬಲ ನೆಲೆ ಹೊಂದಿರುವ ರಾಜ್ಯಗಳು

16 ಗುಜರಾತ್ — ಒಟ್ಟು ಕ್ಷೇತ್ರ: **26**; ಗೆಲುವು: **26** (63%)

17 ದೆಹಲಿ — ಒಟ್ಟು ಕ್ಷೇತ್ರಗಳು: **7**; ಗೆಲುವು: **7** (57%)

18 ಉತ್ತರಾಖಂಡ — ಒಟ್ಟು ಕ್ಷೇತ್ರಗಳು: **5**; ಗೆಲುವು: **5** (61%)

19 ಅರುಣಾಚಲ ಪ್ರದೇಶ — ಒಟ್ಟು ಕ್ಷೇತ್ರಗಳು: **2**; ಗೆಲುವು: **2** (59%)

20 ಅಸ್ಸಾಂ — ಒಟ್ಟು ಕ್ಷೇತ್ರಗಳು: **14**; ಗೆಲುವು: **9** (36%)

21 ಗೋವಾ — ಒಟ್ಟು ಕ್ಷೇತ್ರಗಳು: **2**; ಗೆಲುವು: **1** (52%)

2019ರಲ್ಲಿ ಶೂನ್ಯ ಸಾಧನೆ ಎಲ್ಲೆಲ್ಲಿ

15 ತಮಿಳುನಾಡು — ಒಟ್ಟು ಕ್ಷೇತ್ರ: **39**; ಬಿಜೆಪಿ: **0** (3.7%)

22 ಕೇರಳ — ಒಟ್ಟು ಕ್ಷೇತ್ರ: **20**; ಬಿಜೆಪಿ: **0** (13%)

23 ಆಂಧ್ರ ಪ್ರದೇಶ — ಒಟ್ಟು ಕ್ಷೇತ್ರಗಳು: **25**; ಬಿಜೆಪಿ: **0** (1%)

24 ಪುದುಚೇರಿ — ಒಟ್ಟು ಕ್ಷೇತ್ರ: **1**; (**0**.3%)

ಈಶಾನ್ಯ ರಾಜ್ಯಗಳ ಆತಂಕ ಮಣಿಪುರ ಗಲಭೆಯನ್ನು ಕೇಂದ್ರ ಸರ್ಕಾರ ಸಮರ್ಪಕವಾಗಿ ನಿಭಾಯಿಸಿಲ್ಲ ಎಂಬ ಭಾವ ಈ ಭಾಗದ ಜನರ ಮನದಲ್ಲಿದೆ. ಗಲಭೆ ಕುರಿತು ಪ್ರಧಾನಿ ಅವರ ಮೌನದ ಬಗ್ಗೆಯೂ ಆಕ್ಷೇಪಗಳಿವೆ. ಈ ಭಾಗದಲ್ಲಿ ಮಣಿಪುರ ಗಲಭೆ ವಿಷಯವನ್ನೇ ಪ್ರಮುಖ ಚುನಾವಣಾ ವಿಷಯವನ್ನಾಗಿ ಮಾಡಲು ವಿರೋಧ ಪಕ್ಷಗಳು ಸಿದ್ಧತೆ ಮಾಡಿಕೊಂಡಿವೆ. ಕಳೆದ ಚುನಾವಣೆಯಲ್ಲಿ ಬಿಜೆಪಿ ಮಣಿಪುರದಲ್ಲಿ 1, ತ್ರಿಪುರಾದಲ್ಲಿ 2 ಕ್ಷೇತ್ರಗಳಲ್ಲಿ ಗೆದ್ದಿತ್ತು. ಸಿಕ್ಕಿಂ, ಮೇಘಾಲಯ, ನಾಗಾಲ್ಯಾಂಡ್, ಮಿಜೋರಾಂನಲ್ಲಿ ಖಾತೆ ತೆರೆದಿರಲಿಲ್ಲ.

ಸಿನಿ ಬಿಟ್ಸ್

ವರ್ಷದ ದ್ವಿತೀಯಾರ್ಧ ಸಿನಿಹಬ್ಬ

ದಿಗಂತ್

2023ರ ದ್ವಿತೀಯಾರ್ಧದಲ್ಲಿ ಬೆಳ್ಳಿತೆರೆಯಲ್ಲಿ ಸಾಲು ಸಾಲು ಸಿನಿಮಾಗಳ ಹಬ್ಬ ಆರಂಭವಾಗಲಿದೆ. ಇದಕ್ಕೆ ಈ ಶುಕ್ರವಾರವೇ(ಜುಲೈ 21) ಮುನ್ನುಡಿ. ಒಟ್ಟು ಎಂಟು ಸಿನಿಮಾಗಳು ಇಂದು ರಿಲೀಸ್ ಆಗಿದ್ದು, ಹೊಸಬರ ತಂಡವೇ ತೆರೆ ಆಳಲಿದೆ.

'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ': ಕಿರಿಕ್ ಮಾಡುವ ಹಾಸ್ಟೆಲ್ ವಾರ್ಡನ್ ಕಾಟದಿಂದ ತಪ್ಪಿಸಿಕೊಳ್ಳಲು ಹುಡುಗರು ಏನೆಲ್ಲಾ ಮಾಡುತ್ತಾರೆ. ಅದರಿಂದ ಮುಂದೆ ಏನು ಸಮಸ್ಯೆ ಅನುಭವಿಸುತ್ತಾರೆ ಎನ್ನುವ ಕಥಾಹಂದರದೊಂದಿಗೆ ನಿರ್ದೇಶಕ ನಿತಿನ್ ಕೃಷ್ಣಮೂರ್ತಿ ತೆರೆಗೆ ಬಂದಿದ್ದಾರೆ. 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ತಂಡಕ್ಕೆ ರಕ್ಷಿತ್ ಶೆಟ್ಟಿ, ರಿಷಬ್ ಶೆಟ್ಟಿ, ದಿಗಂತ್, ಪವನ್ ಕುಮಾರ್ ಮುಂತಾದ ಖ್ಯಾತ ನಟರ ಸಾಥ್ ಸಿಕ್ಕಿದ್ದು, ಸಿನಿಮಾ ಮೇಲೆ ನಿರೀಕ್ಷೆ ಹೆಚ್ಚಿಸಿದೆ.

ಈ ಸಿನಿಮಾವನ್ನು ರಕ್ಷಿತ್ ಶೆಟ್ಟಿ ತಮ್ಮ 'ಪರಂವಃ ಪಿಕ್ಚರ್ಸ್' ಮೂಲಕ ಪ್ರಸ್ತುತಪಡಿಸುತ್ತಿದ್ದಾರೆ. ಈ ಚಿತ್ರವನ್ನು ವರುಣ್ ಸ್ಟುಡಿಯೋಸ್ ಹಾಗೂ ಗುಲ್ ಮೊಹರ್ ಫಿಲಂಸ್ ಬ್ಯಾನರ್‌ನಡಿ ಪ್ರಜ್ವಲ್ ಬಿ.ಪಿ, ವರುಣ್ ಕುಮಾರ್ ಗೌಡ, ನಿತಿನ್ ಕೃಷ್ಣಮೂರ್ತಿ, ಅರವಿಂದ್ ಕೆ. ಕಶ್ಯಪ್ ಬಂಡವಾಳ ಹೂಡಿ ನಿರ್ಮಿಸಿದ್ದಾರೆ.

'ಡೇವಿಡ್': ಶ್ರೇಯಸ್ ನಾಯಕನಾಗಿ ನಟಿಸಿ, ನಿರ್ದೇಶಿಸಿರುವ ಸಿನಿಮಾ ಇದು. ಧನರಾಜ ಬಾಬು ಜಿ. ಅರ್ಪಿಸಿರುವ ಈ ಚಿತ್ರವನ್ನು ಪ್ರಸಾದ್ ರುದ್ರಮುನಿ ನಿರಘಂಟಿ ನಿರ್ಮಿಸಿದ್ದಾರೆ. ಚಿತ್ರದಲ್ಲಿ ನಾಯಕಿ ಪಾತ್ರಕ್ಕೆ ಸಾರಾ ಹರೀಶ್ ಬಣ್ಣಹಚ್ಚಿದ್ದಾರೆ. ಈ ಚಿತ್ರವನ್ನು ಚಂದನ್ ಫಿಲಂಸ್ ವಿತರಣೆ ಮಾಡುತ್ತಿದೆ. ಬುಲೆಟ್ ಪ್ರಕಾಶ್ ಅವರು ನಟಿಸಿರುವ ಕೊನೆಯ ಚಿತ್ರ ಇದಾಗಿದೆ.

'ಪರಂವಃ': ಪೀಪಲ್ ವರ್ಲ್ಡ್ ಫಿಲಂಸ್ ಲಾಂಛನದಲ್ಲಿ 200 ಜನ ಸ್ನೇಹಿತರು ಸೇರಿ ನಿರ್ಮಿಸಿರುವ ಸಿನಿಮಾ ಇದು. ಪ್ರೇಮ್ ಸಿಡೇಗಲ್, ಮೈತ್ರಿ ಜೆ. ಕಶ್ಯಪ್, ಗಣೇಶ್ ಹೆಗ್ಗೋಡು ಮುಂತಾದವರು ಮುಖ್ಯ ಭೂಮಿಕೆಯಲ್ಲಿದ್ದಾರೆ. ಈ ಮಣ್ಣಿನ ಕಲೆಯಾದ ವೀರಗಾಸೆಯ ಕುರಿತಾದ ಜೊತೆಗೆ ತಂದೆ ಮಗನ ನಡುವಿನ ಭಾವನಾತ್ಮಕ ಪಯಣದ ಕುರಿತು ಚಿತ್ರದ ಕಥಾಹಂದರವಿದೆ. ಸಂತೋಷ್ ಕೈದಾಳ ಚಿತ್ರದ ನಿರ್ದೇಶಕರು.

'ದೇವರ ಕನಸು': ಪ್ರತಿಷ್ಠಿತ ಕಾನ್ ಸೇರಿದಂತೆ ಮೂವತ್ತಕ್ಕೂ ಅಧಿಕ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನವಾಗಿರುವ ಈ ಮಕ್ಕಳ ಚಿತ್ರ ಇಂದು ತೆರೆಕಂಡಿದೆ. ಸುರೇಶ್ ಲಕ್ಕೂರ್ ಚಿತ್ರದ ನಿರ್ದೇಶಕರು. 'ದೇವ' ಎನ್ನುವ ಹುಡುಗ ಕಾಣುವ ಕನಸು ಈಡೇರುವುದೇ ಇಲ್ಲವೇ? ಎಂಬುವುದು ಚಿತ್ರದ ಕಥಾಹಂದರ. ದೀಪಕ್, ಅಮೂಲ್ಯ, ಅಖುಷಿ ವೇದಿಕ ಹಾಗೂ ಮಾಕ್ ಮಣಿ ಚಿತ್ರದ ಪ್ರಮುಖಪಾತ್ರಗಳಲ್ಲಿ ನಟಿಸಿದ್ದಾರೆ' ಎಂದರು ನಿರ್ದೇಶಕ ಸುರೇಶ್ ಲಕ್ಕೂರ್.

'ಮಧುರಕಾವ್ಯ': ನಾಟಿ ವೈದ್ಯ ಮಧುಸೂದನ್ ಕ್ಯಾತನಹಳ್ಳಿ ನಿರ್ದೇಶನ ಮಾಡಿರುವ ಸಿನಿಮಾ ಇದಾಗಿದೆ. ಆಯುರ್ವೇದ ಮತ್ತು ಅಲೋಪಥಿ ವೈದ್ಯರ ನಡುವೆ ನಡೆಯುವ ಸಂಘರ್ಷದ ಕಥೆಯನ್ನು ತೆರೆಮೇಲೆ ಹೇಳುತ್ತಿದ್ದಾರೆ ಮಧುಸೂದನ್. ಅವರೇ ಈ ಚಿತ್ರದಲ್ಲಿ ನಾಯಕನಾಗಿಯೂ ನಟಿಸಿದ್ದಾರೆ. ವಿಖ್ಯಾತ್ ಕ್ರಿಯೇಶನ್ಸ್ ಮೂಲಕ ಈ ಚಿತ್ರ ನಿರ್ಮಾಣವಾಗಿದೆ.

'ನಿಮ್ಮೆಲ್ಲರ ಆಶೀರ್ವಾದ': 'ನಿಮ್ಮೆಲ್ಲರ ಆಶೀರ್ವಾದ' ಸಿನಿಮಾ ಹೊಸಬರ ಪ್ರಯತ್ನ. ವರುಣ್ ಸಿನಿ ಕ್ರಿಯೇಷನ್ಸ್‌ನಡಿ ವರುಣ್ ಹೆಗ್ಡೆ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ರವಿಕಿರಣ್ ಚಿತ್ರದ ನಿರ್ದೇಶಕರು. ಕೌಟುಂಬಿಕ ಕಥಾಹಂದರದ ಈ ಸಿನಿಮಾದಲ್ಲಿ ಪೊಲೀಸ್ ಅಧಿಕಾರಿಯೊಬ್ಬರ ವೃತ್ತಿ ಬದುಕು ಮತ್ತು ವೈಯಕ್ತಿಕ ಬದುಕಿನ ದಿನಚರಿಯನ್ನು ವಿಭಿನ್ನವಾಗಿ ಕಟ್ಟಿಕೊಡಲಾಗಿದೆ. ಈ ಚಿತ್ರದ ಮೂಲಕ ಪ್ರತೀಕ್ ಶೆಟ್ಟಿ ನಾಯಕನಾಗಿ ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. ಪಾಯಲ್ ರಾಧಾಕೃಷ್ಣ ನಾಯಕಿಯಾಗಿ ನಟಿಸಿದ್ದಾರೆ.

'ಅಂಬುಜ': ನೈಜ ಘಟನೆ ಆಧಾರಿತ 'ಅಂಬುಜ' ಸಿನಿಮಾ ಮಹಿಳಾ ಪ್ರಧಾನ ಚಿತ್ರ. ಶುಭಾ ಪೂಂಜಾ, ರಜಿನಿ ಈ ಚಿತ್ರದಲ್ಲಿ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ಶ್ರೀನಿ ಹನುಮಂತರಾಜು ಈ ಚಿತ್ರದ ನಿರ್ದೇಶಕರು. ಚಿತ್ರದಲ್ಲಿ ಅಪರಾಧ ವರದಿಗಾರ್ತಿಯಾಗಿ ಶುಭಾ ಪೂಂಜಾ ನಟಿಸಿದ್ದಾರೆ. ರಜಿನಿ ಅವರಿಗೆ ಇದು ಚೊಚ್ಚಲ ಸಿನಿಮಾ. ದೀಪಕ್ ಸುಬ್ರಹ್ಮಣ್ಯ ನಾಯಕನ ಪಾತ್ರಕ್ಕೆ ಬಣ್ಣಹಚ್ಚಿದ್ದು, ಕಾಶಿನಾಥ್ ಡಿ ಮಡಿವಾಳರ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಕಬ್ಬಿಣದ ರಾಡು ಹಿಡಿದ ವ್ಯಕ್ತಿಯೊಬ್ಬ ಸಾಯಿ ಬಾಬ ಅವರ ಮೂರ್ತಿಯನ್ನು ಒಡೆದು ಹಾಕಲು ಯತ್ನಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. 'ಸಾಯಿ ಬಾಬ ಅವರು ಮುಸಲ್ಮಾನ. ಅವನು ದೇವರಲ್ಲ. ಅವನ ಬದಲು ಚಂದ್ರಶೇಖರ್ ಆಜಾದ್, ಭಗತ್ ಸಿಂಗ್ ಅವರನ್ನು ಪೂಜಿಸಿ' ಎಂದು ಆ ವ್ಯಕ್ತಿ ಹೇಳುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ. ಈ ಕೃತ್ಯ ಎಸಗಿದವನು ಮುಸ್ಲಿಂ ವ್ಯಕ್ತಿ ಎಂದು ಹಲವರು ಪೋಸ್ಟ್ ಹಂಚಿಕೊಂಡಿದ್ದಾರೆ. ಆದರೆ ಇದು ಸುಳ್ಳು ಸುದ್ದಿ.

ಲಲನ್‌ಟಾಪ್ ಎನ್ನುವ ವಾಹಿನಿ ಈ ವಿಡಿಯೊವನ್ನು 2021ರ ಮಾರ್ಚ್ 31ರಂದು ಪ್ರಕಟಿಸಿದೆ. 'ಈ ಘಟನೆಯು ದೆಹಲಿಯ ಶಾಪುರದಲ್ಲಿ ನಡೆದಿದೆ. ವ್ಯಕ್ತಿಯು ಹಿಂದೂ ತೀವ್ರವಾದಿಯಾಗಿದ್ದು, ಸಾಯಿ ಬಾಬಾ ಅವರನ್ನು ಮುಸ್ಲಿಂ ಎಂದು ಆತ ನಂಬಿದ್ದ. ಆದ್ದರಿಂದ ಈ ಕೃತ್ಯ ಎಸಗಿದ್ದಾನೆ. ಸಾಯಿ ಬಾಬ ಮೂರ್ತಿಯನ್ನು ವ್ಯಕ್ತಿಯು ಒಡೆದು ಹಾಕಿದ್ದಾನೆ. ಆದರೆ, ಮಾಹಿತಿಯನ್ನು ತಿರುಚಿ ವಿಡಿಯೊ ಹಂಚಿಕೊಳ್ಳಲಾಗುತ್ತಿದೆ' ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸಂಗೀತ ಸಾಕ್ಷಾತ್ಕಾರ

ಮೋಹನಾನಂದಭೈರವಿ ಶಂಕರಾಭರಣ |
ಶಾಹನ ಕುರಂಜಿ ಕೇದಾರ ಕಾಪಿಗಳ ||
ಮೋಹ ಸರ್ವಸ್ವಗಳ ರಾಗಾಬ್ಧಿಯೋ ಬ್ರಹ್ಮ |
ಗಾಹಿಸದರೊಳಗೆ ನೀಂ – ಮಂಕುತಿಮ್ಮ || **932** ||

ಪದ-ಅರ್ಥ: ಮೋಹನಾನಂದ ಭೈರವಿ = ಮೋಹನ + ಆನಂದ ಭೈರವಿ, ರಾಗಾಬ್ಧಿಯೋ = ರಾಗ + ಅಬ್ಧಿಯೋ(ಸಮುದ್ರವೋ), ಗಾಹಿಸದರೊಳಗೆ = ಗಾಹಿಸು (ತಲ್ಲೀನನಾಗು) + ಅದರೊಳಗೆ.

ವಾಚ್ಯಾರ್ಥ: ಮೋಹನ, ಆನಂದ ಭೈರವಿ, ಶಂಕರಾಭರಣ, ಶಹಾನ, ಕುರಂಜಿ, ಕೇದಾರ, ಕಾಪಿ ಮುಂತಾದ ರಾಗಗಳ, ಮೋಹಸರ್ವಸ್ವಗಳ ಸಮುದ್ರವೇ ಬ್ರಹ್ಮ. ನೀನು ಅದರಲ್ಲಿ ತಲ್ಲೀನನಾಗು.

ವಿವರಣೆ: ಮನೋಲ್ಲಾಸಕ್ಕೆ, ಜೀವೋತ್ಕರ್ಷಕ್ಕೆ ಸಂಗೀತ ಒಂದು ಅತ್ಯುತ್ತಮ ಮಾರ್ಗ ಎಂದು ತಿಳಿಸಿದ ಹಿಂದಿನ ಕಗ್ಗದ ಮುಂದುವರೆದ ಭಾಗ ಇದು. ಬ್ರಹ್ಮನೇ ಸಕಲ ರಾಗಗಳ ಸಮುದ್ರವಿದ್ದಂತೆ. ಯಾಕೆಂದರೆ ಎಲ್ಲ ರಾಗಗಳೂ ಭಗವಂತನಿಂದಲೇ ಸೃಷ್ಟಿಯಾಗಿ, ಅವನಲ್ಲೇ ಲಯವಾಗುವಂತಹವು. ಡಾ. ಎಚ್. ಕೆ. ರಂಗನಾಥರವರು ರಾಗ ಬ್ರಹ್ಮಾನುಭವವಾಗುವ ಒಂದು ಸುಂದರ ಘಟನೆಯನ್ನು ವಿವರಿಸುತ್ತಾರೆ. ಧಾರವಾಡದಲ್ಲಿ ಅದೊಂದು ಏಕರಾಗ ಸಭೆ. ಹಿಂದೋಳ ಅಥವಾ ಮಾಲಕಂಸ್ ರಾಗದ ಮೇಲೆ ಹತ್ತಾರು ಮಹಾನ್ ಕಲಾವಿದರು ತಮ್ಮ ಪ್ರತಿಭೆಯನ್ನು ತೋರಿಸಿ ರಾಗ ವಿಸ್ತಾರ ಮಾಡುವ ಕಾರ್ಯಕ್ರಮ. ಭಾರತದ ಸರ್ವಶ್ರೇಷ್ಠಕಲಾವಿದರೆಲ್ಲ ಸೇರಿದ ಗಂಧರ್ವ ಸಭೆ ಅದು. ಅಲ್ಲಿ ಹಿಂದೆ ಮಂಡಿಗಳ ನಡುವೆ ತಲೆ ಇಟ್ಟು ಕುಳಿತು ಕೇಳುತ್ತಿದ್ದರು ವಝೆ ಬುವಾ (ಶಿವರಾಮ ರಾಮಕೃಷ್ಣ ವಝೆ). ಅವರಿಗೆ ಮನೆ-ಮಠವಿಲ್ಲ, ಖಾದೀ ಬಟ್ಟೆಯನ್ನು ಶುಚಿಗೊಳಿಸುವರಲ್ಲ, ಮುಖ ತೊಳೆಯದಿದ್ದರೂ ಅಡ್ಡಿಯಿಲ್ಲ. ಒಟ್ಟು ಅಸ್ತವ್ಯಸ್ಥ ಮನುಷ್ಯ. ದೊಡ್ಡವರೆಲ್ಲ ಹಾಡಿ ಮಲಗಿಸಿದ ಮೇಲೆ, ವಝೆ ಬುವಾ ತಾವೇ ಎದ್ದು ವೇದಿಕೆಗೆ ಬಂದರು. ದೊಡ್ಡವರ ಸಂಗೀತ ಕೇಳಿದ ಮೇಲೆ ಇವರದೇನು ಎಂಬುದು ನೆರೆದ ಜನರ ಭಾವನೆ. ವಝೆ ಬುವಾ ಎರಡು ತಂಬೂರಿಗಳ ಝೆಂಕಾರದಲ್ಲಿ ಲೀನಗೊಂಡು, ಹಂತಹಂತವಾಗಿ ಮೇಲೇರಿ, ಕೆಳಗಿಳಿದು, ಹಾಸುಬೀಸಾಗಿ ವಿಜೃಂಭಿಸಿದ ವಝೆ ಬುವಾರ ಶ್ರೀಕಂಠನಾದ, ಮಾಲಕಂಸ್ ರಾಗದ ಸಾರಸರ್ವಸ್ವವನ್ನು ಹಿಳಿಸಿ, ಹೊನಲಾಗಿ, ಗಂಗಾ ಪ್ರವಾಹವಾಯಿತು.ಕಾಲದ ಪರವೆ ಕಳೆದು, ಕುಳಿತವರು ಪ್ರತಿಮೆಗಳಾದರು. ಈ ಗಂಧರ್ವಗಾಯನವನ್ನು ಕೇಳುತ್ತ ಕೇಳುತ್ತ, ತಬಲಾ, ಸಾರಂಗೀ ಸಾಥೀದಾರರು ಕೈಯಾಡದೆ ನಿಲ್ಲಿಸಿಬಿಟ್ಟರು. ವಝೆ ಬುವಾಗೆ ಇದಾವುದೂ ತಿಳಿಯದು. ಝೇಂಕರಿಸುತ್ತಿದ್ದ ಎರಡು ತಂಬೂರಿಗಳ ನಡುವೆ, ನಭದೆತ್ತರಕ್ಕೆ ಬೆಳೆದು ನಿಂತು, ಕಣ್ಣು ಮುಚ್ಚಿ ಮಹದಾನಂದದಲ್ಲಿ ತೇಲುತ್ತಿದ್ದ ವಝೆ ಬುವಾರಂ ದಿವ್ಯ ಮನೋಹರ ಸರ್ವಸುಂದರ ರೂಪವನ್ನು, ಸಂಗೀತದ ಪರಮೋನ್ನತಿಯ ಸಾಕಾರವನ್ನು ಜನ ಕಂಡರು. ಸಭೆಯಲ್ಲಿದ್ದ ಬೇಂದ್ರೆಯವರು ಕಣ್ಣೊರೆಸಿಕೊಳ್ಳುತ್ತ ನುಡಿದರು – ಇದೇ ಸಂಗೀತ ಸಮಾಧಿ, ಸಾಕ್ಷಾತ್ಕಾರ ! ಕಗ್ಗ ಹೇಳುತ್ತದೆ, ಹೀಗೆ ರಾಗಗಳಲ್ಲಿ ತಲ್ಲೀನನಾಗಿ, ಮೈಮರೆತಾಗಲೇ ಬ್ರಹ್ಮಸಾಕ್ಷಾತ್ಕಾರ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜುಲೈ 21, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧ ತೃತೀಯ ಗಂ. 06-59 ನಕ್ಷತ್ರ: ಮಘಾ ಗಂ. 13-58 ಯೋಗ: ವ್ಯತೀಪಾತ ಗಂ. 11-24 ಕರಣ: ಗರ ಗಂ. 06-59, ಕರ್ಕಾಟಕ ಮಾಸದ 04 ನೇ ದಿನ, ಮಳೆನಕ್ಷತ್ರ: ಪುಷ್ಯ 1. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-17 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 02 ಮೊಹರಮ್
ದಿನ ವಿಶೇಷ : ಆಡಿ ಪೂರಮ್ (ದ.ಭಾರತ)
ಅದೃಷ್ಟ ಸಂಖ್ಯೆ : 3, 11

ಮೇಷ: ಸಾಮರ್ಥ್ಯ, ದಕ್ಷತೆ, ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಅತ್ಯಂತ ಜವಾಬ್ದಾರಿಯುತ ಹುದ್ದೆ ಸಿಗಲಿದೆ. ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ. ತುರ್ತು ಕೆಲಸಗಳ ನಿರ್ವಹಣೆ ಹೆಚ್ಚಾಗಲಿದೆ.

ವೃಷಭ: ಬದಲಾವಣೆ ಬಯಸಿದಲ್ಲಿ ಕಾಯುವುದು ಅವಶ್ಯ. ಉದ್ಯೋಗದಲ್ಲಿನ ಪ್ರಯತ್ನಗಳು ವ್ಯಕ್ತಿಯೊಬ್ಬರ ಬೆಂಬಲದಿಂದ ನೆರವೇರುವುದು. ಆರೋಗ್ಯ ಭಾಗ್ಯವಿರುವುದು. ಪಾಲುದಾರರೊಂದಿಗೆ ಎಚ್ಚರಿಕೆಯಿಂದ ವ್ಯವಹರಿಸಿ.

ಮಿಥುನ: ಕುಟುಂಬದಲ್ಲಿ ನಡೆದ ದುರ್ಘಟನೆಗಳಿಂದ ಮನಸ್ಸು ದುರ್ಬಲವಾಗಬಹುದು. ಜವಳಿ ವ್ಯಾಪಾರಿಗಳಿಗೆ ಲಾಭ ಉಂಟಾಗಲಿದೆ. ಆಂಜನೇಯನ ಆರಾಧನೆಯಿಂದ ಭಯವನ್ನು ಹೋಗಲಾಡಿಸಿಕೊಳ್ಳಬಹುದು.

ಕರ್ಕಾಟಕ: ಮನೆಯಲ್ಲಿನ ಆಗುಹೋಗುಗಳ ಬಗ್ಗೆ ಗಮನ ನೀಡಬೇಕಾಗುವುದು. ಆಫೀಸಿನಲ್ಲಿ ಉಂಟಾಗಿದ್ದ ಸಮಸ್ಯೆಗಳು ತನ್ನಿಂತಾನೆ ಬಗೆಹರಿಯಲಿದೆ. ದೃಢ ನಿರ್ಧಾರದಿಂದ ಒಳ್ಳೆಯ ಫಲಿತಾಂಶ ಪಡೆಯುವಿರಿ.

ಸಿಂಹ: ಇನ್ನೊಬ್ಬರೊಂದಿಗೆ ಹೋಲಿಸಿಕೊಂಡು ಜೀವನ ನಡೆಸುವುದು ಸರಿಯಲ್ಲ. ಸ್ವಂತ ಉದ್ಯೋಗದಲ್ಲಿ ಒಳ್ಳೆಯ ಅಭಿವೃದ್ಧಿ ಹೊಂದುವಿರಿ. ಮಕ್ಕಳ ಜತೆ ಸಮಾರಂಭಗಳಲ್ಲಿ ಭಾಗವಹಿಸುವಿರಿ.

ಕನ್ಯಾ: ದಿನಚರಿಯ ಮೇಲೆ ಜುಗುಪ್ಸೆ ಬರಬಹುದು. ಅಧಿಕವಾಗಿ ಎಣ್ಣೆಯಲ್ಲಿ ಕರಿದ ಪದಾರ್ಥ ದೇಹ ಪ್ರಕೃತಿಗೆ ಸರಿ ಹೊಂದುವುದಿಲ್ಲ. ಮಕ್ಕಳನ್ನು ಮಳೆಯಲ್ಲಿ ನೆನೆಯದಂತೆ ಹಾಗೂ ಆಡದಂತೆ ನೋಡಿಕೊಳ್ಳುವುದೇ ಸವಾಲಾಗುವುದು.

ತುಲಾ: ಈ ದಿನ ಗ್ರಹಗಳು ಪೂರಕವಾಗಿದೆ, ನಿಮ್ಮಿಚ್ಛೆಯಂತೆ ಚಟುವಟಿಕೆಗಳು ನಡೆಯುವುದು . ತೆರಿಗೆ ಇಲಾಖೆ ಸಿಬ್ಬಂದಿಗಳಿಗೆ ಕೆಲಸವಿರುವುದು. ಶಿಸ್ತುಬದ್ಧ ಜೀವನ ಶ್ಲಾಘಿಸಲ್ಪಡುವುದು.

ವೃಶ್ಚಿಕ: ಹಣಕಾಸಿನ ವಿಚಾರದಲ್ಲಿ ಭವಿಷ್ಯದ ಕುರಿತು ಯೋಚಿಸಿ ನಿರ್ಧಾರ ಕೈಗೊಳ್ಳುವುದರಿಂದ ಮುಂದಿನ ಜೀವನದ ದಿನಗಳು ನೆಮ್ಮದಿದಾಯಕವಾಗಿ ಇರುವುದು. ಮುಂದಿನ ಹಾದಿ ಏನೆಂಬುದು ಸ್ಪಷ್ಟವಾಗಿರಲಿ.

ಧನು: ಆಯುರ್ವೇದದ ಔಷಧಿಯ ಸೇವನೆಯಿಂದ ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.ಬಯಸಿದ ಕ್ಷೇತ್ರದಲ್ಲಿ ಹೊಸ ತಿರುವನ್ನು ಪಡೆಯುವಲ್ಲಿ ಯಶಸ್ವಿಯಾಗುವಿರಿ. ರಫ್ತು ಕೆಲಸಗಳಲ್ಲಿ ಪ್ರಗತಿ ಕಾಣುವಿರಿ.

ಮಕರ: ದೈಹಿಕ ಮತ್ತು ಆರ್ಥಿಕ ಶಕ್ತಿ ವ್ಯಯಿಸದೇ ಸಮಯಕ್ಕಾಗಿ ಕಾದು, ಸಿಕ್ಕ ಸಮಯದಲ್ಲಿ ಕಾರ್ಯವೆಸಗುವ ಚಾಣಾಕ್ಷತನ ನಿಮ್ಮಲ್ಲಿ ಇರುವುದು. ಅದನ್ನು ನೀವೆ ಕಂಡುಕೊಳ್ಳಿರಿ. ಎಲ್ಲಾ ಕಾರ್ಯಗಳು ಶುಭವಾಗುವುದು.

ಕುಂಭ: ಕೆಲವು ಘಟನಾವಳಿಗಳು ನಿಮಗೆ ಶಕುನಗಳಂತೆ ಕಂಡು ಕೆಲವು ದುರ್ಘಟನೆಗಳಿಂದ ಪಾರಾಗುವಿರಿ. ಅಪರಿಚಿತರೊಬ್ಬರ ಅನವಶ್ಯಕ ಮಾತುಗಳು ನಿಮ್ಮ ತಾಳ್ಮೆ ಕೆಡಿಸುತ್ತದೆ. ಅತಿಥಿ ಸತ್ಕಾರ ಮಾಡುವಿರಿ.

ಮೀನ: ಮೂಕಪ್ರೇಕ್ಷಕರಂತೆ ಇರುವ ನಿಮ್ಮ ಗುಣದಿಂದಾಗಿ ಇಂದು ಬರುವ ಸಮಸ್ಯೆಗಳಿಂದ ತಪ್ಪಿಸಿಕೊಳ್ಳುವಿರಿ. ಹಳೆಯ ಭಾವಚಿತ್ರಗಳನ್ನು ನೋಡಿ ಆ ಕ್ಷಣಗಳನ್ನು ನೆನಪಿಸಿಕೊಳ್ಳುವಿರಿ.

ಪದಬಂಧ 5386

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹದಿನಾಲ್ಕು ಸೇರಿನ ಒಂದು ಅಳತೆ (4)
3.ನಡುವೆ ಬಲವಿಟ್ಟಾಗ ಕಾಣಿಸಿದ ಹಣ (4)
5.ಇಪ್ಪತ್ನಾಲ್ಕು ಗಂಟೆಯ ಅವಧಿ (3)
6.ಒಳ್ಳೆಯ ಸೂಕ್ತಿ (4)
8.ರಕ್ತವನ್ನು ಹೀಗೂ ಹೇಳುವರು (3)
10.ಮುಂಗುಸಿ ಇಲ್ಲಿದೆ (3)
12.ತಮ್ಮ ತೋರಿದ ಬೇಧಭಾವ (4)
15.ವಾಗ್ಮಿ ಇಲ್ಲಿದ್ದಾನೆ (3)
16.ಈ ಪರಿ ಕಾಣುತ್ತಿರುವ ಅಳತೆ (4)
17.ಮರದ ಬೊಂಬೆ ಕೆತ್ತನೆ ಕೆಲಸಗಾರ (4)

ಮೇಲಿಂದ ಕೆಳಕ್ಕೆ

1.ಇನ್ನೂ ಕರು ಹಾಕದ ಹಸು (3)
2.ಬಿದಿಗೆ ನಂತರದ ತಿಥಿ ಉಲ್ಟಾ ಕಾಣುತ್ತಿದೆ (3)
3.ಹೆಪ್ಪಾದ ಹಾಲು (3)
4.ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ! (2)
7.ಹೆಂಡತಿಯ ಸೋದರ (5)
9.ಬೆಲೆಬಾಳುವ ಮಣಿಗಳನ್ನು ಕುಂದಣಿಸಿದ್ದು (5)
11.ಲವನು ತಂದಿರುವ ಉಪ್ಪು (3)
12.ಒಣಗಿದ ವಸ್ತು (3)
13.ಹೊಟ್ಟೆಕಿಚ್ಚಿದು (3)
14.ಮಂಡೂಕವಿರುವ ಬಾವಿ! (2)

1			2	■	3			4
	■	■	5			■	■	
6	7			■	8		9	■
■		■	■	■	■	■		■
■		■	■	■	■	■		■
■		■	■	■	■	■		■
■	10		11	■	12			13
14	■	■	15			■	■	
16				■	17			

5385ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭಾರತ 3.ಶಮನ
5.ಮಾರ್ಗದರ್ಶಕ 6.ಶರ
8.ಪಾಕ 9.ಅಂಕೆ
10.ಕದ 14.ಜನಜನಿತ
15.ಕಸ್ತೂರಿ 16.ಕಾಣಿಕೆ

ಮೇಲಿಂದ ಕೆಳಕ್ಕೆ:
1.ಭಾವಾವೇಶ 2.ತಮಾಲ
3.ಶಕಟ 4.ನಕ್ಷತ್ರಕ
7.ರಸಿಕೆ 8.ಪಾತಕ
9.ಅಂಗಾರಕ 11.ದಬ್ಬಾಳಿಕೆ
12.ಗುಜರಿ 13.ರತಕಾ

ಸುಡೊಕು 5772

2		9			7	1		4
				3				
5		7	4		6	2		3
					5		3	1
	5	1		8			2	
3			9					8
		2		1		8		5
9			7		8			
	8			2		4		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5771 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಬಾಸ್ಮತಿ, ಕುಚ್ಚಲಕ್ಕಿ ವಿದೇಶಕ್ಕೆ ರವಾನಿಸಲು ಅಡ್ಡಿಯಿಲ್ಲ

ಅಕ್ಕಿ ರಫ್ತಿಗೆ ಕೇಂದ್ರ ನಿಷೇಧ

ನವದೆಹಲಿ (ಪಿಟಿಐ): ಬಾಸ್ಮತಿ ಹೊರತುಪಡಿಸಿ ಇತರ ಬಗೆಯ ಅಕ್ಕಿ ರಫ್ತನ್ನು ಕೇಂದ್ರ ಸರ್ಕಾರವು ನಿಷೇಧಿಸಿದೆ. ಇದು ಗುರುವಾರದಿಂದಲೇ ಜಾರಿಗೆ ಬಂದಿದೆ. ದೇಶದಲ್ಲಿ ಅಕ್ಕಿಯ ಪೂರೈಕೆ ಹೆಚ್ಚಿಸುವ ಹಾಗೂ ಮುಂಬರುವ ಹಬ್ಬಗಳ ಸಂದರ್ಭದಲ್ಲಿ ರಿಟೇಲ್ ಮಾರುಕಟ್ಟೆಯಲ್ಲಿ ಬೆಲೆಯನ್ನು ನಿಯಂತ್ರಣದಲ್ಲಿ ಇರಿಸುವ ಉದ್ದೇಶದಿಂದ ಕೇಂದ್ರವು ಈ ಕ್ರಮ ಕೈಗೊಂಡಿದೆ.

ಕುಚ್ಚಲಕ್ಕಿ ಹಾಗೂ ಬಾಸ್ಮತಿ ಅಕ್ಕಿ ರಫ್ತಿಗೆ ನಿರ್ಬಂಧ ಇಲ್ಲ ಎಂದು ಕೇಂದ್ರ ಆಹಾರ ಸಚಿವಾಲಯವು ಹೇಳಿದೆ. ಬಾಸ್ಮತಿ ಹೊರತುಪಡಿಸಿದ ಅಕ್ಕಿಯ ಪಾಲು ದೇಶದಿಂದ ರಫ್ತಾಗುವ ಅಕ್ಕಿಯಲ್ಲಿ ಶೇಕಡ 25ರಷ್ಟಿದೆ. ಭಾರತವು ಥೈಲ್ಯಾಂಡ್, ಇಟಲಿ, ಸ್ಪೇನ್, ಶ್ರೀಲಂಕಾ ಮತ್ತು ಅಮೆರಿಕಕ್ಕೆ ಈ ಅಕ್ಕಿಯನ್ನು ಹೆಚ್ಚಿನ ಪ್ರಮಾಣದಲ್ಲಿ ರವಾನಿಸುತ್ತದೆ.

'ದೇಶಿ ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆಯು ಏರಿಕೆ ಕಾಣುತ್ತಿದೆ. ಒಂದು ವರ್ಷದಲ್ಲಿ ಅಕ್ಕಿ ಬೆಲೆ ಶೇಕಡ 11.5ರಷ್ಟು ಹೆಚ್ಚಾಗಿದೆ. ಕಳೆದ ಒಂದು ತಿಂಗಳಲ್ಲಿ ಶೇ 3ರಷ್ಟು ಏರಿಕೆ ಕಂಡಿದೆ' ಎಂದು ಸಚಿವಾಲಯದ ಹೇಳಿಕೆಯಲ್ಲಿ ವಿವರಿಸಲಾಗಿದೆ.

ಅಂಕಿ-ಅಂಶಗಳು

11.5% ಒಂದು ವರ್ಷದಲ್ಲಿ ಅಕ್ಕಿ ಬೆಲೆಯಲ್ಲಿನ ಏರಿಕೆ ಪ್ರಮಾಣ

3% ಒಂದು ತಿಂಗಳಲ್ಲಿ ಅಕ್ಕಿ ಬೆಲೆ ಏರಿಕೆ ಪ್ರಮಾಣ

ಬಾಸ್ಮತಿ ಹೊರತುಪಡಿಸಿದ ಅಕ್ಕಿಯ ರಫ್ತಿನ ಮೇಲೆ 2022ರ ಸೆಪ್ಟೆಂಬರ್‌ನಲ್ಲಿ ಶೇಕಡ 20ರಷ್ಟು ತೆರಿಗೆ ವಿಧಿಸಲಾಗಿತ್ತು. ಇದರ ಉದ್ದೇಶವು ದೇಶಿ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಣ ಮಾಡುವುದೇ ಆಗಿತ್ತು. ಹೀಗಿದ್ದರೂ, 2022–23ನೆಯ ಹಣಕಾಸು ವರ್ಷದ ಸೆಪ್ಟೆಂಬರ್–ಮಾರ್ಚ್ ಅವಧಿಯಲ್ಲಿ ಅಕ್ಕಿಯ ರಫ್ತು 42.12 ಲಕ್ಷ ಟನ್‌ಗೆ ಹೆಚ್ಚಾಯಿತು. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ 33.66 ಲಕ್ಷ ಟನ್ ಇತ್ತು.

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ 15.54 ಲಕ್ಷ ಟನ್ ಅಕ್ಕಿಯನ್ನು ರಫ್ತು ಮಾಡಲಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ರಫ್ತು 11.55 ಲಕ್ಷ ಟನ್ ಮಾತ್ರ ಆಗಿತ್ತು.

'ಎಲ್–ನಿನೊ ಪರಿಣಾಮ, ಅಕ್ಕಿಯನ್ನು ಬೆಳೆಯುವ ದೇಶಗಳಲ್ಲಿನ ಹವಾಮಾನ ವೈಪರೀತ್ಯದ ಕಾರಣದಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಕ್ಕಿಗೆ ಬೆಲೆ ಹೆಚ್ಚಾಗಿರುವುದು ರಫ್ತು ಜಾಸ್ತಿ ಆಗುತ್ತಿರುವುದಕ್ಕೆ ಕಾರಣ ಎನ್ನಬಹುದು' ಎಂದು ತಿಳಿಸಿದೆ.

ಭಾರತದಿಂದ ರಫ್ತಾಗುವ ಅಕ್ಕಿಯಲ್ಲಿ ಹೆಚ್ಚಿನ ಪಾಲು ಇರುವುದು ಬಾಸ್ಮತಿ ಹಾಗೂ ಕುಚ್ಚಲಕ್ಕಿಯದ್ದು. ಈ ಬಗೆಯ ಅಕ್ಕಿ ರಫ್ತಿಗೆ ನಿರ್ಬಂಧ ಇಲ್ಲ. ಹೀಗಾಗಿ ರೈತರಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಿಗುತ್ತಿರುವ ಆಕರ್ಷಕ ಬೆಲೆಯ ಪ್ರಯೋಜನ ದೊರೆಯಲಿದೆ ಎಂದು ಸಚಿವಾಲಯ ಹೇಳಿದೆ.

ಮೌಲ್ಯಯುತ ಕಂಪನಿ: ಎರಡನೇ ಸ್ಥಾನಕ್ಕೆ ಎಚ್‌ಡಿಎಫ್‌ಸಿ ಬ್ಯಾಂಕ್

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯ ಮಾರುಕಟ್ಟೆ ಮೌಲ್ಯದ ಆಧಾರದಲ್ಲಿ ದೇಶದ ಅತಿದೊಡ್ಡ ಕಂಪನಿಗಳ ಪಟ್ಟಿಯಲ್ಲಿ ಎರಡನೆಯ ಸ್ಥಾನಕ್ಕೆ ಎಚ್‌ಡಿಎಫ್‌ಸಿ ಬ್ಯಾಂಕ್ ಗುರುವಾರ ಏರಿಕೆ ಕಂಡಿದೆ. ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಮೂರನೇ ಸ್ಥಾನಕ್ಕೆ ಇಳಿಕೆ ಕಂಡಿದೆ.

ಗುರುವಾರದ ವಹಿವಾಟಿನ ಅಂತ್ಯದ ವೇಳೆಗೆ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯವು ₹12.72 ಲಕ್ಷ ಕೋಟಿಗೆ ತಲುಪಿತು. ಟಿಸಿಎಸ್‌ನ ಮಾರುಕಟ್ಟೆ ಮೌಲ್ಯಕ್ಕಿಂತಲೂ ₹5,826.95 ಕೋಟಿ ಹೆಚ್ಚು ಇದು. ಟಿಸಿಎಸ್ ಮಾರುಕಟ್ಟೆ ಮೌಲ್ಯ ₹12.66 ಲಕ್ಷ ಕೋಟಿ ಇದೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರು ಮೌಲ್ಯವು ಬಿಎಸ್‌ಇನಲ್ಲಿ ಶೇ 0.22ರಷ್ಟು ಹೆಚ್ಚಾಗಿ ₹1,688.50ಕ್ಕೆತಲುಪಿತು.

ಟಿಸಿಎಸ್ ಷೇರು ಮೌಲ್ಯ ಶೇ 0.25ರಷ್ಟು ಇಳಿಕೆ ಕಂಡು ₹3,462ಕ್ಕೆ ತಲುಪಿತು.

ಅತ್ಯಂತ ಮೌಲ್ಯಯುತ ಕಂಪನಿಗಳ ಸಾಲಿನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮೊದಲ ಸ್ಥಾನದಲ್ಲಿದೆ. ಇದರ ಮಾರುಕಟ್ಟೆ ಮೌಲ್ಯವು ₹17.72 ಲಕ್ಷ ಕೋಟಿ.

ಐಟಿಸಿ ಮೌಲ್ಯ ವೃದ್ಧಿ: ಐಟಿಸಿ ಷೇರು ಮೌಲ್ಯವು ಗುರುವಾರ ಶೇ 3ರವರೆಗೆ ಏರಿಕೆ ಕಂಡಿತು. ಇದರಿಂದಾಗಿ ಮಾರುಕಟ್ಟೆ ಮೌಲ್ಯವು ₹17,124 ಕೋಟಿಯಷ್ಟು ಹೆಚ್ಚಾಗಿ ₹6.12 ಲಕ್ಷ ಕೋಟಿಗೆ ತಲುಪಿತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಷೇರುಪೇಟೆ ವಹಿವಾಟು ▲ 474



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,833
ಇಂದಿನ ಅಂತ್ಯ	19,979
▲	146
ದಿನದ ಗರಿಷ್ಠ	19,991

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹487

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹252-470
ದ್ವಿತಳಿ (ಬಿ.ವಿ)	₹307-588

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹127

ಜಾಗತಿಕ ಅನಿಶ್ಚಿತ ಸ್ಥಿತಿ, ಯೋಜನೆ ವಿಳಂಬ ● ವರಮಾನ ಮುನ್ನೋಟ ಭಾರಿ ಇಳಿಕೆ

ಇನ್ಫೊಸಿಸ್ ಲಾಭ ₹5,945 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಐ.ಟಿ. ಸೇವಾ ವಲಯದ ಎರಡನೆಯ ಅತಿದೊಡ್ಡ ಕಂಪನಿ ಇನ್ಫೊಸಿಸ್, ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹5,945 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯ ಲಾಭಕ್ಕೆ (₹5,362 ಕೋಟಿ) ಹೋಲಿಸಿದರೆ ಶೇ 11ರಷ್ಟು ಏರಿಕೆ ಕಂಡುಬಂದಿದೆ.

ಆದರೆ, ಮಾರ್ಚ್ ತ್ರೈಮಾಸಿಕಕ್ಕೆ (₹6,134 ಕೋಟಿ) ಹೋಲಿಸಿದರೆ ಲಾಭವು ಶೇ 3.1ರಷ್ಟು ಇಳಿಕೆ ಆಗಿದೆ. ಜೂನ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನವು ಶೇ 10ರಷ್ಟು ಹೆಚ್ಚಾಗಿ ₹37,933 ಕೋಟಿಗೆ ಏರಿಕೆ ಕಂಡಿದೆ.

ಇಡೀ ಹಣಕಾಸು ವರ್ಷದ ವರಮಾನದಲ್ಲಿ ಆಗಬಹುದಾದ ಹೆಚ್ಚಳವು ಶೇ 1ರಿಂದ ಶೇ 3.5ರಷ್ಟು ಎಂದು ಕಂಪನಿ ಹೇಳಿದೆ. ವರಮಾನವು ಶೇ 4ರಿಂದ ಶೇ 7ರವರೆಗೆ ಹೆಚ್ಚಾಗುವ ಅಂದಾಜನ್ನು ಕಂಪನಿ ಈ ಮೊದಲು ಮಾಡಿತ್ತು. ಅಂದರೆ, ವರಮಾನ ಹೆಚ್ಚಳದ ಅಂದಾಜನ್ನು ಕಂಪನಿ ತಗ್ಗಿಸಿದೆ.

ಮುಖ್ಯಾಂಶಗಳು

- ಮಾರುಕಟ್ಟೆ ನಿರೀಕ್ಷೆಗಿಂತಲೂ ಕಡಿಮೆ ಲಾಭ
- ಕಾರ್ಯಾಚರಣಾ ವೆಚ್ಚ ಹೆಚ್ಚಳ

₹18,860 ಕೋಟಿಯಷ್ಟು ದೊಡ್ಡ ಮೊತ್ತದ ಒಪ್ಪಂದಗಳು ಈ ತ್ರೈಮಾಸಿಕದಲ್ಲಿ ಆಗಿವೆ. ಭವಿಷ್ಯದ ಬೆಳವಣಿಗೆಗೆ ಉತ್ತಮ ಅಡಿಪಾಯ ಹಾಕಲು ಇದು ನೆರವಾಗಲಿದೆ
ಸಲೀಲ್ ಪಾರೇಖ್, ಇನ್ಫೊಸಿಸ್ ಸಿಇಒ

ಕಂಪನಿಯ ಲಾಭವು ಮಾರುಕಟ್ಟೆ ತಜ್ಞರ ನಿರೀಕ್ಷೆಯ ಮಟ್ಟವನ್ನು ತಲುಪಿಲ್ಲ. ರಿಫಿನಿಟಿವ್ ಸಂಸ್ಥೆಯ ಪ್ರಕಾರ, ಕಂಪನಿಯು ₹6,141 ಕೋಟಿ ಲಾಭ ಗಳಿಸುವ ಅಂದಾಜು ಇತ್ತು.

ಜಾಗತಿಕ ಆರ್ಥಿಕ ಬೆಳವಣಿಗೆ ಕುರಿತಾದ ಅನಿಶ್ಚಿತತೆ, ಬೇರೆ ಕಂಪನಿಗಳು ಐ.ಟಿ. ಯೋಜನೆಗಳಿಗೆ ವೆಚ್ಚ ಮಾಡುವುದನ್ನು ತಗ್ಗಿಸುತ್ತಿರುವುದು ಹಾಗೂ ಯೋಜನೆಗಳನ್ನು ಅಂತಿಮಗೊಳಿಸುವಲ್ಲಿ ವಿಳಂಬ ಆಗುತ್ತಿರುವ ಕಾರಣಗಳಿಂದಾಗಿ ವರಮಾನದ ಮುನ್ನೋಟವನ್ನು ಈ ಪ್ರಮಾಣದಲ್ಲಿ ಕಡಿತ ಮಾಡಿರುವುದಾಗಿ ಇನ್ಫೊಸಿಸ್ ತಿಳಿಸಿದೆ.

'ದೊಡ್ಡ ಮೊತ್ತದ ಒಪ್ಪಂದಗಳಿಂದಾಗಿ ಮೊದಲ ತ್ರೈಮಾಸಿಕದಲ್ಲಿ ಉತ್ತಮ ಫಲಿತಾಂಶ ಸಾಧ್ಯವಾಗಿದೆ. ಆದರೆ, ಕೆಲವೊಂದು ಒಪ್ಪಂದಗಳಿಗೆ ಸಹಿ ಮಾಡುವುದು ಮತ್ತು ಯೋಜನೆ ಆರಂಭವು ವಿಳಂಬ ಆಗಿದೆ' ಎಂದು ಇನ್ಫೊಸಿಸ್ ಸಿಇಒ ಸಲೀಲ್ ಪಾರೇಖ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹಣಕಾಸು ಸೇವೆಗಳು, ರಿಟೇಲ್ ಮತ್ತು ಸಂವಹನ ವಿಭಾಗಗಳಿಂದ ಬರುವ ವರಮಾನದಲ್ಲಿ ಇಳಿಕೆ ಕಂಡುಬಂದಿದೆ. ಇಂಧನ, ಯುಟಿಲಿಟಿ, ತಯಾರಿಕೆ, ಹೈಟೆಕ್, ಲೈಫ್ ಸೈನ್ಸಸ್ ವಿಭಾಗಗಳಿಂದ ಬರುವ ವರಮಾನದಲ್ಲಿ ಹೆಚ್ಚಳ ಆಗಿದೆ. ಉತ್ತರ ಅಮೆರಿಕ, ಯುರೋಪ್ ಮಾರುಕಟ್ಟೆಗಳಿಂದ ಬರುವ ವರಮಾನದ ಪ್ರಮಾಣ ಕಡಿಮೆ ಆಗಿದೆ.

ಕಾರ್ಯಾಚರಣಾ ವೆಚ್ಚವು ₹3,187 ಕೋಟಿಯಿಂದ ₹3,660 ಕೋಟಿಗೆ (ಶೇ 14.8) ಹೆಚ್ಚಾಗಿದೆ. ಉದ್ಯೋಗಿಗಳ ಸಂಖ್ಯೆಯು ಜೂನ್ ತ್ರೈಮಾಸಿಕದ ಅಂತ್ಯಕ್ಕೆ 3.36 ಲಕ್ಷಕ್ಕೆ ತಲುಪಿದೆ. ಕಳೆದ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಉದ್ಯೋಗಿಗಳ ಸಂಖ್ಯೆ 3.35 ಲಕ್ಷ ಇತ್ತು. ಕಂಪನಿ ಬಿಟ್ಟು ಹೋಗುತ್ತಿರುವವರ ಪ್ರಮಾಣವು ಶೇ 28.4ರಿಂದ ಶೇ 17.3ಕ್ಕೆ ಇಳಿಕೆ ಕಂಡಿದೆ.

ಬೆಂಗಳೂರಿನ ಇನ್ಫೊಸಿಸ್ ಮುಖ್ಯ ಕಚೇರಿಯಲ್ಲಿ ಕಂಪನಿಯ ಸಿಇಒ ಸಲೀಲ್ ಪಾರೇಖ್ ಮತ್ತು ಸಿಎಫ್‌ಒ ನೀಲಾಂಜನ ರಾಯ್ ಅವರು ತ್ರೈಮಾಸಿಕ ಫಲಿತಾಂಶದ ವಿವರಗಳನ್ನು ನೀಡಿದರು –ಪ್ರಜಾವಾಣಿ ಚಿತ್ರ

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	1815 (1790)
ಸೋಯಾ (ರಿಫೈನ್ಡ್)	₹952 (937)
ಸೂರ್ಯಕಾಂತಿ (ರಿಫೈನ್ಡ್)	₹945 (830)
ಪಾಮೋಲಿನ್	₹875 (860)

ಕೊಬ್ಬರಿ ಧಾರಣೆ ಕ್ವಿಂಟಲ್‌ಗೆ

ತುರುವೇಕೆರೆ	8700-8700

ಮುಂಬೈ ಧಾರಣೆ

ಶೇಂಗಾ

20-7-2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	12100-12200
ದಪ್ಪ ಗುಜರಾತ್(ಹೊಸ)	12900-13000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1825 (1800)
ಒಂದು ವಾರದ ಡೆಲಿವರಿ	1820 (1795)
ಸೋಯಾ ಕಚ್ಚಾ	902 (880)
ಪಾಮ್ ವಾರದ ಡೆಲಿವರಿ	873 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,700 (59,600)
ಬೆಳ್ಳಿ ಕೆ.ಜಿ
75,800 (75,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1300-1400
ಹಸಿರು ಸಾಧಾರಣ	1000-1100
ಹಸಿರು ಉತ್ತಮ	1250-1350
ಹಸಿರು ಅತಿ ಉತ್ತಮ	1600-1800
ಕಾಳುಮೆಣಸು -	505
ಅಡಿಕೆ	
ಕಾರ್ಕಳ	
ಹಳೆಚಾಲಿ	40000-49000
ಹೊಸಚಾಲಿ	30000-42500
ಕುಂದಾಪುರ	
ಹಳೆಚಾಲಿ	43500-47000
ಹೊಸಚಾಲಿ	37000-41500
ಸಾಗರ	
ಬಿಳಿಗೋಟು	26161-33600
ಚಾಲಿ	34699-39399
ಕೋಕ	27869-36299
ಕೆಂಪುಗೋಟು	26869-43609
ರಾಶಿ	42009-53529
ಸಿಪ್ಪೆಗೋಟು	17699-22415
ಶಿವಮೊಗ್ಗ	
ಬೆಟ್ಟೆ	49199-54699
ಗೊರಬಲು	21029-43259
ರಾಶಿ	40009-55099
ಸರಕು	53069-82696
ಸಿದ್ದಾಪುರ	
ಬಿಳಿಗೋಟು	32399-33629
ಚಾಲಿ	36809-40099
ಕೋಕ	30399-33899
ರಾಶಿ	44769-52139
ತಟ್ಟಬೆಟ್ಟೆ	38889-45099
ಶಿರಸಿ	
ಬೆಟ್ಟೆ	41099-45899
ಬಿಳಿಗೋಟು	29109-35699
ಚಾಲಿ	35169-40808
ಕೆಂಪುಗೋಟು	26808-36499
ರಾಶಿ	45599-51018
ಯಲ್ಲಾಪುರ	
ಬಿಳಿಗೋಟು	26899-36812
ಚಾಲಿ	37012-40499
ಕೋಕ	23012-34899
ಕೆಂಪುಗೋಟು	29099-36700
ರಾಶಿ	47020-53500
ತಟ್ಟಬೆಟ್ಟೆ	41690-48919

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13900	13900	13875	155.50ಸೆಂಟ್ಸ್
ಎಸಿ	7140	6900	7000	
ಆರ್‌ಪಿ	10100	10250	10200	ಲಂಡನ್
ಆರ್‌ಸಿ	6090	238	5950	2604 ಡಾಲರ್ಸ್

ಮಹಾಶಕ್ತಿ ಆಗಬಹುದು ಭಾರತ: ಮಾರ್ಟಿನ್ ವೂಲ್ಫ್



ನವದೆಹಲಿ (ಪಿಟಿಐ): ಭಾರತವು ಬೆಳೆಯುತ್ತಿರುವ 'ಮಹಾಶಕ್ತಿ' ಯಾಗುವ ಸಾಧ್ಯತೆಯು ನಿಜಕ್ಕೂ ಇದೆ, 2050ರ ಸುಮಾರಿಗೆ ಭಾರತದ ಅರ್ಥ ವ್ಯವಸ್ಥೆಯ ಗಾತ್ರವು ಅಮೆರಿಕದ ಅರ್ಥ ವ್ಯವಸ್ಥೆಯ ಗಾತ್ರದ ಸರಿಸಮಕ್ಕೆ ಬಂದಿರುತ್ತದೆ ಎಂದು ಆರ್ಥಿಕ ವಿಶ್ಲೇಷಕ ಮಾರ್ಟಿನ್ ವೂಲ್ಫ್ ಅಭಿಪ್ರಾಯ ಪಟ್ಟಿದ್ದಾರೆ.

'ಭಾರತದ ತಲಾವಾರು ಜಿಡಿಪಿ ಬೆಳವಣಿಗೆಯು 2050ರವರೆಗೆ ಶೇಕಡ 5ರ ಮಟ್ಟದಲ್ಲಿ ಇರಲಿದೆ. ಒಳ್ಳೆಯ ಆಡಳಿತಾತ್ಮಕ ನೀತಿಗಳ ಕಾರಣದಿಂದಾಗಿ ಬೆಳವಣಿಗೆಯು ಇನ್ನೂ ಹೆಚ್ಚಿನ ಮಟ್ಟ ತಲುಪಬಹುದು. ಹಾಗೆಯೇ, ಅದು ಕಡಿಮೆ ಆಗುವ ಸಾಧ್ಯತೆಯೂ ಇದೆ' ಎಂದು ವೂಲ್ಫ್ ಅವರು ಫೈನಾನ್ಶಿಯಲ್ ಟೈಮ್ಸ್ ಅಂಕಣದಲ್ಲಿ ಬರೆದಿದ್ದಾರೆ.

ದೇಶದ ಜನಸಂಖ್ಯೆ ಹಾಗೂ ಅರ್ಥ ವ್ಯವಸ್ಥೆ ಮುಂದಿನ ದಶಕಗಳಲ್ಲಿ ತೀವ್ರ ಬೆಳವಣಿಗೆ ಕಾಣಲಿವೆ. ಪಾಶ್ಚಿಮಾತ್ಯ ದೇಶಗಳು ಭಾರತಕ್ಕೆ ಹತ್ತಿರವಾಗುತ್ತಿರುವುದು ಸಮರ್ಥನೀಯವೇ ಆಗಿದೆ ಎಂದು ಅವರು ಹೇಳಿದ್ದಾರೆ.

'ಬೀದಿ ಬದಿ ವ್ಯಾಪಾರಿಗಳ ನಿಯಂತ್ರಣಕ್ಕೆ ಚಿಂತನೆ'

ನವದೆಹಲಿ (ಪಿಟಿಐ): ಬೀದಿ ಬದಿಯಲ್ಲಿ ಮಾರಾಟ ಮಾಡುವ ತಿನಿಸುಗಳಿಗೆ ಗುಣಮಟ್ಟ ನಿಗದಿ ಮಾಡುವ ಉದ್ದೇಶದಿಂದ, ಬೀದಿ ಬದಿ ವ್ಯಾಪಾರಿಗಳನ್ನು ನಿಯಂತ್ರಣಕ್ಕೆ ಒಳಪಡಿಸಲು ಕೇಂದ್ರವು ಚಿಂತನೆ ನಡೆಸಿದೆ ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಹೇಳಿದ್ದಾರೆ.

ಇದು ಬಹಳ ಕಷ್ಟದ ಕೆಲಸವಾದರೂ ಈ ಬಗ್ಗೆ ಗಮನ ಹರಿಸಲೇಬೇಕು ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. ನಿಯಮಗಳನ್ನು ಉಲ್ಲಂಘಿಸಿದವರಿಗೆ ದಂಡ ವಿಧಿಸಿದರೆ ಸಾಕಾಗುತ್ತದೆಯೋ ಅಥವಾ ಜೈಲುಶಿಕ್ಷೆಯಂತಹ ಕಠಿಣ ಕ್ರಮಕ್ಕೆ ಮುಂದಾಗಬೇಕೋ ಎಂಬುದನ್ನು ಪರಿಶೀಲಿಸಬೇಕಿದೆ ಎಂದಿದ್ದಾರೆ.

ಭಾರತಕ್ಕೆ ಬರುವ ವಿದೇಶಿಯರು, 'ಭಾರತದಲ್ಲಿ ಅತ್ಯುತ್ತಮ ತಿನಿಸುಗಳು ಸಿಗುವುದು ಬೀದಿ ಬದಿ ವ್ಯಾಪಾರಿಗಳಲ್ಲಿ' ಎಂಬ ಮಾತು ಕೇಳುತ್ತಿರುತ್ತಾರೆ. ಹೀಗಾಗಿ, ಈ ವ್ಯಾಪಾರಿಗಳಿಗೆ ಅನ್ವಯವಾಗುವ ಕೆಲವು ನಿಯಮಗಳನ್ನು ರೂಪಿಸಬೇಕಾಗಿದೆ. ಆದರೆ ಆ ನಿಯಮಗಳು ಎಷ್ಟು ಕಠಿಣವಾಗಿರಬೇಕು ಎಂಬುದನ್ನು ತೀರ್ಮಾನಿಸಬೇಕಿದೆ ಎಂದು ಸಿಂಗ್ ಹೇಳಿದ್ದಾರೆ.

'ಅಮೆರಿಕದೊಂದಿಗೆ ವಾಣಿಜ್ಯ ಸಮರ: ಚೀನಾ ಉದ್ದೇಶವಲ್ಲ'

ವಾಷಿಂಗ್ಟನ್ (ಎಪಿ): ಅಮೆರಿಕದ ಜೊತೆ ವಾಣಿಜ್ಯ ಸಮರ ನಡೆಸುವ ಇಂಗಿತ ಚೀನಾಕ್ಕಿಲ್ಲ. ಆದರೆ, ತಂತ್ರಜ್ಞಾನ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿ ಪುನಃ ನಿರ್ಬಂಧ ಹೇರಿದರೆ ನಾವು ಪ್ರತ್ಯುತ್ತರ ನೀಡುತ್ತೇವೆ ಎಂದು ಅಮೆರಿಕದ ಚೀನಾ ರಾಯಭಾರಿ ಬುಧವಾರ ಹೇಳಿದರು.

ಕೊಲೆರಾಡೊದಲ್ಲಿ ನಡೆದ ಆಸ್ಪೆನ್ ಭದ್ರತಾ ಸಮ್ಮೇಳನದಲ್ಲಿ ಮಾತನಾಡಿದ ರಾಯಭಾರಿ ಷಿ ಫೆಂಗ್ ಅವರು, 'ಸ್ಪರ್ಧೆಯಿಂದ ದೂರ ಉಳಿಯಲು ಚೀನಾ ಮುಜುಗರಪಡುವುದಿಲ್ಲ. ಆದರೆ, 'ಸ್ಪರ್ಧೆ'ಯನ್ನು ಅಮೆರಿಕ ವ್ಯಾಖ್ಯಾನಿಸುವ ರೀತಿ ನ್ಯಾಯಬದ್ಧವಾಗಿಲ್ಲ. ಚೀನಾವನ್ನು ಹೊರಗಿಟ್ಟು ಸ್ಪರ್ಧೆ ಗೆಲ್ಲಲು ಅಮೆರಿಕ ಪ್ರಯತ್ನಿಸುತ್ತಿದೆ' ಎಂದರು.

ಅಮೆರಿಕವು ಮೈಕ್ರೊಚಿಪ್ ಮತ್ತು ಚಿಪ್ ತಯಾರಿಕೆಗೆ ಬೇಕಾದ ಉಪಕರಣಗಳನ್ನು ಚೀನಾಕ್ಕೆ ಮಾರಾಟ ಮಾಡುವುದರ ಮೇಲೆ ನಿರ್ಬಂಧ ಹೇರಿದ್ದನ್ನು ಟೀಕಿಸಿದ ಅವರು, ಚೀನಾವನ್ನು ನಿಗ್ರಹಿಸಲು ಅಮೆರಿಕ ನಡೆಸುತ್ತಿರುವ ಪ್ರಯತ್ನವಿದು ಎಂದರು. 'ಅಮೆರಿಕ ಮತ್ತು ಚೀನಾ ಸಂಬಂಧ ಈಗ ಮತ್ತೊಮ್ಮೆ ಅಡ್ಡರಸ್ತೆಯಲ್ಲಿದೆ. ಎಲ್ಲಿಗೆ ಹೋಗುವುದೆಂದು ತಿಳಿಯುತ್ತಿಲ್ಲ. ಎರಡೂ ಕಡೆಯಿಂದಲೂ ಹೊಸ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು' ಎಂದು ಚೀನಾ ಅಧ್ಯಕ್ಷ ಶಿ ಜಿನ್‌ಪಿಂಗ್ ಅವರು ಅಮೆರಿಕದ ರಾಜತಂತ್ರಜ್ಞ ಹೆನ್ರಿ ಕಿಸ್ಸಿಂಜರ್ ಅವರಿಗೆ ಹೇಳಿದರು.

'ಭಾರತ–ಅಮೆರಿಕ ಸಂಬಂಧ ಹಿಂದೆಂದಿಗಿಂತಲೂ ಗಟ್ಟಿ'

ವಾಷಿಂಗ್ಟನ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಐತಿಹಾಸಿಕವಾದ, ಅಧಿಕೃತ ಭೇಟಿ ನೀಡಿದ ಒಂದು ತಿಂಗಳ ನಂತರ, ಅಮೆರಿಕದ ಖ್ಯಾತ ಸಂಸದರ ಗುಂಪು ಮತ್ತು ಶ್ವೇತಭವನ, ಬುಧವಾರ ಭಾರತ- ಅಮೆರಿಕ ಬಾಂಧವ್ಯ ಹಿಂದೆಂದಿಗಿಂತಲೂ ಗಟ್ಟಿಯಾಗಿದೆ ಎಂದು ಹೇಳಿವೆ.

ಈ ವರ್ಷದ ಆರಂಭದಲ್ಲಿ ಭಾರತಕ್ಕೆ ಮೊದಲ ಭೇಟಿ ನೀಡುವ ಮತ್ತು ಪ್ರಧಾನಿ ಅವರನ್ನು ಭೇಟಿಯಾಗುವವರೆಗೆ, ಭಾರತ ಮತ್ತು ಪ್ರಧಾನಿಯವರನ್ನು ಟೀಕಿಸುವವರಲ್ಲಿ ಪ್ರಮುಖರಾಗಿದ್ದ ಸೆನೆಟ್ ನಾಯಕ ಚಕ್ ಶುಮರ್ 'ನಾನು ಅವರನ್ನು (ಮೋದಿ) ಇಷ್ಟಪಡುತ್ತೇನೆ' ಎಂದು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಸಂಸತ್ತಿನ ಸದಸ್ಯರಿಗಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಶ್ವೇತಭವನದ ಹುಲ್ಲುಹಾಸಿನಲ್ಲಿ ಬುಧವಾರ ಮಧ್ಯಾಹ್ನ ಆಯೋಜಿಸಿದ್ದ ವಾರ್ಷಿಕ ಭೋಜನ ಕೂಟದಲ್ಲಿ ಹಲವು ಸಂಸದರು ಪಾಲ್ಗೊಂಡಿದ್ದರು.

'ಕಳೆದ ತಿಂಗಳು ಪ್ರಧಾನಿ ಮೋದಿ ನೀಡಿದ ಭೇಟಿಯು ಅತ್ಯಂತ ಮಹತ್ವದ್ದಾಗಿದೆ. ಭಾರತದೊಂದಿಗಿನ ಸಂಬಂಧವು ಎಂದಿಗಿಂತಲೂ ಗಟ್ಟಿಯಾಗಿದೆ. ನಾವು ಹಲವು ಪ್ರಮುಖ ಒಪ್ಪಂದಗಳನ್ನು ಘೋಷಿಸಿದ್ದೇವೆ. ಅವುಗಳಲ್ಲಿ ಕೆಲವು ಕಾರ್ಯಗತಗೊಳ್ಳುತ್ತಿವೆ' ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೀನ್ ಜೀನ್ ಪಿಯರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನಮ್ಮ ದೀರ್ಘಾವಧಿಯ ಭವಿಷ್ಯ ಮತ್ತು ಭಾರತದೊಂದಿಗಿನ ಸಂಬಂಧಕ್ಕೆ ಸಂಬಂಧಿಸಿ ನಾವು ತುಂಬಾ ಆಶಾವಾದಿಯಾಗಿದ್ದೇವೆ. ಉಭಯತ್ರರ ಬಾಂಧವ್ಯ ಮುಂದುವರಿಯುವ ಪ್ರಬಲ ನಂಬಿಕೆ ನಮ್ಮದು' ಎಂದು ಹೇಳಿದರು.

ಯುದ್ಧ ಸಾಮಗ್ರಿ: ಭಾರತದೊಂದಿಗೆ ಕೈಜೋಡಿಸಲು ಅಮೆರಿಕ ಸಿದ್ಧತೆ

ವಾಷಿಂಗ್ಟನ್ (ಪಿಟಿಐ): ಸುಧಾರಿತ ಫಿರಂಗಿಗಳು ಮತ್ತು ಯುದ್ಧ ವಾಹನಗಳನ್ನು ಅಭಿವೃದ್ಧಿಪಡಿಸಲು ಭಾರತದೊಂದಿಗೆ ಕೈಜೋಡಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಮೆರಿಕ ರೂಪುರೇಷೆ ಸಿದ್ಧಪಡಿಸುತ್ತಿದೆ ಎಂದು ಪೆಂಟಗನ್‌ನ (ಅಮೆರಿಕ ಸೇನೆಯ ಮುಖ್ಯ ಕಚೇರಿ) ಪ್ರಮುಖ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೂರ್ವ ಲಡಾಕ್‌ನಲ್ಲಿ ಭಾರತ ಮತ್ತು ಚೀನಾ ಗಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಸಂಘರ್ಷ ನಡೆಯುತ್ತಿದೆ. ಚೀನಾ ಒಡ್ಡುತ್ತಿರುವ ಸವಾಲುಗಳು ಮತ್ತು ಸಮಸ್ಯೆ ಗಳನ್ನು ಭಾರತವು ಸಮರ್ಥವಾಗಿ ಎದುರಿಸುವ ದಿಸೆಯಲ್ಲಿ ಅಮೆರಿಕ ಈ ಹೆಜ್ಜೆ ಇರಿಸಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಇಂಡೊ– ಪೆಸಿಫಿಕ್ ಪ್ರದೇಶದಲ್ಲಿ ಉಂಟಾಗಿರುವ ಪ್ರಕ್ಷುಬ್ಧತೆಯನ್ನು ನಿವಾರಿಸುವ ನಿಟ್ಟಿನಲ್ಲಿ ತನ್ನ ಮಿತ್ರ ದೇಶಗಳಿಗೆ ಸಹಕಾರ ನೀಡಲು ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಡಳಿತವು ತೆಗೆದುಕೊಂಡಿರುವ ಕ್ರಮಗಳ ಭಾಗವಾಗಿ ಈ ರೂಪುರೇಷೆ ತಯಾರಿಸಲಾಗುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ವಾಣಿಜ್ಯ, ಮಾನವ ಹಕ್ಕುಗಳು ಮುಂತಾದ ಕಾರಣಗಳಿಗಾಗಿ ಅಮೆರಿಕ ಮತ್ತು ಚೀನಾ ನಡುವಿನ ಸಂಬಂಧ ಹಳಸಿರುವ ವೇಳೆಯೇ ಪೆಂಟಗನ್ ಈ ಹೇಳಿಕೆ ನೀಡಿದೆ.

ಸಂಕ್ಷಿಪ್ತ ಸುದ್ದಿ

ಬರ್ಲಿನ್‌ನಲ್ಲಿ ಸಿಂಹಿಣಿಗಾಗಿ ಪೊಲೀಸರ ಶೋಧ

ಬರ್ಲಿನ್ (ಎಪಿ): ನಗರದ ದಕ್ಷಿಣ ಭಾಗದ ಹೊರವಲಯದಲ್ಲಿ ಬುಧವಾರ ತಡರಾತ್ರಿ ಗೋಚರಿಸಿದ ಸಿಂಹಿಣಿಯ ಸೆರೆಗಾಗಿ ಜರ್ಮನ್ ಪೊಲೀಸರು ಗುರುವಾರವೂ ಹೆಲಿಕಾಪ್ಟರ್, ಡ್ರೋನ್, ಇನ್‌ಫ್ರಾರೆಡ್ ಕ್ಯಾಮೆರಾ, ಪ್ರಾಣಿ ವೈದ್ಯರು ಹಾಗೂ ಬೇಟೆಗಾರರೊಂದಿಗೆ ಶೋಧ ನಡೆಸಿದರು.

ನಗರದ ಹೊರಭಾಗಕ್ಕೆ ಹೊಂದಿಕೊಂಡಂತಿರುವ ಕ್ಲೈನ್‌ಮ್ಯಾಕ್‌ನೌ ಪ್ರದೇಶದಲ್ಲಿ ಬುಧವಾರ ಮಧ್ಯರಾತ್ರಿ ಕಾಡು ಹಂದಿಯೊಂದನ್ನು ಹುಲಿಯೊಂದು ಬೆನ್ನಟ್ಟುತ್ತಿರುವುದನ್ನು ನೋಡಿದ ಜನರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಜೊತೆಗೆ ವಿಡಿಯೊ ಸಹ ಕೊಟ್ಟಿದ್ದಾರೆ.

ಈ ಪ್ರದೇಶದಲ್ಲಿನ ಮನೆಗಳಲ್ಲಿ ಅಂದಾಜು 20 ಸಾವಿರ ಜನರು ವಾಸವಿದ್ದು, ಎಚ್ಚರದಿಂದಿರುವಂತೆ ಪೊಲೀಸರು ಸೂಚಿಸಿದ್ದಾರೆ.

ಇಸ್ರೇಲ್‌ನಲ್ಲಿ ನ್ಯಾಯಾಂಗದ ಅಧಿಕಾರ ಮೊಟಕು: ಒಪ್ಪಿಗೆ

ಜೆರುಸಲೇಂ (ಎಎಫ್‌ಪಿ): ಇಸ್ರೇಲ್ ಸರ್ಕಾರದ ನ್ಯಾಯಾಂಗ ಸುಧಾರಣೆ ಕಾಯ್ದೆಯ ಪ್ರಮುಖ ಅಂಶವೊಂದರ ಅಳವಡಿಕೆಗೆ ಸಂಸದೀಯ ಸಮಿತಿ ಗುರುವಾರ ಒಪ್ಪಿಗೆ ಸೂಚಿಸಿದೆ.

ಸರ್ಕಾರದ ನಿರ್ಧಾರಗಳನ್ನು ರದ್ದುಗೊಳಿಸಬಲ್ಲ ನ್ಯಾಯಾಂಗದ ಅಧಿಕಾರವನ್ನು ಮೊಟಕುಗೊಳಿಸುವ ಪ್ರಸ್ತಾವನೆಯನ್ನು ಹಲವು ಸುತ್ತಿನ ಚರ್ಚೆಗಳ ಬಳಿಕ ಸಂಸದೀಯ ಸಮಿತಿ ಗುರುವಾರ ಒಪ್ಪಿಕೊಂಡಿತು.

ಕಾಯ್ದೆ ಇನ್ನು ಸಂಸತ್ತಿನಲ್ಲಿ ಮಂಡನೆಗೊಳ್ಳಲಿದೆ. ವಿವಾದಾತ್ಮಕ ಕಾಯ್ದೆ ಅಂಗೀಕಾರಕ್ಕೆ ಅಂತಿಮ ಹಂತದ ಮತದಾನವಷ್ಟೇ ಬಾಕಿ ಉಳಿದಿದ್ದು, ಇದರ ವಿರುದ್ಧ ದೇಶದಾದ್ಯಂತ ಪ್ರತಿಭಟನೆಗಳು ನಡೆಯುತ್ತಿವೆ.

ಉಕ್ರೇನ್: ಮುಂದುವರಿದ ವಾಯುದಾಳಿ

ಕೀವ್ (ಎಪಿ): ಬಂದರು ನಗರ ಒಡೆಸಾ ಸೇರಿ ಉಕ್ರೇನ್‌ನ ದಕ್ಷಿಣದ ನಗರಗಳ ಮೇಲೆ ರಷ್ಯಾದ ವೈಮಾನಿಕ ದಾಳಿ ಬುಧವಾರ ರಾತ್ರಿಯೂ ಮುಂದುವರಿಯಿತು. ಇದರಲ್ಲಿ ಇಬ್ಬರು ನಾಗರಿಕರು ಮೃತಪಟ್ಟು, 21 ಜನರಿಗೆ ಗಾಯಗಳಾಗಿವೆ ಎಂದು ಉಕ್ರೇನ್ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ಈ ದಾಳಿಯಲ್ಲಿ ಸುಮಾರು 60 ಸಾವಿರ ಟನ್ ಧಾನ್ಯ ನಾಶವಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೋಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

ರಾವ್ ಸಂಸ್ಥೆಗೆವಯಸ್ಸಾದವರನ್ನು , ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟವಾಸತಿವಿದೆ 13,000 - 17,000. 8951315839 , 9880120052

Hotel

ಬೆಂಗಳೂರು ಕೆಂಗೇರಿಉಪನಗರ, ದಾಬಸಪೇಟೆಯಲ್ಲಿರುವ ಕ್ಯಾಂಟೀನ್ ಒಂದಕ್ಕೆ ಅಡುಗೆಯವರು (ದಕ್ಷಿಣ/ಉತ್ತರ ಭಾರತ ಶೈಲಿ) ಅಡುಗೆ ಸಹಾಯಕರು, ಕಾಫಿ, ಟೀ, ದೋಸೆ, ಚಪಾತಿ ಮಾಡುವವರು, ತರಕಾರಿ ಹೆಚ್ಚುವವರು, ರುಬ್ಬುವವರು, ಕೌಂಟರ್ ಬಾಯ್ಸ್ ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯವಿರುತ್ತದೆ. 9036244326, 9591810812, 9731298811

Marketing & Sales

ಮಹಿಳೆಯರಿಗೆ ರೇಷ್ಮೆ ಸೀರೆಗಳು, ಬನಾರಸ್ ಸೀರೆಗಳು ಕಾಟನ್ ಸೀರೆಗಳು ಎಲ್ಲಾ ತರಹದ ಸೀರೆಗಳು, ಚೂಡಿದಾರಗಳು ಕಂತಿನ ಮೇಲೆ ಮಾರಾಟ ಮಾಡಲು ಮಹಿಳೆಯರಿಗೆ ಸಿಗುತ್ತದೆ: 8892501007/ 9606701007

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಪ್ರವಾಸ

Pilgrimage Tours

SML ಪ್ರವಾಸಗಳು14/8 ಪುರಿ ಜಗನ್ನಾಥ್, ಭುನೇಶ್ವರ.28/8: ಶಿರಡಿ 3 ಜ್ಯೋತಿರ್ಲಿಂಗ 29/8 ಕಾಶಿ, ಜಾರ್ಖಂಡ್ ಬೈದ್ಯನಾಥ್ 9591017782.

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ ರೈಲು/ A/C ಬಸ್ 23.08.2023 06.09.2023 04.10.2023 ಕಾಶಿ,ಬುದ್ಧಗಯಾ,ಅಲಹಾಬಾದ್. 02.09.2023 20.09.2023 15.10.2023 ಚಾರ್‌ಧಾಮ್ ಸಮೇತ ಪ್ರವಾಸ. 19.10.2023 ದೆಹಲಿ,ಜೈಪುರ್ ಆಗ್ರಾ,ಹರಿದ್ವಾರ್ ಇತ್ಯಾದಿ. 29.09.2023 ಸೋಮನಾಥ್,ದ್ವಾರಕಾ ಓಂಕಾರೇಶ್ವರ ಮಹಾಕಾಳೇಶ್ವರ. ನಿಷ್ಕಳಂಕ ಮಹಾದೇವ. 23.09.2023 ನೇಪಾಳ,ಪೋಕ್ರ ಮುಕ್ತಿನಾಥ,ಲುಂಬಿನಿ. ಸಂಪರ್ಕಿಸಿ. ವಿಷ್ಣು ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 7204173686 9686708171

★1.9.2023 13/8ದಿನಗಳು★ ದೆಹಲಿ, ಆಗ್ರಾ,ಕಾಶಿ,ಗಯಾ, ಹರಿದ್ವಾರ ಪ್ರವಾಸ. 21.09.2023 16ದಿನಗಳು ಕಾಶಿ,ನೇಪಾಳ ಮುಕ್ತಿನಾಥ ಪ್ರವಾಸ. ಆರ್.ಗಾಂಧಿ ಟೂರ್ಸ್. 9902433500/ 9945445809

DH ಪ್ರಜಾವಾಣಿ JOB CORNER
BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
conditions apply*
For more information Contact:
9845114560 : 9731810277
9901641752 : 9886213331
080 - 45557163 / 164

EDUCATION CORNER

ಸ್ಪರ್ಧಾಮಿತ್ರ ACADEMY
IAS / KAS ಉಚಿತ ತರಬೇತಿ
ಬೆಂಗಳೂರಿನ ಸ್ಪರ್ಧಾಮಿತ್ರ IAS ಅಕಾಡೆಮಿಯು 2024ರ IAS/KAS ಪೂರ್ವಭಾವಿ ಪರೀಕ್ಷೆಗೆ (Prelims) ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ಪದವೀಧರರಿಗೆ ಪ್ರವೇಶ ಪರೀಕ್ಷೆ ಮುಖಾಂತರ ಆಯ್ಕೆ ನಡೆಸಿ ಉಚಿತ ತರಬೇತಿ ನೀಡಲಾಗುವುದು.
ಜು–23 ರಂದು ಬೆಳಿಗ್ಗೆ 10ಕ್ಕೆ
ಬೆಂಗಳೂರು, ಮೈಸೂರು, ರಾಯಚೂರು, ಕೋಲಾರ ಧಾರವಾಡ, ದಾವಣಗೆರೆ, ವಿಜಯಪುರದಲ್ಲಿ ಏಕಕಾಲಕ್ಕೆ ಪ್ರವೇಶ ಪರೀಕ್ಷೆ ನಡೆಸಲಾಗುವುದು.
www.spardhamithra.in
ವೆಬ್‌ಸೈಟ್ ಮೂಲಕ ಅರ್ಜಿಹಾಕಬಹುದು.
ಅತ್ತಿಗುಪ್ಪೆ, ಮೆಟ್ರೋ ನಿಲ್ದಾಣದ ಹತ್ತಿರ, ವಿಜಯನಗರ, ಬೆಂಗಳೂರು.
9535 111 133 - 9535 111 188

ಶಿಕ್ಷಣಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ: 9845114560

ಭವಿಷ್ಯ

Astrology

100% ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿಮೋಸ ಹೋದವರಿಗೆ ಕಲ್ಕತ್ತಾ ಕೊಳ್ಳೇಗಾಲದ ಪೂಜೆಯಿಂದ, ಗಂಡಹೆಂಡತಿ ಸಮಸ್ಯೆಗಳಿಗೆ 3ಗಂಟೆಗಳಲ್ಲಿ ಶೀಘ್ರ ಪರಿಹಾರ. 9448687421

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭಾರತ– ವೆಸ್ಟ್ ಇಂಡೀಸ್ 100ನೇ ಟೆಸ್ಟ್: ಮುಕೇಶ್ ಕುಮಾರ್ ಪದಾರ್ಪಣೆ

ರೋಹಿತ್–ಯಶಸ್ವಿ ಜೊತೆಯಾಟ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಭಾರತ ತಂಡದ ಆರಂಭಿಕ ಜೋಡಿ ಯಶಸ್ವಿ ಜೈಸ್ವಾಲ್ ಮತ್ತು ರೋಹಿತ್ ಶರ್ಮಾ ಸತತ ಎರಡನೇ ಟೆಸ್ಟ್ ಪಂದ್ಯದಲ್ಲಿಯೂ ಶತಕದ ಜೊತೆಯಾಟವಾಡಿತು. ಇದರೊಂದಿಗೆ ವೆಸ್ಟ್ ಇಂಡೀಸ್ ಎದುರಿನ ನೂರನೇ ಪಂದ್ಯಕ್ಕೆ ಭರ್ಜರಿ ಆರಂಭ ನೀಡಿದರು.

ಗುರುವಾರ ಕ್ವೀನ್ಸ್ ಓವಲ್ ಪಾರ್ಕ್ ಕ್ರೀಡಾಂಗಣದಲ್ಲಿ ಆರಂಭವಾದ ಸರಣಿಯ ಎರಡನೇ ಟೆಸ್ಟ್ ಪಂದ್ಯದಲ್ಲಿ ಟಾಸ್ ಗೆದ್ದ ವೆಸ್ಟ್ ಇಂಡೀಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಯಶಸ್ವಿ ಮತ್ತು ರೋಹಿತ್ ಮೊದಲ ವಿಕೆಟ್‌ಗೆ 139 ರನ್‌ಗಳ ಜೊತೆಯಾಟವಾಡಿದರು.

ಚಹಾ ವಿರಾಮದ ವೇಳೆಗೆ 50.4 ಓವರ್‌ಗಳಲ್ಲಿ ಭಾರತ 4 ವಿಕೆಟ್ ನಷ್ಟಕ್ಕೆ 182 ರನ್ ಗಳಿಸಿದೆ.

74 ಎಸೆತದಲ್ಲಿ ಒಂದು ಸಿಕ್ಸರ್, 9 ಬೌಂಡರಿ ಸೇರಿದಂತೆ 57ರನ್ ಗಳಿಸಿದ ಯಶಸ್ವಿ, ಜೇಸನ್ ಹೋಲ್ಡರ್ ಅವರಿಗೆ ವಿಕೆಟ್ ಒಪ್ಪಿಸಿದರು. 143 ಎಸೆತಗಳಲ್ಲಿ 80ರನ್ ಗಳಿಸಿದ್ದ ರೋಹಿತ್ ಶರ್ಮಾ ಜೊಮೆಲ್ ವಾರಿಕನ್ ಎಸೆತದಲ್ಲಿ ಬೌಲ್ಡ್ ಆದರು. ಅವರು ಎರಡು ಭರ್ಜರಿ ಸಿಕ್ಸರ್, 9 ಬೌಂಡರಿ ಬಾರಿಸಿದರು.

ರೋಹಿತ್ ಶರ್ಮಾ ಮತ್ತು ಯಶಸ್ವಿ ಜೈಸ್ವಾಲ್ –ಎಎಫ್‌ಪಿ ಚಿತ್ರ

ಈ ಜೋಡಿಯು ಸರಣಿಯ ಮೊದಲ ಟೆಸ್ಟ್‌ನಲ್ಲಿ ತಲಾ ಒಂದು ಶತಕ ಗಳಿಸಿದ್ದರು. ಮೊದಲ ವಿಕೆಟ್‌ಗೆ 229 ರನ್ ಸೇರಿಸಿದ್ದರು. ಯಶಸ್ವಿ ಜೈಸ್ವಾಲ್ ಅವರು ಕಳೆದ ಪಂದ್ಯದಲ್ಲಿ ಪದಾರ್ಪಣೆ ಮಾಡಿ 171 ರನ್ ಗಳಿಸಿದ್ದರು.

ಶುಭಮನ್ ಗಿಲ್ ಈ ಪಂದ್ಯದಲ್ಲೂ ಬೇಗನೆ ಪೆವಿಲಿಯನ್ ಸೇರಿದರು. 12 ಎಸೆತದಲ್ಲಿ 10 ರನ್ ಗಳಿಸಿದ್ದ ಅವರು ಕೇಮರ್ ರೋಚ್ ಅವರಿಗೆ ವಿಕೆಟ್ ಒಪ್ಪಿಸಿದರು. ಅವರು ಹಿಂದಿನ ಪಂದ್ಯದಲ್ಲಿಯೂ ಕೇವಲ 6 ರನ್ ಗಳಿಸಿದ್ದರು. ಅಜಿಂಕ್ಯ ರಹಾನೆ 8 ರನ್‌ಗೆ ವಿಕೆಟ್ ಒಪ್ಪಿಸಿದರು. ವಿರಾಟ್ ಕೊಹ್ಲಿ 18 ರನ್‌ಗಳಿಸಿ ಆಡುತ್ತಿದ್ದಾರೆ.

ಪದಾರ್ಪಣೆ: ಬಂಗಾಳ ತಂಡದ ಮಧ್ಯಮವೇಗಿ ಮುಕೇಶ್ ಕುಮಾರ್ ಅವರು ಈ ಪಂದ್ಯದ ಮೂಲಕ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು. ವಿಂಡೀಸ್ ತಂಡದ ಪರವಾಗಿ ಕಿರ್ಕ್ ಮೆಕೆಂಜಿ ಕೂಡ ಪದಾರ್ಪಣೆ ಮಾಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ 50.4 ಓವರ್‌ಗಳಲ್ಲಿ 4 ವಿಕೆಟ್‌ಗೆ 182 (ಯಶಸ್ವಿ ಜೈಸ್ವಾಲ್ 57, ರೋಹಿತ್ ಶರ್ಮಾ 80, ಶುಭಮನ್ ಗಿಲ್ 10, ಅಜಿಂಕ್ಯ ರಹಾನೆ 8, ವಿರಾಟ್ ಕೊಹ್ಲಿ ಬ್ಯಾಟಿಂಗ್ 18, ರವೀಂದ್ರ ಜಡೇಜಾ ಬ್ಯಾಟಿಂಗ್ 0)

ಹಾಕಿ: ಕೆನರಾ ತಂಡಕ್ಕೆ ಜಯ

ಬೆಂಗಳೂರು: ಜಿ.ಎನ್. ಪೃಥ್ವಿರಾಜ್ ಮತ್ತು ಕೆ.ಸೋಮಯ್ಯ ಅವರ ಆಟದ ನೆರವಿನಿಂದ ಕೆನರಾ ಬ್ಯಾಂಕ್ ತಂಡವು ಇಲ್ಲಿ ನಡೆಯುತ್ತಿರುವ ಏಳನೇ ಆವೃತ್ತಿಯ ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಡಿವೈಇಎಸ್ ‘ಬಿ’ ತಂಡವನ್ನು 2–1ರಿಂದ ಮಣಿಸಿತು. ಮತ್ತೊಂದು ಪಂದ್ಯದಲ್ಲಿ ಕೆಎಸ್‌ಪಿ ತಂಡವು ಸಾಯ್ ತಂಡದೊಂದಿಗೆ 3–3ರಿಂದ ಡ್ರಾ ಸಾಧಿಸಿತು.

ಕೊರಿಯಾ ಓಪನ್: ಭಾರತದ ಆಟಗಾರರಿಗೆ ನಿರಾಶೆ

ಯೋಸು (ಕೊರಿಯಾ), (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ ಎಚ್.ಎಸ್.ಪ್ರಣಯ್, ಕೊರಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಗುರುವಾರ ಹಾಂಗ್‌ಕಾಂಗ್‌ನ ಲೀ ಚೆಯುಕ್ ಯಿಯು ಎದುರು ಸೋಲನುಭವಿಸಿದರು.

ಈ ಟೂರ್ನಿಯಲ್ಲಿ ಐದನೇ ಶ್ರೇಯಾಂಕ ಪಡೆದಿರುವ ಪ್ರಣಯ್ 15–21, 21–19, 18–21 ರಲ್ಲಿ ತಮಗಿಂತ ಕೆಳ ಕ್ರಮಾಂಕದ ಲೀ ಎದುರು ಹಿಮ್ಮೆಟ್ಟಿದರು. ಮೂರು ಗೇಮ್‌ಗಳ ಈ ಪಂದ್ಯ ಒಂದು ಗಂಟೆಗೂ ಅಧಿಕ ಕಾಲ ನಡೆಯಿತು.

ಎರಡನೇ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಪ್ರಿಯಾನ್ಶು ರಾಜಾವತ್ ಸೋಲನುಭವಿಸಿದರೂ, ಅಗ್ರ ಶ್ರೇಯಾಂಕದ ಕೊಡೈ ನರವೋಕಾ ಅವರಿಗೆ ಬೆವರಿಳಿಸಿದರು. ಜಪಾನ್‌ನ ಆಟಗಾರನಿಗೆ 21–14, 18–21, 21–17 ರಿಂದ ಜಯಗಳಿಸಲು ಒಂದು ಗಂಟೆ 22 ನಿಮಿಷ ಬೇಕಾಯಿತು.

ಎಮರ್ಜಿಂಗ್ ಏಷ್ಯಾ ಕಪ್ ಸೆಮಿಫೈನಲ್ ಇಂದು

ಧುಲ್ ಬಳಗಕ್ಕೆ ಬಾಂಗ್ಲಾ ಸವಾಲು

ಕೊಲಂಬೊ (ಪಿಟಿಐ): ಲೀಗ್ ಹಂತದಲ್ಲಿ ಉತ್ತಮವಾಗಿ ಆಡಿರುವ ಭಾರತ ಎ ತಂಡವು ಶುಕ್ರವಾರ ನಡೆಯಲಿರುವ ಎಮರ್ಜಿಂಗ್ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ಬಾಂಗ್ಲಾ ತಂಡವೂ ಲೀಗ್ ಹಂತದಲ್ಲಿ ಆಲ್‌ರೌಂಡ್ ಆಟವಾಡಿದೆ. ಅದರಿಂದಾಗಿ ನಾಲ್ಕರ ಘಟ್ಟದಲ್ಲಿ ಜಿದ್ದಾಜಿದ್ದಿ ತಾರಕಕ್ಕೇರುವ ಸಾಧ್ಯತೆ ಇದೆ.

ಭಾರತದ ಯುವ ಮಧ್ಯಮವೇಗಿ ಹರ್ಷಿತ್ ರಾಣಾ (41ಕ್ಕೆ4) ಮತ್ತು ನಾಯಕ ಯಶ್ ಧುಲ್ (108 ರನ್) ಅವರು ಯುಎಇ ತಂಡದ ವಿರುದ್ಧ ಮಿಂಚಿದ್ದರು. ನಂತರದ ಪಂದ್ಯಗಳಲ್ಲಿ ಎಡಗೈ ಸ್ಪಿನ್ನರ್ ನಿಶಾಂತ್ ಸಿಂಧು, ಬ್ಯಾಟರ್ ಬಿ. ಸಾಯಿ ಸುದರ್ಶನ್, ಅಭಿಷೇಕ್ ಶರ್ಮಾ, ಮಧ್ಯಮವೇಗಿ ರಾಜವರ್ಧನ್ ಹಂಗರಗೇಕರ್ ಅಮೋಘ ಲಯದಲ್ಲಿದ್ದಾರೆ. ತಂಡದಲ್ಲಿರುವ ಕನ್ನಡಿಗ ನಿಕಿನ್ ಜೋಸ್ ಕೂಡ ಅರ್ಧ ಶತಕ ಹೊಡೆದು ಗಮನ ಸೆಳೆದಿದ್ದಾರೆ.

ಯಶ್ ಧುಲ್

ಬಾಂಗ್ಲಾ ತಂಡವು ಶ್ರೀಲಂಕಾ ಎದುರಿನ ಸೋಲಿನ ನಂತರ ಪುಟಿದೆದ್ದಿತು. ಒಮನ್ ಮತ್ತು ಅಫ್ಗಾನಿಸ್ತಾನದ ಎದುರೂ ಉತ್ತಮವಾಗಿ ಆಡಿ ನಾಲ್ಕರ ಘಟ್ಟಕ್ಕೆ ತಲುಪಿದೆ. ತಂಜೀದ್ ಹಸನ್ ಮತ್ತು ಮೆಹಮುದುಲ್ ಹಸನ್ ಅವರು ಶತಕ ಗಳಿಸಿ ಅಮೋಘ ಲಯದಲ್ಲಿದ್ದಾರೆ. ತಂಜೀಮ್ ಸಕೀಬ್ ಈಗಾಗಲೇ ಏಳು ವಿಕೆಟ್ ಗಳಿಸಿದ್ದಾರೆ.

ಇನ್ನೊಂದು ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ಎ ತಂಡವು ಶ್ರೀಲಂಕಾ ಎ ವಿರುದ್ಧ ಸೆಣಸಲಿದೆ.

ಇದರಿಂದಾಗಿ ಫೈನಲ್ ಪಂದ್ಯದಲ್ಲಿ ಬದ್ಧ ಎದುರಾಳಿಗಳಾದ ಭಾರತ ಎ ಮತ್ತು ಪಾಕಿಸ್ತಾನ ಎ ತಂಡಗಳು ಮುಖಾಮುಖಿಯಾಗಲಿವೆಯೇ ಎಂಬ ಕುತೂಹಲವೂ ಗರಿಗೆದರಿದೆ.

ಸೆಮಿಫೈನಲ್ ಆರಂಭ: ಶ್ರೀಲಂಕಾ ಎ– ಪಾಕಿಸ್ತಾನ ಎ (ಬೆಳಿಗ್ಗೆ 10ರಿಂದ); ಭಾರತ ಎ –ಬಾಂಗ್ಲಾದೇಶ ಎ (ಮಧ್ಯಾಹ್ನ 2ರಿಂದ)

ಐರ್ಲೆಂಡ್ ಪ್ರವಾಸ: ಹಾರ್ದಿಕ್‌ಗೆ ವಿಶ್ರಾಂತಿ?

ನವದೆಹಲಿ (ಪಿಟಿಐ): ಐರ್ಲೆಂಡ್ ವಿರುದ್ಧ ಆಗಸ್ಟ್ 18ರಿಂದ ನಡೆಯುವ ಮೂರು ಪಂದ್ಯಗಳ ಸರಣಿಗೆ ಭಾರತ ಟಿ–20 ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರಿಗೆ ವಿಶ್ರಾಂತಿ ನೀಡುವ ಸಾಧ್ಯತೆಯಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಐರ್ಲೆಂಡ್ ಪ್ರವಾಸದ ನಂತರ ಏಷ್ಯಾ ಕಪ್ ಮತ್ತು ತವರಿನಲ್ಲಿ ಮಹತ್ವದ ವಿಶ್ವಕಪ್ ಟೂರ್ನಿ ಸೇರಿದಂತೆ ಬಿಡುವಿಲ್ಲದ ವೇಳಾಪಟ್ಟಿ ಇದ್ದು, ಕಾರ್ಯಭಾರ ಕಡಿಮೆ ಮಾಡುವ ತಂತ್ರದ ಭಾಗವಾಗಿ ಈ ನಿರ್ಧಾರ ಕೈಗೊಳ್ಳಬಹುದು. ಮೂರೂ ಮಾದರಿಯಲ್ಲಿ ಸೈ ಎನಿಸಿರುವ ಬ್ಯಾಟರ್‌ಗ ಶುಭಮನ್ ಗಿಲ್ ಅವರಿಗೂ ವಿರಾಮ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ಪಿಟಿಐಗೆ ತಿಳಿಸಿವೆ.

29 ವರ್ಷದ ಆಲ್‌ರೌಂಡರ್ ಪಾಂಡ್ಯ, ಭಾರತ ಏಕದಿನ ತಂಡದಲ್ಲಿ ಮಹತ್ವದ ಪಾತ್ರ ಹೊಂದಿದ್ದಾರೆ. ಹೀಗಾಗಿ ತಂಡದ ಚಿಂತಕರ ಚಾವಡಿ ಮತ್ತು ರಾಷ್ಟ್ರೀಯ ಆಯ್ಕೆ ಸಮಿತಿ ಅವರ ವಿಷಯದಲ್ಲಿ ಎಚ್ಚರಿಕೆಯ ಹೆಜ್ಜೆಯಿಡಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ‘ಯಾವುದೂ ಅಂತಿಮಗೊಂಡಿಲ್ಲ. ವೆಸ್ಟ್ ಇಂಡೀಸ್‌ನಲ್ಲಿ ಏಕದಿನ ಮತ್ತು ಟಿ–20 ಸರಣಿಯನ್ನು ಹಾರ್ದಿಕ್ ಹೇಗೆ ನಿಭಾಯಿಸಬಹುದು ಎಂಬುದನ್ನು ಇದು ಅವಲಂಬಿಸಿದೆ. ವೆಸ್ಟ್ ಇಂಡೀಸ್ ವಿರುದ್ಧ ಸರಣಿಯ ನಂತರ ಭಾರತ ತಂಡವು ಫ್ಲೋರಿಡಾದಿಂದ ಐರ್ಲೆಂಡ್‌ನ ಡಬ್ಲಿನ್‌ಗೆ ತೆರಳಲಿದೆ.

ಭಾರತ, ವೆಸ್ಟ್ ಇಂಡೀಸ್ ವಿರುದ್ಧ ಮೂರು ಏಕದಿನ ಮತ್ತು ಐದು ಟಿ–20 ಪಂದ್ಯಗಳನ್ನು ಆಡಲಿದೆ. ಈ ಪಂದ್ಯಗಳು ಜುಲೈ 27 ರಿಂದ ಆಗಸ್ಟ್ 13ರ ನಡುವೆ ಬ್ರಿಜ್‌ಟೌನ್ (ಬಾರ್ಬಡೋಸ್), ಟರೋಬಾ (ಟ್ರಿನಿಡಾಡ್), ಜಾರ್ಜ್‌ಟೌನ್ (ಗಯಾನಾ) ಮತ್ತು ಫ್ಲೋರಿಡಾ (ಅಮೆರಿಕ)ದಲ್ಲಿ ನಡೆಯಲಿವೆ.

ಐರ್ಲೆಂಡ್‌ನಲ್ಲಿ ಭಾರತವು ಐದು ದಿನಗಳ ಮೂರು ಟಿ–20 ಪಂದ್ಯಗಳನ್ನು ಆಡಲಿದೆ. ಈ ಪಂದ್ಯಗಳು ಕ್ರಮವಾಗಿ ಆ. 18, 20 ಮತ್ತು 23ರಂದು ನಿಗದಿಯಾಗಿವೆ.

ಪಾಕ್‌ಗೆ ನಾಲ್ಕು ವಿಕೆಟ್ ಜಯ

ಗಾಲ್, ಶ್ರೀಲಂಕಾ (ಎಎಫ್‌ಪಿ): ಆರಂಭ ಆಟಗಾರ ಇಮಾಂ- ಉಲ್-ಹಕ್ ಅವರ ಅಜೇಯ 50 (84 ಎಸೆತ) ರನ್‌ಗಳ ನೆರವಿನಿಂದ ಪಾಕಿಸ್ತಾನ ತಂಡ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದ ಅಂತಿಮ ದಿನವಾದ ಗುರುವಾರ ಶ್ರೀಲಂಕಾ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಸೋಲಿಸಿತು.

3 ವಿಕೆಟ್‌ಗೆ 48 ರನ್‌ಗಳೊಡನೆ ದಿನದಾಟ ಮುಂದುವರಿಸಿದ ಪ್ರವಾಸಿ ತಂಡ, ನಾಯಕ ಬಾಬರ್ ಆಜಂ ಅವರ ವಿಕೆಟ್ ಸೇರಿದಂತೆ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. 25 ರನ್‌ಗಳೊಡನೆ ಆಟ ಮುಂದುವರಿಸಿದ ಇಮಾಂ ಸಂಯಮದಿಂದ ಆಟವಾಡಿದರು. ಆಜಂ ಜೊತೆ ನಾಲ್ಕನೇ ವಿಕೆಟ್‌ಗೆ 41 ಮತ್ತು ಸಾವುದ್ ಶಕೀಲ್ ಐದನೇ ವಿಕೆಟ್‌ಗೆ 43 ರನ್‌ಗಳ ಎರಡು ಉಪಯುಕ್ತ ಜೊತೆಯಾಟಗಳಲ್ಲಿ ಭಾಗಿಯಾದರು. ಶಕೀಲ್ ಮೊದಲ ಇನಿಂಗ್ಸ್‌ನಲ್ಲಿ ಅಜೇಯ 208 ರನ್ ಗಳಿಸಿದ್ದರು.

ಹೊಸ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಅಭಿಯಾನ ಆರಂಭಿಸಿರುವ ಪಾಕಿಸ್ತಾನ ಈ ಗೆಲುವಿನಿಂದ 12 ಪಾಯಿಂಟ್ಸ್ ಪಡೆಯಿತು. ಎಡಗೈ ಸ್ಪಿನ್ನರ್ ಪ್ರಭಾತ್ ಜಯಸೂರ್ಯ ನಾಲ್ಕು ವಿಕೆಟ್ ಪಡೆದರು.

ಎರಡನೇ ಟೆಸ್ಟ್ ಜುಲೈ 24ರಿಂದ ಕೊಲಂಬೊದಲ್ಲಿ ನಡೆಯಲಿದೆ.

ವಾಟರ್‌ಪೋಲೊ: ಕರ್ನಾಟಕಕ್ಕೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಬಾಲಕ ಮತ್ತು ಬಾಲಕಿಯರ ತಂಡವು ಚೆನ್ನೈನಲ್ಲಿ ನಡೆಯುತ್ತಿರುವ 49ನೇ ಜೂನಿಯರ್ ರಾಷ್ಟ್ರೀಯ ಅಕ್ವಾಟಿಕ್ ಚಾಂಪಿಯನ್‌ಷಿಪ್‌ನ ವಾಟರ್ ಪೋಲೊ ಸ್ಪರ್ಧೆಯಲ್ಲಿ ಮೂರನೇ ದಿನವಾದ ಗುರುವಾರ ಗೆಲುವು ದಾಖಲಿಸಿದವು.

ನಿಹಾರ್ ರಾಜೇಶ್ (7 ಗೋಲು) ಅವರ ಆಟದ ಬಲದಿಂದ ರಾಜ್ಯದ ಬಾಲಕರ ತಂಡವು ಹರಿಯಾಣ ತಂಡ ವನ್ನು 11–8ರಿಂದ ಮಣಿಸಿತು. ಕರ್ನಾಟಕದ ಎಸ್.ಆರ್. ಚಂದ್ರು ವರ್ಧನ್ (3), ಚಿನ್ಮಯ್ ಪೈ (1) ಗೋಲು ದಾಖಲಿಸಿದರು.

ರಾಜ್ಯದ ಬಾಲಕಿಯರ ತಂಡವು ದೆಹಲಿ ತಂಡವನ್ನು 12–5ರಿಂದ ಮಣಿಸಿತು. ರೋಷಿಣಿ ಸರವಣನ್ (3), ಲಾವಣ್ಯ ಯೋಗೇಶ್, ಡಿ.ಕೆ. ದೃತಿ, ಪ್ರಚೇತಾ ಆರ್. ರಾವ್ (ತಲಾ 2), ಸಿ.ನಿತ್ಯಾ, ಡಿ.ಎಂ. ನಾಗಶೇಖರ್, ತನ್ವಿ ರವಿ (ತಲಾ 1) ಗೋಲು ದಾಖಲಿಸಿದರು. ಕರ್ನಾಟಕದ ಬಾಲಕ ಮತ್ತು ಬಾಲಕಿಯರ ತಂಡಗಳು ತಲಾ ಮೂರು ಪಂದ್ಯಗಳನ್ನು ಆಡಿದ್ದು, ತಲಾ ಎರಡರಲ್ಲಿ ಗೆಲುವು ದಾಖಲಿಸಿವೆ.

ಬಾಲಕರ ವಿಭಾಗದ ಇತರ ಪಂದ್ಯಗಳಲ್ಲಿ ಕೇರಳ ತಂಡವು ಗುಜರಾತ್ ತಂಡವನ್ನು 8–3ರಿಂದ, ತಮಿಳುನಾಡು ತಂಡವು ತೆಲಂಗಾಣ ತಂಡವನ್ನು 11–1ರಿಂದ, ಬಂಗಾಲ ತಂಡವು ಪಂಜಾಬ್ ತಂಡವನ್ನು 16–4ರಿಂದ ಮಹಾರಾಷ್ಟ್ರ ತಂಡವು ಗುಜರಾತ್ ತಂಡವನ್ನು 12–6ರಿಂದ ಮಣಿಸಿತು.

ಬಾಲಕಿಯರ ವಿಭಾಗದ ಪಂದ್ಯ ಗಳಲ್ಲಿ ಕೇರಳ ತಂಡವು ತಮಿಳುನಾಡು ತಂಡವನ್ನು 12–2ರಿಂದ, ಮಹಾರಾಷ್ಟ್ರ ತಂಡವು ಹರಿಯಾಣ ತಂಡವನ್ನು 17–1ರಿಂದ, ಬಂಗಾಲ ತಂಡವು ತೆಲಂಗಾಣ ತಂಡವನ್ನು 18–5ರಿಂದ ಸೋಲಿಸಿತು.

ಫಿಫಾ ರ್‍ಯಾಂಕಿಂಗ್: 2018ರ ಬಳಿಕ ಮೂಡಿಬಂದ ಸಾಧನೆ

99ನೇ ಸ್ಥಾನಕ್ಕೇರಿದ ಭಾರತ

ನವದೆಹಲಿ(ಪಿಟಿಐ): ಭಾರತ ಫುಟ್‌ಬಾಲ್ ತಂಡವು ಫಿಫಾ ಪುರುಷರ ರ್‍ಯಾಂಕಿಂಗ್‌ನಲ್ಲಿ 99ನೇ ಸ್ಥಾನಕ್ಕೇರಿದೆ. ಐದು ವರ್ಷಗಳ ನಂತರ 100ರೊಳಗೆ ಸ್ಥಾನಕ್ಕೇರಿದೆ.

ಸುನಿಲ್ ಚೆಟ್ರಿ ನಾಯಕತ್ವದ ಭಾರತ ತಂಡವು ಇತ್ತೀಚೆಗೆ ಸ್ಯಾಫ್ ಕಪ್ ಜಯಿಸಿತ್ತು. ಆ ಟೂರ್ನಿಯಲ್ಲಿ ಬಲಿಷ್ಠ ಲೆಬನಾನ್ ಮತ್ತು ಕುವೈತ್ ತಂಡಗಳನ್ನು ಸೋಲಿಸಿತ್ತು. ಫೈನಲ್‌ನಲ್ಲಿ ಶೂಟ್‌ಔಟ್‌ನಲ್ಲಿ ಗೆದ್ದು ಪ್ರಶಸ್ತಿ ಗಳಿಸಿತ್ತು. ಒಟ್ಟು 1208.69 ಅಂಕಗಳು ಭಾರತದ ಖಾತೆಯಲ್ಲಿವೆ. 2017 ಮತ್ತು 2018ರಲ್ಲಿ ಭಾರತ ತಂಡವು 96ನೇ ಸ್ಥಾನಕ್ಕೇರಿದೆ. 1996ರಲ್ಲಿ ಭಾರತವು 94ನೇ ಸ್ಥಾನಕ್ಕೇರಿದ್ದು ಇದುವರೆಗಿನ ಶ್ರೇಷ್ಠ ಸಾಧನೆಯಾಗಿದೆ.

ಭಾರತ ಫುಟ್‌ಬಾಲ್ ತಂಡದ ನಾಯಕ ಸುನಿಲ್ ಚೆಟ್ರಿ

ಲೆಬನಾನ್ ತಂಡವು 100ನೇ ಸ್ಥಾನಕ್ಕೇರಿದೆ. ಎರಡು ಸ್ಥಾನಗಳ ಬಡ್ತಿ ಗಳಿಸಿದೆ. ಕುವೈತ್ ತಂಡವೂ ನಾಲ್ಕು ಸ್ಥಾನಗಳ ಬಡ್ತಿ ಪಡೆದು 137ಕ್ಕೇರಿದೆ.

ಪಶ್ಚಿಮ ಏಷ್ಯಾದ ದೇಶಗಳಾದ ಲೆಬನಾನ್ ಮತ್ತು ಕುವೈತ್ ದೇಶಗಳನ್ನು ಸ್ಯಾಫ್ ಚಾಂಪಿಯನ್‌ಷಿಪ್‌ಗೆ ಆಹ್ವಾನಿಸಲಾಗಿತ್ತು. ಟೂರ್ನಿಯಲ್ಲಿ ಸ್ಪರ್ಧಾತ್ಮಕತೆ ಹೆಚ್ಚಿಸುವ ಉದ್ದೇಶದಿಂದ ಈ ಆಹ್ವಾನ ನೀಡಲಾಗಿತ್ತು.

ವಿಶ್ವ ಚಾಂಪಿಯನ್ ಅರ್ಜೆಂಟೀನಾ ತಂಡವು ರ್‍ಯಾಂಕಿಂಗ್‌ನಲ್ಲಿ ಮೊದಲ ಸ್ಥಾನದಲ್ಲಿ ಮುಂದುವರೆದಿದೆ. ನಂತರದ ಸ್ಥಾನಗಳಲ್ಲಿ ಫ್ರಾನ್ಸ್, ಬ್ರೆಜಿಲ್, ಇಂಗ್ಲೆಂಡ್ ಮತ್ತು ಬೆಲ್ಜಿಯಂ ತಂಡಗಳಿವೆ.

ಏಷ್ಯಾದ ಜಪಾನ್ (20), ಇರಾನ್ (22), ಆಸ್ಟ್ರೇಲಿಯಾ (27), ಕೊರಿಯಾ (28) ಮತ್ತು ಸೌದಿ ಅರೇಬಿಯಾ (54) ತಂಡಗಳು ಉತ್ತಮ ಸಾಧನೆ ಮಾಡಿವೆ.

ಹಾಕಿ: ಭಾರತ ಮಹಿಳಾ ತಂಡಕ್ಕೆ ಮತ್ತೆ ಸೋಲು

ರಸ್ಸೆಲ್‌ಶೀಮ್, ಜರ್ಮನಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡದವರು ಬುಧವಾರ ಜರ್ಮನಿ ವಿರುದ್ಧ 0–2ರಿಂದ ಮತ್ತೆ ಮುಗ್ಗರಿಸಿದರು. ಈ ಮೂಲಕ ಭಾರತ ತಂಡವು ಹ್ಯಾಟ್ರಿಕ್ ಸೋಲಿನೊಂದಿಗೆ ಜರ್ಮನಿ ಪ್ರವಾಸವನ್ನು ನಿರಾಸೆಯಿಂದ ಅಂತ್ಯಗೊಳಿಸಿದೆ.

ಭಾರತ ತಂಡವು ಆರಂಭಿಕ ಪಂದ್ಯದಲ್ಲಿ ಚೀನಾ ವಿರುದ್ಧ 2–3ರಿಂದ, ಎರಡನೇ ಪಂದ್ಯದಲ್ಲಿ ಜರ್ಮನಿ ವಿರುದ್ಧ 1–4ರಿಂದ ಸೋಲು ಕಂಡಿತ್ತು.

ಕೊನೆಯ ಪಂದ್ಯದ ಮೂರನೇ ಕ್ವಾರ್ಟರ್ ತನಕ ಎರಡೂ ತಂಡಗಳಿಂದ ಯಾವುದೇ ದಾಖಲಾಗಿರಲಿಲ್ಲ. ಆದರೆ, ನಾಲ್ಕನೇ ಕ್ವಾರ್ಟರ್‌ನಲ್ಲಿ ಆತಿಥೇಯ ತಂಡದ ನೈಕ್ ಲೊರೆನ್ಜ್ (52 ನಿ) ಮತ್ತು ಷಾರ್ಲೆಟ್ ಸ್ಟೇಪೆನ್‌ಹೋಸ್ಟ್ (54 ನಿ) ಅವರು ಎರಡು ನಿಮಿಷದ ಅಂತರದಲ್ಲಿ ಎರಡು ಗೋಲು ದಾಖಲಿಸಿ ಮುನ್ನಡೆ ಒದಗಿಸಿದರು.

ಮುಂಬರುವ ಏಷ್ಯನ್ ಗೇಮ್ಸ್‌ನ ತಯಾರಿಯ ಭಾಗವಾಗಿ ಭಾರತ ಮಹಿಳಾ ತಂಡವು ಜರ್ಮನಿ ಪ್ರವಾಸ ಕೈಗೊಂಡಿತ್ತು. ಮುಂದೆ ಸ್ಪ್ಯಾನಿಷ್ ಹಾಕಿ ಫೆಡರೇಷನ್‌ನ ಶತಮಾನೋತ್ಸವದ ಪ್ರಯುಕ್ತ ಅಂತರರಾಷ್ಟ್ರೀಯ ಟೂರ್ನಿಗಾಗಿ ಭಾರತದ ವನಿತೆಯರ ತಂಡ ತೆರಸ್ಸಾಗೆ ಪ್ರಯಾಣ ಬೆಳೆಸಲಿದೆ.

ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿ

ಕೆರ್ ಗೈರಿನಲ್ಲೂ ಆಸ್ಟ್ರೇಲಿಯಾ ಶುಭಾರಂಭ

ಸಿಡ್ನಿ (ಎಪಿ): ಪ್ರಮುಖ ಆಟಗಾರ್ತಿ ಸ್ಯಾಮ್ ಕೆರ್ ಅವರು ಗಾಯಾಳಾಗಿ ಅಂತಿಮ ಕ್ಷಣದಲ್ಲಿ ತಂಡದಿಂದ ಹೊರಬಿದ್ದರೂ, ಆಸ್ಟ್ರೇಲಿಯಾ ಗೆಲುವಿಗೆ ಅಡ್ಡಿಯಾಗಲಿಲ್ಲ. ಗುರುವಾರ ಆರಂಭವಾದ ಮಹಿಳಾ ಫುಟ್‌ಬಾಲ್ ವಿಶ್ವಕಪ್ ಟೂರ್ನಿಯಲ್ಲಿ ಆಸ್ಟ್ರೇಲಿಯಾ 1–0ಯಿಂದ ಐರ್ಲೆಂಡ್ ತಂಡವನ್ನು ಸೋಲಿಸಿತು.

52ನೇ ನಿಮಿಷ ಸ್ಟೀಫನ್ ಕೆಟ್ಲಿ ‘ಪೆನಾಲ್ಟಿ’ ಮೂಲಕ ಗಳಿಸಿದ ಗೋಲಿನಿಂದ ಐರ್ಲೆಂಡ್‌ನ ಪ್ರತಿರೋಧ ಕೊನೆಗೊಂಡಿತು. ಕ್ರೀಡಾಂಗಣದಲ್ಲಿದ್ದ 75,000ಕ್ಕೂ ಹೆಚ್ಚು ಅಭಿಮಾನಿಗಳ ಸಂಭ್ರಮ ಮುಗಿಲು ಮುಟ್ಟಿತು.

ಕೆರ್, ಆಸ್ಟ್ರೇಲಿಯಾ ಪರ ಅತಿ ಹೆಚ್ಚು ಗೋಲುಗಳಿಸಿದ ಹಿರಿಮೆ ಹೊಂದಿದ್ದಾರೆ. ಮೀನಖಂಡದ ಗಾಯದಿಂದ ಅವರು ‘ಬಿ’ ಗುಂಪಿನಲ್ಲಿ ನೈಜೀರಿಯಾ ವಿರುದ್ಧ ಜುಲೈ 27ರಂದು ನಡೆಯುವ ಎರಡನೇ ಪಂದ್ಯಕ್ಕೂ ಅಲಭ್ಯರಾಗಿದ್ದಾರೆ. ಪಂದ್ಯ ಆರಂಭವಾಗುವ ಒಂದು ಗಂಟೆ ಮೊದಲಷ್ಟೇ ಈ ವಿಷಯ ಪ್ರಕಟಿಸಲಾಯಿತು. ಅವರ ಗೈರಿನಿಂದ ಆಸ್ಟ್ರೇಲಿಯಾ ತಂತ್ರಗಾರಿಕೆ ರೂಪಿಸಲು ಪರದಾಡಿತು.

ಮೊದಲ ಬಾರಿ ವಿಶ್ವಕಪ್ ಆಡುತ್ತಿರುವ ಐರ್ಲೆಂಡ್, ಡಬ್ಲಿನ್‌ನಲ್ಲಿ ನಡೆದಿದ್ದ ಸೌಹಾರ್ದ ಪಂದ್ಯದಲ್ಲಿ ಆಸ್ಟ್ರೇಲಿಯಾ ಮೇಲೆ ಜಯಗಳಿಸಿತ್ತು.

ನ್ಯೂಜಿಲೆಂಡ್‌ಗೆ ಗೆಲುವಿನ ಆರಂಭ

ಆಕ್ಲೆಂಡ್ (ಎಎಫ್‌ಪಿ): ಆತಿಥೇಯ ನ್ಯೂಜಿಲೆಂಡ್ ತಂಡ ಮಹಿಳಾ ಫುಟ್‌ಬಾಲ್ ವಿಶ್ವಕಪ್ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಗುರುವಾರ ನಾರ್ವೆ ಮೇಲೆ 1–0 ಜಯ ಪಡೆಯಿತು. ನ್ಯೂಜಿಲೆಂಡ್, ನೆರೆಯ ಆಸ್ಟ್ರೇಲಿಯಾ ಜೊತೆ ವಿಶ್ವಕಪ್‌ನ ಜಂಟಿ ಆತಿಥ್ಯ ವಹಿಸಿಕೊಂಡಿದೆ.

42,000ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿದ್ದ ಪ್ರೇಕ್ಷಕರು ತಮ್ಮ ತಂಡದ ಗೆಲುವನ್ನು ಸಂಭ್ರಮಿಸಿದರು.

ಫ್ರಾನ್ಸ್‌ನಲ್ಲಿ ನಾಲ್ಕು ವರ್ಷಗಳ ಹಿಂದೆ ನಡೆದ ವಿಶ್ವಕಪ್‌ನಲ್ಲಿ 24 ತಂಡಗಳು ಭಾಗವಹಿಸಿದ್ದವು. ಈ ಬಾರಿ ತಂಡಗಳ ಸಂಖ್ಯೆ 32ಕ್ಕೆ ಏರಿದೆ.

ಆತಂಕ: ಪಂದ್ಯ ಆರಂಭಕ್ಕೆ ಸ್ವಲ್ಪ ಮೊದಲು ಆಕ್ಲೆಂಡ್ ನಗರದಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಗುಂಡಿನ ದಾಳಿ ನಡೆಸಿ ಇಬ್ಬರನ್ನು ಹತ್ಯೆ ಮಾಡಿದ್ದರಿಂದ ನಗರದಲ್ಲಿ ತಲ್ಲಣ ಉಂಟಾಗಿತ್ತು. ಬಂದೂಕುಧಾರಿಯೂ ಮೃತಪಟ್ಟಿದ್ದ. ಆದರೆ ವಿಶ್ವಕಪ್ ಪಂದ್ಯಗಳು ಮುಂದುವರಿಯುವುದಾಗಿ ಪ್ರಧಾನಿ ಕ್ರಿಸ್ ಹಿಪ್ಕಿನ್ಸ್ ಘೋಷಿಸಿದರು.

ಕರ್ನಾಟಕ ತಂಡ ತೊರೆದು ಹೊರಟ ಕ್ರಿಕೆಟಿಗರು

ಕೇರಳಕ್ಕೆ ಶ್ರೇಯಸ್; ಗೋವಾದತ್ತ ಸಿದ್ಧಾರ್ಥ್, ಕದಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕ್ರಿಕೆಟ್ ತಂಡದ ಮೂವರು ಪ್ರಮುಖ ಆಟಗಾರರು ನೆರೆರಾಜ್ಯಗಳ ತಂಡಗಳಿಗೆ ವಲಸೆ ಹೋಗಲಿದ್ದಾರೆ.

ಲೆಗ್‌ಸ್ಪಿನ್ ಆಲ್‌ರೌಂಡರ್ ಶ್ರೇಯಸ್ ಗೋಪಾಲ್, ಬ್ಯಾಟರ್‌ಗಳಾದ ಕೆ.ವಿ. ಸಿದ್ಧಾರ್ಥ್ ಮತ್ತು ರೋಹನ್ ಕದಂ ಅವರು ತವರು ತಂಡವನ್ನು ತೊರೆಯಲಿದ್ದಾರೆ. ಅವರಿಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ನಿರಾಕ್ಷೇಪಣ ಪತ್ರವನ್ನೂ ನೀಡಿದೆ ಎಂದು ವಿಶ್ವಸನೀಯ ಮೂಲಗಳು ’ಪ್ರಜಾವಾಣಿ‘ಗೆ ಖಚಿತಪಡಿಸಿವೆ.

ಶ್ರೇಯಸ್ ಗೋಪಾಲ್ ಅವರು ಕೇರಳ ತಂಡಕ್ಕೆ ಸೇರ್ಪಡೆಯಾಗಲಿದ್ದು ಒಪ್ಪಂದ ಮಾಡಿಕೊಂಡಿದ್ದಾರೆನ್ನಲಾಗಿದೆ. ಸಿದ್ಧಾರ್ಥ್ ಮತ್ತು ರೋಹನ್ ಅವರು ಗೋವಾ ತಂಡವನ್ನು ಸೇರಿಕೊಳ್ಳುವರು. ಇದೇ ದೇಶಿ ಋತುವಿನಿಂದ ಅವರು ಆ ತಂಡಗಳಲ್ಲಿ ಆಡಲಿದ್ದಾರೆಂದು ಮೂಲಗಳು ಸ್ಪಷ್ಟಪಡಿಸಿವೆ.

ರಾಜ್ಯದ ಇನ್ನೊಬ್ಬ ಪ್ರಮುಖ ಬ್ಯಾಟರ್ ಕೂಡ ವಿದರ್ಭ ತಂಡಕ್ಕೆ ವಲಸೆ ಹೋಗಲು ಎನ್‌ಒಸಿಗಾಗಿ ಕಾಯುತ್ತಿದ್ದಾರೆಂದೂ ತಿಳಿದುಬಂದಿದೆ.

ಶ್ರೇಯಸ್ ಗೋಪಾಲ್

ಕೆ.ವಿ. ಸಿದ್ಧಾರ್ಥ್

ರೋಹನ್ ಕದಂ

ಕಳೆದ ರಣಜಿ ಋತುವಿನಲ್ಲಿ ಒಂಬತ್ತು ಪಂದ್ಯಗಳಲ್ಲಿಯೂ ಆಡುವ ಅವಕಾಶವನ್ನು ಶ್ರೇಯಸ್ ಪಡೆದಿದ್ದರು. ಆದರೆ, ಅವರಿಗೆ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿಯಲ್ಲಿ ಎಂಟು ಪಂದ್ಯಗಳ ಪೈಕಿ ಕೇವಲ ನಾಲ್ಕು ಪಂದ್ಯಗಳಲ್ಲಿ ಆಡಿಸಲಾಗಿತ್ತು. ರಣಜಿ ಟ್ರೋಫಿ ಟೂರ್ನಿಯಲ್ಲಿ ಹೆಚ್ಚು ಓವರ್‌ಗಳ ಬೌಲಿಂಗ್ ಮಾಡಲೂ ಅವಕಾಶ ಲಭಿಸಿರಲಿಲ್ಲ.

29 ವರ್ಷದ ಶ್ರೇಯಸ್ ಕರ್ನಾಟಕದ ಉತ್ತಮ ಆಲ್‌ರೌಂಡರ್‌ಗಳಲ್ಲಿ ಒಬ್ಬರು. 76 ಪ್ರಥಮದರ್ಜೆ ಪಂದ್ಯಗಳಿಂದ 3137 ರನ್ ಗಳಿಸಿದ್ದಾರೆ. ಅದರಲ್ಲಿ ಐದು ಶತಕ ಮತ್ತು 13 ಅರ್ಧಶತಕಗಳು ಇವೆ. 218 ವಿಕೆಟ್‌ಗಳನ್ನೂ ಗಳಿಸಿದ್ದಾರೆ. 108 ರನ್‌ಗಳಿಗೆ 9 ವಿಕೆಟ್ ಗಳಿಸಿದ್ದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿದೆ.

ಭಾರತ ತಂಡವನ್ನು ಪ್ರತಿನಿಧಿಸಿರುವ ಮಯಂಕ್ ಅಗರವಾಲ್, ಮನೀಷ್ ಪಾಂಡೆ ಮತ್ತು ದೇವದತ್ತ ಪಡಿಕ್ಕಲ್ ಹಾಗೂ ಕೆಲವು ಯುವ ಬ್ಯಾಟರ್‌ಗಳಿಗೆ ಅವಕಾಶ ನೀಡಿದ್ದರಿಂದ ಸಿದ್ಧಾರ್ಥ್ ಅವರಿಗೆ ಕಳೆದ ಋತುವಿನಲ್ಲಿ ಆಡುವ ಅವಕಾಶ ದೊರೆತಿರಲಿಲ್ಲ. ರಣಜಿ ಟೂರ್ನಿಯಲ್ಲಿ ಅವರು ಬೆಂಚ್ ಕಾದಿದ್ದೇ ಹೆಚ್ಚು. ಆದ್ದರಿಂದ ಅವರು ಅವಕಾಶ ಹುಡುಕಿಕೊಂಡು ಗೋವಾದತ್ತ ಮುಖ ಮಾಡಿದ್ದಾರೆ.

ಈಚೆಗೆ ನಮಿಬಿಯಾ ಪ್ರವಾಸಕ್ಕೆ ತೆರಳಿದ್ದ ಕರ್ನಾಟಕ ತಂಡದಲ್ಲಿಯೂ 30 ವರ್ಷದ ಸಿದ್ಧಾರ್ಥ್ ಇದ್ದರು. ಕರ್ನಾಟಕ ತಂಡವನ್ನು 20 ಪ್ರಥಮ ದರ್ಜೆ ಪಂದ್ಯಗಳಲ್ಲಿ ಅವರು ಪ್ರತಿನಿಧಿಸಿದ್ದಾರೆ. 44.51ರ ಸರಾಸರಿಯಲ್ಲಿ 1449 ರನ್ ಸೇರಿಸಿದ್ದಾರೆ. 10 ಅರ್ಧಶತಕಗಳು ಅದರಲ್ಲಿ ಸೇರಿವೆ.

ಆಕ್ರಮಣಕಾರಿ ಶೈಲಿ ಎಡಗೈ ಬ್ಯಾಟರ್ ರೋಹನ್ ಕದಂ 2021ರ ನವೆಂಬರ್‌ನಲ್ಲಿ ತಮಿಳುನಾಡು ವಿರುದ್ಧದ ಏಕದಿನ ಪಂದ್ಯದಲ್ಲಿ ಆಡಿದ್ದರು. ಅದರ ನಂತರ ಅವರಿಗೆ ಅವಕಾಶ ಲಭಿಸಿಲ್ಲ. 2017ರಲ್ಲಿ ಕದಂ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು. ನಾಲ್ಕು ಪಂದ್ಯಗಳನ್ನು ಆಡಿದ್ದಾರೆ. 13 ಲಿಸ್ಟ್ ಎ ಮತ್ತು 29 ಟ್ವೆಂಟಿ–20 ಪಂದ್ಯಗಳಲ್ಲಿ ಆಡಿದ್ದಾರೆ.

Infosys® Navigate your next

Infosys Limited

Regd. office: Electronics City, Hosur Road, Bengaluru 560 100, India.

CIN: L85110KA1981PLC013115
Website: www.infosys.com
Email: investors@infosys.com
T: 91 80 2852 0261
F: 91 80 2852 0362

Q1 FY 24 Financial Results

Extract of the consolidated audited financial results of Infosys Limited and its subsidiaries for the quarter ended June 30, 2023 prepared in compliance with the Indian Accounting Standards (Ind-AS)

(in ₹ crore, except per equity share data)

Particulars	Quarter ended June 30, 2023	Year ended March 31, 2023	Quarter ended June 30, 2022
Revenue from operations	**37,933**	**1,46,767**	**34,470**
Profit before tax	8,362	33,322	7,534
Profit for the period	5,945	24,108	5,362
Total comprehensive income for the period (comprising profit for the period after tax and other comprehensive income after tax)	6,129	24,622	4,986
Profit attributable to:			
Owners of the Company	5,945	24,095	5,360
Non-controlling interests	–	13	2
	5,945	**24,108**	**5,362**
Total comprehensive income attributable to:			
Owners of the Company	6,132	24,598	4,986
Non-controlling interest	(3)	24	–
	6,129	**24,622**	**4,986**
Paid-up share capital (par value ₹5/- each fully paid)	2,070	2,069	2,098
Other equity*#	73,338	73,338	73,252
Earnings per share (par value ₹5/- each)**			
Basic (₹)	14.37	57.63	12.78
Diluted (₹)	14.35	57.54	12.76

* Balances for the quarters ended June 30, 2023 and June 30, 2022 represent balances as per the audited Balance Sheet for the year ended March 31, 2023 and March 31, 2022, respectively as required by SEBI (Listing and Other Disclosure Requirements) Regulations, 2015

** EPS is not annualized for the quarters ended June 30, 2023 and June 30, 2022

\# Excludes non-controlling interest

1. Notes pertaining to the current quarter

a) The audited interim condensed consolidated financial statements for the quarter ended June 30, 2023 have been taken on record by the Board of Directors at its meeting held on July 20, 2023. **The statutory auditors, Deloitte Haskins & Sells LLP have expressed an unmodified audit opinion thereon**. The information presented above is extracted from the audited interim condensed consolidated financial statements. Those interim condensed consolidated financial statements are prepared in accordance with the Indian Accounting Standards (Ind-AS) as prescribed under Section 133 of the Companies Act, 2013 read with Rule 3 of the Companies (Indian Accounting Standards) Rules, 2015 and relevant amendment rules thereafter.

b) **Board change**

Based on the recommendation of the Nomination and Remuneration Committee, the Board considered the appointment of Helene Auriol Potier (DIN - 10166891), as an Additional and Independent Director effective May 26, 2023 for a period of 3 (three) years and the same was approved by the shareholders at the Annual General Meeting (AGM) of the Company held on June 28, 2023.

c) **Update on employee stock grants**

The Board, on July 20, 2023, based on the recommendations of the Nomination and Remuneration Committee, approved the grant of 23,780 one time RSUs to three eligible employees under the 2015 Plan effective August 1, 2023. These RSUs will vest equally over a period of four years.

d) **Proposed transaction**

Infosys Limited will acquire Danske IT and Support Services India Private Limited (“DIT”) which is Danske Bank’s IT center in India for an estimated consideration of DKK 13.6 million (approximately ₹16 crore) subject to customary closing adjustments and conditions.

2. Information on dividends for the quarter ended June 30, 2023

For fiscal 2023, the Board recommended a final dividend of ₹17.50/- (par value of ₹5/- each) per equity share. The same was approved by the shareholders in the Annual General Meeting (AGM) of the Company held on June 28, 2023 and paid on July 3, 2023.

(in ₹)

Particulars	Quarter ended June 30, 2023	Year ended March 31, 2023	Quarter ended June 30, 2022
Dividend per share (par value ₹5/- each)			
Interim dividend	–	16.50	–
Final dividend	–	17.50	–

3. Audited financial results of Infosys Limited (Standalone information)

(in ₹ crore)

Particulars	Quarter ended June 30, 2023	Year ended March 31, 2023	Quarter ended June 30, 2022
Revenue from operations	31,811	1,24,014	29,527
Profit before tax	8,146	31,643	6,902
Profit for the period	5,956	23,268	4,901

The above is an extract of the detailed format of the quarterly audited financial results filed with stock exchanges under Regulation 33 of the SEBI (Listing and Other Disclosure Requirements) Regulations, 2015. The full format of the quarterly audited financial results are available on the stock exchange websites, www.nseindia.com and www.bseindia.com, and on the Company’s website, www.infosys.com.

By order of the Board
for Infosys Limited
Sd/-
Salil Parekh
Chief Executive Officer and Managing Director

Bengaluru, India
July 20, 2023

Certain statements in this release concerning our future growth prospects, or our future financial or operating performance are forward-looking statements intended to qualify for the ‘safe harbor’ under the Private Securities Litigation Reform Act of 1995, which involve a number of risks and uncertainties that could cause actual results or outcomes to differ materially from those in such forward-looking statements. The risks and uncertainties relating to these statements include, but are not limited to, risks and uncertainties regarding the execution of our business strategy, our ability to attract and retain personnel, our transition to hybrid work model, economic uncertainties, technological innovations such as generative AI, the complex and evolving regulatory landscape including immigration regulation changes, our ESG vision, our Capital Allocation Policy and expectations concerning our market position, future operations, margins, profitability, liquidity, capital resources, and our corporate actions including acquisitions. Important factors that may cause actual results or outcomes to differ from those implied by the forward-looking statements are discussed in more detail in our US Securities and Exchange Commission filings including our Annual Report on Form 20-F for the fiscal year ended March 31, 2023. These filings are available at www.sec.gov. Infosys may, from time to time, make additional written and oral forward-looking statements, including statements contained in the Company’s filings with the Securities and Exchange Commission and our reports to shareholders. The Company does not undertake to update any forward-looking statements that may be made from time to time by or on behalf of the Company unless it is required by law.

ವಿನೇಶಾ, ಬಜರಂಗ್ ಟ್ರಯಲ್ಸ್ ವಿನಾಯಿತಿಗೆ ಹೆಚ್ಚಿದ ವಿರೋಧ; ಪ್ರತಿಭಟನೆ

ಐಒಎ ಕದ ತಟ್ಟಿದ ಕುಸ್ತಿಪಟುಗಳು

ನವದೆಹಲಿ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುವ ಭಾರತ ಕುಸ್ತಿ ತಂಡದಲ್ಲಿ ಬಜರಂಗ್ ಪೂನಿಯಾ ಮತ್ತು ವಿನೇಶಾ ಫೋಗಟ್ ಅವರಿಗೆ ನೇರ ಅರ್ಹತೆ ಕೊಟ್ಟಿರುವುದನ್ನು ವಿರೋಧಿಸಿ ಜೂನಿಯರ್ ಕುಸ್ತಿಪಟುಗಳ ಪ್ರತಿಭಟನೆ ಕಾವು ಮತ್ತಷ್ಟು ಹೆಚ್ಚಿದೆ.

ಜೂನಿಯರ್ ಕುಸ್ತಿಪಟುಗಳು, ಅವರ ಪಾಲಕರು ಮತ್ತು ತರಬೇತುದಾರರು ಗುರುವಾರ ದೆಹಲಿಯಲ್ಲಿರುವ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಭವನಕ್ಕೆ ತೆರಳಿದರು. 150ಕ್ಕೂ ಹೆಚ್ಚು ಪ್ರತಿಭಟನಾಕಾರರು ಐಒಎ ಅಧ್ಯಕ್ಷೆ ಪಿ.ಟಿ. ಉಷಾ ಮತ್ತು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್ಐ) ಅಡ್ ಹಾಕ್ ಸಮಿತಿಯ ಮುಖ್ಯಸ್ಥ ಭೂಪೆಂದರ್ ಸಿಂಗ್ ಬಜ್ವಾ ಅವರನ್ನು ಭೇಟಿಯಾದರು. ಬುಧವಾರ ಹರಿಯಾಣದ ಹಿಸಾರ್‌ನಲ್ಲಿ ಪ್ರತಿಭಟನೆ ಆರಂಭವಾಗಿತ್ತು.

‘ಐಒಎ ಮುಖ್ಯಸ್ಥರನ್ನು ಭೇಟಿಯಾಗುವುದು ನಮ್ಮ ಉದ್ದೇಶವಾಗಿತ್ತು. ಯಾವುದೇ ರೀತಿಯ ಏಕಪಕ್ಷೀಯ ತೀರ್ಮಾನಗಳನ್ನು ನಾವು ಒಪ್ಪುವುದಿಲ್ಲ. ಇದು ತಪ್ಪು. ಬಜರಂಗ್ ಮತ್ತು ವಿನೇಶಾ ಅವರಿಗೆ ಟ್ರಯಲ್ಸ್‌ನಿಂದ ನೀಡಿರುವ ವಿನಾಯಿತಿಯನ್ನು ಹಿಂಪಡೆಯಬೇಕು’ ಎಂದು ಜೂನಿಯರ್ ಕುಸ್ತಿಪಟು ಅಂತಿಮ ಪಂಘಲ್ ಅವರ ಕೋಚ್ ವಿಕಾಸ್ ಭಾರದ್ವಾಜ್ ಆಗ್ರಹಿಸಿದರು.

20 ವರ್ಷದೊಳಗಿನವರ ವಿಭಾಗದಲ್ಲಿ ಹಾಲಿ ವಿಶ್ವ ಚಾಂಪಿಯನ್ ಆಗಿರುವ ಅಂತಿಮ ಪಂಘಾಲ್ ಮತ್ತು 23 ವರ್ಷದೊಳಗಿನವರ ಚಾಂಪಿಯನ್ ಸುಜೀತ್ ಕಲ್ಕಲ್ ಅವರು ಅಡ್‌ಹಾಕ್ ಸಮಿತಿಯ ತೀರ್ಮಾನವನ್ನು ಕಟುವಾಗಿ ವಿರೋಧಿಸಿದ್ದಾರೆ. ಅಲ್ಲದೇ ತಮಗೆ ಅವಕಾಶ ಕೊಟ್ಟರೆ ಬಜರಂಗ್ ಮತ್ತು ವಿನೇಶಾ ಅವರನ್ನು ಸೋಲಿಸಲೂ ಸಮರ್ಥರಾಗಿರುವುದಾಗಿ ಸವಾಲು ಹಾಕಿದ್ದಾರೆ.

‘ಪುರುಷರ ಫ್ರೀಸ್ಟೈಲ್ 65ಕೆ.ಜಿ. ಮತ್ತು ಮಹಿಳೆಯರ 53 ಕೆ.ಜಿ ವಿಭಾಗಗಳಲ್ಲಿ ತಂಡಗಳನ್ನು ಅಂತಿಮಗೊಳಿಸಲಾಗಿದೆ. ಉಳಿದ ವಿಭಾಗಗಳ ಆಯ್ಕೆಗೆ ಟ್ರಯಲ್ಸ್ ನಡೆಸಲಾಗುವುದು’ ಎಂದು ಬಜ್ವಾ ಅವರು ಮಂಗಳವಾರ ಪ್ರಕಟಿಸಿದ್ದರು.

ಪಂಘಲ್ ಮತ್ತು ಸುಜೀತ್ ಅವರು ಅಡ್‌ಹಾಕ್ ಸಮಿತಿಯ ತೀರ್ಮಾನವನ್ನು ವಿರೋಧಿಸಿ ದೆಹಲಿ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದಾರೆ.

ಸುಜೀತ್ ಕಲ್ಕಲ್ ಮತ್ತು ಅಂತಿಮ ಪಂಘಲ್

ಅನ್ಷು ಮಲಿಕ್ ಟ್ವೀಟ್

ಅನ್ಷು ಮಲಿಕ್

ಡಬ್ಲ್ಯುಎಫ್ಐ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಪ್ರತಿಭಟನೆ ನಡೆಸಿದ್ದ ಕುಸ್ತಿಪಟುಗಳಲ್ಲಿ ಒಬ್ಬರಾಗಿದ್ದ, ಕಾಮನ್‌ವೆಲ್ತ್ ಗೇಮ್ಸ್ ಪದಕವಿಜೇತೆ ಅನ್ಷು ಮಲಿಕ್ ಅವರೂ ಜೂನಿಯರ್ ಪೈಲ್ವಾನರಿಗೆ ಬೆಂಬಲ ಸೂಚಿಸಿದ್ದಾರೆ.

‘ಯಾವುದೇ ಕ್ರೀಡಾಪಟುವಿಗೆ ಒಲಿಂಪಿಕ್ ಮತ್ತು ಏಷ್ಯನ್ ಗೇಮ್ಸ್‌ಗಳಲ್ಲಿ ಪದಕ ಜಯಿಸಬೇಕೆಂಬ ಹಂಬಲ ಇದ್ದೇ ಇರುತ್ತದೆ. ದೇಶಕ್ಕೆ ಗೌರವ ಗಳಿಸಿ ಕೊಡುವ ಗುರಿ ಇರುತ್ತದೆ. ಆದರೆ ಅವರಿಂದ ಅವಕಾಶವನ್ನು ಕಸಿದುಕೊಂಡರೆ ಹೇಗೆ‘ ಎಂದು ಅನ್ಷು ಟ್ವೀಟ್ ಮಾಡಿದ್ದಾರೆ.

ಮಹಿಳೆಯರ 57 ಕೆ.ಜಿ ವಿಭಾಗದಲ್ಲಿ ಅನ್ಷು ಸ್ಪರ್ಧಿಸುತ್ತಿದ್ದಾರೆ.

‘ಜೂನಿಯರ್ ಪೈಲ್ವಾನರು ಟ್ರಯಲ್ಸ್‌ಗಾಗಿ ಬೇಡಿಕೆ ಇಟ್ಟಿರುವುದು ಸರಿ ಇದೆ. ಇದು ಅವರ ಹಕ್ಕು ಕೂಡ. ಅವರನ್ನು ನಾನು ಬೆಂಬಲಿಸುವೆ’ ಎಂದು ಅನ್ಷು ಉಲ್ಲೇಖಿಸಿದ್ದಾರೆ.

ಒಡಕು ಮೂಡಿಸುವ ಹುನ್ನಾರ: ಸಾಕ್ಷಿ ಮಲಿಕ್

ಸಾಕ್ಷಿ ಮಲಿಕ್

ನವದೆಹಲಿ (ಪಿಟಿಐ): ಏಷ್ಯನ್ ಕ್ರೀಡಾಕೂಟಕ್ಕೆ ಬಜರಂಗ್ ಪೂನಿಯಾ ಮತ್ತು ವಿನೇಶಾ ಫೋಗಟ್ ಅವರನ್ನು ಟ್ರಯಲ್ಸ್ ಇಲ್ಲದೇ ಆಯ್ಕೆ ಮಾಡಿರುವುದು ಕುಸ್ತಿಪಟುಗಳ ಒಗ್ಗಟ್ಟು ಮುರಿಯುವ ಹುನ್ನಾರವಾಗಿದೆ ಎಂದು ಒಲಿಂಪಿಯನ್ ಕುಸ್ತಿಪಟು ಸಾಕ್ಷಿ ಮಲಿಕ್ ಟ್ವೀಟ್ ಮಾಡಿದ್ದಾರೆ.

‘ನಾನಂತೂ ಟ್ರಯಲ್ಸ್ ಇಲ್ಲದೇ ನೇರ ಅವಕಾಶ ಕೊಡುವಂತೆ ಕೇಳಿಲ್ಲ. ಅಡ್‌ಹಾಕ್ ಸಮಿತಿಯು ನೇರ ಅರ್ಹತೆ ನೀಡುವುದಾಗಿ ಹೇಳಿದಾಗಲೂ ನಾನೇ ತಿರಸ್ಕರಿಸಿದ್ದೆ. ಆದರೆ ಅಭ್ಯಾಸಕ್ಕಾಗಿ ಸಮಯಾವಕಾಶ ಕೇಳಿದ್ದು ನಿಜ. ಸರ್ಕಾರವೂ ಆ.10ರವರೆಗೆ ಅವಕಾಶ ನೀಡಿ ದೆ. ಅದಕ್ಕಾಗಿ ನಾವೂ ಸಿದ್ಧತೆ ನಡೆಸಿದ್ದೇವೆ‘ ಎಂದು ಸಾಕ್ಷಿ ಹೇಳಿ ದ್ದಾರೆ. ಮಹಿಳೆಯರ ಫ್ರೀಸ್ಟೈಲ್ ಕುಸ್ತಿಯ 62 ಕೆ.ಜಿ. ವಿಭಾಗದಲ್ಲಿ ಅವರು ಸ್ಪರ್ಧಿಸುತ್ತಾರೆ.

ಈಚೆಗೆ ಡಬ್ಲ್ಯುಎಫ್ಐ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧದ ಪ್ರತಿಭಟನೆಯಲ್ಲಿ ಸಾಕ್ಷಿ ಕೂಡ ಮುಂಚೂಣಿಯಲ್ಲಿದ್ದರು.

‘ಕಳೆದ ಮೂರು–ನಾಲ್ಕು ದಿನಗಳಿಂದ ನೇರ ಪ್ರವೇಶದ ಕುರಿತು ನಡೆಯುತ್ತಿರುವ ಬೆಳವಣಿಗೆಗಳನ್ನು ಗಮನಿಸಿದ್ದೇನೆ. ಕುಸ್ತಿಪಟುಗಳ ವಲಯದಲ್ಲಿ ಒಡಕು ಮೂಡಿಸಲು ಈ ಹುನ್ನಾರ ಮಾಡಲಾಗುತ್ತಿದೆ. ಟ್ರಯಲ್ಸ್‌ಗೆ ನಾನು ವಿರುದ್ಧವಾಗಿಲ್ಲ. ಎಲ್ಲರಿಗೂ ಸಮಾನ ಅವಕಾಶ ಸಿಗಬೇಕು‘ ಎಂದೂ ಸಾಕ್ಷಿ ಸ್ಪಷ್ಟಪಡಿಸಿದ್ದಾರೆ.

ಫೈನಲ್‌ಗೆ ಓರಿಯನ್ಸ್, ಎಂಸಿಎಚ್‌ಎಸ್

ಬೆಂಗಳೂರು: ಯಂಗ್ ಓರಿಯನ್ಸ್ ಎಸ್.ಸಿ ಮತ್ತು ಎಂಸಿಎಚ್‌ಎಸ್ ತಂಡಗಳು 13 ವರ್ಷದೊಳಗಿನವರ ರಾಜ್ಯ ಸಬ್ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದಲ್ಲಿ ಫೈನಲ್ ಪ್ರವೇಶ ಮಾಡಿದವು.

ಗುರುವಾರ ಸೆಮಿಫೈನಲ್ ಪಂದ್ಯಗಳು ನಡೆದವು. ಯಂಗ್ ಓರಿಯನ್ಸ್ ಎಸ್.ಸಿ ತಂಡವು ಎಸ್. ಬ್ಲೂಸ್ ತಂಡವನ್ನು 46–38ರಿಂದ ಹಾಗೂ ಎಂಸಿಎಚ್‌ಎಸ್ ತಂಡವು ವಿಮಾನಪುರ ಎಸ್.ಸಿ ತಂಡವನ್ನು 66–46ರಿಂದ ಸೋಲಿಸಿತು.

ಬಾಲಕಿಯರ ಸೆಮಿಫೈನಲ್‌ನಲ್ಲಿ ಆಲ್ ಸ್ಟಾರ್ ಅಕಾಡೆಮಿ ಮೈಸೂರು ತಂಡವು ಯಂಗ್ ಓರಿಯನ್ಸ್ ತಂಡವನ್ನು 29–27ರಿಂದ ಮಣಿಸಿತು. ಮತ್ತೊಂದು ಪಂದ್ಯದಲ್ಲಿ ಎಸ್. ಬ್ಲೂಸ್ ತಂಡವು ಅಪ್ಪಯ್ಯ ಬಿ.ಸಿ ತಂಡವನ್ನು 35–13ರಿಂದ ಸೋಲಿಸಿತು.

ಆ್ಯಷಸ್ ಟೆಸ್ಟ್: ದ್ವಿಶತಕ ತಪ್ಪಿಸಿಕೊಂಡ ಕ್ರಾಲಿ

ಮ್ಯಾಂಚೆಸ್ಟರ್ (ಎಎಫ್‌ಪಿ): ಏಕದಿನ ಪಂದ್ಯದ ರೀತಿ ಆಡಿದ ಆರಂಭ ಆಟಗಾರ ಜಾಕ್ ಕ್ರಾಲಿ ಅವರ 189 ರನ್‌ಗಳ ಅಮೋಘ ಆಟದಿಂದ ಇಂಗ್ಲೆಂಡ್ ತಂಡ, ಆ್ಯಷಸ್ ಸರಣಿಯ ನಾಲ್ಕನೇ ಟೆಸ್ಟ್‌ನಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಪಡೆದಿದೆ. ಎರಡನೇ ದಿನವಾದ ಗುರುವಾರ ದಿನದಾಟದ ಅಂತ್ಯಕ್ಕೆ 72 ಓವರುಗಳಲ್ಲಿ 4 ವಿಕೆಟ್‌ಗೆ 384 ರನ್ ಗಳಿಸಿ ಸುಸ್ಥಿತಿಯಲ್ಲಿದೆ.

ಇದಕ್ಕೆ ಮೊದಲು ಆಸ್ಟ್ರೇಲಿಯಾ ತಂಡದ ಮೊದಲ ಇನಿಂಗ್ಸ್ 317 ರನ್‌ಗಳಿಗೆ ಕೊನೆಗೊಂಡಿತ್ತು. ಬೆನ್ ಡಕೆಟ್ (3) ಅವರನ್ನು ಬೇಗನೇ ಕಳೆದುಕೊಂಡ ಇಂಗ್ಲೆಂಡ್ ನಂತರ ಎರಡು ಬಿರುಸಿನ ಶತಕದ ಜೊತೆಯಾಟಗಳ ಮೂಲಕ ದಿಟ್ಟ ಉತ್ತರ ನೀಡಿತು. ಗ್ರೀನ್ ಬೌಲಿಂಗ್‌ನಲ್ಲಿ ಬೌಲ್ಡ್ ಆಗುವ ಮೊದಲು ಕ್ರಾಲಿ 182 ಎಸೆತಗಳನ್ನು ಎದುರಿಸಿ, 21 ಬೌಂಡರಿ, ಮೂರು ಭರ್ಜರಿ ಸಿಕ್ಸರ್‌ಗಳನ್ನು ಎತ್ತಿದರು. ಇದು ಅವರ ಮೂರನೇ ಶತಕ.

ಓಲಿ ಪೋಪ್ ಅನುಪಸ್ಥಿತಿಯಲ್ಲಿ ಮೂರನೇ ಕ್ರಮಾಂಕಕ್ಕೆ ಬಡ್ತಿ ಪಡೆದ ಮೊಯಿನ್ ಅಲಿ (54) ಅವರೊಂದಿಗೆ ಕ್ರಾಲಿ ಎರಡನೇ ವಿಕೆಟ್‌ಗೆ 121 ರನ್ ಸೇರಿಸಿದರು. ಜೋ ರೂಟ್ ಅವರೊಡನೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 206 ರನ್‌ಗಳು ಬಂದವು. ರೂಟ್ 83 ಎಸೆತಗಳಲ್ಲಿ ಒಂದು ಸಿಕ್ಸರ್, ಎಂಟು ಬೌಂಡರಿಗಳಿರುವ 77 ರನ್ ಗಳಿಸಿ ಆಡುತ್ತಿದ್ದರು.

ಕ್ರಾಲಿ ಆರಂಭದಿಂದಲೇ ಆಕ್ರಮಣಕ್ಕಿಳಿದು 93 ಎಸೆತಗಳಲ್ಲೇ ಶತಕ ದಾಟಿದರು. ಸಾಂದರ್ಭಿಕ ಸ್ಪಿನ್ನರ್‌ಗಳಾದ ಟ್ರಾವಿಸ್ ಹೆಡ್ ಮತ್ತು ಮಿಚೆಲ್ ಮಾರ್ಷ್ ಅವರು ದಂಡನೆಗೆ ಒಳಗಾದರು.

ಮೊಯಿನ್ ಈ ಪಂದ್ಯದಲ್ಲಿ 3,000 ರನ್ ಪೂರೈಸಿದರು. ಅವರು ಮೂರು ಸಹಸ್ರ ರನ್ ಮತ್ತು 200 ವಿಕೆಟ್ ಪಡೆದ ಇಂಗ್ಲೆಂಡ್‌ನ ನಾಲ್ಕನೇ ಆಟಗಾರ ಎನಿಸಿದರು. ಇಯಾನ್ ಬೋಥಂ, ಆ್ಯಂಡ್ರೂ ಫ್ಲಿಂಟಾಫ್ ಮತ್ತು ಹಾಲಿ ಆಟಗಾರ ಸ್ಟುವರ್ಟ್ ಬ್ರಾಡ್ ಅವರು ಇತರ ಮೂವರು. ಕಮಿನ್ಸ್ ಬೌಲಿಂಗ್‌ನಲ್ಲಿ ಚೆಂಡು ಮೊಯಿನ್ ಅವರ ಬ್ಯಾಟಿನಂಚಿಗೆ ಮುತ್ತಿಕ್ಕಿ ‘ಗಲ್ಲಿ’ ಮೂಲಕ ಬೌಂಡರಿಗೆ ಧಾವಿಸುವ ಮೂಲಕ ಅವರು ಈ ಮೈಲಿಗಲ್ಲು ದಾಟಿದರು.

ಇದಕ್ಕೆ ಮೊದಲು, ಬುಧವಾರ 8 ವಿಕೆಟ್‌ಗೆ 299 ರನ್ ಗಳಿಸಿದ್ದ ಆಸ್ಟ್ರೇಲಿಯಾ 7.2 ಓವರುಗಳ ಆಟದಲ್ಲಿ ಆಲೌಟ್ ಆಯಿತು. ವೇಗದ ಬೌಲರ್ ಕ್ರಿಸ್ ವೋಕ್ಸ್ 62 ರನ್ನಿಗೆ 5 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನ್ನಿಂಗ್ಸ್; ಆಸ್ಟ್ರೇಲಿಯಾ 90.2 ಓವರ್‌ಗಳಲ್ಲಿ 317. ಇಂಗ್ಲೆಂಡ್ 72 ಓವರ್‌ಗಳಲ್ಲಿ 4 ವಿಕೆಟ್‌ಗೆ 384 (ಝೂಕ್ ಕ್ರಾಲಿ 189, ಮೊಯಿನ್ ಅಲಿ 54, ಜೋ ರೂಟ್ 84, ಹ್ಯಾರಿ ಬ್ರೂಕ್ ಬ್ಯಾಟಿಂಗ್ 14, ಬೆನ್ ಸ್ಟೋಕ್ಸ್ ಬ್ಯಾಟಿಂಗ್ 24; ಮಿಚೆಲ್ ಸ್ಟಾರ್ಕ್ 74ಕ್ಕೆ 2)

Cheil-16510/23